ಮಂಗಳೂರು ಸೋಮವಾರ, 16 ಮಾರ್ಚ್ 2026 ಸಂಪುಟ 47, ಸಂಚಿಕೆ 347, ಪುಟಗಳು 12+6 hosadigantha.com
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily
₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಕೇರಳ, ತ.ನಾಡು, ಅಸ್ಸಾಂ, ಪ.ಬಂಗಾಳ, ಪುದುಚೇರಿ ಚುನಾವಣಾ ದಿನ ಪ್ರಕಟ | ಮೇ 4ರಂದು ಫಲಿತಾಂಶ | ಪ.ಬಂಗಾಳದಲ್ಲಿ 2 ಹಂತ

ಮತಯುದ್ಧ ವೇದಿಕೆ ಸಜ್ಜು

ಹೊಸದಿಲ್ಲಿ: ಬಹು ನಿರೀಕ್ಷಿತ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದೆ. ಜತೆಗೆ ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯ ದಿನಾಂಕವನ್ನೂ ಘೋಷಿಸಲಾಗಿದೆ. ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏ.9ರಂದು ಒಂದೇ ದಿನ, ತಮಿಳುನಾಡಿನಲ್ಲಿ ಏ.23ರಂದು ಮತ್ತು ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಮೇ 4ರಂದು ಎಲ್ಲಾ ಚುನಾವಣೆಗಳ ಮತ ಎಣಿಕೆ ನಡೆಯಲಿದೆ.

ಇಲ್ಲಿನ ವಿಜ್ಞಾನ ಭವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಈ ಕುರಿತು ಅಧಿಕೃತ ಮಾಹಿತಿ ನೀಡಿದರು. ಪುಟ ೪



- ಏ.9: ಅಸ್ಸಾಂ, ಪುದುಚೇರಿ, ಕೇರಳ, ದಾವಣಗೆರೆ, ಬಾಗಲಕೋಟೆ
- ಏ.23: ತಮಿಳುನಾಡು, ಪ. ಬಂಗಾಳ
- ಏ.29: ಪ. ಬಂಗಾಳ (2ನೇ ಹಂತ)

ಏ.9ಕ್ಕೆ ದಾವಣಗೆರೆ, ಬಾಗಲಕೋಟೆ ಉಪಚುನಾವಣೆ

ಕರ್ನಾಟಕದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಕೂಡ ಉಪಚುನಾವಣೆ ಘೋಷಿಸಲಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರವು ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದು, ಬಾಗಲಕೋಟೆ ಕ್ಷೇತ್ರವು ಮಾಜಿ ಸಚಿವ ಎಚ್.ವೈ. ಮೇಟಿ ಅವರ ಅಗಲಿಕೆಯಿಂದ ಖಾಲಿಯಾಗಿದೆ. ಈ ಎರಡು ಕ್ಷೇತ್ರಗಳಿಗೂ ಏ.9ರಂದು ಮತದಾನ ನಡೆಯಲಿದ್ದು, ಇವುಗಳ ಫಲಿತಾಂಶವೂ ಮೇ 4ರಂದು ಪ್ರಕಟವಾಗಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ.

ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ

ಸಮಾಲ್ಖಾ(ಹರಿಯಾಣ): ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾವು ಸಂಘಟನಾ ಕಾರ್ಯ ವಿಸ್ತರಿಸಲು, ಸಮಾಜದ ಉದಾತ್ತ ಶಕ್ತಿಗಳನ್ನು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಸಜ್ಜುಗೊಳಿಸಲು ಮತ್ತು ಸಾಮಾಜಿಕ ಸಾಮರಸ್ಯ ಉತ್ತೇಜಿಸುವ ನಿರ್ಣಯದೊಂದಿಗೆ ಮುಕ್ತಾಯವಾಯಿತು.

ದೇಶದಲ್ಲಿ 80ಕ್ಕೂ ಹೆಚ್ಚು ಸಂಭಾಗ: ಹೊಸಬಾಳೆ

ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ನಡೆಯಿತು. ಅಂತಿಮ ದಿನವಾದ ಭಾನುವಾರ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು. ಪುಟ ೪

ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ: ಮೋದಿ

ಹೊಸದಿಲ್ಲಿ: ಲೋಕಸಭಾ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ರಾಜಕೀಯ ಹೊಣೆಗೇಡಿತನ. ಸ್ವಹಿತಾಸಕ್ತಿ ಇದರ ಹಿಂದಿದೆ. ವಂಶ ಪಾರಂಪರ್ಯ ಚಿಂತನೆಯಲ್ಲಿ ಮುಳುಗಿರುವ ಕೆಲವರು ಪ್ರಜಾತಾಂತ್ರಿಕ ಸಂಸ್ಥೆಗಳನ್ನು ತಮ್ಮ ಸೀಮಿತ ವರ್ತುಲದೊಳಗೆ ಸೀಮಿತಗೊಳಿಸಲು ಯತ್ನಿಸುತ್ತಿರುವುದು ಸರ್ವತ್ರ ಖಂಡನೀಯ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್‌ನ್ನು ಕಟುವಾಗಿ ತರಾಟೆಗೆತ್ತಿಕೊಂಡಿದ್ದಾರೆ. ಪುಟ ೪

ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

ಕೈರೋ: ಮಧ್ಯಪ್ರಾಚ್ಯ ಯುದ್ಧ ಮೂರನೇ ವಾರ ಪ್ರವೇಶಿಸಿದ ಹಿನ್ನೆಲೆ ನೆರೆರಾಷ್ಟ್ರಗಳ ಮೇಲಿನ ದಾಳಿಯನ್ನು ಇರಾನ್ ಭಾನುವಾರ ವಿಸ್ತರಿಸಿದ್ದು, ಯುಎಇನಲ್ಲಿನ ಮೂರು ಬಂದರುಗಳನ್ನು ಖಾಲಿ ಮಾಡಲು ಕರೆ ನೀಡಿದೆ. ಇದೇ ಮೊದಲ ಬಾರಿಗೆ ಯುಎಇ ವಿರುದ್ಧ ಇರಾನ್ ದಾಳಿ ಬೆದರಿಕೆ ಹಾಕಿದೆ. ಭಾನುವಾರ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ಇರಾನ್ ನಡೆಸಿದ ಹೊಸ ದಾಳಿಗಳನ್ನು ತಡೆಗಟ್ಟಿರುವುದಾಗಿ ಗಲ್ಫ್ ರಾಷ್ಟ್ರಗಳು ಹೇಳಿಕೊಂಡಿವೆ. ಪುಟ ೪

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಸಾಧ್ಯವಾದಷ್ಟು ನಾವು ರಾಕ್ಷಸರಾಗಬಾರದು. ಪಶುಗಳಾಗಬಾರದು. ಮನುಷ್ಯರೇ ಆಗಬೇಕು. ಅದು ಮಾನವ ಧರ್ಮದ ಮುಖ್ಯವಾದ ತತ್ವ.

▲ ಶ್ರೀ ವಾಣಿ

ಎನ್‌ಡಿಎ ತೆಕ್ಕೆಗೆ ತ.ನಾಡು, ಅಸ್ಸಾಂ?: ಸಮೀಕ್ಷೆ

ಪುಟ ೨

ಇರಾನ್ ನಗರಗಳ ಮೇಲೆ ಬಿ-52 ಬಾಂಬರ್ಸ್ ದಾಳಿ!

- ಪ್ರಮುಖ ನಗರಗಳ ಮೇಲೆ ಭಾನುವಾರ ಮುಂಜಾನೆ ಅಮೆರಿಕ ಹೊಸ ದಾಳಿ
- ಇರಾನ್‌ನ ಶಿರಾಜ್‌ನಲ್ಲಿ 20 ನಿಮಿಷದೊಳಗೆ 20 ಬಾಂಬ್ ಸ್ಫೋಟ
- ಇಸ್ರೇಲ್ ದಾಳಿಗೆ ಇಸ್ಫಹಾನ್ ನಗರದಲ್ಲಿ ಆವರಿಸಿದ ದಟ್ಟ ಹೊಗೆ
- ಮುಂದುವರಿದ ಆಪರೇಷನ್ ಎಪಿಕ್ ಫ್ಯೂರಿ
- ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳ ಬಳಕೆ

ಟೆಹ್ರಾನ್: ಆಪರೇಷನ್ ಎಪಿಕ್ ಫ್ಯೂರಿ ಮುಂದುವರಿದ ಭಾಗವಾಗಿ ಬಿ-52 ಬಾಂಬರ್ಸ್ ಯುದ್ಧ ವಿಮಾನಗಳನ್ನು ಬಳಸಿಕೊಂಡು ಇರಾನ್ ಪ್ರಮುಖ ನಗರಗಳ ಮೇಲೆ ಅಮೆರಿಕ ಹೊಸ ದಾಳಿ ನಡೆಸಿದೆ. ಶನಿವಾರ ತಡರಾತ್ರಿ ಮತ್ತು ಭಾನುವಾರ ಮುಂಜಾನೆ ಇರಾನ್ ಪ್ರಮುಖ ನಗರಗಳಲ್ಲಿ ಸ್ಫೋಟಗಳು ಸಂಭವಿಸಿವೆ ಎಂದು ಇರಾನ್ ಇಂಟರ್‌ನ್ಯಾಷನಲ್ ವರದಿ ಮಾಡಿದೆ. ಭಾನುವಾರ ಬೆಳಗಿನ ಜಾವ ದಕ್ಷಿಣ ಟೆಹ್ರಾನ್ ಪ್ರದೇಶದಲ್ಲಿ ಭಾರೀ ಸ್ಫೋಟಗಳು ನಡೆದಿವೆಯೆಂದು ವಿಡಿಯೋ ಒಂದನ್ನು ಹಂಚಿಕೊಂಡಿದೆ. ಟೆಹ್ರಾನ್‌ನ ಹಲವು ಪ್ರದೇಶಗಳ ಮೇಲೆ ಬಿ-52 ಬಾಂಬರ್‌ಗಳು ದಾಳಿ ನಡೆಸಿವೆ ಎನ್ನಲಾಗಿದೆ. ಭಾನುವಾರ ಮುಂಜಾನೆ ಶಿರಾಜ್ ಪ್ರದೇಶದಲ್ಲಿ ಕೇವಲ 20 ನಿಮಿಷದೊಳಗೆ 20 ಬಾಂಬ್ ಸ್ಫೋಟಗಳು ನಡೆದಿರುವುದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಶಿರಾಜ್ ವಿಮಾನ ನಿಲ್ದಾಣದ ಸಮೀಪ ಬಾಂಬ್ ಸ್ಫೋಟಗಳು ನಡೆದಿರುವುದನ್ನು ಕೆಲವು ಪ್ರತ್ಯಕ್ಷದರ್ಶಿಗಳು ದೃಢೀಕರಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ಸಮೀಪ ಹಾರ್ಮುಜ್ಗನ್‌ನ ಜಾಸ್ಕ್ ಬಂದರಿನಿಂದ ಹೊಗೆ ಬರುವ ದೃಶ್ಯವನ್ನು ವಿಡಿಯೋದಲ್ಲಿ ಕಾಣಬಹುದು. ಇರಾನ್ ಅಣ್ವಸ್ತ್ರಾಗಾರಗಳಿರುವ ಇಸ್ಫಹಾನ್ ನಗರದಲ್ಲಿ ದಟ್ಟ ಹೊಗೆ ಆವರಿಸಿದ ದೃಶ್ಯಗಳನ್ನು ಇಸ್ರೇಲಿ ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ. ಆಪರೇಷನ್ ಎಪಿಕ್ ಫ್ಯೂರಿ ಭಾಗವಾಗಿ ವಾಯುಪಡೆಯ ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳು ತಡರಾತ್ರಿ ಟೇಕ್‌ಆಫ್ ಆಗಿವೆ. ಊಹೆಗೂ ಮೀರಿದ, ಚುರುಕಾದ ಮತ್ತು ನಿರ್ಣಾಯಕ ದಾಳಿಗಳು ಮುಂದುವರಿಯಲಿವೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಎಕ್ಸ್‌ನಲ್ಲಿ ವಿಡಿಯೋ ಹಂಚಿಕೊಂಡಿದೆ.



ಹಾರ್ಮುಜ್‌ಗೆ ಯುದ್ಧ ನೌಕೆ ಕಳುಹಿಸಿ: ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಮತ್ತು ಅದರ ಮೂಲಕ ತೈಲ ಹಡಗುಗಳ ಸುರಕ್ಷಿತ ಸಂಚಾರ ಖಚಿತಪಡಿಸಲು ಯುದ್ಧನೌಕೆಗಳನ್ನು ಹಾರ್ಮುಜ್‌ಗೆ ಕಳುಹಿಸಿಕೊಡಬೇಕೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್ ಸೇರಿ ಹಲವು ರಾಷ್ಟ್ರಗಳಿಗೆ ಕರೆ ನೀಡಿದ್ದಾರೆ. ಈ ರಾಷ್ಟ್ರಗಳು ಅಮೆರಿಕಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಈ ಜಲಸಂಧಿ ದಾಟುವ ತೈಲ ಮತ್ತು ಅನಿಲ ಹಡಗುಗಳ ಮೇಲೆ ಅವಲಂಬಿತವಾಗಿವೆ.



ಯುದ್ಧದ ಹಾನಿ ತೀವ್ರತೆ ಹೆಚ್ಚಳ

ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ ಪ್ರಕಾರ, ಇರಾನ್‌ನಲ್ಲಿ ಈಗಾಗಲೇ 1,300ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಇರಾನ್ ಆರೋಗ್ಯ ಸಚಿವಾಲಯದ ನೀಡಿದ ಮಾಹಿತಿ ಪ್ರಕಾರ, ಸಾವಿಗೀಡಾದವರಲ್ಲಿ 223 ಮಹಿಳೆಯರು ಮತ್ತು 202 ಮಕ್ಕಳು ಸೇರಿದ್ದಾರೆ. ಇಸ್ರೇಲ್‌ನಲ್ಲಿ ಇರಾನ್ ದಾಳಿಗೆ 12 ಮಂದಿ ಸಾವನ್ನಪ್ಪಿದ್ದು, ಭಾನುವಾರ ಮೂವರು ಗಾಯಗೊಂಡಿದ್ದಾರೆ. ಯುದ್ಧ ಆರಂಭವಾದ ಬಳಿಕ ಅಮೆರಿಕ ಸೇನೆಯ ಕನಿಷ್ಠ 13 ಯೋಧರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಕನಿಷ್ಠ 820 ಮಂದಿ ಸಾವನ್ನಪ್ಪಿದ್ದು, 8.5 ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ ಎಂದು ಅಲ್ಲಿನ ಆರೋಗ್ಯ ಸಚಿವಾಲಯ ಹೇಳಿದೆ.

ಇರಾನ್‌ಗೆ ರಷ್ಯಾ ಡ್ರೋನ್ ಪೂರೈಕೆ: ಝೆಲೆನ್ಸ್ಕಿ

ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುವುದಕ್ಕಾಗಿ ರಷ್ಯಾ ನಿರ್ಮಿತ ಶಾಹಿದ್ ಡ್ರೋನ್‌ಗಳನ್ನು ಇರಾನ್ ಬಳಸಿಕೊಂಡಿದೆ. ಇರಾನ್‌ಗೆ ರಷ್ಯಾ ತನ್ನ ಶಾಹಿದ್ ಡ್ರೋನ್‌ಗಳನ್ನು ಪೂರೈಕೆ ಮಾಡುತ್ತಿದೆ. ಇದು ಶೇ.100ರಷ್ಟು ಸತ್ಯ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಆರೋಪಿಸಿದ್ದಾರೆ. ಶಾಹಿದ್-136 ಡ್ರೋನ್‌ಗಳು ಮೂಲತಃ ಇರಾನ್ ನಿರ್ಮಿಸುವ ಅಗ್ಗದ ಡ್ರೋನ್‌ಗಳಾಗಿದ್ದು, ರಷ್ಯಾದೊಂದಿಗೆ ಜಂಟಿ ಉತ್ಪಾದನೆ ಮಾಡಲಾಗುತ್ತಿದೆ. ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ನಡೆಸಲು ಇರಾನ್‌ಗೆ ಡ್ರೋನ್‌ಗಳನ್ನು ರಷ್ಯಾ ಪೂರೈಕೆ ಮಾಡುತ್ತಿರುವುದಾಗಿ ಝೆಲೆನ್ಸ್ಕಿ ಆರೋಪಿಸಿದ್ದಾರೆ. ರಷ್ಯಾ ಡ್ರೋನ್ ಪೂರೈಕೆ ಮೂಲಕ ಇರಾನ್ ಆಡಳಿತಕ್ಕೆ ತನ್ನ ಬೆಂಬಲ ನೀಡಿದ್ದು, ಮುಂದಿನ ದಿನಗಳಲ್ಲಿ ಕ್ಷಿಪಣಿ ಪೂರೈಕೆ ಮಾಡಬಹುದು ಮತ್ತು ವಾಯು ರಕ್ಷಣಾ ವ್ಯವಸ್ಥೆ ನೀಡಿ ಬೆಂಬಲಿಸಬಹುದು.

ಅಗ್ಗದ ಡ್ರೋನ್: ಶಾಹಿದ್ ಡ್ರೋನ್‌ಗಳ ನಿರ್ಮಾಣ ವೆಚ್ಚ 20,000ದಿಂದ 50,000 ಡಾಲರ್ ವೆಚ್ಚ ತಗಲುತ್ತದೆ. ಇದು ಸಾಂಪ್ರದಾಯಿಕ ಕ್ಷಿಪಣಿ ನಿರ್ಮಾಣದ ಮುಂದೆ ಬಹಳ ಅಗ್ಗವಾಗಿದೆ. ಈ ಅಗ್ಗದ ಡ್ರೋನ್‌ಗಳು ಪರಿಣಾಮಕಾರಿ ದಾಳಿಯನ್ನು ನಡೆಸಬಲ್ಲವು. ಇವುಗಳನ್ನು ಹೊಡೆದುರುಳಿಸಲು ಶತ್ರುಗಳು ದುಬಾರಿ ವಾಯು ರಕ್ಷಣಾ ಕ್ಷಿಪಣಿಗಳನ್ನೇ ಬಳಸಬೇಕಾಗುತ್ತದೆ. ಇದರಿಂದಾಗಿ ಇವುಗಳ ದಾಳಿ ವೇಳೆ ಧ್ವಂಸವಾದರೂ ನಷ್ಟ ಎನಿಸಿಕೊಳ್ಳುವುದಿಲ್ಲ.

ಭಾರತದತ್ತ ಮತ್ತೊಂದು ಕಚ್ಚಾ ತೈಲ ಟ್ಯಾಂಕರ್

ಹೊಸದಿಲ್ಲಿ: ಯುಎಇಯ ಫುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದಿದ್ದರೂ ಭಾರತೀಯ ಧ್ವಜದ ಜಾಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಸುರಕ್ಷಿತವಾಗಿ ಫುಜೈರಾದಿಂದ ಭಾರತದತ್ತ ಹೊರಟಿದೆ. ಸುಮಾರು 80,800 ಟನ್ ಮರ್ಬನ್ ಕಚ್ಚಾ ತೈಲವನ್ನು ಹೊತ್ತ ಈ ನೌಕೆ ಭಾನುವಾರ ಬೆಳಗ್ಗೆ 10.30ಕ್ಕೆ ಫುಜೈರಾ ಬಂದರಿನಿಂದ ಹೊರಟಿದ್ದು, ನೌಕೆಯಲ್ಲಿದ್ದ ಎಲ್ಲ ಭಾರತೀಯ ನಾವಿಕರೂ ಸುರಕ್ಷಿತರಾಗಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಯುದ್ಧ ವಲಯದಿಂದ ಸುರಕ್ಷಿತವಾಗಿ ಹೊರಬಂದ ನಾಲ್ಕನೇ ಭಾರತೀಯ ಧ್ವಜದ ನೌಕೆ ಇದಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆ ಅಡಚಣೆ ಉಂಟಾಗಿರುವ ಹಿನ್ನೆಲೆಯಲ್ಲಿ ಈ ಸಾಗಣೆ ಭಾರತಕ್ಕೆ ಮಹತ್ವದ್ದಾಗಿದೆ. ಇದಕ್ಕೂ ಮೊದಲು ಭಾರತೀಯ ಧ್ವಜದ ಶಿವಾಲಿಕ್ ಮತ್ತು ನಂದಾದೇವಿ ಎಂಬ ಎರಡು ಎಲ್‌ಪಿಜಿ ನೌಕೆಗಳು ಒಟ್ಟು 92,712 ಟನ್ ಎಲ್‌ಪಿಜಿ ಹೊತ್ತು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಶಿವಾಲಿಕ್ ಸೋಮವಾರ ಗುಜರಾತ್‌ನ ಮುಂದ್ರಾ ಬಂದರಿಗೆ, ನಂದಾದೇವಿ ಮಂಗಳವಾರ ಕಂಡ್ಲಾ ಬಂದರಿಗೆ ತಲುಪುವ ನಿರೀಕ್ಷೆಯಿದೆ. ಪರ್ಶಿಯನ್ ಕೊಲ್ಲಿಯ ಪಶ್ಚಿಮ ಭಾಗದಲ್ಲಿ ಪ್ರಸ್ತುತ 22 ಭಾರತೀಯ ಧ್ವಜದ ನೌಕೆಗಳು ಹಾಗೂ 611 ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದು, ಅವರ ಸುರಕ್ಷತೆಯನ್ನು ಸರ್ಕಾರ ನಿಗಾದಲ್ಲಿಟ್ಟಿದೆ. ಇದುವರೆಗೆ ಗಲ್ಫ್ ಪ್ರದೇಶದಿಂದ 276 ಭಾರತೀಯ ನಾವಿಕರನ್ನು ಸುರಕ್ಷಿತವಾಗಿ ವಾಪಸು ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಹಿದ್-136 ವಿಶೇಷತೆಗಳು

- **ಗರಿಷ್ಠ ಟೇಕ್‌ಆಫ್ ಭಾರ:** 200 ಕೆ.ಜಿ.
- **ದೂರವ್ಯಾಪ್ತಿ :** 2,000 ಕಿ.ಮೀ.
- **ಡ್ರೋನ್ ವಿಧ:** ಆತ್ಮಾಹುತಿ ಡ್ರೋನ್
- **ನಿಯೋಜನೆ:** ಯೆಮೆನ್, ಹಿಜ್ಬೊಲ್ಲಾ
- **ಅಭಿವೃದ್ಧಿಪಡಿಸಿದ ವರ್ಷ:** 2021

ಶಾಹಿದ್-131 ವಿಶೇಷತೆಗಳು

- **ಗರಿಷ್ಠಟೇಕ್‌ಆಫ್ ಭಾರ:** 135 ಕೆ.ಜಿ.
- **ದೂರವ್ಯಾಪ್ತಿ:** 900 ಕಿ.ಮೀ.
- **ಡ್ರೋನ್ ವಿಧ:** ಆತ್ಮಾಹುತಿ ಡ್ರೋನ್
- **ನಿಯೋಜನೆ:** ರಷ್ಯಾ, ಇರಾಕ್‌ನ ಕತೈಬ್ ಹಿಜ್ಬೊಲ್ಲಾ
- **ಅಭಿವೃದ್ಧಿಪಡಿಸಿದ ವರ್ಷ:** 2021

ಅಮೆರಿಕ ದಾಳಿ ತೀವ್ರ

ಪೆಂಟಗನ್ ಮಾಹಿತಿ ಪ್ರಕಾರ, ಇರಾನ್‌ನ 15,000 ಕ್ಕೂ ಹೆಚ್ಚು ಗುರಿಗಳ ಮೇಲೆ ದಾಳಿ ಮಾಡಲಾಗಿದ್ದು, ಇದುವರೆಗೆ 2,000 ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಈ ನಡುವೆ ಅಮೆರಿಕ, ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆ ಮತ್ತು 2,500 ನೌಕಾಪಡೆ ಸೈನಿಕರನ್ನು ಈ ಪ್ರದೇಶಕ್ಕೆ ನಿಯೋಜಿಸಿದೆ. ಇರಾನ್ ಭಯೋತ್ಪಾದನೆಯನ್ನು ತೀವ್ರವಾಗಿ ವಿರೋಧಿಸುತ್ತದೆ ಮತ್ತು ಅಮೆರಿಕದ ಸಾಮಾನ್ಯ ಜನರೊಂದಿಗೆ ನಮಗೆ ಯಾವುದೇ ಯುದ್ಧವಿಲ್ಲ ಎಂದು ಲಾರಿಜಾನಿ ಒತ್ತಿ ಹೇಳಿದ್ದಾರೆ.

6,000
ಇರಾನ್ ಸೈನಿಕರ ಸಾವು: ಐಡಿಎಫ್

ಐಡಿಎಫ್ ಗುಪ್ತಚರ ಮಾಹಿತಿಗಳ ಪ್ರಕಾರ, ಇಸ್ರೇಲ್ ಸೇನೆ ಆಪರೇಷನ್ ರಾರಿಂಗ್ ಲಯನ್ ಆರಂಭಿಸಿದಾಗಿನಿಂದ ಸುಮಾರು 6,000ಕ್ಕೂ ಅಧಿಕ ಇರಾನ್ ಸೈನಿಕರನ್ನು ಹೊಡೆದುರುಳಿಸಲಾಗಿದ್ದು, 15,000ಕ್ಕೂ ಅಧಿಕ ಇರಾನ್ ಸೈನಿಕರು ಗಾಯಗೊಂಡಿದ್ದಾರೆ.

20 ಗೂಢಚಾರಿಗಳ ಸೆರೆ ಹಿಡಿದ ಇರಾನ್

ಇರಾನ್‌ನೊಳಗಿದ್ದು ಇಸ್ರೇಲ್‌ಗೆ ರಹಸ್ಯ ಗುಪ್ತಚರ ಮಾಹಿತಿಗಳನ್ನು ನೀಡುತ್ತಿದ್ದ 20 ಗೂಢಚಾರಿಗಳನ್ನು ಇರಾನ್ ಬಂಧಿಸಿದೆ. ಇರಾನ್ ಸೇನೆ ಮತ್ತು ಅದರ ಸೇನಾ ಮೂಲಸೌಕರ್ಯಗಳಿರುವ ಸ್ಥಳಗಳ ನಿಖರ ಮಾಹಿತಿಯನ್ನು ಇಸ್ರೇಲ್ ಸೇನೆಗೆ ಕಳುಹಿಸುತ್ತಿದ್ದರೆಂಬ ಆರೋಪದಲ್ಲಿ 20 ವ್ಯಕ್ತಿಗಳನ್ನು ಇರಾನ್ ಸೆರೆಹಿಡಿದಿದೆ.

ಇರಾನ್ ಮೇಲೆ 9/11 ಮಾದರಿ ದಾಳಿ ಪಿತೂರಿ!

ಟೆಹ್ರಾನ್: ಇರಾನ್ ಮೇಲೆ ಬೃಹತ್ ಭಯೋತ್ಪಾದನಾ ದಾಳಿಯ ಹಣೆಪಟ್ಟಿ ಕಟ್ಟಲು ಎಪ್‌ಸ್ಟೀನ್ ನೆಟ್‌ವರ್ಕ್‌ನಿಂದ 9/11 ಮಾದರಿಯ ದಾಳಿಯ ಪಿತೂರಿ ನಡೆಯುತ್ತಿದೆ ಎಂದು ಇರಾನ್‌ನ ಭದ್ರತಾ ಕಾರ್ಯದರ್ಶಿ ಅಲಿ ಲಾರಿಜಾನಿ ಗಂಭೀರ ಎಚ್ಚರಿಕೆ ನೀಡಿದ್ದಾರೆ. ಈ ಆರೋಪವನ್ನು ಎಕ್ಸ್ ಮೂಲಕ ಹಂಚಿಕೊಂಡಿರುವ ಲಾರಿಜಾನಿ, ಟೆಹ್ರಾನ್ ಅನ್ನು ಸಿಲುಕಿಸಲು ಯೋಜಿತ ಘಟನೆಯೊಂದನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಕಳೆದ ತಿಂಗಳು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಬಲಿಯಾದ ನಂತರ ಈ ಪ್ರದೇಶದಲ್ಲಿ ಯುದ್ಧದ ಭೀತಿ ಹೆಚ್ಚಾಗಿರುವಾಗಲೇ ಈ ಆರೋಪಗಳು ಕೇಳಿಬಂದಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಪಡೆಗಳು ಇಸ್ರೇಲ್ ಮತ್ತು ಗಲ್ಫ್‌ನಲ್ಲಿರುವ ಅಮೆರಿಕದ ನೆಲೆಗಳ ಮೇಲೆ ದಾಳಿ ನಡೆಸಿವೆ.

ಕಿರುಸುದ್ದಿ

ಗಡಿ ನುಸುಳಲು ಯತ್ನ: ಪಾಕಿಸ್ತಾನಿ ಉಗ್ರ ಹತ

ಶ್ರೀನಗರ: ಕಾಶ್ಮೀರ ಕಣಿವೆಯ ಬಾರಾಮುಲ್ಲಾ ಜಿಲ್ಲೆಯ ಉರಿಯ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಒಳನುಸುಳುತ್ತಿದ್ದ ಪಾಕಿಸ್ತಾನಿ ಭಯೋತ್ಪಾದಕನೊಬ್ಬನನ್ನು ಸದೆಬಡಿಯಲಾಗಿದೆ. ಹತ್ಯೆಗೀಡಾದ ಭಯೋತ್ಪಾದಕನಿಂದ ಎಕೆ 47 ರೈಫಲ್, ಪಿಸ್ತೂಲುಗಳು ಮತ್ತು ದೊಡ್ಡ ಪ್ರಮಾಣದ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಭಾರತೀಯ ಸೇನೆ ಭಾನುವಾರ ಹೇಳಿದೆ. ಈ ಕುರಿತು ಸೇನೆಯು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಗಡಿಯಲ್ಲಿ ಒಳನುಸುಳುವಿಕೆ ಪ್ರಯತ್ನದ ಕುರಿತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ನೀಡಿದ ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಜಂಟಿ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಈ ವೇಳೆ ಭಯೋತ್ಪಾದಕರು ಮನಬಂದಂತೆ ಗುಂಡು ಹಾರಿಸಿದರು. ಎನ್‌ಕೌಂಟರ್‌ನಲ್ಲಿ ಒಬ್ಬ ಪಾಕ್ ಭಯೋತ್ಪಾದಕನನ್ನು ಕೊಲ್ಲಲಾಗಿದೆ ಎಂದು ತಿಳಿಸಲಾಗಿದೆ.

ಸುಂಟರಗಾಳಿಗೆ ಓರ್ವನ ಸಾವು, 70 ಮನೆ ಧ್ವಂಸ

ಭುವನೇಶ್ವರ: ಒಡಿಶಾದಲ್ಲಿ ಸಂಭವಿಸಿದ ಸುಂಟರಗಾಳಿ ಭಾರಿ ಅನಾಹುತ ಸೃಷ್ಟಿಸಿದ್ದು, ಸುಂಟರಗಾಳಿ ರುದ್ರನರ್ತನಕ್ಕೆ ಓರ್ವ ಮೃತಪಟ್ಟಿದ್ದರೆ, 70 ಮನೆಗಳು ಧ್ವಂಸಗೊಂಡಿವೆ. 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಭಾನುವಾರ ಒಡಿಶಾದ ಮಯೂರ್‌ಭಂಜ್ ಜಿಲ್ಲೆಯಲ್ಲಿ ಬೀಸಿದ ಪ್ರಬಲವಾದ ನಾರ್ವೆಸ್ಟರ್ ಸುಂಟರಗಾಳಿಯು ವ್ಯಾಪಕ ನಷ್ಟವನ್ನುಂಟುಮಾಡಿದ್ದು, ಸುಮಾರು 70 ಮನೆಗಳಿಗೆ ಹಾನಿಯಾಗಿದೆ. ಅಂತೆಯೇ ಹಲವಾರು ಜನರು ಗಾಯಗೊಂಡಿದ್ದಾರೆ. ಆರಂಭಿಕ ವರದಿಗಳ ಪ್ರಕಾರ, ಕರಂಜಿಯಾದ ಕಿಯಾ ಗ್ರಾಮವು ಹೆಚ್ಚು ಹಾನಿಗೊಳಗಾದ ಪ್ರದೇಶವಾಗಿದ್ದು, ಅಲ್ಲಿ ಬಲವಾದ ಗಾಳಿಯು ನಿವಾಸಿಗಳಲ್ಲಿ ಭೀತಿಯನ್ನುಂಟುಮಾಡಿತು. ಸುಂಟರಗಾಳಿ ರಭಸಕ್ಕೆ ಹಲವಾರು ಮಣ್ಣು ಮತ್ತು ಹುಲ್ಲಿನ ಮನೆಗಳ ಛಾವಣಿಗಳು ಕಿತ್ತುಕೊಂಡು ಹೋಗಿವೆ.


ನಕಲಿ ದರೋಡೆ ಸಂಚು: 11 ಭಾರತೀಯರ ಸೆರೆ

ಬಾಸ್ಟನ್: ಅಮೆರಿಕದ ಯು ವೀಸಾ ಪಡೆಯುವ ಉದ್ದೇಶದಿಂದ ನಕಲಿ ಸಶಸ್ತ್ರ ದರೋಡೆಗಳನ್ನು ನಡೆಸಿದ ಆರೋಪದ ಮೇಲೆ 11 ಭಾರತೀಯ ಪ್ರಜೆಗಳನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಈ ವಿಶೇಷ ವೀಸಾವನ್ನು ಗಂಭೀರ ಅಪರಾಧಗಳಿಗೆ ಬಲಿಯಾದ ಮತ್ತು ತನಿಖೆಗೆ ಸಹಕರಿಸುವ ಸಂತ್ರಸ್ತರಿಗೆ ಮಾತ್ರ ನೀಡಲಾಗುತ್ತದೆ. ಈ ಗುಂಪು ವಿವಿಧ ರಾಜ್ಯಗಳ ಮದ್ಯದ ಅಂಗಡಿ ಮತ್ತು ಉಪಹಾರ ಗೃಹಗಳಲ್ಲಿ ಕನಿಷ್ಠ ಆರು ನಕಲಿ ದರೋಡೆಗಳನ್ನು ಯೋಜಿಸಿತ್ತು ಎಂದು ಫೆಡರಲ್ ತನಿಖಾಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಸಿಸಿಟಿವಿ ಕ್ಯಾಮರಾಗಳಲ್ಲಿ ಇದು ನೈಜ ದರೋಡೆಯಂತೆ ಕಾಣಲು ನಕಲಿ ಪಿಸ್ತೂಲುಗಳನ್ನು ಬಳಸಲಾಗುತ್ತಿತ್ತು.

ಏಪ್ರಿಲ್‌ನಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ದರ ಏರಿಕೆ

ಹೊಸದಿಲ್ಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಇತ್ತೀಚಿನ ಪ್ರಕಟಣೆಯಂತೆ ಏ.1ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಬೆಲೆಯಲ್ಲಿ ಅಲ್ಪ ಏರಿಕೆ ಮಾಡಲಾಗುತ್ತದೆ. ಹಣದುಬ್ಬರಕ್ಕೆ ಅನುಗುಣವಾಗಿ ಶುಲ್ಕವನ್ನು 3,000 ರೂ. ನಿಂದ 3,075 ರೂ.ಗೆ (ಶೇ. 2.5 ರಷ್ಟು) ಹೆಚ್ಚಿಸಲು ನಿರ್ಧರಿಸಲಾಗಿದೆ.

ಪರಿಷ್ಕೃತ ಪಾಸ್ ನಿಯಮಗಳು: ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್, ಕಾರುಗಳು, ಜೀಪುಗಳು ಮತ್ತು ವ್ಯಾನ್‌ಗಳಂತಹ ಖಾಸಗಿ ವಾಹನಗಳಿಗೆ ಲಭ್ಯವಿದೆ. ಪ್ರತಿ ಬಾರಿಯೂ ಟೋಲ್ ಶುಲ್ಕ ಪಾವತಿಸುವ ಬದಲು, ಬಳಕೆದಾರರು ವಾರ್ಷಿಕ ಪಾಸ್ ಅನ್ನು ಖರೀದಿಸಬಹುದು. ಪ್ರಸ್ತುತ, ಈ ಪಾಸ್, ವರ್ಷಕ್ಕೆ 200 ಟೋಲ್ ದಾಟಲು ಅಥವಾ ಒಂದು ವರ್ಷದ ಅವಧಿಗೆ ಅವಕಾಶ ನೀಡುತ್ತದೆ. ಪ್ರಸ್ತುತ 50 ಲಕ್ಷಕ್ಕೂ ಹೆಚ್ಚು ಬಳಕೆದಾರರು ಈ ವ್ಯವಸ್ಥೆಯನ್ನು ಬಳಸುತ್ತಿದ್ದು, ಇದು ಒಟ್ಟು ಕಾರು ಟೋಲ್ ವಹಿವಾಟಿನ ಶೇ.28ರಷ್ಟಿದೆ. ಬೆಲೆ ಏರಿಕೆಯ ಹೊರತಾಗಿಯೂ, ನಿರಂತರ ಪ್ರಯಾಣಿಸುವವರಿಗೆ ಇದು ಉಳಿತಾಯದ ಆಯ್ಕೆಯಾಗಿ ಮುಂದುವರಿಯಲಿದೆ.



ನಗದು ರಹಿತ ಪಾವತಿ ಕಡ್ಡಾಯ: ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ನಗದು ರಹಿತ ಪಾವತಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಫಾಸ್‌ಟ್ಯಾಗ್ ಇಲ್ಲದ ವಾಹನಗಳಿಗೆ ಯುಪಿಐ ಮೂಲಕ ಶೇ.25ರಷ್ಟು ಹೆಚ್ಚುವರಿ ಶುಲ್ಕ ಅಥವಾ ನಗದು ರೂಪದಲ್ಲಿ ದುಪ್ಪಟ್ಟು ದಂಡ ವಿಧಿಸಲಾಗುತ್ತದೆ. ಅಲ್ಲದೆ, ಹೊಸ ನೋಂದಣಿಗಳನ್ನು ನೇರವಾಗಿ ವಾಹನ್ ಡೇಟಾಬೇಸ್ ಮೂಲಕ ಪರಿಶೀಲಿಸಲಾಗುತ್ತದೆ ಎಂದು ತಿಳಿದುಬಂದಿದೆ.

ಚುನಾವಣೆ ಘೋಷಣೆಗೆ ಮುನ್ನ ಡಿಎ, ಅರ್ಚಕರ ಭತ್ಯೆ ಹೆಚ್ಚಳ

ಕೋಲ್ಕತ್ತಾ: ರಾಜ್ಯದಲ್ಲಿ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಕೆಲವೇ ಕ್ಷಣಗಳ ಮೊದಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತುಟ್ಟಿಭತ್ಯೆ(ಡಿಎ) ಹೆಚ್ಚಳಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. ಮಾರ್ಚ್ 2026ರಿಂದ ರಾಜ್ಯ ಸರ್ಕಾರಿ ನೌಕರರು ರೋಪಾ 2009 ಡಿಎ ಬಾಕಿಯನ್ನು ಪಡೆಯಲಿದ್ದಾರೆ ಎಂದು ಮಮತಾ ಬ್ಯಾನರ್ಜಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಈ ಬೆಳವಣಿಗೆ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಸುದೀರ್ಘ ಕಾನೂನು ಹೋರಾಟದ ನಂತರ ಬಂದಿದೆ. ಮೇ 2022 ರಲ್ಲಿ ಕಲ್ಕತ್ತಾ ಹೈಕೋರ್ಟ್ ಕೇಂದ್ರ ಸರ್ಕಾರಿ ನೌಕರರ ಸಮಾನವಾಗಿ ಡಿಎ ನೀಡುವಂತೆ ಆದೇಶಿಸಿತ್ತು. ಸುಪ್ರೀಂ ಕೋರ್ಟ್ ಬಾಕಿ ಮೊತ್ತದ ಶೇ.25ರಷ್ಟು ಪಾವತಿಸಲು ಸೂಚಿಸಿದ್ದರೂ, ರಾಜ್ಯ ಸರ್ಕಾರವು ಹಣಕಾಸಿನ ಬಿಕ್ಕಟ್ಟನ್ನು ಉಲ್ಲೇಖಿಸಿ ಕಾಲಾವಕಾಶ ಕೋರಿತ್ತು. ವೇಳಾಪಟ್ಟಿಯ ಅಧಿಕೃತ ಘೋಷಣೆಗೆ ಮೊದಲು ರಾಜ್ಯ ಸರ್ಕಾರಗಳು ತೆಗೆದುಕೊಂಡ ನಿರ್ಧಾರಗಳು, ಇತ್ತೀಚಿನ ಗೌರವಧನ ಹೆಚ್ಚಳ ಮತ್ತು ಡಿಎ ಸೌಲಭ್ಯಗಳು ಸೇರಿದಂತೆ ಎಲ್ಲವೂ ಸಿಂಧುವಾದ ಕ್ರಮಗಳೆಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

ಅರ್ಚಕರು, ಮೌಲ್ವಿಗಳ ಭತ್ಯೆ ಹೆಚ್ಚಳ: ಇದೇ ವೇಳೆ ಪಶ್ಚಿಮ ಬಂಗಾಳ ಸರ್ಕಾರ ಅರ್ಚಕರು ಮತ್ತು ಮೌಲ್ವಿಗಳಿಗೆ ನೀಡಲಾಗುವ ಗೌರವಧನದಲ್ಲಿ 500 ಹೆಚ್ಚಳ ಮಾಡಿದ್ದು ಒಟ್ಟಾರೆ ಮಾಸಿಕ 2,000 ರೂ. ಮಾಡಿದೆ. ನಮ್ಮ ಸಮುದಾಯಗಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜೀವನವನ್ನು ಉಳಿಸಿಕೊಳ್ಳುವ ಸೇವೆ ಸಲ್ಲಿಸುವ ನಮ್ಮ ಪುರೋಹಿತರು ಮತ್ತು ಮೌಲ್ವಿಗಳ ಮಾಸಿಕ ಗೌರವಧನದಲ್ಲಿ 500 ರೂ. ಹೆಚ್ಚಳ ಘೋಷಿಸಲು ಸಂತೋಷವಾಗಿದೆ ಎಂದು ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಕೌಡಿಯಾರ್ ಅರಮನೆ: ಅಪಾರ ಮೌಲ್ಯದ ಚಿನ್ನ ಕಳವು

ತಿರುವನಂತಪುರಂ(ಕೇರಳ): ಕೌಡಿಯಾರ್ ಅರಮನೆಯಲ್ಲಿ ಸುಮಾರು 2 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಹಾಗೂ ಅಮೂಲ್ಯ ಪ್ರಾಚೀನ ವಸ್ತುಗಳು ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ತಿರುವಾಂಕೂರು ರಾಜಮನೆತನದ ಸದಸ್ಯೆ ಅಶ್ವತಿ ತಿರುನಾಳ್ ಗೌರಿ ಲಕ್ಷ್ಮಿ ಬಾಯಿ ಅವರು ಪೆರೂರ್ಕಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಎಫ್‌ಐಆರ್ ಪ್ರಕಾರ, ಈ ಕಳ್ಳತನವು 2025ರ ಅಕ್ಟೋಬರ್ ಮತ್ತು ನವೆಂಬರ್ ನಡುವಿನ ಅವಧಿಯಲ್ಲಿ ನಡೆದಿರಬಹುದು ಎಂದು ಶಂಕಿಸಲಾಗಿದೆ. ಅಪರಿಚಿತ ವ್ಯಕ್ತಿಯೊಬ್ಬ ಅರಮನೆಗೆ ನುಗ್ಗಿ, ದೂರುದಾರರ ಮಲಗುವ ಕೋಣೆಯಲ್ಲಿದ್ದ ಕಬ್ಬಿಣದ ಕಪಾಟಿನಲ್ಲಿ ಇರಿಸಿದ್ದ ಚಿನ್ನಾಭರಣಗಳನ್ನು ಕಳವು ಮಾಡಿದ್ದಾನೆ ಎಂದು ತಿಳಿದುಬಂದಿದೆ. ಕಳ್ಳತನವಾದ ವಸ್ತುಗಳಲ್ಲಿ ಅಮೂಲ್ಯ ಹರಳುಗಳಿಂದ ಅಲಂಕರಿಸಲ್ಪಟ್ಟ ಆಭರಣಗಳು, ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಚಿತ್ರದ ಪೆಂಡೆಂಟ್ ಹಾಗೂ ವಿದೇಶಗಳಿಂದ ತರಿಸಲಾದ ಅಪರೂಪದ ಪ್ರಾಚೀನ ಆಭರಣಗಳು ಸೇರಿವೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಒಟ್ಟಾರೆ ಸುಮಾರು 2 ಕೋಟಿ ರೂ. ಮೌಲ್ಯದ ಆಭರಣಗಳು ಮತ್ತು ಪ್ರಾಚೀನ ವಸ್ತುಗಳು ಕಳುವಾಗಿವೆ ಎಂದು ತಿಳಿದುಬಂದಿದೆ.

ಈ ಪ್ರಕರಣದಲ್ಲಿ ಈಗ ಎಫ್‌ಐಆರ್ ದಾಖಲಾಗಿದ್ದು, ಕಳೆದ ನಾಲ್ಕು ತಿಂಗಳಿನಿಂದ ಪೊಲೀಸರು ಪ್ರಾಥಮಿಕ ತನಿಖೆ ನಡೆಸುತ್ತಿದ್ದರು. ತನಿಖೆಯನ್ನು ಅಧಿಕೃತವಾಗಿ ಮುಂದುವರಿಸಲು ಇದೀಗ ಪ್ರಕರಣ ದಾಖಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸಂಜಯ್ ಕುಮಾರ್ ಗುರುದಿನ್ ತಿಳಿಸಿದ್ದಾರೆ.

ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ ಪ್ರಮಾಣ 77 ಲಕ್ಷಕ್ಕೆ ಕುಸಿತ

ಹೊಸದಿಲ್ಲಿ : ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ 88.8 ಲಕ್ಷಗಳಿಂದ 77 ಲಕ್ಷಗಳಿಗೆ ಕುಸಿದಿದೆ. ಅಂದರೆ ಜನರು ಹೆದರಿಕೆಯಿಂದಲೇ ಗ್ಯಾಸ್ ಖರೀದಿಗೆ ಮುಗಿಬೀಳುತ್ತಿದ್ದ ಸನ್ನಿವೇಶ ಅಲ್ಪಮಟ್ಟಿಗೆ ಕಡಿಮೆಯಾಗಿದೆ. ಇದೇ ವೇಳೆ ಪೆಟ್ರೋಲ್, ಡೀಸೆಲ್ ಅಥವಾ ಅಡುಗೆ ಅನಿಲಗಳ ಕೊರತೆಯಿಲ್ಲ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹೊರತೂ ದೇಶದಲ್ಲಿ ಇವುಗಳ ಪೂರೈಕೆ ವ್ಯವಸ್ಥೆ ಸ್ಥಿರವಾಗಿದೆ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ. ಆದರೆ, ಆನ್‌ಲೈನ್ ಮುಖೇನ ಎಲ್‌ಪಿಜಿ ಬುಕ್ಕಿಂಗ್ ಶೇ.84 ರಿಂದ ಶೇ.87ಕ್ಕೇರಿದೆ. ಗ್ಯಾಸ್ ಸಿಗದಿದ್ದರೆ ಏನು ಮಾಡುವುದೆಂಬ ಹೆದರಿಕೆಯಿಂದ ಎಲ್‌ಪಿಜಿ ಡೀಲರ್‌ಶಿಪ್‌ಗಳ ಬಳಿ ಸರತಿಯಲ್ಲಿ ನಿಲ್ಲುವ ಬದಲು, ಡಿಜಿಟಲ್ ಮುಖೇನ ಬುಕ್ ಮಾಡಿ ಎಂಬ ತೈಲ ಮಾರ್ಕೆಟಿಂಗ್ ಕಂಪನಿಗಳ ಅಭಿಯಾನದ ಪರಿಣಾಮ, ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಶೇಕಡಾವಾರು ಹೆಚ್ಚತೊಡಗಿದೆ.

ದೇಶೀಯ ತೈಲ ಸಂಸ್ಕರಣಾಗಾರಗಳು ಅತ್ಯುನ್ನತ ಸಾಮರ್ಥ್ಯದಿಂದ ಕಾರ್ಯನಿರ್ವಹಿಸುತ್ತಿದ್ದು, ಸಾಕಷ್ಟು ಕಚ್ಚಾತೈಲ ದಾಸ್ತಾನನ್ನು ಕಾಯ್ದುಕೊಳ್ಳುತ್ತಿವೆ.

ಪಶ್ಚಿಮ ಬಂಗಾಳ, ಕೇರಳದಲ್ಲಿ ನಿಕಟ ಸ್ಪರ್ಧೆ: ಸಮೀಕ್ಷೆ
ಎನ್‌ಡಿಎ ತೆಕ್ಕೆಗೆ ತ.ನಾಡು, ಅಸ್ಸಾಂ?

ಹೊಸದಿಲ್ಲಿ: ಒಂದು ಕೇಂದ್ರಾಡಳಿತ ಪ್ರದೇಶ ಪುದುಚೇರಿ ಸೇರಿದಂತೆ ಒಟ್ಟು ಐದು ರಾಜ್ಯಗಳ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗಿದ್ದು, ನಾಲ್ಕು ಪ್ರಮುಖ ರಾಜ್ಯಗಳ ಚುನಾವಣಾ ಪೂರ್ವ ಸಮೀಕ್ಷೆಯೂ ಬಹಿರಂಗವಾಗಿದೆ.

ಅಸ್ಸಾಂನಲ್ಲಿ ಮತ್ತೆ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದಿರುವ ಸಮೀಕ್ಷೆ, ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟ ಗೆಲುವು ಸಾಧಿಸಲಿದೆ ಎಂದಿದೆ. ಹಾಗೆಯೇ ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ನಡುವೆ ಭಾರೀ ಸ್ಪರ್ಧೆ ಏರ್ಪಡಲಿದೆ ಎಂದಿದ್ದರೆ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವೆ ನಿಕಟ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ ಎಂದಿದೆ.

ಅಸ್ಸಾಂನಲ್ಲಿ ಮತ್ತೆ ಕಾಂಗ್ರೆಸ್ ಹಿಂದೆ ಬೀಳಲಿದ್ದು, 126 ಕ್ಷೇತ್ರಗಳ ಈ ವಿಧಾನಸಭೆಯಲ್ಲಿ 26-28ರಲ್ಲಿ ಗೆಲ್ಲಬಹುದು ಎಂದಿದೆ. ಆದರೆ, ಬಿಜೆಪಿ ಇಲ್ಲಿ 96ರಿಂದ 98ರಲ್ಲಿ ಗೆಲುವು ಸಾಧಿಸಲಿದೆ ಎಂದು ಹೇಳಿದೆ. ಇತರೆಯವರು 2-8ರಲ್ಲಿ ಗೆಲ್ಲಬಹುದು ಎಂದಿದೆ.

ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿಯ ಎನ್‌ಡಿಎ ಒಕ್ಕೂಟ 114-127ರಲ್ಲಿ ಗೆಲುವು, ಡಿಎಂಕೆ-ಕಾಂಗ್ರೆಸ್ ಒಕ್ಕೂಟ 104ರಿಂದ 114, ನಟ ವಿಜಯ್ ಅವರ ಟಿವಿಕೆ 6.12 ಮತ್ತು ಇತರೆಯವರು 1-6ರಲ್ಲಿ ಗೆಲ್ಲಬಹುದು ಎಂದಿದೆ.



ಕೇರಳ

- ಎಡರಂಗ- 61-71
- ಕಾಂಗ್ರೆಸ್ - 58-69
- ಎನ್‌ಡಿಎ - 2

ಪಶ್ಚಿಮ ಬಂಗಾಳ

- ಟಿಎಂಸಿ - 155-170
- ಬಿಜೆಪಿ - 100-115
- ಇತರೆ - 5-7

ಆರೋಗ್ಯ ಬಜೆಟ್‌ನಿಂದ ವಾರ್ಷಿಕ 150 ಕೋಟಿ ರೂ. ಕಾಂಗ್ರೆಸ್ ಜೇಬಿಗೆ
ಜನಪರವಾಗಿ ಸ್ವಾಸ್ಥ್ಯ ರಂಗ ಬದಲಿಸಿದ ಬಿಜೆಪಿ

ಗುವಾಹತಿ: ಅಸ್ಸಾಂನಲ್ಲಿ 15 ವರ್ಷಗಳ ಕಾಲ ಆಡಳಿತದಲ್ಲಿದ್ದಾಗ ರಾಜ್ಯ ಆರೋಗ್ಯ ಬಜೆಟ್‌ನಿಂದ ವರ್ಷಕ್ಕೆ 150 ಕೋಟಿ ರೂ.ಗಳನ್ನು ಕಾಂಗ್ರೆಸ್ ಜೇಬಿಗೆ ಹಾಕಿಕೊಳ್ಳುತ್ತಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಏಕಕಾಲಕ್ಕೆ ಬಿಜೆಪಿ ತನ್ನ 10 ವರ್ಷಗಳ ಆಳ್ವಿಕೆಯಲ್ಲಿ ಸ್ವಾಸ್ಥ್ಯ ರಂಗವನ್ನು ಜನಪರವಾಗಿ ಪರಿವರ್ತಿಸಿದೆ ಎಂದು ಹೇಳಿದರು. ಮಾತ್ರವಲ್ಲದೇ ಕಳೆದ ಹತ್ತು ವರ್ಷಗಳಲ್ಲಿ ಅಸ್ಸಾಂ ವೈದ್ಯಕೀಯ ಚಿಕಿತ್ಸಾ ರಂಗ ಮತ್ತು ಶಿಕ್ಷಣ ರಂಗಗಳಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದರು.

ಕಾಂಗ್ರೆಸ್ ತನ್ನ ನಾಯಕರ ಕುಟುಂಬಗಳ ಹಣಕಾಸು ಆರೋಗ್ಯ ಬಗ್ಗೆ ಮಾತ್ರ ಚಿಂತನೆ ನಡೆಸಿದ್ದರಿಂದ 10 ವರ್ಷಗಳ ಹಿಂದೆ ಅಸ್ಸಾಂನಲ್ಲಿ ಆರೋಗ್ಯ ರಂಗವು ಅಧೋಗತಿಗೆ ಜಾರಿತ್ತು. ಕಾಂಗ್ರೆಸ್ ಆಳ್ವಿಕೆಯ 2016ರವರೆಗೂ ರಾಜ್ಯದ ಸ್ವಾಸ್ಥ್ಯ ರಂಗದಲ್ಲಿ ಭಾರೀ ಭ್ರಷ್ಟಾಚಾರ ತಾಂಡವವಿತ್ತು ಎಂದವರು ಆಪಾದಿಸಿದರು.



ಸುಮಾರು 2,092 ಕೋಟಿ ಮೊತ್ತದ ಸ್ವಾಸ್ಥ್ಯಪರ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿ, ಹಲವನ್ನು ಉದ್ಘಾಟಿಸಿ ಸಚಿವರು ಮಾತನಾಡಿದರು.

ಹುಟ್ಟಿರದ 9 ಲಕ್ಷ ಅಸ್ವಸ್ಥ ಮಕ್ಕಳ ಚಿಕಿತ್ಸೆಯ ನೆಪ: ಆರೋಗ್ಯ ಬಜೆಟ್‌ನಿಂದ ಕಾಂಗ್ರೆಸ್ ಪ್ರತಿ ವರ್ಷವೂ ಸುಲಿಗೆ ಮಾಡುತ್ತಿದ್ದ ಬರೋಬ್ಬರಿ 150 ಕೋಟಿ ರೂಗಳನ್ನು, ಈ ಭೂಮಿಗೇ ಬಂದಿರದ 9 ಲಕ್ಷ ಮಕ್ಕಳ ಚಿಕಿತ್ಸೆಗೆ ಮತ್ತು ಅಸ್ತಿತ್ವದಲ್ಲೇ ಇಲ್ಲದ 390 ಅಂಗನವಾಡಿ ಕೇಂದ್ರಗಳಿಗೆ ವ್ಯಯಿಸುತ್ತಿರುವುದಾಗಿ ದಾಖಲೆಗಳಲ್ಲಿ ತೋರಿಸುತ್ತಿತ್ತು ಎಂದು ಶಾ ಹೇಳಿದರು.

ರಾಹುಲ್‌ಗೆ ಬ್ರೇಕ್‌ಫಾಸ್ಟ್ ಮಾಡೋ ಜಾಗ ಗೊತ್ತಿಲ್ಲ!

ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡು, ಬಿಜೆಪಿ ಮತ್ತು ದೇಶದ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ದೇಶವನ್ನು ಅಪಮಾನಿಸುವ ರಾಹುಲ್ ನಡೆಯನ್ನು ಯಾರೇ ಭಾರತೀಯರು ಬೆಂಬಲಿಸುವುದಿಲ್ಲ. ಕಾಂಗ್ರೆಸಿಗರು ಎಐ ಶೃಂಗಸಭೆ ಸಂದರ್ಭ ಶರ್ಟ್‌ರಹಿತವಾಗಿ ಪ್ರತಿಭಟಿಸಿದ್ದು ತೀರಾ ನಾಚಿಕೆಗೇಡು. ನಾವು ಕೂಡ ವಿಪಕ್ಷ ಸ್ಥಾನದಲ್ಲಿದ್ದು ಸರಕಾರದ ವಿರುದ್ಧ ಪ್ರತಿಭಟಿಸಿದ್ದೇವೆ, ಪ್ರತಿಭಟನೆಗೊಂದು ರೀತಿ ನೀತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸಚಿವ ಶಾ, ಪ್ರಜಾಸತ್ತೆಯಲ್ಲಿ ಸಂಸತ್ತಿಗೆ ಪವಿತ್ರ ಜಾಗವಿದೆ. ಸಂಸತ್‌ಭವನದ ಮೆಟ್ಟಿಲುಗಳನ್ನು ಧರಣಿಗೂ ಬಳಸುವಂತಿಲ್ಲ. ಆದರೆ ಇದರ ಮಹತ್ವವನ್ನೇ ಅರಿಯದ ರಾಹುಲ್ ಗಾಂಧಿ ಸಂಸತ್ತಿನ ಮೆಟ್ಟಿಲಲ್ಲೇ ಕುಳಿತು ಚಹಾ-ಪಕೋಡಾ ತಿನ್ನುತ್ತಿದ್ದದ್ದು ಸರಿಯಲ್ಲ ಎಂದರು.

ಕಿರುಸುದ್ದಿ

ಅಭಿಷೇಕ್ ಶೆಟ್ಟಿಗೆ ಚಿನ್ನದ ಪದಕ



◆ **ಸವಣೂರು:** ಪಂಜಾಬ್‌ನ ಜಲಂಧರ್‌ನಲ್ಲಿ ಮಾ.7ರಿಂದ 12ರವರೆಗೆ ನಡೆದ 74ನೇ ಅಖಿಲ ಭಾರತ ಪೊಲೀಸ್ ಅಥ್ಲೆಟಿಕ್ಸ್ ಕ್ಲಸ್ಟರ್ ಪುರುಷರ ಡೆಕಾಥ್ಲಾನ್ ಸ್ಪರ್ಧೆಯಲ್ಲಿ ಬೆಂಗಳೂರು ನಗರ ಪೊಲೀಸ್ ಇನ್ಸ್‌ಪೆಕ್ಟರ್, ಏಕಲವ್ಯ ಪುರಸ್ಕೃತ ಸವಣೂರಿನ ನಡುಬೈಲಿನ ಅಭಿಷೇಕ್ ಶೆಟ್ಟಿ ಮೊದಲ ಸ್ಥಾನದೊಂದಿಗೆ ಚಿನ್ನದ ಪದಕ ಗೆದ್ದಿದ್ದಾರೆ. ಕರ್ನಾಟಕ ಪೊಲೀಸ್ ಇತಿಹಾಸದಲ್ಲಿ ಈ ಸಾಧನೆ ಮಾಡಿದ ಮೊದಲ ಅಥ್ಲೀಟ್ ಎಂಬ ಹಿರಿಮೆಗೆ ಅಭಿಷೇಕ್ ಶೆಟ್ಟಿ ಭಾಜನರಾಗಿದ್ದಾರೆ ಎಂದು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ತಿಳಿಸಿದೆ.

ಥೈಲ್ಯಾಂಡ್ ಮಾಸ್ಟರ್ಸ್ ಅಥ್ಲೆಟಿಕ್‌ನಲ್ಲಿ ಬಂಗಾಡುಮನೆ ವಸಂತಿಗೆ ಚಿನ್ನ, ಬೆಳ್ಳಿ ಪದಕ



◆ **ಮಡಿಕೇರಿ:** ಥೈಲ್ಯಾಂಡ್‌ನ ರಚ್ಚುಪುರಿ ಸ್ಟೇಡಿಯಂನಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಮಟ್ಟದ 30ನೇ ಥೈಲ್ಯಾಂಡ್ ಮಾಸ್ಟರ್ಸ್ ಅಥ್ಲೆಟಿಕ್‌ನ 60 ವಯೋಮಿತಿಯ ವಿಭಾಗದಲ್ಲಿ ಮಡಿಕೇರಿಯ ನಿವೃತ್ತ ಶುಶ್ರೂಷಕಿ ಅಧೀಕ್ಷಕಿ ಬಂಗಾಡುಮನೆ ವಸಂತಿ ಅವರು ತಲಾ ಒಂದು ಚಿನ್ನ ಮತ್ತು ಬೆಳ್ಳಿಯ ಪದಕವನ್ನು ಗೆದ್ದಿದ್ದಾರೆ. ಕ್ರೀಡಾಕೂಟದಲ್ಲಿ ಕೊಡಗು ಜಿಲ್ಲೆಯಿಂದ ಬಂಗಾಡುಮನೆ ವಸಂತಿ ಸೇರಿದಂತೆ ಇಬ್ಬರು ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ಭಾರತ, ಫಿಲಿಪೈನ್ಸ್, ಯುಎಸ್‌ಎ, ನೆದರ್ ಲ್ಯಾಂಡ್, ಇಸ್ರೇಲ್, ಮಲೇಶಿಯಾ, ಸಿಂಗಾಪುರ್, ಶ್ರೀಲಂಕಾ, ಥೈಲ್ಯಾಂಡ್ ಸೇರಿದಂತೆ 10 ದೇಶಗಳ ಒಟ್ಟು 1024 ಕ್ರೀಡಾಪಟುಗಳು ಭಾಗವಹಿಸಿದ್ದರು.

ಮಡಿಕೇರಿಯಲ್ಲಿಂದು ವಿಶೇಷ ಚೇತನರ ರಾಜ್ಯ ಮಟ್ಟದ ಕ್ರೀಡಾಕೂಟ

◆ **ಮಡಿಕೇರಿ:** ಕೊಡಗಿನಲ್ಲಿ ಇದೇ ಮೊದಲ ಬಾರಿಗೆ ವಿಶೇಷ ಚೇತನರಿಗಾಗಿ ರಾಜ್ಯ ಮಟ್ಟದ ಕ್ರೀಡಾಕೂಟ ಮಾ.16 (ಇಂದು) ನಡೆಯಲಿದೆ.ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಪೂರ್ವಾಹ್ನ 10 ಗಂಟೆಯಿಂದ ಸಂಜೆ 4ಗಂಟೆಯವರೆಗೆ ನಡೆಯಲಿರುವ ಕ್ರೀಡಾಕೂಟದ ಆತಿಥ್ಯವನ್ನು ಸುಂಟಿಕೊಪ್ಪದ ಸ್ವಸ್ಥ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರ ವಹಿಸಿಕೊಂಡಿದೆ.ಕ್ರೀಡಾಕೂಟದಲ್ಲಿ 150 ವಿಶೇಷ ಕ್ರೀಡಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಕೇಂದ್ರದ ನಿರ್ದೇಶಕಿ ಆರತಿ ಸೋಮಯ್ಯ ತಿಳಿಸಿದ್ದಾರೆ.

ಪಿಎಂ ಕಿಸಾನ್ 22ನೇ ಕಂತು, ಇಕೆವೈಸಿ ಶಿಬಿರ

◆ **ಸುಳ್ಯ:** ಸುಳ್ಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸುಳ್ಯದಲ್ಲಿ ಕೇಂದ್ರ ಸರಕಾರದ ಪಿಎಂ ಕಿಸಾನ್ 22ನೇ ಕಂತು ಪಾವತಿ ಕಾರ್ಯಕ್ರಮದ ಪ್ರಸಾರ ಮತ್ತು ಇಕೆವೈಸಿ ಶಿಬಿರ ಶುಕ್ರವಾರ ಕಚೇರಿ ಸಭಾಂಗಣದಲ್ಲಿ ನಡೆಯಿತು. ವೀಡಿಯೋ ವಾಲ್ ಮೂಲಕ ಪ್ರಧಾನ ಮಂತ್ರಿಗಳು ಬಿಡುಗಡೆಗೊಳಿಸಿದ ಕೃಷಿ ಸಮ್ಮಾನ್ ಯೋಜನೆ ಹಾಗೂ ಇದರ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರಲ್ಲದೇ ಇದೇ ಸಂದರ್ಭದಲ್ಲಿ 22ನೇ ಕಂತಿನ ಹಣವನ್ನು ಸ್ವೀಕರಿಸಿದ ರೈತರು 2ತಮ್ಮ ಕೃಷಿ ಚಟುವಟಿಕೆಗಳ ಬಳಕೆಯ ಕುರಿತು ಮಾಹಿತಿ ವಿನಿಮಯ ಮಾಡಿಕೊಂಡರು. ಇದಕ್ಕೂ ಮೊದಲು ಕಿಸಾನ್ ಸಮ್ಮಾನ್ ಸೇರಿದಂತೆ ಪ್ರತಿಯೊಬ್ಬ ಕೃಷಿಕರಿಗೆ ಎಫ್‌ಐಡಿ ಜೊತೆಗೆ ಆಧಾರ್ ಜೋಡಣೆ ಶಿಬಿರವನ್ನು ನಡೆಸಲಾಯಿತು. ಈ ಸಂದರ್ಭ ನೂರಾರು ರೈತರು ತಮ್ಮ ಇಕೆವೈಸಿ ಮಾಡಿಸಿಕೊಂಡರು. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಗುರುಪ್ರಸಾದ್ ಎಂ.ಎಸ್. ಕಾರ್ಯಕ್ರಮ ನಿರ್ವಹಿಸಿದರು.

ಅಪ್ರಾಪ್ತನಿಗೆ ಸ್ಕೂಟರ್ ನೀಡಿದಾತನಿಗೆ ದಂಡ

◆ **ಪುತ್ತೂರು:** ಅಪ್ರಾಪ್ತ ಬಾಲಕನಿಗೆ ಸ್ಕೂಟರ್ ಚಲಾಯಿಸಲು ನೀಡಿ ಅಪಘಾತಕ್ಕೆ ಕಾರಣವಾದ ಸ್ಕೂಟರ್ ಮಾಲಕನಿಗೆ ನ್ಯಾಯಾಲಯ ರೂ.20 ಸಾವಿರ ದಂಡ ವಿಧಿಸಿದೆ.
31-8-2025 ರಂದು ಪುತ್ತೂರು ಕಸಬಾ ಗ್ರಾಮದ, ಕ್ಯಾಂಪ್ಕೋ ಕಚೇರಿ ಎದುರು ಅಪ್ರಾಪ್ತ ಬಾಲಕನೊಬ್ಬ ದ್ವಿಚಕ್ರ ವಾಹನವನ್ನು ಅಜಾರೂಕತೆ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿ ಇನ್ನೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸ್ಕೂಟರ್ ಸಹಿತ ರಸ್ತೆಗೆ ಬಿದ್ದು ಗಾಯಗೊಂಡಿದ್ದ. ಈ ಬಗ್ಗೆ ಪುತ್ತೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಅಪ್ರಾಪ್ತ ಬಾಲಕನಿಗೆ ದ್ವಿಚಕ್ರ ವಾಹನ ಚಲಾಯಿಸಲು ನೀಡಿದ ವಾಹನದ ನೋಂದಣಿ ಮಾಲಕರಿಗೆ ನ್ಯಾಯಾಲಯ ರೂ.20 ಸಾವಿರ ದಂಡ ವಿಧಿಸಿ ಶಿಕ್ಷೆ ಪ್ರಕಟಿಸಿದೆ.



ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಯ ವರ್ಷಾವಧಿ ಉತ್ಸವದ ಪ್ರಯುಕ್ತ ಶುಕ್ರವಾರ ರಾತ್ರಿ ಸಂಪ್ರದಾಯದಂತೆ ದೇವಳದಲ್ಲಿ ಓಕುಳಿ, ಸೌಪರ್ಣಿಕಾ ತೀರ್ಥದಲ್ಲಿ ತೆಪ್ಪೋತ್ಸವ ಹಾಗೂ ಅವಭೃತ ಸ್ನಾನ ದೇವಳದ ತಂತ್ರಿ, ಪ್ರಧಾನ ಅರ್ಚಕ ಕೆ. ಎನ್. ಗೋವಿಂದ ಅಡಿಗರ ನೇತೃತ್ವದಲ್ಲಿ ನಡೆಯಿತು. ದೇವಳದ ಅರ್ಚಕರು, ಉಪಾಧಿವಂತ ಕ್ಷೇತ್ರ ಪುರೋಹಿತರು ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ವಯೋವೃದ್ಧ ರೋಗಿಗಳ ಸುರಕ್ಷಿತ ಪ್ರಯಾಣಕ್ಕೆ ಹೆದ್ದಾರಿ ಪ್ರಾಧಿಕಾರದಿಂದ ವ್ಯವಸ್ಥೆ: ಆಯೋಗ

◆ **ಕಾಸರಗೋಡು:** ವೃದ್ಧರು, ರೋಗಿಗಳು ರಾಷ್ಟ್ರೀಯ ಹೆದ್ದಾರಿಯ ರಸ್ತೆಯಲ್ಲಿ ಸುರಕ್ಷಿತವಾಗಿ ಪ್ರಯಾಣಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೇ ವ್ಯವಸ್ಥೆ ಕಲ್ಪಿಸಬೇಕು ಎಂದು ಮಾನವಹಕ್ಕು ಆಯೋಗದ ನ್ಯಾಯಾಂಗ ಸದಸ್ಯ ಕೆ.ಬೈಜುನಾಥ್ ತಿಳಿಸಿದ್ದಾರೆ. ಪ್ರಯಾಣ ರಸ್ತೆ ನಿರ್ಮಿಸುವಾಗ ದೂರು ಸಲ್ಲಿಸಿದವರು ರೋಗಬಾಧಿತರು ಎಂಬ ವಿಷಯವನ್ನು ಮರೆಯಬಾರದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ (ಕಣ್ಣೂರು) ಯೋಜನಾ ನಿರ್ದೇಶಕರಿಗೆ ಆಯೋಗ ನಿರ್ದೇಶನ ನೀಡಿದೆ.

ಕಾಸರಗೋಡು ಮೊಗ್ರಾಲ್ ಪುತ್ತೂರು ಗ್ರಾಮದಲ್ಲಿ ಬಿ.ಎ.ಮುಹಮ್ಮದ್ ಶಾಫಿ ಸಲ್ಲಿಸಿದ ದೂರಿನ ಹಿನ್ನೆಲೆಯಲ್ಲಿ ಈ ನಿರ್ದೇಶನ ನೀಡಲಾಗಿದೆ. 74 ವಯಸ್ಸಿನ ಅರ್ಜಿದಾರರು, 64 ವಯಸ್ಸಿನ ಪತ್ನಿಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಪರಿಣಾಮ ಸರ್ವಿಸ್ ರಸ್ತೆಗೆ ಕಾಲ್ನಡಿಗೆಯಲ್ಲಿ ಕೂಡಾ ಇಳಿಯಲು ಸಾಧ್ಯವಾಗದ ಸ್ಥಿತಿಯುಂಟಾಗಿತ್ತು. ರಾಷ್ಟ್ರೀಯ ಹೆದ್ದಾರಿ ಆಧಾರಗೋಡೆ ನಿರ್ಮಿಸಿದಾಗ ಅರ್ಜಿದಾರರು ಮಾರ್ಗವು ಸಂಚಾರಕ್ಕೆ ಅಡ್ಡಿಯಾಗಿರುವುದಾಗಿ ರಾಷ್ಟ್ರೀಯ ಹೆದ್ದಾರಿ ಆಯೋಗಕ್ಕೆ ತಿಳಿಸಿದ್ದರು. ಆಧಾರಗೋಡೆಯ ಸ್ಥಿತಿ ಬದಲಿಸಲು ಸಾಧ್ಯವಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. ಅರ್ಜಿದಾರರು ಸರ್ವಿಸ್ ರಸ್ತೆಗೆ ಪ್ರವೇಶಿಸಬೇಕಾದರೆ ಕ್ಯಾಂಪ್ ಅಥವಾ ಇತರ ವ್ಯವಸ್ಥೆ ಮಾಡಬೇಕು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ದೇಶನ ನೀಡಿದೆ.

ರೋಗಬಾಧಿತ ವೃದ್ಧರನ್ನು ರಸ್ತೆ ಅಭಿವೃದ್ಧಿಯ ಹೆಸರಿನಲ್ಲಿ ಈ ರೀತಿ ಮಾಡುವುದು ಮಾನವಹಕ್ಕಿನ ಉಲ್ಲಂಘನೆಯಾಗಿದೆ ಎಂದೂ ವೃದ್ಧರನ್ನು ಸಂಕಷ್ಟಕ್ಕೊಳಪಡಿಸುವ ರೀತಿಯಲ್ಲಿ ಮೂಲಸೌಕರ್ಯ ಜಾರಿಗೊಳಿಸಬಾರದು ಎಂದು ಆದೇಶದಲ್ಲಿ ಹೇಳಲಾಗಿದೆ. ದೂರುದಾತರು ಹಾಗೂ ಕುಟುಂಬವು ಬೇರೆ ದಾರಿ ಇಲ್ಲದೆ ತಾತ್ಕಾಲಿಕವಾಗಿ ಇನ್ನೊಂದು ಸ್ಥಳದಲ್ಲಿ ವಾಸಮಾಡಬೇಕಾಗಿ ಬಂದ ಹಿನ್ನೆಲೆಯಲ್ಲಿ ದೂರುದಾರನ ಭೂಮಿಯಲ್ಲಿ ಅತಿಕ್ರಮಣ ಉಂಟಾಗದಿರಲು ಮೊಗ್ರಾಲ್ ಪುತ್ತೂರು ಪಂಚಾಯತ್ ಕಾರ್ಯದರ್ಶಿಗೆ ನ್ಯಾಯಾಂಗ ಸದಸ್ಯ ಕೆ.ಬೈಜುನಾಥ್ ನಿರ್ದೇಶನ ನೀಡಿದ್ದಾರೆ. ಆದೇಶದ ಆಧಾರದಲ್ಲಿ ಕೈಗೊಂಡ ಕ್ರಮಗಳನ್ನು ಎರಡು ತಿಂಗಳೊಳಗೆ ಆಯೋಗದಲ್ಲಿ ಸಲ್ಲಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಗಮನಸೆಳೆದಿದೆ ಸಹೋದರಿಯರ ಪಶುಪ್ರೀತಿ | ಇವರ ಆಸರೆಯಲ್ಲಿ ನೆಮ್ಮದಿಯಾಗಿವೆ ಗೋಮಾತೆ

ದನ ಕರು ಜೊತೆ ಬೆಸೆದಿದೆ ಇಲ್ಲಿ ಬದುಕು

◆ **ಉಪ್ಪಿನಂಗಡಿ:** ಗೋಳಿತೊಟ್ಟು ಗ್ರಾಮದ ತಿರ್ಲೆ ಎಂಬಲ್ಲಿನ ನಿವಾಸಿಗರಾದ ನಾಲ್ವರು ಸಹೋದರಿಯರ ಗೋಪ್ರೇಮ ಸಮಾಜಕ್ಕೆ ಮಾದರಿಯಾಗಿದೆ. ಬರೋಬ್ಬರಿ ಮಲೆನಾಡಗಿಡ್ಡ ಜಾತಿಯ 63 ದನಕರುಗಳೊಂದಿಗೆ ಜೀವನ ನಡೆಸುತ್ತಿರುವ ಈ ಸಹೋದರಿಯರ ಕಥನ ನಾಗರಿಕ ಸಮಾಜದ ಕರ್ತವ್ಯ ಪ್ರಜ್ಞೆಯನ್ನು ನೆನಪಿಸುವಂತಿದೆ.

ಮಾ. 11 ರಂದು ಪರಿಸರದ ಮಹಿಳೆಯೋರ್ವರು ತನ್ನ ತೋಟಕ್ಕೆ ಬಂದಿದ್ದ ಜಾನುವಾರುಗಳನ್ನು ಓಡಿಸಲೆಂದು ಹೋದಾಗ ಬಿದ್ದು ಸಾವನ್ನಪ್ಪಿದರೆಂಬ ಸುದ್ದಿಯ ಬೆನ್ನೇರಿ ಹೋದಾಗ ಅನಾವರಣಗೊಂಡಿರುವುದೇ ಈ ನಾಲ್ವರು ಅವಿವಾಹಿತ ಸಹೋದರಿಯರ ಶೋಚನೀಯ ಬದುಕು ಮತ್ತು ಅವರ ಗೋ ಪ್ರೇಮದ ಜೀವನ ಕಥನ.

ಗೋಳಿತೊಟ್ಟು ಗ್ರಾಮದ ತಿರ್ಲೆ ಮರಂದೆ ಮನೆ ನಿವಾಸಿಗರಾದ ನಾಗಮ್ಮ ಗೌಡ, ಚೆನ್ನಮ್ಮ ಗೌಡ, ರೇವತಿ ಗೌಡ, ಲಲಿತಾ ಗೌಡ ಎಂಬ ನಾಲ್ವರು ಸಹೋದರಿಯರು ಸುಮಾರು 5 ಎಕ್ರೆ ಪ್ರದೇಶದ ಕೃಷಿ ಭೂಮಿ ಮತ್ತದರಲ್ಲಿನ ಚಿಕ್ಕದಾದ ಮನೆಯಲ್ಲಿ ವಾಸ್ತವ್ಯ ಹೊಂದಿದ್ದಾರೆ. ಎಷ್ಟಿದೆಯಮ್ಮ ದನಕರುಗಳೆಂದರೆ ಹೆಚ್ಚಿಲ್ಲ ಸುಮಾರು 35 ಇರಬಹುದು ಎನ್ನುತ್ತಾರೆ. ಊರಿನವರಲ್ಲಿ ಕೇಳಿದರೆ ನಮಗೆ ಲೆಕ್ಕಮಾಡುವಾಗ 63 ಸಿಕ್ಕಿದೆ. ಹೆಚ್ಚಲ್ಲದೆ ಕಡಿಮೆಯಲ್ಲ ಎನ್ನುತ್ತಾರೆ.

ದನ-ಕರುಗಳಿಗೆ ಮುಕ್ತ ಜೀವನ

ಕಾಡಿನಲ್ಲಿನ ಪ್ರಾಣಿಗಳು ಕಾಡಿನೊಳಗೆ ಹೇಗೆ ಜೀವನ ನಡೆಸುತ್ತಿದೆಯೋ ಅಂತೆಯೇ ಇವರ ಜಾನುವಾರುಗಳು ಜೀವನ ನಡೆಸುತ್ತಿರುತ್ತದೆ. ಇವರ ಗದ್ದೆ, ತೋಟ, ರಬ್ಬರ್ ತೋಟದ ವಿಶಾಲ ಪರಿಸರದಲ್ಲಿ ಮನಸೋ ಇಚ್ಚೆ ಅಲೆದಾಡುತ್ತಿರುವ ದನ-ಕರುಗಳುಮನಸ್ಸಾದರೆಮನೆಯೊಳಗೆಬಂದು ಮಲಗುತ್ತದೆ, ಮನಸ್ಸಾದರೆ ತಂಡೋಪತಂಡವಾಗಿ ಊರಿನ ಪರಿಸರದಲ್ಲಿ ಮೇಯಲು ಹೋಗುತ್ತದೆ. ಕಾಂಪೌಂಡ್, ಬೇಲಿ ಇದ್ಯಾವುದೂ ಇದಕ್ಕೆ ಅಡೆತಡೆ ಎನಿಸದು. ತೋಟಕ್ಕೆ ನುಗ್ಗಬೇಕೆನಿಸಿದರೆ ತಡೆಬೇಲಿಯನ್ನು ಹಾರಿಯಾದರೂ ನುಗ್ಗುತ್ತದೆ. ಈ ಮಟ್ಟದ ಸ್ವಾತಂತ್ರ್ಯಭರಿತ ಜೀವನ ಇವುಗಳದ್ದು. ಗುಂಪಿನ ಹೋರಿಗಳು ಉಳಿದೆಲ್ಲಾ ದನಕರುಗಳ ರಕ್ಷಣೆಗೆ ಸದಾ ಸಿದ್ದ. ಗುಂಪಿನ ಯಾವುದಾದರೂ ಕರು ರಕ್ಷಣೆಗಾಗಿ ಕೂಗಿತ್ತೆಂದರೆ ಹೋರಿಗಳು ತಕ್ಷಣ ಆಕ್ರಮಣಕಾರಿಯಾಗಿ ಮುಂದೆಜ್ಜೆ ಇರಿಸುತ್ತದೆ. ಈ ಕಾರಣಕ್ಕೆ ಇವರ ದನಕರುಗಳು ಬೇರಾವ ರಕ್ಷಣೆ ಇಲ್ಲದಿದ್ದರೂ ಸುರಕ್ಷಿತವಾಗಿದೆ.

ಈ ಪ್ರಮಾಣದ ದನಕರುಗಳು ಮನೆಯಲ್ಲಿ ಇರುವಾಗ ದಿನಂಪ್ರತಿ ಎಷ್ಟು ಹಾಲು ಸಿಗುತ್ತದೆ ಎಂದು ಪ್ರಶ್ನಿಸಿದರೆ, ಮನೆಯ ಹಿರಿಯಳಾದ ನಾಗಮ್ಮ ನೀಡಿದ ಉತ್ತರ ಗಮನಾರ್ಹವಾಗಿತ್ತು. ಮಳೆಗಾಲದ ಸಮಯದಲ್ಲಿ ನಾವು ಮೇವುಗಳನ್ನು ತಂದು ಹಾಕುತ್ತಿದ್ದೇವು. ಈಗ ಬೇಸಿಗೆ ಕಾಲ ನಮಗೆ ಮೇವುಗಳು ಸಿಗುತ್ತಿಲ್ಲ. ಹೀಗಾಗಿ ನೀರನ್ನಷ್ಟೇ ಇಡುತ್ತಿದ್ದೇವೆ. ಅವುಗಳೇ ಪರಿಸರದಲ್ಲಿ ಮೇಯಲು ಹೋಗಿ ತಿಂದುಂಡು ಬರುತ್ತಿವೆ. ನಾವು ಮೇವು ಕೊಡದೆ ಇರುವಾಗ ಅದರ ಹಾಲನ್ನು ತೆಗೆಯುವುದು ಸರಿಯಾ? ಗುಂಪಿನ ಕರುಗಳಿಗೆಲ್ಲಾ ಅದರ ಹಾಲು ಬೇಕಾಗುತ್ತದೆ. ಹೀಗಾಗಿ ಬೇಸಗೆ ಪ್ರಾರಂಭವಾದಂದಿನಿಂದ ನಾವು ಹಾಲು ತೆಗೆಯುತ್ತಿಲ್ಲ ಇಷ್ಟೊಂದು ದನ-ಕರುಗಳ ಸೆಗಣಿ, ಮೂತ್ರದಿಂದ ಭೂಮಿಯ ಫಲವತ್ತತೆ ಹೆಚ್ಚಾಗುತ್ತಿದೆಯಲ್ವ ? ಅದೇ ನಮಗೆ ಈಗ ಸಿಗುತ್ತಿರುವ ಪ್ರಯೋಜನ ಎಂದು ಉತ್ತರಿಸಿದ್ದಾರೆ.

ನೆರವು ಅಗತ್ಯವಿದೆ

ಸ್ಥಳಕ್ಕೆ ಭೇಟಿ ನೀಡಿ ಸಹೋದರಿಯರೊಂದಿಗೆ ಮಾತುಕತೆಯನ್ನಾಡಿದ ವಿಶ್ವಹಿಂದೂ ಪರಿಷತ್ ಮುಂದಾಳು ನವೀನ್ ನೆರಿಯಾ ಅವರು, ಈ ಮನೆಯ ಸಹೋದರಿಯರು ದನ-ಕರುಗಳೊಂದಿಗೆ ಬದುಕು ಬೆಸೆದುಕೊಂಡಿದ್ದಾರೆ. ಮುಕ್ತವಾಗಿ ಬದುಕುತ್ತಿರುವ ದನ-ಕರುಗಳನ್ನು ಕಟ್ಟಿಹಾಕಿ ಸಾಕುವುದು ತ್ರಾಸದಾಯಕ. ಇರುವ ಭೂಮಿಯಲ್ಲೇ ಸ್ಥಳಿಯಾಡಳಿತ ಮುತುವರ್ಜಿ ವಹಿಸಿ ದನ-ಕರುಗಳು ಮುಕ್ತವಾಗಿ ಬದುಕುವಂತೆ ಹಾಗೂ ಹೊರಗಡೆ ಹೋಗದಂತೆ ಯೋಜನೆ ರೂಪಿಸಿದರೆಪ್ರಯೋಜನಕಾರಿಯಾಗಬಹುದೆಂದು ಅಭಿಪ್ರಾಯಿಸಿದರು.





ಮನೆಯೂ ಜಾನುವಾರುಗಳಿಗೆ ಮೀಸಲು

ಸಹೋದರಿಯರ ಮನೆಯನ್ನು ವೀಕ್ಷಿಸಲು ಮುಂದಾದಾಗ ಮನೆಯ ಬೆಡ್ ರೂಂನಲ್ಲಿ ನೆಲಕ್ಕೆ ಸಿಮೆಂಟ್ ಸಾರಣೆಯಾಗದೆ ಗುಂಡಿಗಳು ಬಿದ್ದಿರುವುದನ್ನು ಕಂಡು ಇದೇಕೆ ಹೀಗೆಂದು ಪ್ರಶ್ನಿಸಿದರೆ. ಅದರಲ್ಲಿ ಕರುಗಳು ಬಂದು ಮಲಗುತ್ತವೆ. ಮನೆಯ ಬಚ್ಚಲು ಮನೆಯಲ್ಲಿಯೂ ದನ-ಕರುಗಳು ಬಂದು ಮಲಗುತ್ತಿರುವುದರಿಂದ ನಾವು ಮನೆಯ ಹೊರಗಡೆ ಸ್ನಾನ ಮಾಡುತ್ತೇವೆ ಎನ್ನುವ ಸಹೋದರಿಯರು, ಅಡುಗೆ ಮನೆಯಲ್ಲಿ ಸಿದ್ದಪಡಿಸಿದ ಆಹಾರವನ್ನು ದನ-ಕರುಗಳು ಬಂದು ಸೇವಿಸಿದರೂ ಇವರ ಆಕ್ಷೇಪವಿಲ್ಲ. ಮನೆ ಮಕ್ಕಳಂತೆ ದನ-ಕರುಗಳನ್ನು ಸಾಕುತ್ತಿದ್ದಾರೆ.

ಬದುಕು ಹೀಗಾಯಿತು..!

ಮನೆಯಲ್ಲಿ ನಮಗೆ ಇಬ್ಬರು ಸಹೋದರರಿದ್ದರು. ಅನಾರೋಗ್ಯ ಪೀಡಿತರಾಗಿ ಅವರು ಸಾವನ್ನಪ್ಪಿದರು. ನಮ್ಮ ಹೆತ್ತವರು ತೀರಿದ ಬಳಿಕ ನಮಗೆ ಮುಂದೆ ನಿಲ್ಲುವವರು ಯಾರೂ ಇಲ್ಲದೆ ನಮ್ಮ ಬದುಕು ಹೀಗಾಯಿತು ಎಂದು ನೆಲವನ್ನು ನೋಡುತ್ತಾ ನುಡಿದಾಗ ನಾಗರಿಕ ಸಮಾಜದ ಕರ್ತವ್ಯ ಲೋಪದ ನೋವು ಅವರ ಮಾತಿನಲ್ಲಿ ಅಡಕವಾಗಿತ್ತು.

ನಾಗರಿಕ ಸಮಾಜ ಕಣ್ತೆರೆಯಬೇಕಾಗಿದೆ

ನಮ್ಮಲ್ಲಿ ಎಲ್ಲಾ ಸಂಘಟನೆಗಳಿಗಿಂತಲೂ ಜಾತಿ ಸಂಘಟನೆಗಳು ಬಲವಾಗಿದೆ. ಆದರೆ ಸಮಾಜದ ಕಟ್ಟಕಡೆಯ ಇಂತಹ ಅಗತ್ಯವುಳ್ಳ ಜನರ ಸಹಾಯಕ್ಕೆ ಯಾವ ಸಂಘಟನೆಗಳೂ ಕೆಲಸ ಮಾಡುವುದಿಲ್ಲ ಎಂದಾಗ ನೋವು ಕಾಡುತ್ತದೆ. ಅಪ್ಪ ಅಮ್ಮನನ್ನು ಕಳೆದುಕೊಂಡ ಬಳಿಕ ಈ ಸಹೋದರಿಯರಿಗೆ ಯಾರೊಬ್ಬರೂ ಸಹಾಯಕ್ಕೆ ಮುಂದಾಗದಿರುವುದು ನಾಗರಿಕ ಸಮಾಜಕ್ಕೆ ಶೋಭೆಯಲ್ಲ. ಖಂಡಿತವಾಗಿಯೂ ಇಂತಹ ವಿಚಾರದಲ್ಲಿ ನಾಗರಿಕ ಸಮಾಜ ಕಣ್ತೆರೆಯಬೇಕಾಗಿದೆ. ಸಹಕಾರದ ಮನೋಭಾವ ಬೆಳೆಸಬೇಕಾಗಿದೆ ಎಂದು ಯುವ ಸಾಮಾಜಿಕ ಕಾರ್ಯಕರ್ತ ಮೂಲಚಂದ್ರ, ಕಾಂಚನ ಅಭಿಪ್ರಾಯಿಸಿದ್ದಾರೆ.

ದೈವರಾಜ ಕೋಟೆದ ಬಬ್ಬುಸ್ವಾಮಿ ದೈವಸ್ಥಾನದ ಮೇಲ್ಛಾವಣಿ ಕಾಮಗಾರಿಯ ಗುದ್ದಲಿ ಪೂಜೆ



◆ **ಮಂಗಳೂರು:** ಬೊಳ್ಕಲ್ ಗ್ರಾಮ ಅತ್ತಾವರ ದೈವರಾಜ ಕೋಟೆದ ಬಬ್ಬುಸ್ವಾಮಿ ದೈವಸ್ಥಾನದ ಮೇಲ್ಛಾವಣಿ ಕಾಮಗಾರಿಯ ಗುದ್ದಲಿ ಪೂಜೆಯು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮೋಹನ್ ಪೂಜಾರಿ, ರವಿಶಂಕರ್ ಮಿಜಾರ್, ನಿತಿನ್ ಕುಮಾರ್, ಲಲ್ಲೇಶ್ ಕುಮಾರ್, ರಘುವೀರ್ ಬಾಬುಗುಡ್ಡೆ, ರಾಜೇಂದ್ರ ಕದ್ರಿ, ರಘುರಾಜ್ ಕದ್ರಿ, ರಂಗನಾಥ ಕಿಣಿ, ರಘುವೀರ್ ಸೂಟರ್ ಪೇಟೆ, ನಾರಾಯಣ ಗಟ್ಟಿ, ಜಯ ಕುಮಾರ್, ಅನಿಲ್ ಕುಮಾರ್ ಅತ್ತಾವರ, ಜ್ಯೋತಿ ಯಲಬುರ್ಗಿ, ಚಂಚಲಾಕ್ಷಿ, ದಯಾನಂದ ಸನ್ಯಾಸಿ ಗುಡ್ಡೆ, ಅನಿಲ್ ಕುಮಾರ್ ಹೊಯಿಗೆ ಬಜಾರ್, ಕಿರಣ್ ಕೊಡಿಯಾಲ್ ಬೈಲ್, ವಿವೇಕ್ ಪ್ರಭು, ನವೀನ್ ಶೆಣೈ, ಶರತ್ ಕುಮಾರ್ ಅತ್ತಾವರ, ಗುರುರಾಜ್ ಕದ್ರಿ, ರಾಜೇಶ್ ಬೊಳ್ಕಲ್, ಪ್ರಭಾಕರ್ ಶೆಟ್ಲೆ ಗ್ರಾಮ, ಸುಧೀರ್ ಮೊದಲಾದವರು ಉಪಸ್ಥಿತರಿದ್ದರು.

ಅಳದಂಗಡಿಯಲ್ಲಿ ಕಾಳುಮೆಣಸು, ಕಾಫಿ ಬೆಳೆಯ ಮಾಹಿತಿ, ಸಂವಾದ

ಸಹಕಾರ ಸಂಘಗಳು ಪ್ರೋತ್ಸಾಹಿಸಲಿ



◆ **ಬೆಳ್ತಂಗಡಿ:** ಕೃಷಿ ಕಾರ್ಯಗಳಲ್ಲಿ ಸ್ಥಿರತೆ ಕಾಪಾಡಿಕೊಳ್ಳುವುದು ಮುಖ್ಯ. ಮಿಶ್ರಬೆಳೆಗಳ ಬಗ್ಗೆಯೂ ಕೃಷಿಕರ ಒಲವು ಇರಬೇಕು. ಇದಕ್ಕೆ ಸಹಕಾರ ಸಂಘಗಳು ರೈತರನ್ನು ಪ್ರೋತ್ಸಾಹಿಸಬೇಕು ಎಂದು ಶಾಸಕ ಹರೀಶ ಪೂಂಜ ಹೇಳಿದರು.

ಅಳದಂಗಡಿ ಕಟ್ಟೂರು ಶಂಕರ ಭಟ್ ಅವರ ತೋಟದ ವಠಾರದಲ್ಲಿ ಭಾನುವಾರ ಅಳದಂಗಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸುವರ್ಣ ಸಂಭ್ರಮ 2026ರ ಚಾಲನೆಯೊಂದಿಗೆ ನಡೆದ ಕಾಳು ಮೆಣಸು ಮತ್ತು ಕಾಫಿ ಬೆಳೆಯ ಕೃಷಿ ಮಾಹಿತಿ ಹಾಗೂ ಸಂವಾದ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಕಳೆದ ಹಲವಾರು ವರ್ಷಗಳಿಂದ ಇಲ್ಲಿನ ಕೃಷಿಕರು ಚಂಚಲತೆಯ ಸ್ವಭಾವವನ್ನು ರೂಡಿಸಿಕೊಂಡಿದ್ದಾರೆ. ಭತ್ತದಿಂದ ಅಡಿಕೆಗೆ, ಅಲ್ಲಿಂದ ವೆನಿಲ್ಲಾಕ್ಕೆ, ಬಳಿಕ ರಬ್ಬರಿಗೆ ಹೀಗೆ ಬಗೆಬಗೆಯ ಕೃಷಿಯತ್ತ ವಾಲಿದ್ದೇವೆ. ಏನಿದ್ದರೂ ಇಂದಿನ ಸ್ಥಿತಿಯಲ್ಲಿ ಪರ್ಯಾಯ ಬೆಳೆಗಳ ಬಗ್ಗೆ ಪ್ರಯತ್ನಿಸುವುದು ಅನಿವಾರ್ಯವಾಗಿದೆ. ತಾಲೂಕಿನಲ್ಲಿನ ಸಹಕಾರ ಭಾರತಿ ಬೆಂಬಲಿತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಇಂತಹ ಕಾರ್ಯಗಳಿಗೆ ಸದಾ ಬೆಂಬಲ ನೀಡಲಿವೆ ಎಂದರು.

ದ.ಕ.ಜಿ.ಕೇಂ.ಸ.ಬ್ಯಾಂಕ್ ನಿರ್ದೇಶಕ ಕುಶಲಪ್ಪ ಗೌಡ ಸಂಘದ ಸುವರ್ಣ ಸಂಭ್ರಮದ ಲೋಗೋವನ್ನು ಅನಾವರಣಗೊಳಿಸಿದರು. ಅತಿಥಿಯಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ ಪ್ರತಿಮಾ ಬಿ.ವಿ. ಇದ್ದರು. ಸಂಪನ್ಮೂಲ ವ್ಯಕ್ತಿಗಳಾಗಿದ್ದ ಹಿರಿಯ ನಿವೃತ್ತ ವಿಜ್ಞಾನಿ ಡಾ. ವೇಣುಗೋಪಾಲ್ ಅವರು ಕಾಳುಮೆಣಸು ನಾಟಿ, ಪೋಷಣೆ, ರೋಗ ನಿರ್ವಹಣೆ ಬಗ್ಗೆ, ಕಾಳುಮೆಣಸು-ಕಾಫಿಬೆಳೆಗಾರ ಅಜಿತ್ ಪ್ರಸಾದ್ ರೈ ಕಾರ್ಯತಡಿ ಅವರು ದ.ಕ.ಜಿಲ್ಲೆಯಲ್ಲಿ ಅಡಿಕೆಗೆ ಪರ್ಯಾಯ ಹಾಗೂ ಮಿಶ್ರ ಬೆಳೆಯಾಗಿ ಲಾಭದಾಯಕ ಕಾಫಿ ಕೃಷಿ ಕುರಿತು, ಪ್ರಗತಿಪರ ಕೃಷಿಕ ಅನಂತಕೃಷ್ಣ ಪಳ್ಳತ್ತಡ್ಕ ಅವರು ನೀರಾವರಿ, ಆಟೋಮೇಟಿಕ್ ಇರಿಗೇಷನ್ ಮತ್ತು ಫರ್ಟಿಗೇಷನ್ ಸಿಸ್ಟಂ ವಿಚಾರವಾಗಿ ಮಾಹಿತಿ ನೀಡಿದರು.

ಪ್ರಗತಿಪರ ಕೃಷಿಕ ಶಂಕರ ಭಟ್, ಸಂಘದ ಉಪಾಧ್ಯಕ್ಷ ಜನಾರ್ದನ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೀರಾ, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷ ರಾಕೇಶ್ ಹೆಗ್ಡೆ ಸ್ವಾಗತಿಸಿದರು. ಕಲಾ ಸಂಘಟಕ ವಿಜಯ ಕುಮಾರ್ ನಾವರ ಕಾರ್ಯಕ್ರಮ ನಿರ್ವಹಿಸಿದರು. ಸಂಘದ ಸದಸ್ಯರಿಗೆ ಉಚಿತವಾಗಿ ಕಾಫಿಗಿಡಗಳನ್ನು ವಿತರಿಸಲಾಯಿತು.

ಸರಿಯಾದ ನಿರ್ವಹಣೆ ಇಲ್ಲದೆ ಸೊರಗಿದ ಬೀದಿ ದೀಪಗಳು

ನೀರಿನ ಜೊತೆ ಹಲವು ಸಮಸ್ಯೆಗಳಿರುವ ವಾರ್ಡ್!

ದಿಗಂತ ವಾಟರ್ ಚೆಕ್



ವಾರ್ಡ್ ನಂಬರ್ 11
ಪಣಂಬೂರು

◆ **ಮಂಗಳೂರು:** ತಣ್ಣೀರುಬಾವಿ, ಕಸಬಾ, ಕುದ್ರೋಳಿ, ಕೂರಿಕಟ್ಟ ಈ ಪ್ರದೇಶದಲ್ಲಿ ಹೆಚ್ಚಾಗಿ ನೀರಿನ ಸಮಸ್ಯೆ ಕಾಡುತ್ತಲೇ ಇರುತ್ತದೆ. ಪ್ರೆಶರ್‌ನೊಂದಿಗೆ ನೀರು ಪೂರೈಕೆಯಾಗುವ ದಿನಗಳನ್ನು ಎದುರುನೋಡುತ್ತಿದ್ದೇವೆ.

ಇದು ವಾರ್ಡ್ ನಂಬರ್ 11ರ ಪಣಂಬೂರು ವಾರ್ಡ್ ವ್ಯಾಪ್ತಿಯ ಜನತೆಯ ಅಳಲು. ನೀರೇನೊ ಬರುತ್ತಿದೆ. ಆದರೆ ಬಹುತೇಕ ಕಡೆಗಳಲ್ಲಿ ನೀರಿನ ಪ್ರೆಶರ್ ಸಮಸ್ಯೆ ಕಾಡುತ್ತಿದೆ. ಇದು ಬಗೆಹರಿಯಬೇಕು ಎನ್ನುತ್ತಾರೆ ಇಲ್ಲಿನ ವಾಸಿಗಳು. ಫೆಬ್ರವರಿಯಿಂದ ಮಳೆಗಾಲ ಆರಂಭವಾಗುವವರೆಗೆ ನೀರಿನ ಪ್ರೆಶರ್ ಸಮಸ್ಯೆ ಇರುವುದರಿಂದ ಆದಷ್ಟು ಬೇಗನೆ ಮಳೆ ಬರಲಿ ಎಂದು ಮಳೆಯ ನಿರೀಕ್ಷೆಯಲ್ಲಿದ್ದಾರೆ ಜನತೆ.

ಜಲಸಿರಿ ಯೋಜನೆ ಕಾಮಗಾರಿ ಪೂರ್ಣಗೊಂಡು ನಿರಂತರ ನೀರಿನ ಪೂರೈಕೆಯಾಗುವಂತಾಗಬೇಕು. ಆದಷ್ಟು ಬೇಗನೆ ಈ ಕಾಮಗಾರಿ ಮುಗಿಯಬೇಕು ಎನ್ನುತ್ತಾರೆ ಇಲ್ಲಿನ ನಿವಾಸಿಗಳು.

ಉರಿಯದ ಬೀದಿ ದೀಪಗಳು

ಬಂದರು, ಪಣಂಬೂರು ಬೀಚ್, ತಣ್ಣೀರುಬಾವಿ ಬೀಚ್ ಮುಂತಾದ ಪ್ರದೇಶಗಳು ಈ ಭಾಗದಲ್ಲಿದ್ದು, ಪ್ರವಾಸಿಗರನ್ನು ಸೆಳೆಯುತ್ತಿದೆ. ಪ್ರತಿನಿತ್ಯ ಸಾವಿರಾರು ಮಂದಿ ತಣ್ಣೀರುಬಾವಿ, ಪಣಂಬೂರು ಬೀಚ್‌ಗಳಿಗೆ ಆಗಮಿಸುತ್ತಾರೆ. ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶವಿರುವ ಈ ವಾರ್ಡ್‌ನಲ್ಲಿ ಬೀದಿದೀಪಗಳು ಇದ್ದೂ ಇಲ್ಲದಂತಾಗಿದೆ. ಸುಮಾರು 15ರಷ್ಟು ಹೈಮಾಸ್ಕ್ ಬೀದಿ ದೀಪಗಳು ಕೆಟ್ಟು ಹೋಗಿದ್ದು, ಇನ್ನೂ ರಿಪೇರಿ ಭಾಗ್ಯ ಕಂಡಿಲ್ಲ ಎನ್ನುತ್ತಾರೆ ಜನತೆ.

ಗಾಂಜಾ ಅಡ್ಡೆಯಾಗಿದೆ ಕೂರಿಕಟ್ಟ

ಇಲ್ಲಿ ಕೂರಿಕಟ್ಟ, ಕಸಬಾ ಬೆಂಗ್ರೆ ಪ್ರದೇಶಗಳು ಗಾಂಜಾ ಅಡ್ಡೆಯಾಗಿ ಪರಿಣಮಿಸಿದ್ದು, ಕುಡಿಯುವ ನೀರಿಗಿಂತ ಇದೇ ದೊಡ್ಡ ಸಮಸ್ಯೆಯಾಗಿದೆ. ಯುವಕರು ಗಾಂಜಾ ದಾಸರಾಗುತ್ತಿದ್ದಾರೆ ಇದಕ್ಕೆ ಮೊದಲು ಕಡಿವಾಣ ಬೀಳಬೇಕು ಎಂದು ಆಗ್ರಹಿಸುತ್ತಾರೆ ಊರಿನ ಮಹಿಳೆಯರು.

ಪೊಲೀಸ್ ಔಟ್ ಪೋಸ್ಟ್ ಬೇಕಿದೆ

ತಣ್ಣೀರು ಬಾವಿ ಬೀಚ್ ಸೇರಿದಂತೆ ಪ್ರಮುಖ ಪ್ರದೇಶಗಳು ಇಲ್ಲಿರುವುದರಿಂದ ಇಲ್ಲೊಂದು ಪೊಲೀಸ್ ಔಟ್ ಪೋಸ್ಟ್ ನಿರ್ಮಾಣವಾಗಬೇಕು. ಆಗ ಗಾಂಜಾ ಪೆಡ್ಲರ್‌ಗಳಿಗೂ ಕಡಿವಾಣ ಬೀಳಲಿದೆ. ಅನುಮಾನಾಸ್ಪದ ವ್ಯಕ್ತಿಗಳ ಮೇಲೆ ನಿಗಾ ಇರಿಸಲು ಪೊಲೀಸ್ ಔಟ್ ಪೋಸ್ಟ್‌ನ ಅಗತ್ಯವಿದೆ ಎನ್ನುತ್ತಾರೆ ಊರಿನ ಜನತೆ.

ಸುಲ್ತಾನ್ ಬತ್ತೇರಿಯಿಂದ ತಣ್ಣೀರುಬಾವಿಗೆ ಮೇಲ್ಸೇತುವೆ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಮುಂದೆ ಇದೇ ಮಾರ್ಗವಾಗಿ ಕುದ್ರೋಳಿ ಭಾಗದಿಂದ ಡ್ರಗ್ಸ್ ಪೆಡ್ಲರ್‌ಗಳು ನೇರವಾಗಿ ತಣ್ಣೀರುಬಾವಿ ಪ್ರದೇಶ ತಲುಪಲು ಅನುಕೂಲವಾಗಲಿದೆ ಆದ್ದರಿಂದ ಈ ಭಾಗದಲ್ಲಿ ಪೊಲೀಸ್ ಔಟ್‌ಪೋಸ್ಟ್ ಆಗಲೇಬೇಕು ಎಂಬ ಆಗ್ರಹ ವಾರ್ಡಿನ ಜನತೆಯದ್ದು.

ಆರ್ಥಿಕತೆಯ ಶಕ್ತಿ

ಸುಮಾರು 10 ಸಾವಿರದಷ್ಟು ಜನಸಂಖ್ಯೆಯನ್ನು ಹೊಂದಿರುವ ಪಣಂಬೂರು ವಾರ್ಡ್ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಮುಖ ಪ್ರದೇಶವಾಗಿದ್ದು, ಕೈಗಾರಿಕೆ, ಬಂದರು ಮತ್ತು ಪ್ರವಾಸೋದ್ಯಮದ ಕಾರಣದಿಂದ ಮಂಗಳೂರಿನ ಆರ್ಥಿಕತೆಯ ಶಕ್ತಿಯಾಗಿದೆ.

ನೀರಿನ ಪ್ರೆಶರ್ ಸಮಸ್ಯೆ

ಪಣಂಬೂರು ವಾರ್ಡ್‌ನಲ್ಲಿ ಸದ್ಯ ಕುಡಿಯುವ ನೀರಿಗೆ ಕೊರತೆಯಾಗಿಲ್ಲ. ಕೆಲವೆಡೆ ನೀರಿನ ಪ್ರೆಶರ್‌ನ ಸಮಸ್ಯೆ ಕಂಡುಬರುತ್ತಿದೆ. ಆದರೆ ಅಂತಹ ಗಂಭೀರತೆ ಎದುರಾಗಿಲ್ಲ. ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ಪಾಲಿಕೆ ಈಗಲೇ ಮುಂಜಾಗೃತೆ ವಹಿಸಬೇಕು.

■ ಅರವಿಂದ ಬೆಂಗ್ರೆ



ಗಾಂಜಾಕ್ಕೆ ಬೀಳಲಿ ಕಡಿವಾಣ

ಕುಡಿಯುವ ನೀರಿಗಿಂತ ಗಾಂಜಾ ಸಮಸ್ಯೆ ಕಸಬಾ ಬೆಂಗ್ರೆ, ಕೂರಿಕಟ್ಟ ಪ್ರದೇಶದಲ್ಲಿ ಹೆಚ್ಚಾಗಿದೆ. ಊರಿನ ಯುವಕರು ಇದರಿಂದಾಗಿ ಮಾದಕ ದ್ರವ್ಯ ವ್ಯಸನಿಗಳಾಗುವಂತಾಗಿದೆ. ಇದಕ್ಕೆ ಮೊದಲು ಕಡಿವಾಣ ಬೀಳಬೇಕು. ಗಾಂಜಾ ಪೂರೈಸುವವರ ವಿರುದ್ಧ ಕ್ರಮವಾಗಬೇಕು. ಪೊಲೀಸರು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತಾರೆ ಊರಿನ ಮಹಿಳೆಯರು.

ನಾಳೆ ವಾರ್ಡ್ 12, ಪಂಜಿಮೊಗರು ಪರಿಸರದ ಸ್ಥಿತಿಗತಿ

ರಾಮ ಬಾಣ



ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹ | ಆಯ್ಕೆ ಸಮಿತಿಗೆ ಪತ್ರ

ವೈರಮುತ್ತು ಜ್ಞಾನಪೀಠ ಪ್ರಶಸ್ತಿ ಮರುಪರಿಶೀಲಿಸಿ

ಬೆಂಗಳೂರು: ವೈರಮುತ್ತು ಅವರಿಗೆ ಘೋಷಣೆಯಾಗಿರುವ ಜ್ಞಾನಪೀಠ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹಿಸಿದೆ.

ಈ ಬಗ್ಗೆ ಜ್ಞಾನಪೀಠ ಪ್ರಶಸ್ತಿಯ ಆಯ್ಕೆ ಸಮಿತಿಗೆ ಪತ್ರ ಬರೆದ ಪರಿಷತ್‌ನ ಅಧ್ಯಕ್ಷ ಎಸ್.ಜಿ.ಕೋಟಿ, ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುನ್ನತವಾದ ಜ್ಞಾನಪೀಠ ಪ್ರಶಸ್ತಿಗೆ ಅದರದ್ದೇ ಆದ ಪರಂಪರೆ, ಘನತೆ ಮತ್ತು ಪಾವಿತ್ರ್ಯತೆ ಇದೆ. ಈ ಪ್ರಶಸ್ತಿಯು ಕೇವಲ ಒಬ್ಬ ವ್ಯಕ್ತಿಯ ಸಾಹಿತ್ಯಕ ಸಾಧನೆಯನ್ನು ಮಾತ್ರವಲ್ಲದೆ, ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ ಎಂದು ನಾವು ದೃಢವಾಗಿ ನಂಬಿದ್ದೇವೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಕವಿ ವೈರಮುತ್ತು ಅವರಿಗೆ ಈ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಘೋಷಿಸಿರುವುದು ಸಮಾಜದಲ್ಲಿ ತೀವ್ರ ಕಳವಳವನ್ನು ಉಂಟುಮಾಡಿದೆ ಹಾಗೂ ಅನೇಕರು ತಮ್ಮ ಪ್ರತಿಭಟನೆಯನ್ನು ವೈಯಕ್ತಿಕ ನೆಲೆಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಜಾಗತಿಕ ಮಟ್ಟದಲ್ಲಿ ನಡೆದ ಮೀಟೂ ಚಳವಳಿಯ ಸಂದರ್ಭದಲ್ಲಿ ಅವರ ಮೇಲೆ

> ಜ್ಞಾನಪೀಠ ಪ್ರಶಸ್ತಿ ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ

ಕೇಳಿಬಂದಿರುವ ಗಂಭೀರ ಸ್ವರೂಪದ ಲೈಂಗಿಕ ಕಿರುಕುಳದ ಆರೋಪಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಗಿವೆ. ಕೇವಲ ಒಬ್ಬಿಬ್ಬರಲ್ಲ, ಬದಲಾಗಿ ಅನೇಕ ಮಹಿಳಾ ಕಲಾವಿದರು, ಗಾಯಕಿಯರು ಮತ್ತು ಬರಹಗಾರ್ತಿಯರು ಅವರ ವಿರುದ್ಧ ಅತ್ಯಂತ ನೋವಿನಿಂದ ತಮ್ಮ ಕಹಿ ಅನುಭವಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ಹಂಚಿಕೊಂಡಿದ್ದಾರೆ.

ಇಂದಿಗೂ ಈ ಗಂಭೀರ ದೂರುಗಳ ಬಗ್ಗೆ ಸಮರ್ಪಕವಾದ ತನಿಖೆ ನಡೆದು, ಅವರ ಮೇಲಿನ ಕಳಂಕ ನಿವಾರಣೆಯಾಗಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಇದೇ ಹಿನ್ನೆಲೆಯಲ್ಲಿ, ಹಿಂದೆ ಕೇರಳದ ಒಎನ್‌ವಿ ಸಾಹಿತ್ಯ ಪುರಸ್ಕಾರವನ್ನು ಅವರಿಗೆ ನೀಡುವ ನಿರ್ಧಾರವನ್ನು ಸಾರ್ವಜನಿಕರ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರರ ತೀವ್ರ ವಿರೋಧದ ಕಾರಣದಿಂದಾಗಿ ಮರುಪರಿಶೀಲಿಸಲಾಯಿತು ಮತ್ತು ಅಂತಿಮವಾಗಿ ಆ ಪ್ರಶಸ್ತಿಯು ಹಿಂಪಡೆಯಲ್ಪಟ್ಟಿದೆ.

ಹಾಗೇ ಮಹಿಳೆಯರ ಘನತೆಗೆ ಕುಂದು ತಂದಿರುವ ಇಂತಹ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಮತ್ತು ನೈತಿಕವಾಗಿ ಪ್ರಶ್ನೆಗೀಡಾಗಿರುವ ವ್ಯಕ್ತಿಗೆ ದೇಶದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯನ್ನು ನೀಡುವುದು, ಈ ಪುರಸ್ಕಾರದ ಘನತೆಗೆ ಚ್ಯುತಿ ತರಬಹುದು ಎಂಬುದು ನಮ್ಮ ಆತಂಕವಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಜ್ಞಾನಪೀಠದಂತಹ ಗೌರವಾನ್ವಿತ ಪ್ರಶಸ್ತಿಯು ಯಾವುದೇ ರೀತಿಯ ವಿವಾದಗಳಿಗೆ ಮತ್ತು ಕಳಂಕಗಳಿಗೆ ಹೊರತಾಗಿರಬೇಕು ಎಂಬುದು ನಮ್ಮ ಕಳಕಳಿಯಾಗಿದೆ. ಮಹಿಳೆಯರ ಘನತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅತ್ಯಂತ ಸಹಾನುಭೂತಿಯಿಂದ ಮತ್ತು ಗಂಭೀರವಾಗಿ ಪರಿಗಣಿಸಿ, ವೈರಮುತ್ತು ಅವರಿಗೆ ಘೋಷಿಸಿರುವ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಪತ್ರದಲ್ಲಿ ವಿನಂತಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಜಾತಿ, ಮತ, ಪಂಥಗಳು ಬಿಡಿ ಬಿಡಿ ಹೂವುಗಳು ಇದ್ದಂತೆ.ಇವುಗಳನ್ನು ಸಾಮರಸ್ಯ ಎಂಬ ದಾರದಲ್ಲಿ ಪೋಣಿಸುವುದೇ ಹಿಂದುತ್ವ
– ರಘುನಂದನ

-ಜಾತಿ, ಮತ, ಪಂಥಗಳನ್ನು ಅಳಿಸಿ ಹಿಂದುತ್ವವನ್ನು ದೂಷಿಸಿ ಹೊಸ ಪಂಥವನ್ನು ನಿರ್ಮಿಸಿ ಧರ್ಮವೆಂಬ ಆಕರ್ಷಕ ಬೋರ್ಡನ್ನು ಹಾಕಿಕೊಂಡು ಮಾಡಬಾರದ್ದನ್ನು ಮಾಡುವುದು ಮೂಲಭೂತವಾದ!

ದಿನ ಭವಿಷ್ಯ

ಮೇಷ ಗ್ರಹಗತಿ ಪೂರಕ. ವೃತ್ತಿಯಲ್ಲಿ ನಿಮ್ಮ ಸಾಮರ್ಥ್ಯ ತೋರುವಿರಿ. ವಿವಾಹಕಾಂಕ್ಷಿಗಳಿಗೆ ಸಂಗಾತಿ ಲಭ್ಯ. ಹಣದ ಸಮಸ್ಯೆ ಪರಿಹಾರ.

ವೃಷಭ ನಿಮ್ಮ ಕೆಲಸ ಸಾಧಿಸಲು ಹೆಚ್ಚಿನ ಪ್ರಯತ್ನ ಬೇಕು. ಆರ್ಥಿಕ ಉನ್ನತಿಯ ದಾರಿ ತೋರಲಿದೆ. ಪ್ರೀತಿಯಲ್ಲಿ ಹಿನ್ನಡೆ ಉಂಟಾದೀತು.

ಮಿಥುನ ಇಂದು ದುಡುಕು ಬಿಟ್ಟು ತಾಳ್ಮೆಯಿಂದ ವ್ಯವಹರಿಸಿ. ಕಾರ್ಯ ಸುಲಲಿತ. ಮಹತ್ವದ ನಿರ್ಣಯ ಇಂದು ತಾಳಬೇಡಿ. ಸ್ವಲ್ಪ ಕಾಯಿರಿ.

ಕಟಕ ವೃತ್ತಿಯಲ್ಲಿ ಯಶ. ಎಲ್ಲರು ಮೆಚ್ಚುವ ನಿರ್ವಹಣೆ. ಕುಟುಂಬದ ಹಿತಾಸಕ್ತಿಗೆ ಹೆಚ್ಚು ಗಮನ ಕೊಡಿ. ತುಸು ಬೇಸರದ ಭಾವ ಆವರಿಸಲಿದೆ.

ಸಿಂಹ ಈ ದಿನ ಉತ್ತಮ ಫಲ ತರಲಿದೆ. ಮಹತ್ವದ ನಿರ್ಧಾರ ಫಲದಾಯಕ. ಏಕಾಂಗಿಗಳಿಗೆ ಪ್ರೀತಿಯಲ್ಲಿ ಯಶಸ್ಸು. ಉದ್ಯೋಗ ಅವಕಾಶ ಉಜ್ವಲ.

ಕನ್ಯಾ ವಿಶ್ವಾಸ ವೃದ್ಧಿಯ ದಿನ. ಕಠಿಣ ಕಾರ್ಯವೂ ಇಂದು ಸುಗಮವಾಗಿ ಸಾಗಲಿದೆ. ಹಣ ಗಳಿಕೆ. ಸಾಂಸಾರಿಕ ಬಿಕ್ಕಟ್ಟು ಪರಿಹಾರ ಕಾಣಲಿದೆ.

ತುಲಾ ಕೈಗೆ ಎಟುಕದ ಆಕಾಂಕ್ಷೆ ಬಿಡಿ. ನಿಮ್ಮ ಮಿತಿಯಲ್ಲೆ ವ್ಯವಹರಿಸಿ. ಎಲ್ಲರ ಜತೆ ಆತ್ಮೀಯವಾಗಿ ವರ್ತಿಸಿ. ಕೋಪತಾಪ ವಿರಸ ಸೃಷ್ಟಿಸಬಹುದು.

ವೃಶ್ಚಿಕ ಇಂದು ಕಠಿಣ ಪರಿಸ್ಥಿತಿ ಎದುರಿಸಿದರೂ ಆಪ್ತರಿಂದ ಬೆಂಬಲ. ಹಣ ಗಳಿಕೆ ಹೆಚ್ಚಳ. ಹಿರಿಯರಿಗೆ ಬೆನ್ನು ನೋವಿನಿಂದ ನಿರಾಳತೆ.

ಧನು ಅದೃಷ್ಟದ ದಿನ. ನೀವು ಬಯಸಿದ ಪ್ರಗತಿ ಸಾಧಿತ. ಮನೆಯಲ್ಲಿ ಹೆಚ್ಚು ಹೊಣೆಗಾರಿಕೆ. ದೈಹಿಕ ಬಸವಳಿಕೆ ಕಾಡಬಹುದು. ವಿಶ್ರಾಂತಿಗೆ ಗಮನಕೊಡಿ.

ಮಕರ ಕೌಟುಂಬಿಕ ಸಮ್ಮಿಲನ. ವ್ಯವಹಾರದಲ್ಲಿ ಯಶಸ್ಸು. ಇತರರ ಚುಚ್ಚುಮಾತಿಗೆ ತಲೆ ಕೆಡಿಸಿಕೊಳ್ಳದಿರಿ. ಆರ್ಥಿಕ ಒತ್ತಡ ಅಧಿಕ.

ಕುಂಭ ವೃತ್ತಿ ಸಂಬಂಧ ದೂರ ಪ್ರಯಾಣ ಸಾಧ್ಯತೆ. ಕಾರ್ಯ ಸಫಲ. ಸಾಂಸಾರಿಕ ಒತ್ತಡ ಹೆಚ್ಚು. ಧಾರ್ಮಿಕ ಚಟುವಟಿಕೆಯಿಂದ ಮನಸ್ಸಿಗೆ ನಿರಾಳತೆ.

ಮೀನ ಬಿಕ್ಕಟ್ಟು ಉಂಟಾದರೆ ಕ್ಷಿಪ್ರವಾಗಿ ಕಾರ್ಯಾಚರಿಸಿ. ಗುರಿ ಸಾಧನೆ ನಿಮಗೆ ಕಷ್ಟವಲ್ಲ. ಆದರೆ ಹಲವರ ವಿರೋಧ ಕಟ್ಟಿಕೊಳ್ಳುವಿರಿ. ತುಸು ಆರ್ಥಿಕ ನಷ್ಟ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 5,0,4,1

ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಿಸಿದ ಆಯೋಗ

ಎಪ್ರಿಲ್ 9ಕ್ಕೆ ಮತದಾನ, ಮೇ 4 ಫಲಿತಾಂಶ



ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಗೆ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗವು ಪ್ರಕಟಿಸಿದೆ. ಈ ಜಿಲ್ಲೆಗಳಲ್ಲಿ ಭಾನುವಾರದಿಂದಲೇ ಮಾದರಿ ನೀತಿ ಸಂಹಿತೆಯ ಜಾರಿಗೆ ಬಂದಿದೆ.

ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಎರಡು ಕ್ಷೇತ್ರಗಳಲ್ಲಿ ಸೋಮವಾರ ಅಧಿಸೂಚನೆ ಪ್ರಕಟಣೆಗೊಳ್ಳಲಿದೆ. ಮಾ.23 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಏ.9ರಂದು ಮತದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಟ್ಟು 2,31,683 ಮತದಾರರಿದ್ದಾರೆ. ಇವರಲ್ಲಿ 1,13,654 ಪುರುಷ ಹಾಗೂ 1,17,986 ಮಹಿಳಾ ಮತದಾರರಿದ್ದಾರೆ.ಯುವ ಮತದಾರರು 2,774 ಇದ್ದು, ಇತರರು 43 ಹಾಗೂ 44 ಮಂದಿ ನೂರು ವರ್ಷ ದಾಟಿದ ಹಿರಿಯರಿದ್ದಾರೆ.

ಬಾಗಲಕೋಟೆ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರಿದ್ದಾರೆ. ಇವರಲ್ಲಿ 1,26,761 ಪುರುಷ ಹಾಗೂ 1,32,476 ಮಹಿಳೆಯರಿದ್ದಾರೆ. ಯುವ ಮತದಾರರು 4,188, ಇತರರು 23 ಹಾಗೂ 38 ಮಂದಿ ನೂರು ವರ್ಷ ದಾಟಿದ ಹಿರಿಯ ಮತದಾರರಿದ್ದಾರೆ. ಎರಡೂ ಕ್ಷೇತ್ರಗಳಲ್ಲಿ ಒಟ್ಟು 5,151 ವಿಶಿಷ್ಟಚೇತನ ಮತದಾರರನ್ನು ಗುರುತಿಸಲಾಗಿದೆ.

603 ಮತದಾನ ಕೇಂದ್ರಗಳು: ಬಾಗಲಕೋಟೆಯಲ್ಲಿ 319 ಮತ್ತು ದಾವಣಗೆರೆ ದಕ್ಷಿಣದಲ್ಲಿ 284 ಸೇರಿದಂತೆ ಒಟ್ಟು 603 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಎಲ್ಲಾ ಕೇಂದ್ರಗಳಲ್ಲಿ ಎಲೆಕ್ಟ್ರಾನಿಕ್ ಮತಯಂತ್ರ (ಇವಿಎಂ) ಮತ್ತು ವಿವಿ ಪ್ಯಾಟ್ ಬಳಸಲಾಗುವುದು. ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ (ಸುಮಾರು ಶೇ.160 ರಿಂದ 200 ರಷ್ಟು) ಯಂತ್ರಗಳನ್ನು ಸಿದ್ಧವಾಗಿಟ್ಟುಕೊಳ್ಳಲಾಗಿದೆ ಆಯೋಗ ತಿಳಿಸಿದೆ.

ಉಭಯ ಪಕ್ಷಗಳಲ್ಲಿ ಹೆಚ್ಚಿದ ಟಿಕೆಟ್ ಕುತೂಹಲ

ಬಾಗಲಕೋಟೆ: ಬಾಗಲಕೋಟೆಯ ಉಪಚುನಾ ವಣೆಗೆ ಚುನಾವಣಾ ಆಯೋಗ ಮುಹೂರ್ತ ನಿಗದಿ ಮಾಡಿದ್ದು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್ ಯಾರಿಗೆ ಸಿಗುತ್ತದೆ ಎಂಬುದು ಮಾತ್ರ ಕುತೂಹಲ ಕೆರಳಿಸಿದೆ.

ಕಾಂಗ್ರೆಸ್ ಪಕ್ಷದ ದಿ.ಎಚ್.ವೈ.ಮೇಟಿಯವರ ನಿಧನದ ನಂತರ ಅವರ ಸ್ಥಾನಕ್ಕೆ ಈಗ ಉಪಚುನಾವಣೆ ನಡೆಯಲಿದ್ದು ಬಾಗಲಕೋಟೆ ಮತಕ್ಷೇತ್ರದಲ್ಲಿ ಎಚ್.ವೈ.ಮೇಟಿಯವರ ಕುಟುಂಬಕ್ಕೆ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಾಗಿದ್ದರೆ ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠವರಿಗೆ ಬಿಜೆಪಿಯಿಂದ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಿದೆ. ಇನ್ನೂ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಅವರು ಕೂಡ ಆಕಾಂಕ್ಷಿಯಾಗಿದ್ದು ಪಕ್ಷದ ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಎಲ್ಲ ನಾಯಕರು ಬದ್ಧರಾಗಿದ್ದಾರೆ.

ಸಿಎಂ ಬಂದರೂ ಘೋಷಣೆಯಾಗದ ಟಿಕೆಟ್: ನವನಗರದಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಂದ ಸಂದರ್ಭದಲ್ಲಿ ವೇದಿಕೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿಯೂ ಕೂಡ ಯಾರಿಗೆ ಟಿಕೆಟ್ ಕೊಡುತ್ತೇವೆ ಎಂಬುದು ಹೇಳಲಿಲ್ಲ. ಇನ್ನೂ ಡಿ.ಕೆ.ಶಿವುಕುಮಾರ ಮೇಟಿಯವರು ಎಷ್ಟು ಮತಗಳ ಅಂತರದಿಂದ ಗೆದ್ದಿದ್ದರೂ ಡಬಲ್ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಬೇಕು ಎಂದು ಹೇಳಿದನ್ನು ಬಿಟ್ಟರೆ ಯಾರಿಗೆ ಟಿಕೆಟ್ ಸಿಗಲಿದೆ ಎಂಬುದು ಮಾತ್ರ ಸುಳಿವು ನೀಡಲಿಲ್ಲ.

ಚುನಾವಣಾ ಆಯೋಗವು ಚುನಾವಣಾ ಅಧಿಸೂಚನೆ ಹೊರಡಿಸಿ ಏ.9ಕ್ಕೆ ಮತದಾನ ನಡೆಯಲಿದ್ದು, ಮಾ.23ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನ ಪ್ರಕಟ ಮಾಡಿದ್ದರಿಂದ ಆಕಾಂಕ್ಷಿಗಳಲ್ಲಿ ಮಾತ್ರ ಕುತೂಹಲ ಮೂಡಿಸಿದೆ. ಚುನಾವಣಾ ಅಭ್ಯರ್ಥಿಗಳಿಗೆ ಸದ್ಯಕ್ಕೆ ಸಮಯಾವಕಾಶ ಕಡಿಮೆ ಇದ್ದಿದ್ದರಿಂದ ಎಷ್ಟು ಬೇಗ ಟಿಕೆಟ್ ಘೋಷಣೆ ಮಾಡುತ್ತಾರೆ, ಅಷ್ಟು ಒಳ್ಳೆಯದಾಗಲಿದೆ ಎಂಬುದು ಆಕಾಂಕ್ಷಿಗಳ ಮನದಲ್ಲಿ ಮೂಡಿದೆ.

ಬಾಗಲಕೋಟೆ ಮತಕ್ಷೇತ್ರದಲ್ಲಿ 143 ನಗರ, 176 ಗ್ರಾಮೀಣ ಪ್ರದೇಶದಲ್ಲಿ ಬೂತ್‌ಗಳಿದ್ದು 2,59,260 ಮತದಾರರು ಇದ್ದಾರೆ. ಈ ಬಾರಿ ನಡೆಯುವ ವಿಧಾನಸಭೆಯ ಉಪಚುನಾವಣೆಯ ಕಾವು ಮಾತ್ರ ಬಾಗಲಕೋಟೆಯಲ್ಲಿ ಹೆಚ್ಚಾಗಿದೆ ಆದರೆ ಅಭ್ಯರ್ಥಿಗಳ ಎರಡೂ ಪಕ್ಷದಲ್ಲಿ ಘೋಷಣೆ ಮಾತ್ರ ಬಾಕಿ ಉಳಿದಿದೆ.

ಪಕ್ಷ, ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ

ದಾವಣಗೆರೆ: ಸಾಕಷ್ಟು ಕುತೂಹಲ ಕೆರಳಿಸಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಮಹೂರ್ತ ಫಿಕ್ಸ್ ಆಗಿದ್ದು, ಮಿನಿ ದಂಗಲ್ ದಿನಾಂಕ ಘೋಷಣೆಯಾಗಿರುವುದು ರಾಜಕೀಯ ಪಕ್ಷ ಹಾಗೂ ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ ಮೂಡಿಸಿದೆ.

ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಪ್ರತ್ಯೇಕಗೊಂಡು ಅಸ್ತಿತ್ವಕ್ಕೆ ಬಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರು ಸೇರಿದಂತೆ ಅಹಿಂದ ಮತದಾರರ ಸಂಖ್ಯೆ ನಿರ್ಣಾಯಕವಾಗಿದೆ. ಕ್ಷೇತ್ರದಲ್ಲಿ ನಿರಂತರವಾಗಿ ಕಾಂಗ್ರೆಸ್ ಅಧಿಪತ್ಯ ಸಾಧಿಸುತ್ತಿದ್ದರೂ ಬಿಜೆಪಿ ಕೂಡ ವಿರೋಚಿತ ಸ್ಪರ್ಧೆ ನೀಡುತ್ತಾ ಗೆಲುವಿಗಾಗಿ ಕಸರತ್ತು ಮಾಡುತ್ತಲೇ ಬಂದಿದೆ. ಹೀಗಾಗಿ ಪ್ರಸ್ತುತ ಉಪಚುನಾವಣೆಯು ಉಭಯ ಪಕ್ಷಗಳ ಪ್ರತಿಷ್ಠೆಯ ಕಣವಾಗಿದೆ. ಕ್ಷೇತ್ರದಲ್ಲಿ ಪಾರುಪತ್ಯ ಮುಂದುವರೆಸಲು ಕಾಂಗ್ರೆಸ್ ಹವಣಿಸುತ್ತಿದ್ದರೆ ಈ ಬಾರಿ ಶತಾಯಗತಾಯ ಗೆಲುವು ಸಾಧಿಸಲೇಬೇಕೆಂಬ ಇರಾದೆ ಬಿಜೆಪಿ ಪಕ್ಷದ್ದಾಗಿದೆ. ಕ್ಷೇತ್ರದ ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆಯೇ ನೇರ ಹಣಾಹಣಿ ನಡೆದಿದೆ. ಈ ಬಾರಿ ಕೂಡ ಅದೇ ರೀತಿಯ ಜಿದ್ದಾಜಿದ್ದಿಯ ಹೋರಾಟ ಜರುಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ. ಉಭಯ ಪಕ್ಷಗಳಲ್ಲೂ ಅಧಿಕೃತ ಅಭ್ಯರ್ಥಿ ಹೆಸರು ಅಂತಿಮವಾಗಿಲ್ಲ. ಆದರೆ ಎರಡೂ ಪಕ್ಷಗಳಲ್ಲಿ ತಲಾ ಅರ್ಧ ಡಜನ್ ಆಕಾಂಕ್ಷಿಗಳು ಮಿನಿ ಸಮರದಲ್ಲಿ ಪಕ್ಷದ ಟಿಕೆಟ್ ಗಿಟ್ಟಿಸಲು ತಮ್ಮದೇ ಪ್ರಯತ್ನದಲ್ಲಿ ತೊಡಗಿದ್ದಾರೆ. ಚುನಾವಣೆ ದಿನಾಂಕ ಘೋಷಣೆವರೆಗೆ ಕಾದು ನೋಡುವ ತಂತ್ರ ಅನುಸರಿಸಿಕೊಂಡು ಬಂದಿದ್ದ ಪಕ್ಷದ ವರಿಷ್ಠ ನಾಯಕರು ಕೂಡ ಇದೀಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಡ್ಯಾಮೇಜ್ ಕಂಟ್ರೋಲ್ ಮಾಡುವ ಜೊತೆಗೆ ಪಕ್ಷದ ಗೆಲುವಿಗಾಗಿ ಗಟ್ಟಿ ನಿರ್ಧಾರ ಕೈಗೊಳ್ಳುವ ಅನಿವಾರ್ಯತೆಗೆ ಸಿಲುಕಿದ್ದಾರೆ.



ಮತಯುದ್ಧಕ್ಕೆ ವೇದಿಕೆ ಸಜ್ಜು

ಪುಟ ೧➡ ಅವರೊಂದಿಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಉಪಸ್ಥಿತರಿದ್ದರು.

824 ವಿಧಾನಸಭಾ ಸ್ಥಾನಕ್ಕೆ ಚುನಾವಣೆ: 4 ರಾಜ್ಯ, ಒಂದು ಕೇಂದ್ರಾಡಳಿತ ಪ್ರದೇಶದ ಒಟ್ಟು 824 ವಿಧಾನ ಸಭಾ ಸ್ಥಾನ ಗಳಿಗೆ ಚುನಾ ವಣೆ ನಡೆಯಲಿದೆ. ಈ ಚುನಾ ವಣೆಯಲ್ಲಿ ಸುಮಾರು 17.4 ಕೋಟಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲಿದ್ದಾರೆ. 2.18 ಲಕ್ಷಕ್ಕೂ ಹೆಚ್ಚು ಮತಗಟ್ಟೆಗಳು ಸ್ಥಾಪಿಸಲಾಗಲಿದ್ದು, ಸುಮಾರು 25 ಲಕ್ಷ ಚುನಾವಣಾ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಶೇ.100 ವೆಬ್‌ಕಾಸ್ಟಿಂಗ್ ವ್ಯವಸ್ಥೆ: ಚುನಾವಣೆಯಲ್ಲಿ ಪಾರದರ್ಶಕತೆ ಹಾಗೂ ಭದ್ರತೆಯನ್ನು ಹೆಚ್ಚಿಸಲು ಚುನಾವಣಾ ಆಯೋಗ ಹಲವು ಕ್ರಮಗಳನ್ನು ಕೈಗೊಂಡಿದೆ. ಎಲ್ಲಾ ಮತಗಟ್ಟೆಗಳಲ್ಲಿ ಮೊದಲ ಬಾರಿಗೆ ಶೇ.100ರಷ್ಟು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ. ಇದರಿಂದ ಮತದಾನದ ಪ್ರಕ್ರಿಯೆಯನ್ನು ನೇರವಾಗಿ ಮೇಲ್ವಿಚಾರಣೆ ಮಾಡಬಹುದು. ಜತೆಗೆ ಮತದಾರರಿಗೆ ಕುಡಿಯುವ ನೀರು, ಶೌಚಾಲಯ, ವೃದ್ಧರು ಮತ್ತು ವಿಶಿಷ್ಟಚೇತನರಿಗೆ ರ್‍ಯಾಂಪ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ನೀತಿಸಂಹಿತೆ ಜಾರಿ

ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣದಿಂದಲೇ ಸಂಬಂಧಿಸಿದ ರಾಜ್ಯಗಳಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಸರ್ಕಾರಗಳು ಯಾವುದೇ ಹೊಸ ಘೋಷಣೆಗಳು ಅಥವಾ ಯೋಜನೆಗಳನ್ನು ಪ್ರಕಟಿಸುವಲ್ಲಿ ಚುನಾವಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಚುನಾವಣೆಯ ಸಮಯದಲ್ಲಿ ಹಿಂಸಾಚಾರ, ಪ್ರಚೋದನೆ ಅಥವಾ ಅಕ್ರಮಗಳನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಚುನಾವಣಾ ಆಯೋಗ ಎಚ್ಚರಿಸಿದೆ. ಯಾವುದೇ ರೀತಿಯ ನಿಯಮ ಉಲ್ಲಂಘನೆ ಕಂಡುಬಂದರೆ ಕಾನೂನುಬದ್ಧವಾಗಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಸ್ಪಷ್ಟಪಡಿಸಿದರು.

ಮತದಾನ ವೇಳಾಪಟ್ಟಿ

- ಅಸ್ಸಾಂ, ಕೇರಳ ಮತ್ತು ಪುದುಚೇರಿ: ಏಪ್ರಿಲ್ 9ರಂದು ಒಂದೇ ಹಂತದಲ್ಲಿ ಮತದಾನ
- ತಮಿಳುನಾಡು: ಏಪ್ರಿಲ್ 23ರಂದು ಒಂದೇ ಹಂತದಲ್ಲಿ ಮತದಾನ

ಪಶ್ಚಿಮ ಬಂಗಾಳದಲ್ಲಿ 2 ಹಂತದ ಮತದಾನ

ಮೊದಲ ಹಂತ: ಏಪ್ರಿಲ್ 23
ಎರಡನೇ ಹಂತ: ಏಪ್ರಿಲ್ 29

ಈ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆದ ಮತದಾನದ ಫಲಿತಾಂಶ ಮೇ 4ರಂದು ಪ್ರಕಟವಾಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

20 ದೇಶಗಳ ಚುನಾವಣಾ ವೀಕ್ಷಕರು

ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಭಾರತದ ಚುನಾವಣಾ ವ್ಯವಸ್ಥೆ ಗಮನ ಸೆಳೆಯುತ್ತಿರುವ ಹಿನ್ನೆಲೆಯಲ್ಲಿ, ಸುಮಾರು 20 ದೇಶಗಳ ಚುನಾವಣಾ ವೀಕ್ಷಕರು ಈ ಪ್ರಕ್ರಿಯೆ ವೀಕ್ಷಿಸಲು ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಆಯೋಗ ತಿಳಿಸಿದೆ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ಕ್ರಮವೆಂದು ಅಧಿಕಾರಿಗಳು ಹೇಳಿದ್ದಾರೆ. ಒಟ್ಟಾರೆ, ಐದು ವಿಧಾನಸಭಾ ಚುನಾವಣೆಗಳು ದೇಶದ ರಾಜಕೀಯ ಭವಿಷ್ಯಕ್ಕೆ ಮಹತ್ವದ್ದಾಗಿದ್ದು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಚುನಾವಣಾ ಆಯೋಗ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ.

ವಿಧಾನಸಭೆ	ಕ್ಷೇತ್ರಗಳು
ತಮಿಳುನಾಡು	234
ಪಶ್ಚಿಮ ಬಂಗಾಳ	294
ಕೇರಳ	140
ಅಸ್ಸಾಂ	126
ಪುದುಚೇರಿ	33

ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

ಪುಟ ೧➡ **ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿ:** ಭಾನುವಾರ ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿಗಳನ್ನು ನಡೆಸಿದ್ದು, ಇಸ್ರೇಲ್‌ನಲ್ಲಿ ಸೈರನ್ ಧ್ವನಿಗಳು ಕೇಳಿಬಂದಿವೆ. ಸೈರನ್ ಧ್ವನಿ ಕೇಳಿಬಂದಂತೆ ಜನರು ಆಶ್ರಯ ಕೇಂದ್ರಗಳಿಗೆ ಓಡಿದ್ದಾರೆ. ಕೆಲ ಕ್ಷಿಪಣಿಗಳು ಮಧ್ಯ ಇಸ್ರೇಲ್ ಮತ್ತು ಟೆಲ್ ಅವಿವ್ ಪ್ರದೇಶಗಳಿಗೆ ಹಾನಿಯನ್ನು ಉಂಟುಮಾಡಿವೆ.

ಇಸ್ರೇಲ್ ರಕ್ಷಣಾ ಸೇವೆ ಮಾಗೆನ್ ಡೇವಿಡ್ ಅಡೋಮ್ ಬಿಡುಗಡೆಗೊಳಿಸಿದ ವಿಡಿಯೋದಲ್ಲಿ ರಸ್ತೆಯಲ್ಲಿ ದೊಡ್ಡ ಗುಂಡಿ ಮತ್ತು ಅಪಾರ್ಟ್‌ಮೆಂಟ್ ಕಟ್ಟಡದ ಮೇಲೆ ಭಾರೀ ಹಾನಿ ಆಗಿರುವುದು ಸ್ಪಷ್ಟವಾಗಿ ಕಾಣಿಸಿದೆ. ಟೆಲ್ ಅವಿವ್ ಮೇಲೆ ಇರಾನ್ ನಡೆಸಿದ ಹೊಸ ದಾಳಿಗೆ 23 ಸ್ಥಳಗಳಲ್ಲಿ ಹಾನಿಯಾಗಿವೆ. ಒಂದು ಕಡೆ ಸಣ್ಣದಾಗಿ ಬೆಂಕಿ ಕಾಣಿಸಿಕೊಂಡಿದೆ.

ಇಸ್ರೇಲ್ ಸೇನೆಯ ಪ್ರಕಾರ, ಇರಾನ್ ಕ್ಲಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸುತ್ತಿದೆ. ಇವು ಕೆಲವು ವಾಯು ರಕ್ಷಣಾ ವ್ಯವಸ್ಥೆಗಳನ್ನು ತಪ್ಪಿಸಿ ಹಲವು ಸ್ಥಳಗಳಲ್ಲಿ ಪರಿಣಾಮಕಾರಿ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ.

ಯುಎಇಯಿಂದ ಅಮೆರಿಕ ದಾಳಿ: ಇರಾನ್

ಅಮೆರಿಕ ಸೇನೆ ಯುಎಇಯಿಂದಲೇ ಖಾರ್ಗ್ ಮತ್ತು ಅಬು ಮೂಸಾ ದ್ವೀಪಗಳ ಮೇಲೆ ದಾಳಿ ನಡೆಸಿದೆಯೆಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಆರೋಪಿಸಿದ್ದಾರೆ. ಯುಎಇ ಭೂಭಾಗ ಮತ್ತು ವಾಯುಪ್ರದೇಶವನ್ನು ಬಳಸಿಕೊಂಡು ಅಮೆರಿಕ ದಾಳಿ ನಡೆಸಿದೆಯೆಂಬ ಇರಾನ್ ಆರೋಪವನ್ನು ಯುಎಇ ತಳ್ಳಿಹಾಕಿದ್ದು, ಅಮೆರಿಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಬಾಹ್ಯಾಕಾಶ ಕೇಂದ್ರದ ಮೇಲೆ ದಾಳಿ

ಇರಾನ್‌ನ ಪ್ರಮುಖ ಬಾಹ್ಯಾಕಾಶ ಸಂಶೋಧನಾ ಕೇಂದ್ರ ಮತ್ತು ವಾಯು ರಕ್ಷಣಾ ವ್ಯವಸ್ಥೆ ತಯಾರಿಕಾ ಕಾರ್ಖಾನೆಯ ಮೇಲೆ ದಾಳಿ ನಡೆಸಿರುವುದಾಗಿ ಶನಿವಾರ ತಡರಾತ್ರಿ ಇಸ್ರೇಲ್ ತಿಳಿಸಿದೆ. ಭಾನುವಾರ ವೂ ಇರಾನ್ ಮೇಲಿನ ದಾಳಿ ಮುಂದುವರಿಸಿರುವುದಾಗಿ ಇಸ್ರೇಲ್ ತಿಳಿಸಿದೆ. ಇದೇ ಸಮಯದಲ್ಲಿ ಬಹ್ರೈನ್, ಸೌದಿ ಅರೇಬಿಯಾ ಮತ್ತು ಯುಎಇ ತಮ್ಮ ನಾಗರಿಕರ ರಕ್ಷಣೆಗಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿವೆ.

ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ: ಮೋದಿ

ಪುಟ ೧➡ ಸಭಾಪತಿ ಓಂ ಬಿರ್ಲಾ ಪದಚ್ಯುತಿಗಾಗಿ ಕಾಂಗ್ರೆಸ್ ನೇತೃತ್ವದ ವಿಪಕ್ಷ ಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲಗೊಂಡ ನಂತರದಲ್ಲಿ, ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ನಡೆ ಟೀಕಿಸಿದ್ದಾರೆ. ಪ್ರಧಾನಿ ಪತ್ರಕ್ಕೆ ಕೃತಜ್ಞತೆ ವ್ಯಕ್ತಪಡಿಸಿರುವ ಬಿರ್ಲಾ, ಪ್ರಧಾನಿ ಮೋದಿ ಯಾವತ್ತೂ ಸಂಸದೀಯ ಪ್ರಜಾಸತ್ತೆಯ ನಿಯಮಗಳು, ನಿಯಮಾವಳಿಗಳು ಮತ್ತು ಪರಂಪರೆಯಲ್ಲಿ ಅಚಲ ನಂಬುಗೆ ಕಾಯ್ದುಕೊಂಡವರು ಎಂದು ಪ್ರಶಂಸಿಸಿದ್ದಾರೆ.

ಪ್ರಭಾವಿಯಾಗಿತ್ತು ಹೇಳಿಕೆ: ಲೋಕಸಭೆಯಲ್ಲಿ ತಮ್ಮ ವಿರುದ್ಧ ವಿಪಕ್ಷ ಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲವಾಗಿದೆ. ಈ ರಾಜಕೀಯ ದುಷ್ಕಾರ್ಯವನ್ನು ನಿರ್ಣಾಯಕವಾಗಿ ತಿರಸ್ಕರಿಸಿದ ಸದನದ ಸದಸ್ಯರೆಲ್ಲರನ್ನೂ ನಾನು ಅಭಿನಂದಿಸುತ್ತೇನೆ. ನಿರ್ಣಯ ವಿಫಲಗೊಂಡ ಬೆನ್ನಲ್ಲೇ ಸದನವನ್ನುದ್ದೇಶಿಸಿ ತಾವು ನೀಡಿದ ಹೇಳಿಕೆಯನ್ನು ನಾನು ಗಮನವಿಟ್ಟು ಆಲಿಸಿದ್ದೇನೆ. ಸಂಸದೀಯ ಇತಿಹಾಸ, ಸಭಾಪತಿಯಾಗಿ ತಮ್ಮ ಕರ್ತವ್ಯಗಳು ಮತ್ತು ನಿಯಮಗಳ ಸರ್ವೋಚ್ಚತೆಯನ್ನು ತಾವು ಅತ್ಯಂತ ಸಮತೋಲಿತವಾಗಿ, ತಾಳ್ಮೆಯಿಂದ ಹಾಗೂ ಸ್ಪಷ್ಟವಾಗಿ ಉಲ್ಲೇಖಿಸಿದ್ದು, ವಿವರಿಸಿದ್ದು ನಿಜಕ್ಕೂ ಪ್ರಭಾವಿಯಾಗಿತ್ತು. ಇದಕ್ಕಾಗಿ ತಮಗೆ ನನ್ನ ತುಂಬು ಪ್ರಶಂಸೆಗಳು. ನಿಮ್ಮ ಹೇಳಿಕೆ ಆ ನಿರ್ದಿಷ್ಟ ಕ್ಷಣಗಳಿಗೆ ಪ್ರತಿಕ್ರಿಯೆಯಷ್ಟೇ ಅಲ್ಲ, ಭಾರತೀಯ ಸಂಸದೀಯ ಪರಂಪರೆಗಳು ಮತ್ತು ಪ್ರಜಾತಾಂತ್ರಿಕ ಮರ್ಯಾದೆಯನ್ನು ಅತ್ಯಂತ ಗಾಢವಾಗಿ ಮತ್ತು ತುಲನಾತ್ಮಕವಾಗಿ ಎತ್ತಿಹಿಡಿದಿದೆ.

ಮಿಲಿಯಂತರ ಜನರ ಭರವಸೆಗಳ ಪ್ರತಿಫಲನ: ಸಾಂವಿಧಾನಿಕ ಸಂಸ್ಥೆಗಳು ಭಾರತೀಯ ಪ್ರಜಾಸತ್ತೆಯ ಮಹಾನ್ ಬಲವಾಗಿದೆ. ಸಾಂವಿಧಾನಿಕ ಸಂಸ್ಥೆಗಳ ಪೈಕಿ ಸಂಸತ್ತು ಪರಮೋಚ್ಚ ವೇದಿಕೆಯಾಗಿದೆ. ಸದನದಲ್ಲಿ ಎತ್ತುವ ಪ್ರತಿ ಧ್ವನಿಯೂ ದೇಶಾದ್ಯಂತದ ಮಿಲಿಯಂತರ ಜನರ ಆಶೋತ್ತರ, ಭರವಸೆಗಳ ಪ್ರತಿಫಲನವಾಗಿದೆ. ಈ ನಿಟ್ಟಿನಲ್ಲಿ ಲೋಕಸಭಾ ಸಭಾಪತಿಗಳ ಹೊಣೆಗಾರಿಕೆ ಕಲಾಪಗಳನ್ನು ನಿರ್ವಹಿಸುವುದಷ್ಟೇ ಅಲ್ಲ, ಇದನ್ನು ಮೀರಿ ಸಭಾಪತಿಗಳು ಪ್ರಜಾತಾಂತ್ರಿಕ ಪರಂಪರೆಗಳ, ಸಂಸದೀಯ ನಿಯಮಗಳು ಮತ್ತು ಸಾಂಸ್ಥಿಕ ಘನತೆಯ ಕಾವಲುಗಾರ ಕೂಡ. ಈ ಸದನದಲ್ಲಿ ಯಾರೂ ನಿಯಮ ಗಳಿಗೆ ಅತೀತರಲ್ಲ ಎಂಬ ನಿಮ್ಮ ಸುಸ್ಪಷ್ಟ ಹೇಳಿಕೆ, ಪ್ರಜಾಸತ್ತೆಯ ಮೂಲ ಭೂತ ಸ್ಫೂರ್ತಿಯನ್ನು ಮರುದೃಢೀಕರಿಸಿದ ಸಂದೇಶವನ್ನು ಸಾರಿದೆ ಎಂದು ಮೋದಿ ಹಿಂದಿಯಲ್ಲಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಭಿನ್ನಾಭಿಪ್ರಾಯ, ಅಗೌರವ ಬೇರೆ ಬೇರೆ: ಪ್ರಜಾಸತ್ತೆಯಲ್ಲಿ ಭಿನ್ನಾಭಿಪ್ರಾಯಗಳು ಸಹಜ. ವೈವಿಧ್ಯಮಯ ಚಿಂತನೆಗಳು ಪ್ರಜಾಸತ್ತೆಗೆ ಹೊಸ ಚೈತನ್ಯ ನೀಡುವುದು. ಭಿನ್ನಾಭಿಪ್ರಾಯಕ್ಕೂ, ಅಗೌರವಕ್ಕೂ ತುಂಬು ವ್ಯತ್ಯಾಸವಿದೆ. ರಾಜಕೀಯ ಭಿನ್ನಾಭಿಪ್ರಾಯಗಳು ಸಂಸದೀಯ ವ್ಯವಸ್ಥೆಗೇ ಅಗೌರವವಾಗಿ ಮಾರ್ಪಾಡಾಗುವುದು, ಪ್ರಜಾಸತ್ತೆಯಲ್ಲಿ ತುಂಬು ಶ್ರದ್ಧೆ ಹೊಂದಿರುವವರ ಪಾಲಿಗೆ ಕಳವಳಕಾರಿಯಾಗುವುದು ಸಹಜ. ಇಂತಹ ಕ್ಷಣಗಳು ಸಭಾಪತಿ ಪೀಠದಲ್ಲಿರುವವರ ಪಾಲಿಗೆ ಸತ್ವಪರೀಕ್ಷೆಯನ್ನೊಡ್ಡುತ್ತವೆ ಎಂದು ಪ್ರಧಾನಿ ಮೋದಿ ಪತ್ರದಲ್ಲಿ ತಿಳಿಸಿದ್ದಾರೆ.

ಸಂಸದರ ಅಸಭ್ಯ ಭಾಷೆ ಬಗ್ಗೆ ಸ್ಪೀಕರ್ ಆತಂಕ

ಸಂಸದರು ಸದನದೊಳಗೆ ಬ್ಯಾನರ್, ಭಿತ್ತಿಪತ್ರ, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು ಮತ್ತು ಅಸಭ್ಯ ಭಾಷೆ ಬಳಸುವ ಬಗ್ಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಗಂಭೀರ ಆತಂಕ ವ್ಯಕ್ತಪಡಿಸಿ, ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೆ ಪತ್ರ ಬರೆದಿದ್ದಾರೆ. ಅವರು ಸದನದಲ್ಲಿ ಶಿಸ್ತು ಮತ್ತು ನಡವಳಿಕೆಯನ್ನು ಕಾಪಾಡಲು ತಮ್ಮ ಪಕ್ಷದ ಸದಸ್ಯರಿಗೆ ಸೂಚನೆ ನೀಡುವಂತೆ ಮನವಿ ಮಾಡಿದ್ದಾರೆ. ಲೋಕಸ ಭೆಗೆ ಸದಾ ಗೌರವಯುತ ಚರ್ಚೆ ಮತ್ತು ಸಂವಾದದ ಮಹತ್ವದ ಪರಂಪರೆ ಇದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಸಂಸದರು ಸದನ ದೊಳಗೆ ಹಾಗೂ ಸಂಸತ್ ಆವರಣದಲ್ಲಿ ತೋರಿಸುತ್ತಿರುವ ವರ್ತನೆಯಿಂದ ಭಾರತದ ಸಂಸದೀಯ ಪ್ರಜಾಪ್ರಭುತ್ವದ ಗೌರವ ಮತ್ತು ಪ್ರತಿಷ್ಠೆಗೆ ಧಕ್ಕೆಯಾಗುತ್ತಿದೆ ಎಂದು ತಿಳಿಸಿದ್ದಾರೆ. ಬ್ಯಾನರ್, ಪ್ಲೆ ಕಾರ್ಡ್, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು, ಅಸಭ್ಯ ಭಾಷೆ ಬಳಸುವುದು ಹಾಗೂ ತೋರಿಸುವ ವರ್ತನೆ ಎಲ್ಲರಿಗೂ ಚಿಂತೆಯ ವಿಷಯವಾಗಿದೆ ಎಂದು ಅವರು ಹೇಳಿದ್ದಾರೆ.

ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ

ಪುಟ ೧➡ ಶತಾಬ್ದಿ ವರ್ಷದ ತರುವಾಯ ಸಂಘದ ಭೌಗೋಳಿಕ ರಚನೆಯಲ್ಲಿ ಪ್ರಾಂತ ರಚನೆಯ ಬದಲು ಇನ್ನೂ ಚಿಕ್ಕ ಘಟಕವಾಗಿರುವ ಸಂಭಾಗ ರಚನೆಯಾಗಲಿದೆ. ದೇಶಾದ್ಯಂತ ಸಂಘಕಾರ್ಯ ವಿಸ್ತಾರವಾಗಿರುವುದರಿಂದ ಸಹಜವಾಗಿಯೇ ವಿಕೇಂದ್ರೀಕರಣದ ಅಗತ್ಯ ಗಮನದಲ್ಲಿರಿಸಿ, ಈ ಪರಿವರ್ತನೆ ಮಾಡಲಾಗಿದೆ. ಹೆಚ್ಚು ವಿಕೇಂದ್ರೀಕರಣಕ್ಕೆ ಗಮನ ನೀಡಲಾಗಿದೆ. ಅದರ ಅನುಷ್ಠಾನದ ನಂತರ ದೇಶದಲ್ಲಿ 46 ಪ್ರಾಂತಗಳ ಬದಲು 80 ಕ್ಕೂ ಹೆಚ್ಚು ಸಂಭಾಗಗಳು ಇರಲಿವೆ ಎಂದು ಅವರು ಹೇಳಿದರು.

ಯುದ್ಧ ಆದಷ್ಟು ಬೇಗ ಕೊನೆಯಾಗಬೇಕು: ಭಾರತೀಯ ಮೂಲದವರಾಗಿ ಭಾರತಕ್ಕೆ ಮಾತ್ರ ನಿಷ್ಠರಾಗಿರದೆ ನೀವು ನೆಲೆಸಿರುವ ದೇಶಗಳಲ್ಲಿನ ಕರ್ತವ್ಯಗಳನ್ನೂ ನೀವು ಪಾಲನೆ ಮಾಡಬೇಕು. ವಿಶ್ವ ಶಾಂತಿ ನಮ್ಮ ದೃಷ್ಟಿ. ಅನೇಕ ಕಾರಣಗಳಿಂದ ಯುದ್ಧಗಳು ನಡೆಯುತ್ತವೆ. ಆದಷ್ಟು ಬೇಗ ಅದು ಮುಕ್ತಾಯಗೊಂಡು ಅಲ್ಲಿನ ಜನಜೀವನ ಸುಖ ಶಾಂತಿಯಲ್ಲಿ ನೆಲೆಸಬೇಕು ಎನ್ನುವುದು ನಮ್ಮ ಅಪೇಕ್ಷೆ. ಈಗ ಆಗುತ್ತಿರುವ ಯುದ್ಧದ ಕುರಿತು ಸಂಘಕ್ಕೆ ಯಾವುದೇ ನಿಲುವಿಲ್ಲ. ಆದರೆ, ವಿಶ್ವದಲ್ಲಿ ಶಾಂತಿ ನೆಲೆಸಬೇಕು. ಭಾರತದ ಸಮಾಜ ಈ ದೃಷ್ಟಿ ಮತ್ತು ಪ್ರಯತ್ನದಲ್ಲಿ ಇರಬೇಕು. ಸಂಘವು ಜಗತ್ತಿನಲ್ಲಿ ಶಾಂತಿ ಮತ್ತು ಅಭಿವೃದ್ಧಿಯ ಬೆಂಬಲಿಗ ಎಂದು ಅಭಿಪ್ರಾಯಪಟ್ಟರು.

ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ 71 ದೇಶಗಳ ಪ್ರತಿನಿಧಿಗಳಿಗೆ, ನೀವು ಯಾವ ದೇಶಗಳಲ್ಲಿ ಇದ್ದೀರಿ, ಅಲ್ಲಿನ ಆಹಾರವನ್ನು ಸೇವಿಸುತ್ತೀರಿ. ಆದ್ದರಿಂದ ಆ ದೇಶವನ್ನು ಸಮರ್ಥಗೊಳಿಸುವುದೂ ನಿಮ್ಮ ಕರ್ತವ್ಯವಾಗಿದೆ ಎಂದು ನಾವು ತಿಳಿಸಿದೆವು. ಇದು ವಿಶ್ವ ಕುಟುಂಬವೆಂಬ ಹಿಂದುತ್ವದ ದೃಷ್ಟಿಯಾಗಿದೆ ಎಂದರು.

ಭಾರತದ ಹಿತಕ್ಕಾಗಿ ಸರ್ಕಾರ ನಿಲ್ಲುತ್ತದೆ

ಭಾರತ ಸರ್ಕಾರ ಭಾರತದ ದೃಷ್ಟಿಯಿಂದ ಯಾವುದು ಹಿತವೋ ಅದನ್ನು ಮಾಡುವುದಕ್ಕಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತದೆ ಎಂಬ ವಿಶ್ವಾಸವಿದೆ. ಸರ್ಕಾರದಲ್ಲಿರುವ ಸಚಿವರು ವಿಶ್ವದ ದೇಶಗಳೊಂದಿಗೆ ಸಂಬಂಧ, ಸಂಪರ್ಕ, ವಾಣಿಜ್ಯ, ವ್ಯವಹಾರ, ಸುರಕ್ಷತೆಯ ಕುರಿತು ಮಾತುಕತೆ ನಡೆಸುವುದರ ಜೊತೆಗೆ ರಾಷ್ಟ್ರ ಮೊದಲು ಎಂಬ ಪ್ರಧಾನ ಆಸಕ್ತಿ ಆಧಾರಿತವಾಗಿ ಕೆಲಸ ಮಾಡುತ್ತಿದೆ ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

ಸಮಾಜದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಕೊನೆಗೊಳಿಸಲು ಮತ್ತು ಯಾವುದೇ ಚುನಾವಣೆಯಲ್ಲಿ ಜಾತಿ ಆಧಾರಿತವಾಗಿ ಮತದಾರರ ಮನದಾನದ ಬಳಕೆ ನಿಲ್ಲಿಸಲು ಮಾಧ್ಯಮಗಳು ಸಹ ಮುಂದಾಗಬೇಕು.

■ ದತ್ತಾತ್ರೇಯ ಹೊಸಬಾಳೆ,
ಆರ್‌ಎಸ್‌ಎಸ್ ಸರಕಾರ್ಯವಾಹ

ಹರ್ಯಾಣ ಸಮಾಲ್ಖಾದ ಮಾಧವ ಸೃಷ್ಟಿ ಆವರಣದಲ್ಲಿ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನ

ರಾಷ್ಟ್ರೀಯ ಚಿಂತನೆಯ ವಿಸ್ತರಣೆಗೆ ವೇಗ



• **ಸಮಾಲ್ಖಾ (ಹರ್ಯಾಣ):** ಕಳೆದ ವರ್ಷದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಸಂಘ)(ಆರ್‌ಎಸ್‌ಎಸ್)ದ ಕೆಲಸ ಗಮನಾರ್ಹವಾಗಿ ವಿಸ್ತರಿಸಿದೆ. ಸಂಘದ ವಿಸ್ತರಣೆ ಎಂದರೆ ರಾಷ್ಟ್ರೀಯ ಚಿಂತನೆಯ ವಿಸ್ತರಣೆ ಎಂದು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ನಡೆಯುತ್ತಿದ್ದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನಗೊಂಡಿತು. ಅಂತಿಮ ದಿನವಾದ ಭಾನುವಾರ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು.

ಹರಿಯಾಣದ ಸಮಾಲ್ಖಾದ ಈ ಪರಿಸರದಲ್ಲಿ ಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭಾ ಎರಡನೇ ಬಾರಿಗೆ ನಡೆಯುತ್ತಿದೆ. ದೇಶದಾದ್ಯಂತ 46 ಪ್ರಾಂತಗಳಿಂದ ಒಟ್ಟು 1487 ಅಪೇಕ್ಷಿತರಿದ್ದರು. ಸಂಘದ ಕಾರ್ಯವಿಸ್ತಾರ ಮತ್ತು ಈ ವರ್ಷ ವಿಶೇಷವಾಗಿ ಸಂಘದ ಶತಾಬ್ದಿಯ ನಿಮಿತ್ತ ನಡೆದ ಕಾರ್ಯಕ್ರಮಗಳ ಕುರಿತು ವಿಚಾರ ವಿನಿಮಯ ನಡೆಯಿತು. ಸಂಘಟನಾತ್ಮಕವಾಗಿ ಎರಡು ವಿಷಯಗಳು ಮತ್ತು ಸಮಾಜದ ಕುರಿತಾದ 3 ವಿಷಯಗಳನ್ನು ಇಲ್ಲಿ ಚರ್ಚಿಸಲಾಯಿತು ಎಂದರು.

ಈಗ ಪ್ರಸ್ತುತ ದೇಶದಲ್ಲಿ 88,949 ಶಾಖೆಗಳಿವೆ. ಸಂಘದ ಶಾಖೆ ಎಲ್ಲಿರುವುದೋ ಅಲ್ಲಿಗೆ ಬರುವ ಸ್ವಯಂಸೇವಕ ದೇಶವನ್ನು ಏಕಾತ್ಮ ದೃಷ್ಟಿಯಿಂದ ನೋಡುತ್ತಾನೆ. ಜಾತಿ ಸಮುದಾಯಗಳ ಕುರಿತು ಮಾತ್ರ ಯೋಚಿಸದೇ ಸಂಪೂರ್ಣ ಸಮಾಜದ ಕುರಿತು ಯೋಚಿಸುವುದು ಅವನ ದೃಷ್ಟಿಯಾಗುತ್ತದೆ. ಸಮಾಜಕ್ಕೆ ನಾನು ಏನಾದರೂ ನೀಡಬೇಕೆಂಬ ಮನೋಭಾವ ಬೆಳೆಸಿಕೊಳ್ಳುತ್ತಾನೆ. ಹಾಗಾಗಿ, ಸಂಘಟನಾತ್ಮಕವಾಗಿ ಒಂದೊಂದು ಶಾಖೆ ಹೆಚ್ಚಾದರೂ ಕೇವಲ ಸಂಘದ ಶಾಖೆಯ ಸಂಖ್ಯೆ ಹೆಚ್ಚಾದಂತಲ್ಲ; ಬದಲಾಗಿ ದೇಶದ ಕುರಿತು ಯೋಚಿಸುವವರ ಸಂಖ್ಯೆ ಹೆಚ್ಚಾಗಿದೆ ಎಂದರ್ಥ. ಕೇವಲ ಕಾರ್ಯದ ವಿಸ್ತಾರವಾದರೆ ಸಾಲದು, ಬದಲಾಗಿ ಕಾರ್ಯಕರ್ತರ ಗುಣಾತ್ಮಕ ವಿಕಾಸವೂ ಆಗಬೇಕೆಂಬುದು ನಮ್ಮ ಗುರಿ. ವಸತಿಗಳಲ್ಲಿ ಇಂತಹ ಕಾರ್ಯಕರ್ತರ ನಿರ್ಮಾಣವಾಗಬೇಕು ಎನ್ನುವುದು ಕಳೆದ 100 ವರ್ಷಗಳ ನಮ್ಮ ಪ್ರಯತ್ನವಾಗಿದೆ ಎಂದು ವಿವರಿಸಿದರು.

ಸಮಾಜದಲ್ಲಿ ಆಗಬೇಕಿದೆ ಬದಲಾವಣೆ

ಸಮಾಜದ ದೃಷ್ಟಿಯಿಂದ ಸಮಾಜದ ಎದುರು ಪಂಚಪರಿವರ್ತನೆ (ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಭಾವ ಜಾಗರಣ ಮತ್ತು ನಾಗರಿಕ ಶಿಷ್ಟಾಚಾರ)ಯನ್ನು ಇಟ್ಟಿದ್ದೇವೆ. ಭಾರತದ ಇತಿಹಾಸ, ಸಂಸ್ಕೃತಿ, ಜನಜೀವನ, ಜ್ಞಾನ ಪರಂಪರೆಯ ಕುರಿತು ಸರಿಯಾದ ವಿಮರ್ಶೆ (ಕಥನ) ದೇಶ ಮತ್ತು ಜಗತ್ತಿನಲ್ಲಿ ಆಗಬೇಕು. ಈ ದೃಷ್ಟಿಯಿಂದ ದೇಶದ ಯೋಚನೆಯಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಪಠ್ಯಪುಸ್ತಕಗಳಲ್ಲಿ, ಅಂಕಣಗಳು ಮತ್ತು ಮಾಧ್ಯಮಗಳಲ್ಲಿ ಸರಿಯಾದ ವಿಚಾರ ಬರಬೇಕು. ನಮ್ಮ ದೇಶದಲ್ಲಿ ಆಂಗ್ಲರ ಆಡಳಿತದ ಸಂದರ್ಭದಲ್ಲಿ ಮತ್ತು ಅದರ ನಂತರವೂ ಕೆಲವು ಸಮಯ ನಮ್ಮ ಮಾನಸಿಕತೆ, ವಸಾಹತೀಕರಣಕ್ಕೆ ಒಳಗಾಯಿತು. ಹಾಗಾಗಿ, ಮಾನಸಿಕತೆಯ ನಿರ್ವಸಾಹತೀಕರಣ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ದೇಶಕ್ಕಾಗಿ ಸಜ್ಜನಶಕ್ತಿ ಒಂದಾಗಬೇಕು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಮಾತ್ರ ದೇಶಭಕ್ತರು ಎಂದು ನಾವು ಎಂದೂ ಹೇಳುವುದಿಲ್ಲ. ದೇಶದಲ್ಲಿ, ಸಮಾಜದಲ್ಲಿ ದೇಶ ಮತ್ತು ಸಮಾಜಕ್ಕಾಗಿ ಕಾರ್ಯ ಮಾಡುವುದಕ್ಕಾಗಿ ತಮ್ಮ ಸಮಯ, ಬುದ್ಧಿ, ಧನ, ಪ್ರತಿಭೆಯನ್ನು ಉಪಯೋಗಿಸಿ ಒಟ್ಟಿಗೆ ಕೆಲಸ ಮಾಡಲು ಬಯಸುವವರು ಬಹಳಷ್ಟು ಜನರಿದ್ದಾರೆ. ಅಂತಹ ಸಜ್ಜನಶಕ್ತಿಯ ಸಹಯೋಗದೊಂದಿಗೆ ದೇಶದ ಸರಿಯಾದ ಕಥನವನ್ನು ಪ್ರಸ್ತುತಪಡಿಸಲು, ಪಂಚಪರಿವರ್ತನೆಯನ್ನು ಅನುಷ್ಠಾನಗೊಳಿಸಲು, ದೇಶದ ದೃಷ್ಟಿಯಿಂದ ಸಜ್ಜನಶಕ್ತಿ ಒಂದಾಗಬೇಕಿದೆ. ಈ ದೃಷ್ಟಿಯಿಂದ ಶತಾಬ್ದಿ ವರ್ಷದಲ್ಲಿ ಪ್ರಮುಖ ನಾಗರಿಕ ಗೋಷ್ಠಿ, ಹಿಂದು ಸಮ್ಮೇಳನದಂತಹ ಕಾರ್ಯಕ್ರಮದಲ್ಲಿ ಗ್ರಾಮ ಮತ್ತು ನಗರ ಮಟ್ಟದಲ್ಲಿ ಎಲ್ಲರೂ ಜೊತೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ಮಂದಿ ಸಾಧು ಸಂತರು ತಮ್ಮ ಬೆಂಬಲವನ್ನು ಈ ಕಾರ್ಯಕ್ಕೆ ಸೂಚಿಸಿದ್ದಾರೆ, ಮಾರ್ಗದರ್ಶನ ನೀಡಿದ್ದಾರೆ. ಸಂಘದ ಪದಾಧಿಕಾರಿಗಳು, ಮಾತೃಶಕ್ತಿಯೂ ಈ ಕಾರ್ಯಕ್ರಮಗಳಲ್ಲಿ ಮಾರ್ಗದರ್ಶನ ಮಾಡಿದ್ದಾರೆ ಎಂದರು. ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಸುದ್ದಿಗೋಷ್ಠಿಯಲ್ಲಿದ್ದರು.

75 ಶಿಕ್ಷಾ ವರ್ಗಗಳು

ಮುಂಬರುವ ವರ್ಷಕ್ಕೆ ಸಂಘದ ನಿಯಮಿತ ಶಿಕ್ಷಾ ವರ್ಗಗಳ ಬಗ್ಗೆ ಮಾಹಿತಿ ನೀಡಲಾಯಿತು. ಮುಂಬರುವ ದಿನಗಳಲ್ಲಿ 63 ಕಡೆಗಳಲ್ಲಿ ಸಂಘ ಶಿಕ್ಷಾ ವರ್ಗಗಳು ನಡೆಯಲಿವೆ. ಕ್ಷೇತ್ರೀಯ ಮಟ್ಟದಲ್ಲಿ 11 ಕಡೆಗಳಲ್ಲಿ ಕಾರ್ಯಕರ್ತರ ವಿಕಾಸ ವರ್ಗ-1 ಮತ್ತು ನಾಗ್ಪುರದಲ್ಲಿ ಕಾರ್ಯಕರ್ತರ ವಿಕಾಸ ವರ್ಗ-2 ವರ್ಗ ನಡೆಯಲಿದೆ. ಕೆಲವು ವರ್ಗಗಳು 15 ದಿನಗಳದ್ದಾದರೆ, ಇನ್ನೂ ಕೆಲವು 21 ದಿನಗಳದ್ದಾಗಿವೆ. ಇವು ಏಪ್ರಿಲ್‌ನಿಂದ ಜೂನ್‌ವರೆಗೆ ಜರುಗಲಿವೆ ಎಂದು ದತ್ತಾತ್ರೇಯ ಹೊಸಬಾಳೆ ವಿವರಿಸಿದರು.

ಭಾರತೀಯತೆ ಎಂದರೇನು? ಹಿಂದುತ್ವ ಎಂದರೇನು? ಅದು ಕೇವಲ ಸಿದ್ಧಾಂತ ಅಥವಾ ಆಧ್ಯಾತ್ಮಿಕ ವಿಚಾರವಲ್ಲ, ಅದು ಜೀವನ ಶೈಲಿಯಾಗಿದೆ ಎಂದು ವಿವೇಕಾನಂದರು, ದಯಾನಂದ ಸರಸ್ವತಿ ಸೇರಿದಂತೆ ಅನೇಕರು ತಿಳಿಸಿದ್ದಾರೆ. ನಾವು ಅವರನ್ನು ಸ್ಮರಿಸುತ್ತೇವೆ. ಭಾರತೀಯ ಕಥನ ವಿಶ್ವಕ್ಕೆ ಅವಶ್ಯವಾದ ಒಂದು ಚಿಂತನೆ ಎಂಬುದನ್ನು ತಿಳಿಸಬೇಕಿದೆ.

■ ದತ್ತಾತ್ರೇಯ ಹೊಸಬಾಳೆ,
ಆರ್‌ಎಸ್‌ಎಸ್
ಸರಕಾರ್ಯವಾಹ



ಮುಂದುವರಿಯುತ್ತದೆ ಶತಾಬ್ದಿ ವರ್ಷ ಕಾರ್ಯಕ್ರಮ

ಶತಾಬ್ದಿ ವರ್ಷ 2026ರ ವಿಜಯದಶಮಿಯವರೆಗೆ ಮುಂದುವರಿಯುತ್ತದೆ. ಇನ್ನೂ ಅನೇಕ ಪ್ರಾಂತಗಳಲ್ಲಿ ಯುವಕರ ಕಾರ್ಯಕ್ರಮ ನಡೆಯಬೇಕಿದೆ. ಆದ್ದರಿಂದ ಯುವಕರ ಕೇಂದ್ರಿತವಾದ ಕಾರ್ಯಕ್ರಮಗಳು, ಪ್ರಾಂತಗಳ ಸಂವಾದ, ಯುವ ಪ್ರತಿಭೆಗಳ ಗುರುತಿಸುವಿಕೆ, ವಿವಿಧ ಚಟುವಟಿಕೆಗಳು, ಪಂಚಪರಿವರ್ತನೆಯ ವಿಷಯಗಳನ್ನು ಪ್ರಯೋಗಿಸಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಹಕಾರಿಯಾಗುವಂತೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸಂಘಟನಾತ್ಮಕ ದೃಷ್ಟಿಯಿಂದಲೂ ಯುವಕರನ್ನು ಒಗ್ಗೂಡಿಸುವಂತಹ ಪ್ರಯತ್ನಗಳು ನಡೆದಿವೆ ಎಂದು ಹೊಸಬಾಳೆ ಹೇಳಿದರು.

ಪರಿಸರಸ್ನೇಹಿ ಮನೆಗೆ ಒತ್ತು

ಸಂಘದ ದೃಷ್ಟಿಯಿಂದ ಸ್ವಯಂಸೇವಕರು ಗೋಸೇವಾ, ಗ್ರಾಮವಿಕಾಸದಂತಹ ಕಾರ್ಯಗಳನ್ನು ಮಾಡುತ್ತಿದ್ದಾರೆ. ಗ್ರಾಮಗಳಲ್ಲಿ ಗೋಸೇವಾ ಕಾರ್ಯ ಮಾಡಬಹುದು. ಆದರೆ, ನಗರಗಳಲ್ಲಿ ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ – ಪರಿಸರಸ್ನೇಹಿ ಮನೆ ನಿರ್ಮಿಸುವುದು. ನಗರಗಳಲ್ಲಿ ವಾಸವಿರುವವರು ತಮ್ಮ ಮನೆಗಳ ತಾರಸಿಯಲ್ಲಿ ಚಿಕ್ಕ ತೋಟ ಮಾಡಿ ಅದಕ್ಕೆ ಗೋ ಮೂತ್ರ, ಸಗಣಿ ಉಪಯೋಗಿಸಿ ಗೋಸೇವಾ ಕಾರ್ಯಕ್ಕೆ ಕೈ ಜೋಡಿಸಬಹುದು. ಅದೇ ರೀತಿ, ನಾಗರಿಕರು ಪರಿಸರಸ್ನೇಹಿ ಮನೆಗಳನ್ನು ನಿರ್ಮಿಸಲು ಪ್ರತಿಜ್ಞೆ ಮಾಡಬಹುದು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬಹುದು, ನೀರನ್ನು ಸಂರಕ್ಷಿಸಬಹುದಾಗಿದೆ. ದೇಶಾದ್ಯಂತ ಅನೇಕರು ಇದನ್ನು ಅನುಸರಿಸುತ್ತಿದ್ದಾರೆ.

- ಅಂಡಮಾನ್‌ನ ಒಂಬತ್ತು ಪ್ರಮುಖ ದ್ವೀಪಗಳಿಂದ 13,000ಕ್ಕೂ ಹೆಚ್ಚು ಜನರು ಸರಸಂಘಚಾಲಕರ ಸಮ್ಮುಖದಲ್ಲಿ ಪೋರ್ಟ್‌ಬ್ಲೇರ್‌ನಲ್ಲಿ ನಡೆದ ಹಿಂದು ಸಮಾವೇಶದಲ್ಲಿ ಭಾಗಿ
- ಅರುಣಾಚಲ ಪ್ರದೇಶದಂತಹ ಕಡಿಮೆ ಜನಸಂಖ್ಯಾ ಸಾಂದ್ರತೆ ಹೊಂದಿರುವ ರಾಜ್ಯದಲ್ಲಿ 37,000ಕ್ಕೂ ಹೆಚ್ಚು ಜನರು 21 ಸ್ವಧರ್ಮ ಸಮಾವೇಶಗಳಲ್ಲಿ ಭಾಗಿ
- ತೇಗಬಹದ್ದೂರ್ ಅವರ 350ನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ದೇಶಾದ್ಯಂತ 2,134 ಕಾರ್ಯಕ್ರಮಗಳ ಆಯೋಜನೆ, 7 ಲಕ್ಷ ಜನರು ಭಾಗಿ
- ವಂದೇ ಮಾತರಂನ 150ನೇ ವರ್ಷದ ಕಾರ್ಯಕ್ರಮಗಳು ದೇಶಾದ್ಯಂತ ಉತ್ಸಾಹದಿಂದ ಜರುಗಿದವು
- ಈ ವರ್ಷ ಸಂತ ಶಿರೋಮಣಿ ರವಿದಾಸ ಅವರ 650ನೇ ಜಯಂತಿಯನ್ನು ಸ್ಮರಿಸಲು ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ

ಕಿರುಸುದ್ದಿ

ಲಕ್ಷಾಂತರ ಹಣ ಲೂಟಿ ಮಾಡಿದವರ ಬಂಧನ

• **ಚಿತ್ರದುರ್ಗ:** ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ ಹೆಸರನ್ನು ಬಳಸಿಕೊಂಡು ನಗರಾಭಿವೃದ್ಧಿ ಕೋಶದ ಸಿಬ್ಬಂದಿ ಲಕ್ಷ ಲಕ್ಷ ಹಣ ದೋಚಿರುವ ಘಟನೆ ಚಿತ್ರದುರ್ಗದಲ್ಲಿ ಬೆಳಕಿಗೆ ಬಂದಿದೆ. ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಅವರ ಡಿಜಿಟಲ್ ಸಹಿಯನ್ನು ಬಳಸಿಕೊಂಡು ನಕಲಿ ದಾಖಲೆ ಸೃಷ್ಟಿಸಿ ಹಣ ದೋಚಲಾಗಿದೆ. ಈ ಸಂಬಂಧ ಚಿತ್ರದುರ್ಗ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾ ನಗರಾಭಿವೃದ್ಧಿ ಕೋಶದ ಸಿಟಿ ಲೆವೆಲ್ ಟೆಕ್ನಿಕಲ್ ಸೆಲ್ ಸಿಬ್ಬಂದಿಯ ವೇತನದ ಹೆಸರಿನಲ್ಲಿ ಸುಮಾರು 15 ಲಕ್ಷ ರೂಪಾಯಿ ಮೌಲ್ಯದ ನಕಲಿ ಬಿಲ್ ಸಲ್ಲಿಸಿರುವುದು ತಿಳಿದುಬಂದಿದೆ. ಖಜಾನೆ ಇಲಾಖೆಯು ಡಿಜಿಟಲ್ ಸಹಿ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನೆಲೆ ಈ ಅಕ್ರಮ ಬೆಳಕಿಗೆ ಬಂದಿದೆ. ನಗರಾಭಿವೃದ್ಧಿ ಕೋಶದ ನಿರ್ದೇಶಕಿ ರೇಷ್ಮಾ ಹಾನಗಲ್ ನೀಡಿದ ದೂರಿನ ಆಧಾರದ ಮೇಲೆ ಹೊರಗುತ್ತಿಗೆ ನೌಕರರಾದ ಸೈಯದ್ ಸಾದಿಕ್, ವಿನಯ್ ಶರ್ಮಾ, ವಿಜಯ್ ಕುಮಾರ್, ಬಸವರಾಜ್, ಮೆಹಬೂಬ್ ಭಾಷಾ ಹಾಗೂ ವಿಎಂಎಚ್ ಎಂಟರ್‌ಪ್ರೈಸಸ್‌ನ ವೆಂಕಟೇಶ್ ವಿರುದ್ಧ ಪ್ರಕರಣ ದಾಖಲಾಗಿದೆ. ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಪ್ರಮುಖ ಆರೋಪಿ ಸೈಯದ್ ಸಾದಿಕ್ ಪರಾರಿಯಾಗಿದ್ದಾನೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿ ಅವರ ಸಹಿ ಸರ್ಟಿಫಿಕೇಟ್ ಕೀ ಕಳವು ಮಾಡಿ ದುರುಪಯೋಗ ಪಡಿಸಿಕೊಂಡಿರುವ ಆರೋಪವೂ ಇವರ ಮೇಲಿದೆ. ಈ ಸಂಬಂಧ ತನಿಖೆ ನಡೆಯುತ್ತಿದೆ.

ಡಿಸಿ, ಎಡಿಸಿ ಅವರ ಡಿಜಿಟಲ್ ಸಹಿ ದುರ್ಬಳಕೆ

ಇಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಸ್ಥಳೀಯ ನಾಗರಿಕರು

ಶಾಸಕರಿಗೆ ₹5 ಕೋಟಿ ಆಮಿಷ

ಪೊಲೀಸರಿಂದ ವಿಚಾರಣೆ

ರೆಸಾರ್ಟ್‌ನಲ್ಲಿದ್ದ ಎಲ್ಲಾ ಶಾಸಕರನ್ನು ಬೆಂಗಳೂರಿನ ಖರ್ಗೆ ಮನೆಗೆ ಶಿಫ್ಟ್ ಮಾಡಲಾಗಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಪೊಲೀಸ್ ಎಸ್ಕಾರ್ಟ್ ಭದ್ರತೆಯಲ್ಲಿ ಬಸ್ ಮೂಲಕ 8 ಮಂದಿ ಶಾಸಕರನ್ನು ಬೆಂಗಳೂರಿನ ಸದಾಶಿವನಗರದ ಖರ್ಗೆ ಮನೆಗೆ ಸ್ಥಳಾಂತರ ಮಾಡಲಾಗಿದೆ. ಇತ್ತ ರೆಸಾರ್ಟ್‌ಗೆ ಎಸ್‌ಪಿ ಶ್ರೀನಿವಾಸ್‌ಗೌಡ ಭೇಟಿ ನೀಡಿ ಪೊಲೀಸರ ವಶದಲ್ಲಿರುವ ಇಬ್ಬರು ವ್ಯಕ್ತಿಗಳನ್ನು ವಿಚಾರಣೆ ನಡೆಸಿದ್ದಾರೆ.



• **ರಾಮನಗರ:** ಬಿಡದಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಒಡಿಶಾ ಕೈ ಶಾಸಕರ ಖರೀದಿಗೆ ಬಂದಿದ್ದ ಇಬ್ಬರು ಒಡಿಶಾ ವ್ಯಕ್ತಿಗಳು ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ. ಶಾಸಕರಿಗೆ 5 ಕೋಟಿ ರೂ. ಆಫರ್ ನೀಡಿದ್ದ ವ್ಯಕ್ತಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಆರಂಭಿಸಿದ್ದಾರೆ.

ರಾಜ್ಯಸಭಾ ಚುನಾವಣೆಯಲ್ಲಿ ಹಿನ್ನೆಲೆಯಲ್ಲಿ ಮಾ.12ರಂದು ಒಡಿಶಾದಿಂದ ರಾಮನಗರದ ಬಿಡದಿ ವಂಡರ್ ಲಾ ರೆಸಾರ್ಟ್‌ಗೆ ಬಂದು ವಾಸ್ತವ್ಯ ಹೂಡಿದ್ದ ಕಾಂಗ್ರೆಸ್ ಶಾಸಕರಿಗೆ ಆಪರೇಷನ್ ಯತ್ನ ನಡೆದಿದೆ. ಭಾನುವಾರ ಬೆಳಗ್ಗೆ ಒಡಿಶಾದಿಂದ ಮೂವರು ವ್ಯಕ್ತಿಗಳು, ಸ್ಥಳೀಯ ಓರ್ವ ವ್ಯಕ್ತಿ ಜೊತೆ ಸೇರಿ ಶಾಸಕರ ಖರೀದಿಗೆ ಮುಂದಾಗಿದ್ದು, ಈ ವೇಳೆ ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಬಿರೇಂದ್ರ ಪ್ರಸಾದ್, ಅಜಿತ್ ಕುಮಾರ್ ಸಾಹು ಎಂಬುವವರು ಸಿಕ್ಕಿಬಿದ್ದಿದ್ದು, ಸ್ಥಳಕ್ಕೆ ಬಿಡದಿ ಪೊಲೀಸರು ಆಗಮಿಸಿ, ಒಡಿಶಾ ವ್ಯಕ್ತಿಗಳ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಬಗ್ಗೆ ಒಡಿಶಾ ಕಾಂಗ್ರೆಸ್ ಎಂಪಿ ಸಪ್ತಗಿರಿ ಶಂಕರ್ ಉಲಾಖ ಮಾತನಾಡಿ, ನಾಲ್ವರು ವ್ಯಕ್ತಿಗಳು ರೆಸಾರ್ಟ್‌ಗೆ ಬಂದು ಶಾಸಕರ ಜತೆ ಮಾತನಾಡಲು ಯತ್ನಿಸಿದ್ದರು. ನಮ್ಮ ಶಾಸಕರಿಗೆ 5 ಕೋಟಿ ರೂ. ಹಣದ ಆಫರ್ ಮಾಡಿದ್ದಾರೆಂದು ದೂರಿದರು.

ದೂರು ದಾಖಲು

ಒಡಿಶಾ ಸಿಎಂ ಮೋಹನ್ ಚರಣ್ ಆಪ್ತ ಇಲ್ಲಿಗೆ ಬಂದು ಶಾಸಕರ ಖರೀದಿಗೆ ಯತ್ನಿಸಿದ್ದಾನೆ. ಆದರೆ ನಮ್ಮ ಯಾವ ಶಾಸಕರು ಆಮಿಷಕ್ಕೆ ಒಳಗಾಗಿಲ್ಲ. ಆಮಿಷ ತೋರಲು ಬಂದ ವ್ಯಕ್ತಿಗಳನ್ನು ಸ್ಥಳೀಯ ಕಾಂಗ್ರೆಸ್ ಮುಖಂಡರು ಹಿಡಿದು ಪೊಲೀಸರಿಗೆ ಕೊಟ್ಟಿದ್ದಾರೆ. ಅವರ ವಿರುದ್ಧ ನಾವು ಕೂಡಾ ಪೊಲೀಸರಿಗೆ ದೂರು ನೀಡಿದ್ದೇವೆ ಎಂದರು.



ಶಾಸಕರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ: ಡಿ.ಕೆ.ಶಿವಕುಮಾರ್

• **ಬೆಂಗಳೂರು:** ಬಿಡದಿಯಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ನಮ್ಮ ಪಕ್ಷದ ನಾಲ್ವರು ಶಾಸಕರನ್ನು ಭೇಟಿ ಮಾಡಿ, ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡಮತ ದಾನಕ್ಕೆ ತಲಾ 5 ಕೋಟಿ ರೂ. ಹಣದ ಆಮಿಷ ಒಡ್ಡಿದ್ದಾರೆ. ಆದರೆ ನಮ್ಮ ಶಾಸಕ ರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಮಿಷ ಒಡ್ಡಿದ ನಾಲ್ವರ ಪೈಕಿ ಇಬ್ಬರು ತಪ್ಪಿಸಿಕೊಂಡಿದ್ದು ಮತ್ತಿಬ್ಬರನ್ನು ಹಿಡಿಯ ಲಾಗಿದೆ. ಅವರು ಇದೇ ಕೆಲಸಕ್ಕೆ ಬಂದಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಆಮಿಷ ಒಡ್ಡಿದವರು ಖಾಲಿ ಚೆಕ್ ತಂದಿದ್ದಾರೆ. ಆ ಮೂಲಕ ಆಪರೇಷನ್ ಕಮಲ ಮಾಡಲಾಗುತ್ತಿದೆ. ಒಡಿಶಾದಿಂದ ಬಂದಿರುವ ನಾಲ್ಕು ಜನರು ಸ್ಥಳೀಯ ಬ್ಯಾಟರಾಯನಪುರ ನಿವಾಸಿ ಸುರೇಶ್ ಎಂಬಾತನ ಸಹಾಯ ಪಡೆದು ರೂಮ್ ಬುಕ್ ಮಾಡಿಸಿದ್ದಾರೆ. ನಂತರ ನಮ್ಮ ಶಾಸಕರಿಗೆ ಆಮಿಷ ಒಡ್ಡಿದಾಗ ನಮ್ಮ ಪಕ್ಷದ ಶಾಸಕರು ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಎಂದರು.

ಒಡಿಶಾಗೆ ಪ್ರಯಾಣ

ಮಲ್ಲಿಕಾರ್ಜುನ ಖರ್ಗೆ ಭೇಟಿ ಬಗ್ಗೆ ಉತ್ತರಿಸಿದ ಅವರು, ಪಕ್ಷದ ಶಾಸಕರು ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡದೆ ಬಿಜೆಪಿ ಅಧ್ಯಕ್ಷರನ್ನು ಭೇಟಿ ಮಾಡಲು ಆಗುತ್ತದೆಯೇ? ನಮ್ಮ ಪಕ್ಷದ ಶಾಸಕರು ತಮ್ಮ ಆಸೆಯಂತೆ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ್ದು, ಅವರ ಆಶೀರ್ವಾದ ಪಡೆದಿದ್ದಾರೆ. ಅವರೊಂದಿಗೆ ಫೋಟೋ ತೆಗೆಸಿಕೊಂಡಿದ್ದು, ಸೋಮವಾರ ಬೆಳಗ್ಗೆ ಅವರು ಒಡಿಶಾಗೆ ಪ್ರಯಾಣ ಬೆಳೆಸಲಿದ್ದಾರೆ ಎಂದರು.

ನಾವು ಇಂತಹ ಪರಿಸ್ಥಿತಿ ಎದುರಿಸುತ್ತಲೇ ಇರುತ್ತೇವೆ. ನಾನು ಸದಾ ಮಂದ ಹಾಸದಲ್ಲೇ ಇರುತ್ತೇನೆ. ನಾನು ನನ್ನ ಆತ್ಮಸಾಕ್ಷಿಯನ್ನು ನಂಬಿದ್ದೇನೆ, ಯಾವ ಟ್ರಬಲ್ಲೂ ಇಲ್ಲ.

■ ಡಿ.ಕೆ.ಶಿವಕುಮಾರ್,
ಉಪಮುಖ್ಯಮಂತ್ರಿ

ಅನಿಲ ಪೂರೈಕೆಗೆ ಪರ್ಯಾಯ ಮಾರ್ಗಕ್ಕೆ ಕೇಂದ್ರಕ್ಕೆ ಪತ್ರ: ಮುಖ್ಯಮಂತ್ರಿ

• **ಬೆಂಗಳೂರು:** ಎಲ್‌ಪಿಜಿ ಸಿಲಿಂಡರ್ ಅಭಾವವನ್ನು ನೀಗಿಸಲು ಹೊರದೇಶದಿಂದ ಅನಿಲ ಪೂರೈಕೆಯಂತಹ ಪರ್ಯಾಯ ಮಾರ್ಗಕ್ಕೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಬಗ್ಗೆ ಭಾನುವಾರ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಎಲ್‌ಪಿಜಿ ಪೂರೈಕೆಯಲ್ಲಿ ತೊಂದರೆಯಾಗದಂತೆ ನಿರ್ವಹಿಸುವ ಬಗ್ಗೆ ಭರವಸೆ ನೀಡಿದ್ದಾರೆ ಎಂದರು. ಎಲ್‌ಪಿಜಿ ಸಿಲಿಂಡರ್ ವ್ಯತ್ಯಯದ ಬಗ್ಗೆ ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರದ ವತಿಯಿಂದ ಈ ಬಗ್ಗೆ ಈಗಾಗಲೇ ಉತ್ತರ ನೀಡಲಾಗಿದೆ. ಆಹಾರಕ್ಕಾಗಿ ಹೋಟೆಲ್‌ಗಳ ಮೇಲೆ ಅವಲಂಬಿತರಾಗುವ ಜನಸಂಖ್ಯೆ ಸಾಕಷ್ಟಿದೆ. ಹೋಟೆಲ್ ವ್ಯವಸ್ಥೆ ಸ್ಥಗಿತಗೊಂಡರೆ, ಜನಜೀವನ ಅಸ್ತವ್ಯಸ್ತವಾಗುತ್ತದೆ ಎಂದು ಹೇಳಿದರು. ರಾಜ್ಯದಲ್ಲಿ ಮಾತ್ರ ಎಲ್‌ಪಿಜಿ ಪೂರೈಕೆ ಸಮಸ್ಯೆಯಾಗಿದೆ ಎಂದು ಬಿಜೆಪಿಯ ನಾಯಕರ ಟೀಕೆಗೆ ಪ್ರತಿಕ್ರಿಯೆ ನೀಡಿ, ರಾಜ್ಯ ಬಿಜೆಪಿಯವರು ಮಾತನಾಡುವ ಬದಲು, ಎಲ್‌ಪಿಜಿ ಸಿಲಿಂಡರ್ ಹೆಚ್ಚಿನ ಸರಬರಾಜಿಗೆ ಕ್ರಮ ವಹಿಸಲಿ ಎಂದು ತಿಳಿಸಿದರು.

ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕ: ಶಾಸಕ

ರಾಷ್ಟ್ರಾದ್ಯಂತ ಅಭಿಯಾನ ಶ್ಲಾಘನೀಯ

• **ಬೆಂಗಳೂರು:** ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕವಾಗಿದ್ದು, ಈ ಸಂಸ್ಕೃತಿಯನ್ನು ಮುಂದುವರಿಸಲು ರಾಷ್ಟ್ರಾದ್ಯಂತ ಅಭಿಯಾನ ನಡೆಸುತ್ತಿರುವುದು ಶ್ಲಾಘನೀಯ ಎಂದು ಶಾಸಕ ಕೆ.ಗೋಪಾಲಯ್ಯ ಅಭಿಪ್ರಾಯಪಟ್ಟರು.

ಮಹಾಲಕ್ಷ್ಮಿಪುರದ ಸಾದರ ಸಮುದಾಯ ಕ್ಷೇಮಾಭಿವೃದ್ಧಿ ಸಂಘದ ಸಭಾಂಗಣದಲ್ಲಿ ಭಾನುವಾರ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ನೇತೃತ್ವದಲ್ಲಿ ನಡೆದ ರಾಜ್ಯಮಟ್ಟದ ಗೋ-ಸಮ್ಮಾನ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯಾದ್ಯಂತ ಮಠಮಾನ್ಯಗಳ ಸ್ವಾಮೀಜಿಗಳನ್ನು ಒಂದೆಡೆ ಸೇರಿಸಿರುವುದು ಡಾ.ಆರೂಢಭಾರತಿ ಸ್ವಾಮೀಜಿ ಅವರ ಹೆಗ್ಗಳಿಕೆಯಾಗಿದೆ. ಗೋವುಗಳ ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಒಲವಿರುವ ಕುಟುಂಬಗಳು ಸಹ ಇಲ್ಲಿ ಸೇರಿರುವುದು ಸಂತಸವನ್ನು ಉಂಟುಮಾಡಿದೆ. ದೇಶಾದ್ಯಂತ ನಾಲ್ಕು ಹಂತಗಳಲ್ಲಿ ನಡೆಯುವ ಗೋಸಮ್ಮಾನ ಅಭಿಯಾನಕ್ಕೆ ಪೂರ್ವಭಾವಿಯಾಗಿ ಇಂದು



ರಾಜ್ಯಮಟ್ಟದ ಪ್ರಚಾರಕರ ಕಾರ್ಯಾಗಾರ ಏರ್ಪಡಿಸಲಾಗಿದೆ. ಇದರಲ್ಲಿ ರಾಜ್ಯ, ಹೊರರಾಜ್ಯದ ಅನೇಕ ಸಂತರು ರಾಜ್ಯದ ಪ್ರತಿ ತಾಲೂಕಿನ ಪ್ರಾತಿನಿಧಿಕ ಗೋ ಭಕ್ತರು, ಗೋ ಸಂರಕ್ಷಕರು ಭಾಗವಹಿಸಿರುವುದು ಸಂತಸ ತಂದಿದೆ ಎಂದರು.

ಗೋವು ರಾಷ್ಟ್ರಮಾತೆ ಎಂದು ಉದ್ಘೋಷಿಸಬೇಕು. ದೇಶಾದ್ಯಂತ ಒಂದೇ ಕಾನೂನಿನ ಅಡಿಯಲ್ಲಿ ಗೋ ಹತ್ಯೆ ನಿಷೇಧಿಸಬೇಕು. ಗೋಮಾಳವನ್ನು ಗೋವಿಗಾಗಿಯೇ ಉಳಿಸಬೇಕು ಎಂಬ ಮುಖ್ಯ ಬೇಡಿಕೆಗಳ ಕುರಿತು ಈ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯುತ್ತದೆ ಎಂದು ಮಾಹಿತಿ ನೀಡಿದರು.

ಈ ಅಭಿಯಾನದ ಮುಂದಿನ ಭಾಗವಾಗಿ ಮೊದಲ ಹಂತದಲ್ಲಿ ಏ.27 ರಂದು ದೇಶದ ಎಲ್ಲ 5,400 ತಹಸೀಲ್ದಾರರಿಗೆ ಈ ಕುರಿತು ಮನವಿ ಸಲ್ಲಿಸಲಾಗುವುದು. ಎರಡನೇ ಹಂತದಲ್ಲಿ ಜು.27ರಂದು ದೇಶದ ಎಲ್ಲ ಜಿಲ್ಲಾಧಿಕಾರಿಗಳಿಗೆ, ಮೂರನೇ ಹಂತದಲ್ಲಿ ಅ. 27ರಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ನಾಲ್ಕನೇ ಹಂತದಲ್ಲಿ 2027ರ ಫೆ. 27 ರಿಂದ ಆ.15 ರವರೆಗೆ ದಿಲ್ಲಿಯಲ್ಲಿ ಹೆಚ್ಚಿನ ಸಂಖ್ಯೆಯ ಸಂತರು ಹಾಗೂ ಗೋ ಭಕ್ತರು ಶಾಂತಿಯುತ ಧರಣಿ ನಡೆಸಲಿದ್ದಾರೆ. ಆಗಲೂ ಬೇಡಿಕೆ ಈಡೇರದಿದ್ದಲ್ಲಿ ಅಂತಿಮವಾಗಿ 2027ರ ಆ. 16ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಸಿದ್ಧಾರೂಢ ಮಠದ ಶ್ರೀ ಪ್ರಭುಲಿಂಗ ದೇವರು ಸ್ವಾಮೀಜಿ, ಮಾಜಿ ಶಾಸಕ ನೆ.ಲ.ನರೇಂದ್ರಬಾಬು ಸೇರಿದಂತೆ ಗೋ ಸಂರಕ್ಷಣಾ ಪ್ರತಿನಿಧಿಗಳು ಇದ್ದರು.

ಸರ್ಕಾರಕ್ಕೆ ಆರ್ಥಿಕ ಬಿಕ್ಕಟ್ಟು: ಅಶೋಕ

• **ಬೆಂಗಳೂರು:** ತುಘಲಕ್ ನೀತಿಗಳಿಂದಲೇ ದುರಾಡಳಿತಕ್ಕೆ ಹೆಸರಾಗಿ ರುವ ಕಾಂಗ್ರೆಸ್ ಸರ್ಕಾರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ. ಇದರಿಂದ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೂ ಸರ್ಕಾರದ ಬಳಿ ದುಡ್ಡಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 51,000 ಅಥಿತಿ ಶಿಕ್ಷಕರು ಕಳೆದ 4 ತಿಂಗಳಿಂದ ಸಂಬಳ ವಿಲ್ಲದೆ ಪರದಾಡುತ್ತಿದ್ದಾರೆ. ಮಾರ್ಚ್ 15ರೊಳಗೆ ಸಂಬಳ ಪಾವತಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡಲು ಹೊರಟಿದ್ದಾರೆ ಎಂದಿದ್ದಾರೆ. ಸ್ವ ಘೋಷಿತ ಆರ್ಥಿಕ ತಜ್ಞ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಿಕ್ಕೆಟ್ಟ ನೀತಿಗಳು ಸರ್ಕಾರಿ ನೌಕರರನ್ನು ಬೀದಿಗೆ ತಂದಿವೆ. ದಿವಾಳಿ ಸರ್ಕಾರ ತೊಲಗು ವವರೆಗೂ ಕನ್ನಡಿಗರಿಗೆ ನೆಮ್ಮದಿ ಇಲ್ಲ ಎಂದು ಅಶೋಕ ದೂರಿದ್ದಾರೆ.

ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ: ಸಲೀಮ್ ಅಹ್ಮದ್

• **ವಿಜಯಪುರ:** ಮೇ, ಜೂನ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯಾಗಲಿದ್ದು, ನಾನು ಕೂಡ ಸಚಿವಸ್ಥಾನದ ಆಕಾಂಕ್ಷಿಯಾಗಿರುವೆ ಎಂದು ವಿಧಾನ ಪರಿಷತ್ ಸದಸ್ಯ ಸಲೀಮ್ ಅಹ್ಮದ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ, ಜೂನ್‌ನಲ್ಲಿ ಸಂಪುಟ ವಿಸ್ತರಣೆಯಾಗಲಿದ್ದು, ಶೇ.50ರಷ್ಟು ಹೊಸ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಚರ್ಚೆಯಾಗಿದೆ. ಹಾಲಿ ಇರುವ ಶೇ.50ರಷ್ಟು ಸಚಿವರು ತಮ್ಮ ಸ್ಥಾನವನ್ನು ತ್ಯಜಿಸಿದ ನಂತರ ಮುಂದಿನ ಚುನಾವಣೆಗೆ ಕೆಲಸ ಮಾಡಬೇಕು ಎನ್ನುವ ತೀರ್ಮಾನವಾಗಿದೆ ಎಂದರು. ಪಕ್ಷದಲ್ಲಿ ನಾಯಕತ್ವ ಗೊಂದಲ ಇಲ್ಲ. ತಾವು ಡಿ.ಕೆ.ಶಿವಕುಮಾರ ಹಾಲು, ಜೇನು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೇಳಿದ್ದಾರೆ. ಹಾಗಾಗಿ ಯಾವುದೇ ಗೊಂದಲ ಬೇಡ ಎಂದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ 9 ತಿಂಗಳು ಕಳೆದಿವೆ. ನಾವು ನುಡಿದಂತೆ ನಡೆದಿದ್ದೇವೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4 ಲಕ್ಷ ಕೋಟಿಗೂ ಅಧಿಕ ಮೊತ್ತದ ಬಜೆಟ್ ಮಂಡಿಸಿದ್ದು, ಎಲ್ಲ ಜನರನ್ನು, ಎಲ್ಲ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ಸಿದ್ದರಾಮಯ್ಯ ಅವರ 17ನೇ ಬಜೆಟ್ ಇದಾಗಿದ್ದು, ಜನಪ್ರಿಯ ಬಜೆಟ್ ಮೂಲಕ ಗ್ಯಾರಂಟಿ ಯೋಜನೆ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೂ ವೇಗ ನೀಡಿದ್ದಾರೆ ಎಂದರು. ಮೇನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಹಾಗಾಗಿ ಆ ಚುನಾವಣೆಯಲ್ಲಿ ನಮ್ಮ ಸರ್ಕಾರದ ಜನಪರ ಯೋಜನೆಗಳು, ಸರ್ಕಾರದ ಸಾಧನೆಗಳು ನಮ್ಮ ಕೈ ಹಿಡಿಯಲಿವೆ ಎಂದರು. ಎಸ್ಸಿ, ಎಸ್ಟಿ ಹಣವನ್ನು ದುರ್ಬಳಕೆ ಮಾಡಿಲ್ಲ ಎಂದರು.

ಸಂಪಾದಕೀಯ

ಕೋಲ್ಕೊತ್ತಾ ರ‍್ಯಾಲಿ ಸಂದೇಶ ನೀಡಿದೆ

ಕೋಲ್ಕೊತ್ತಾದ ಬ್ರಿಗೇಡ್ ಪರೇಡ್ ಮೈದಾನ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಿದೆ. ಪ್ರಧಾನಿ ಪ್ರವಾಸದ ಭಾಗ ಮತ್ತು ಬಿಜೆಪಿಯ ರ‍್ಯಾಲಿಯ ಕಾರಣಕ್ಕಲ್ಲದೆ ಪ.ಬಂಗಾಳದ ಪ್ರತಿ ಪ್ರಜೆಯೂ ಅಂದು ಮೂಗಿನ ಮೇಲೆ ಬೆರಳಿಟ್ಟು ಅದನ್ನು ಗಮನಿಸಿದ. ಪ. ಬಂಗಾಳದಲ್ಲಿ ಐತಿಹಾಸಿಕ ಮಹತ್ತ್ವವಿರುವ ಬ್ರಿಗೇಡ್ ಪರೇಡ್ ಮೈದಾನ ಬ್ರಿಟಿಷ್ ಕಾಲದಿಂದಲೇ ರಾಜ್ಯದ ಹೆಗ್ಗುರುತು. ವಿಶಾಲ ಮೈದಾನದ ಸಮೀಪದಲ್ಲೇ ವಸಾಹತುಶಾಹಿಯ ಕುರುಹಾದ ವಿಕ್ಟೋರಿಯಾ ಭವನ ತನ್ನ ಕತೆಯನ್ನು ಹೇಳುತ್ತದೆ. ಅಂಥ ಬ್ರಿಗೇಡ್ ಮೈದಾನ ಮೊನ್ನೆ ಮೊಟ್ಟಮೊದಲ ಬಾರಿಗೆ ತುಂಬಿತ್ತು. ಇದುವರೆಗೆ ಕಾಂಗ್ರೆಸಿಗರು, ಕಮ್ಯುನಿಸ್ಟರು ಮತ್ತು ತೃಣಮೂಲ ಹಲವು ಬಾರಿ ಆ ಮೈದಾನದಲ್ಲಿ ರ‍್ಯಾಲಿ ನಡೆಸಿ ಮೈದಾನ ತುಂಬಿಸಲು ಪ್ರಯತ್ನಿಸಿದರೂ ಇದುವರೆಗೂ ಯಶಸ್ಸು ಕಂಡಿರಲಿಲ್ಲ. ಸುಮಾರು ಐದು ಲಕ್ಷ ಜನ ನೆರೆಯಬಹುದಾದ ಮೈದಾನ ಅಂದು ಹೊಸ ರಾಜಕೀಯ ವ್ಯಾಖ್ಯಾನವನ್ನೂ ನಿರ್ಮಿಸಿತು. ಆಡಳಿತಾರೂಢ ತೃಣಮೂಲ ಕಾಂಗ್ರೆಸ್



ದೌರ್ಜನ್ಯ, ಕೇಂದ್ರವನ್ನು ಲೆಕ್ಕಿಸದಿರುವ ಅದರ ದುಂಡಾವರ್ತನೆಗಳ ತರುವಾಯವೂ ಜನ ಬಿಜೆಪಿಯ ರ‍್ಯಾಲಿಯನ್ನು ಬೆಂಬಲಿಸಿದ್ದರೆಂದರೆ ಬಂಗಾಳ ಬದಲಾಗುತ್ತಿದೆ ಎಂದೇ ಅರ್ಥ.

ರ‍್ಯಾಲಿಗೆ ಡಾರ್ಜಲಿಂಗ್‌ನ ಕೊನೆಯ ಹಳ್ಳಿಯಿಂದ ಪರಗಣ ಜಿಲ್ಲೆಗಳ ಕೊನೆಯ ಹಳ್ಳಿಯವರೆಗೆ, ಕೂಚ್ ಬಿಹಾರಿನ ಪೂರ್ವದಿಂದ ಪುರುಲಿಯಾದ ಪಶ್ಚಿಮ ತುದಿಯವರೆಗೆ ಪ್ರವಾಹದಂತೆ ಜನರು ಆಗಮಿಸಿದ್ದರು. ಕೆಲವು ಜಿಲ್ಲೆಗಳಿಂದ ಕೊಲ್ಕೊತ್ತಾಕ್ಕೆ ರೈಲು ಪ್ರಯಾಣದ ಅವಧಿಯೇ 20 ಗಂಟೆಗಳಿಗೂ ಹೆಚ್ಚು. ಅಂಥ ಸುಧೀರ್ಘ ಪ್ರಯಾಣದಲ್ಲಿ ಸ್ವಂತ ಊಟ ಮತ್ತು ವಸತಿಯ ವ್ಯವಸ್ಥೆಯೊಂದಿಗೆ ಜನರು ಮೋದಿಯವರ ಮಾತನ್ನು ಆಲಿಸಲು ಬಂದಿದ್ದರೆಂದರೆ ಅವರು ವಾಸ್ತವದಿಂದ ಹೊರಗೆ ಬರಲು ತಹತಹಿಸುತ್ತಿದ್ದಾನೆಂದೇ ಅರ್ಥ. ಒಂದು ಕಾಲದಲ್ಲಿ ಇದೇ ಜನರು ಕಾಂಗ್ರೆಸನ್ನು ನಂಬಿ ಗೆಲ್ಲಿಸಿದ್ದರು. ಅನಂತರ ಕಮ್ಯುನಿಸ್ಟರ ಘೋಷಣೆಗಳಿಗೆ ಮರುಳಾಗಿ ಕಾಮ್ರೆಡ್‌ಗಳಿಂದ ಆಳಿಸಿಕೊಂಡಿದ್ದರು. ಕಮ್ಯುನಿಸ್ಟರ ಅರಾಜಕತೆಯನ್ನು ದೂರ ಮಾಡುವ ನೆಪದಲ್ಲಿ ಮಮತಾ ಬ್ಯಾನರ್ಜಿ ರಾಜ್ಯಾದ್ಯಂತ ಚಳವಳಿಯನ್ನು ನಡೆಸಿ ಅಧಿಕಾರಕ್ಕೆ ಬಂದರು. ಆದರೆ ಬಂಗಾಳಕ್ಕೆ ಸಿಕ್ಕಿದ್ದು ಕಮ್ಯುನಿಸ್ಟರಿಗಿಂತ ಹೆಚ್ಚಿನ ದುರಾಡಳಿತ. ಇಂದು ತೃಣಮೂಲ ಕಾಂಗ್ರೆಸಿನ ಪಾಪದ ಕೊಡ ತುಂಬಿದೆ. ಅದಕ್ಕೆ ಸಾಕ್ಷಿ ಕೋಲ್ಕೊತ್ತಾದ ಈ ರ‍್ಯಾಲಿ. ಒಂದು ಮೈದಾನದಲ್ಲಿ ಐದು ಲಕ್ಷಕ್ಕಿಂತಲೂ ಹೆಚ್ಚು ಸೇರುವುದೊಂದು ಸಾಹಸವಾದರೆ, ಆ ಬೃಹತ್ ಸಂಖ್ಯೆಯನ್ನು ಭಾಷಣದವರೆಗೆ ಶಾಂತಿಯುತವಾಗಿ, ಶಿಸ್ತಿನಿಂದ ಕೂರಿಸುವುದು ಇನ್ನೊಂದು ಸಾಹಸ. ಮೋದಿಯವರ ಭಾಷಣವಿದ್ದುದು ಅಪರಾಹ್ನ. ಮುಂಜಾನೆಯಿಂದಲೇ ಮೈದಾನದತ್ತ ಆಗಮಿಸುತ್ತಿದ್ದ ಜನಸಾಗರ ಮಧ್ಯಾಹ್ನದ ಹೊತ್ತಿಗೆ ತುಂಬಿತ್ತೆಂದರೆ ಪಶ್ಚಿಮ ಬಂಗಾಳ ಏನನ್ನು ನಿರೀಕ್ಷಿಸುತ್ತಿದೆ ಎನ್ನುವುದನ್ನು ನಾವು ಅಂದಾಜಿಸಬಹುದು.

ಮೋದಿಯವರು ಸಹಜವಾಗಿಯೇ ಆಕ್ರಮಣಕಾರಿಯಾಗಿ ಮಾತುಗಳನ್ನಾಡಿದರು. ನೊಂದ ಬಂಗಾಳಕ್ಕೆ ಅದರ ಅವಶ್ಯಕತೆ ಇತ್ತು. ಮುಂದಿನ ದಿನಗಳಲ್ಲಿ ಅದರ ಫಲವನ್ನು ಪ.ಬಂಗಾಳದಲ್ಲಿ ಕಾಣಬಹುದು ಎಂಬುದನ್ನು ಕಾರ್ಯಕ್ರಮ ಹೇಳುತ್ತಿತ್ತು.

ವಿಶ್ವಯುದ್ಧ: ಸಾವರ್ಕರ್ ದೃಷ್ಟಿಕೋನ ಹೇಗಿತ್ತು?

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ತಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬದು ಸಾವರ್ಕರ್ ದೃಷ್ಟಿಕೋನವಾಗಿತ್ತು.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಜಾಗತಿಕ ಮಟ್ಟದಲ್ಲಿ ಯುದ್ಧೋನ್ಮಾದ ಹೆಚ್ಚಾಗಿ ಅಮೆರಿಕ, ಇಸ್ರೇಲ್ ಜಂಟಿ ದಾಳಿಯಿಂದ ಇರಾನ್ ಎಂಬ ತೈಲ ಸಂಪದ್ಭರಿತ ರಾಷ್ಟ್ರ ಸ್ಮಶಾನಸದೃಶವಾಗಿರುವುದು, ಇರಾನ್ ಕೂಡ ಅಮೆರಿಕ, ಇಸ್ರೇಲ್ ನೆಲೆಗಳನ್ನು ಧ್ವಂಸಗೊಳಿಸುತ್ತಿರುವುದು, ತತ್ಪರಿಣಾಮವಾಗಿ ಜಾಗತಿಕವಾಗಿ ತೈಲ ಬೆಲೆಯೇರಿಕೆ, ಅಡುಗೆ ಅನಿಲಕ್ಕೆ ತತ್ವಾರ– ಇತ್ಯಾದಿ ಗಂಭೀರ ಸಮಸ್ಯೆ ಉದ್ಭವಿಸಿರುವುದು ವರ್ತಮಾನದ ವಿದ್ಯಮಾನಗಳು.

ಈಗಿನ ಯುದ್ಧದ ಹಿನ್ನೆಲೆಯಲ್ಲಿ, ಹಿಂದೆ ಎರಡನೇ ಜಾಗತಿಕ ಸಮರ ನಡೆದಾಗ ಭಾರತದ ಪರಿಸ್ಥಿತಿ ಹೇಗಿತ್ತು? ಆಗ ವೀರ ಸಾವರ್ಕರ್, ಆ ಯುದ್ಧದಲ್ಲಿ ಪಾರತಂತ್ರ್ಯದಲ್ಲಿ ನರಳುತ್ತಿದ್ದ ಭಾರತದ ನಿಲುವು ಹೇಗಿರಬೇಕೆಂಬುದನ್ನು ತಮ್ಮ ಭಾಷಣ, ಬರೆಹಗಳಲ್ಲಿ ಸೂಚಿಸಿದ್ದರು? ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ದೇಶ ನಾಯಕರ ನಿಲುವು ಹೇಗಿರಬೇಕೆಂದು ಹೇಳಿದ್ದರು? ಮುಂತಾದ ಕುತೂಹಲಕರ ಸಂಗತಿಗಳತ್ತ ಒಮ್ಮೆ ಗಮನಹರಿಸುವ ಪ್ರಯತ್ನ, ಉದ್ದೇಶ ಈ ಲೇಖನದ್ದು.

ಸಾವರ್ಕರ್ ಅಂಡಮಾನ್ ಸೆರೆಯಿಂದ ಬಿಡುಗಡೆಯಾಗಿ ಭಾರತಕ್ಕೆ ಬಂದ ಬಳಿಕ ಹಿಂದು ಮಹಾಸಭಾ ಸ್ಥಾಪಿಸಿ, ಅಖಂಡ ಹಿಂದುಸ್ತಾನದ ಹೋರಾಟದಲ್ಲಿ ಪಾಲ್ಗೊಂಡಿದ್ದರು. 1940ರಲ್ಲಿ ಮಧುರೈಯಲ್ಲಿ ನಡೆದ ಹಿಂದು ಮಹಾಸಭಾದ ವಾರ್ಷಿಕ ಅಧಿವೇಶನದ ಅಧ್ಯಕ್ಷತೆ ವಹಿಸಿ ದೀರ್ಘ ಭಾಷಣ ಮಾಡಿದ ಸಾವರ್ಕರ್, ಆಗ ನಡೆಯುತ್ತಿದ್ದ ವಿಶ್ವ ಯುದ್ಧದ ಬಗ್ಗೆಯೂ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರು. ಸಾವರ್ಕರ್ ಮಾತುಗಳಲ್ಲೇ ಅದನ್ನು ಕೇಳಿ:

“ಎರಡನೇ ವಿಶ್ವಯುದ್ಧಕ್ಕೆ ಯಾವುದೇ ಘನ ಉದ್ದೇಶವಿಲ್ಲ. ಯಾವ ನೈತಿಕ ಕಾರಣವೂ ಇಲ್ಲ. ಯುದ್ಧನಿರತ ಇಂಗ್ಲೆಂಡ್, ಅಮೆರಿಕಾ, ರಷ್ಯಾ, ಜಪಾನ್, ಜರ್ಮನಿ, ಫ್ರಾನ್ಸ್, ಇಟಲಿ ಇತ್ಯಾದಿ ದೇಶಗಳಿಗೆ ಯಾವುದೇ ಉದಾತ್ತ ಉದ್ದೇಶವೂ ಇಲ್ಲ. ಎಲ್ಲರೂ ಸ್ವಾರ್ಥಿಗಳೇ. ಎಲ್ಲರೂ ಕಳ್ಳರೇ. ಕಳ್ಳನ ನಡೆಯನ್ನು ಕಳ್ಳನೇ ಬಲ್ಲ.... ಯುದ್ಧದ ಕುರಿತಂತೆ ಹಿಂದು ಮಹಾಸಭಾ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ನಿಲುವುಗಳು ಭಿನ್ನವಾಗಿವೆ. ಕಾಂಗ್ರೆಸ್ ಇಂಗ್ಲೆಂಡ್, ಅಮೆರಿಕಗಳ ಉದಾತ್ತ ನೀತಿಯನ್ನು ಸಮರ್ಥಿಸುತ್ತಿದೆ. ಕಾಂಗ್ರೆಸ್‌ನ ಸ್ವಯಂಭೂ ನೇತಾರ ಸರ್ವಾಧಿಕಾರಿ ಗಾಂಧೀಜಿಯವರು ಅದರ ಪ್ರಬಲ ಸಮರ್ಥಕರಾಗಿದ್ದಾರೆ. ಗಾಂಧೀಜಿ ಪ್ರಕಾರ, ‘ಯುದ್ಧದ ಸಂದರ್ಭದಲ್ಲಿ ಸ್ವಾತಂತ್ರ್ಯದ ಬೇಡಿಕೆ ಇಡುವುದು ಸರಿಯಲ್ಲ. ಈ ಸಂದರ್ಭದಲ್ಲಿ ಇಂಗ್ಲೆಂಡ್, ಫ್ರಾನ್ಸ್‌ಗಳ ರಕ್ಷಣೆಯೇ ಮುಖ್ಯ. ಪ್ರಜಾತಂತ್ರದ ರಕ್ಷಣೆಗಾಗಿ ನಾವು ಈಗ ಯಾವುದೇ ಷರತ್ತಿಲ್ಲದೆ ಆ ದೇಶಗಳ ಪರವಾಗಿ ನಿಲ್ಲಬೇಕು. ಅವರಿಗೆ ಸಹಾಯ ಮಾಡಬೇಕು. ಅದಕ್ಕಾಗಿ ಭಾರತೀಯರು ಸಿದ್ಧರಾಗಿರಬೇಕು’ ನೆಹರೂ ಹೇಳುವಂತೆ, ‘ಫ್ರಾನ್ಸ್, ಇಂಗ್ಲೆಂಡ್‌ಗಳಿಗೆ ಪ್ರಜಾತಂತ್ರದ ಉಳಿವಿಗಾಗಿ ಸಹಾಯ ಮಾಡಲು ನಾವು ತಯಾರಾಗಿರಬೇಕು. ಏಕೆಂದರೆ ಆ ದೇಶಗಳ ಮೇಲೆ ಸಾಮ್ರಾಜ್ಯವಾದಿ ಜರ್ಮನಿ ಆಕ್ರಮಣ ಮಾಡಿದೆ’

ಆದರೆ ಯುದ್ಧದ ಕುರಿತಂತೆ ಹಿಂದು ಮಹಾಸಭಾದ ನಿಲುವು ತೀರಾ ಭಿನ್ನವಾಗಿದೆ. ನಮ್ಮ ಪ್ರಕಾರ, ಯುದ್ಧನಿರತ ಯುರೋಪಿನ ದೇಶಗಳಿಗೆ ಯಾವುದೇ ಘನವಾದ ಉದ್ದೇಶವಿಲ್ಲ. ಪ್ರಜಾತಂತ್ರ ಸ್ಥಾಪನೆ ಅಥವಾ ತತ್ವ, ಸಿದ್ಧಾಂತಗಳ ಪ್ರತಿಷ್ಠಾಪನೆ ಇತ್ಯಾದಿ ಯಾವ ಉದಾತ್ತ ಕಾರಣವೂ ಅದರಲ್ಲಿಲ್ಲ. ಯುದ್ಧ ನಡೆಯುತ್ತಿರುವುದು ಕೇವಲ ಸ್ವಾರ್ಥಕ್ಕಾಗಿ, ಪ್ರತಿಷ್ಠೆಗಾಗಿ, ಅಷ್ಟೆ. ತಮಾಷೆಯೆಂದರೆ ಇಂಗ್ಲೆಂಡ್‌ನ ಚರ್ಚಿಲ್ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ಗೆ ಹೇಳಿದ–ಪೋಲೆಂಡ್ ಅನ್ನು ಬಿಟ್ಟುಬಿಡು ಎಂದು. ಆಗ ಹಿಟ್ಲರ್ ಹೇಳಿದ್ದು – ಸರಿ, ನಾನು ಪೋಲೆಂಡ್ ಅನ್ನು ಬಿಡುವೆ. ಆದರೆ ನೀವು (ಇಂಗ್ಲೆಂಡ್) ಹಿಂದುಸ್ತಾನವನ್ನು ಬಿಡುವಿರಾ? ಅದಕ್ಕೇ ಹೇಳುವುದು– ಕಳ್ಳನೇ ಕಳ್ಳನ ನಡೆಯನ್ನು ಬಲ್ಲ. ಏಕೆಂದರೆ ಎಲ್ಲರೂ ಕಳ್ಳರೇ ಆಗಿದ್ದಾರೆ!

ತಮ್ಮ ತಮ್ಮ ಸಾಮ್ರಾಜ್ಯಗಳ ರಕ್ಷಣೆ, ವಸಾಹತುಗಳ ವಿಸ್ತರಣೆ ಮತ್ತು ಅದರ ಸ್ಥಿರತೆಗಾಗಿ ಯುರೋಪಿನ ದೇಶಗಳು ಯುದ್ಧದಲ್ಲಿ ನಿರತವಾಗಿವೆ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ರಷ್ಯಾ, ಚೀನಾ ಇತ್ಯಾದಿ ಎಲ್ಲ ದೇಶಗಳೂ ಸಾಮ್ರಾಜ್ಯವಾದಿ ದೇಶಗಳೇ. ಆದರೆ ಆ ದೇಶಗಳು ಬಳಸುವುದು ಮಾತ್ರ ಪ್ರಜಾತಂತ್ರದ ರಕ್ಷಣೆ ಎಂಬ ಘೋಷಣೆ. ಇಂತಹ ಸಾಮ್ರಾಜ್ಯಶಾಹಿ ದೇಶಗಳ ಕಪಿಮುಷ್ಟಿಯಲ್ಲಿ ಸಿಲುಕಿದ ಏಷ್ಯಾ, ಆಫ್ರಿಕಾ, ಯುರೋಪಿನ ಹಲವಾರು ದೇಶಗಳು ದಾಸ್ಯದಲ್ಲಿ ನರಳಿ ನರಳಿ ಸಾಯುತ್ತಿವೆ....



ಎರಡನೇ ವಿಶ್ವಯುದ್ಧ ಹಿನ್ನೆಲೆಯಲ್ಲಿ ವಿಭಿನ್ನ, ವಿಚಿತ್ರ ವಾದ(ಇಸಂ) ಕೇಳಿಬರುತ್ತಿದೆ. ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ವಸಾಹತುಶಾಹಿ, ನಾಝಿಸಂ, ಫ್ಯಾಸಿಸಂ, ಸೋಶಿಯಲಿಸಂ ಇತ್ಯಾದಿ ಎಲ್ಲವೂ ಒಂದೇ ಚೀಲದೊಳಗಿರುವ ಬೇರೆ ಬೇರೆ ಪದಗಳು. ಇವರೆಲ್ಲರ ಉದ್ದೇಶ ಒಂದೇ– ತಮ್ಮ ತಮ್ಮ ಸಾಮ್ರಾಜ್ಯದ (ವಸಾಹತು) ಹಿತರಕ್ಷಣೆ ಹಾಗೂ ವಿಸ್ತರಣೆ. ಅದಕ್ಕಾಗಿ ಕತ್ತಿಯ ಬಲಪ್ರಯೋಗ ಮತ್ತು ಅದರ ಬಲದಿಂದ ಗೆಲ್ಲುವ ಪ್ರಯತ್ನ. ಜಿಸ್‌ಕೀ ಲಾಠೀ ಉಸ್‌ಕೀ ಭೈಂಸ್(ಲಾಠಿ ಉಳ್ಳವನದ್ದೇ ಕೋಣ). ಹಾಗಾಗಿ ಯುದ್ಧನಿರತ ದೇಶಗಳ ಮೂಲ ಉದ್ದೇಶವನ್ನೇ ಅರ್ಥ ಮಾಡಿಕೊಳ್ಳದೆ ಕೇವಲ ಆಕರ್ಷಕ ಘೋಷಣೆಗೆ ಮರುಳಾಗಿ ಬೆಂಬಲ, ಸಮರ್ಥನೆ ನೀಡುವುದು ಮೂರ್ಖತನವಷ್ಟೇ ಅಲ್ಲ, ಆತ್ಮಹತ್ಯಾಕಾರಕವೂ ಹೌದು.

ಹಿಟ್ಲರ್‌ನನ್ನು ರಾಕ್ಷಸ, ನಾಝೀವಾದಿ, ಸರ್ವಾಧಿಕಾರಿ, ಕ್ರೂರಿ ಹಾಗೂ ಚರ್ಚಿಲ್‌ನನ್ನು ಪ್ರಜಾತಂತ್ರವಾದಿ, ದೇವದೂತ ಎಂಬಂತೆ ಬಣ್ಣಿಸುವುದು ಎರಡೂ ಮೂರ್ಖತನವೇ. ಇಬ್ಬರೂ ಒಂದೇ. ಜರ್ಮನಿಗೆ ನಾಝಿಸಂ,ರಷ್ಯಾಕ್ಕೆ ಬೋಲ್ಶೇಯಿಸಂ, ಇಟಲಿಗೆ ಫ್ಯಾಸಿಸಂ ಲಾಭದಾಯಕವೇ. ಪ್ರಜಾತಂತ್ರ ಸ್ಥಾಪನೆಗಾಗಿ ಇಂಗ್ಲೆಂಡ್ ತೆತ್ತ ಬೆಲೆ ಎಷ್ಟು ಎಂಬುದು ನಮಗೆ ತಿಳಿದೇ ಇದೆ.

ರಾಜನೀತಿಯಲ್ಲಿ ವಾಸ್ತವಿಕ ಕಾರ್ಯನೀತಿ, ಪದ್ಧತಿ ಹೇಗಿರಬೇಕು, ಅದು ಹೇಗೆ ವ್ಯಾವಹಾರಿಕವಾಗಿರಬೇಕು ಎಂಬುದು ಚಿಂತನಾರ್ಹ ಸಂಗತಿ. ರಾಜನೀತಿ ಶಾಸ್ತ್ರ ಮತ್ತು ವಿಶ್ವದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸಿದ್ಧಾಂತವಿದೆ. ಹಾಗೆಯೇ ಜಗತ್ತಿನ ಎಲ್ಲ ಜನರಿಗೆ ಎಲ್ಲ ಕಾಲಕ್ಕೂ ಉಪಯುಕ್ತವಾದ ಘಟನಾವಳಿ ಇಲ್ಲವೇ ಸಮಾಜ ರಚನಾ ಪದ್ಧತಿ (ಸಾಮಾಜಿಕ ವ್ಯವಸ್ಥೆ)ಗಳು ಶಾಶ್ವತವಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ.

ಪ್ರಜಾತಾಂತ್ರಿಕ ಮೌಲ್ಯಗಳು, ವೈಯಕ್ತಿಕ ಸ್ವಾತಂತ್ರ್ಯ ಇತ್ಯಾದಿ ವಿಷಯಗಳಲ್ಲಿ ಆಂಗ್ಲರಿಗಿರುವ ನಂಬಿಕೆ, ಬದ್ಧತೆಗಳನ್ನು ಸರಿಗಟ್ಟುವವರು ಜಗತ್ತಿನಲ್ಲಿ ಯಾರೂ ಇಲ್ಲ, ನಿಜ. ಆದರೆ ಯುದ್ಧ ಪ್ರಾರಂಭವಾಗುತ್ತಿದ್ದಂತೆಯೇ ಅವರು ತಮ್ಮ ಸಂವಿಧಾನ, ಪ್ರಜಾತಾಂತ್ರಿಕ ಮೌಲ್ಯ ಆದಿಗಳನ್ನು ಬದಿಗಿಟ್ಟು ಯುದ್ಧ ತಂತ್ರವನ್ನಷ್ಟೇ ಅನುಸರಿಸುವುದು ಯಾಕೆ? ಜರ್ಮನಿಯಲ್ಲಾದರೋ ಹಿಟ್ಲರನ ಮಾತೇ ಕಾನೂನು. ಇಂಗ್ಲೆಂಡ್‌ನ ಚರ್ಚಿಲ್‌ನದ್ದೂ ಅದೇ ರೀತಿ. ಜರ್ಮನಿ ಸಾಮ್ರಾಜ್ಯವಾದಿ ದೇಶ. ಹಿಟ್ಲರ್‌ನದು ನಾಝೀವಾದ. ಅವರದ್ದು ಆಕ್ರಮಕ ನೀತಿ. ಆದ್ದರಿಂದ ಜರ್ಮನ್ ವಿರುದ್ಧ ಭಾರತೀಯರು ಹೋರಾಡಲೇಬೇಕು, ಅದು ಭಾರತೀಯರ ಕರ್ತವ್ಯವೆಂದೋ ಅಥವಾ ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್‌ಗಳು ಪ್ರಜಾತಂತ್ರದ ಸಮರ್ಥಕರು, ಹಾಗಾಗಿ ಅವರನ್ನು ಬೆಂಬಲಿಸಬೇಕೆಂದೋ ಹೇಳುವುದು ಸರಿಯಲ್ಲ. ಏಕೆಂದರೆ ಹಾಗೆ ಹೇಳುವುದರಲ್ಲಿ ಯಾವುದೇ ಸತ್ಯವಿಲ್ಲ.

ಹಾಗಾಗಿ ಯುದ್ಧದ ಈ ಸಂದರ್ಭದಲ್ಲಿ ಯಾವ ದೇಶ ಹಿಂದುಸ್ತಾನದ ಹಿತ ರಕ್ಷಿಸಬಲ್ಲುದೋ ಅದೇ ನಮ್ಮ ಮಿತ್ರದೇಶ. ಅದೇ ನಮ್ಮ ವಾಸ್ತವಿಕ, ವ್ಯಾವಹಾರಿಕ ಮತ್ತು ರಾಜನೈತಿಕ ಕಾರ್ಯನೀತಿಯಾಗಬೇಕು. ಅವರು (ಆ ದೇಶಗಳು) ಯಾವ ವಾದ(ಇಸಂ)ಕ್ಕೆ ಸೇರಿದ್ದರೂ ಸರಿಯೇ, ನಮ್ಮ ಹಿತರಕ್ಷಕ ದೇಶವೇ ನಮ್ಮ ಮಿತ್ರ.

ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್, ಜರ್ಮನಿ, ರಷ್ಯಾ ಮತ್ತಿತರ ದೇಶಗಳು ಪರಸ್ಪರ ಯುದ್ಧ ಮಾಡಿರುವ ನಿದರ್ಶನಗಳಿವೆ. ಉದಾಹರಣೆಗೆ–ಇಂಗ್ಲೆಂಡ್ ವಿರುದ್ಧ ಅಮೆರಿಕಾ, ಇಂಗ್ಲೆಂಡ್ ವಿರುದ್ಧ ಫ್ರಾನ್ಸ್, ಜರ್ಮನಿ ವಿರುದ್ಧ ಫ್ರಾನ್ಸ್ ಇತ್ಯಾದಿ. ಅಮೆರಿಕನ್ನರು ತಮ್ಮ ಸ್ವಾತಂತ್ರ್ಯಕ್ಕಾಗಿ ಬ್ರಿಟನ್ ವಿರುದ್ಧವೇ ಹೋರಾಡಿದ್ದಾರೆ. ಈ ಎಲ್ಲ ಯುದ್ಧಗಳಿಗೆ ಮೂಲ ಕಾರಣ– ಸಾಮ್ರಾಜ್ಯ ವಿಸ್ತರಣೆ. ಇನ್ನು ನಾಝಿಗಳು ಮತ್ತು ಬೋಲ್ಶೆವಿಕರು ಕಟ್ಟರ್ ಶತ್ರುಗಳು. ಆದರೆ ಪೋಲೆಂಡ್ ಪ್ರಶ್ನೆ ಬಂದಾಗ ಇಬ್ಬರೂ ಒಂದಾದರು. ಒಂದು ಕಾಲಘಟ್ಟದಲ್ಲಿ ಪರಸ್ಪರ ಕತ್ತಿ ಹಿಡಿದು ಯುದ್ಧ ಮಾಡಿದ್ದವರು. ಇಂದು ಅನಿವಾರ್ಯವಾಗಿ ಮಿತ್ರರಾಗಿದ್ದಾರೆ. ಕಾಲಕ್ಕೆ ತಕ್ಕಂತೆ ಕೋಲ ಕಟ್ಟುವವರಂತೆ, ಅಷ್ಟೇ. ಇದು ಸಮಯಸಾಧಕ ನೀತಿ. ಅನುಕೂಲಸಿಂಧು ಶಾಸ್ತ್ರ. ಒಂದು ಕಾಲದ ಮಿತ್ರರು ಇದೀಗ ಶತ್ರುಗಳಾಗಿದ್ದಾರೆ. ಶತ್ರು ಪಕ್ಷದಲ್ಲಿದ್ದವರು ಮಿತ್ರರಾಗಿದ್ದಾರೆ. ಇದಕ್ಕೆ ಯಾವ ನೈತಿಕ ಆಧಾರವೂ ಇಲ್ಲ.

ಶತ್ರು ಇನ್ನೊಂದು ದೇಶದೊಂದಿಗೆ ಯುದ್ಧ ನಿರತನಾಗಿರುವಾಗ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಸಶಸ್ತ್ರ ಕ್ರಾಂತಿ ಮಾಡುವುದು ಗುಲಾಮೀ ದೇಶದ ಜನರ ಪ್ರಮುಖ ದಾರಿಯಾಗಿದೆ ಎಂದು ಸಾಕ್ರಟೀಸ್ ಹೇಳಿದ್ದಾನೆ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ನಮ್ಮನ್ನು ನಿಃಶಸ್ತ್ರರನ್ನಾಗಿ ಮಾಡಲಾಗಿದೆ.... ಅಹಿಂಸಾವಾದ ಮಾರ್ಗ ನೈತಿಕ ಮತ್ತು ವ್ಯಾವಹಾರಿಕ ದೃಷ್ಟಿಯಿಂದಲೂ ತ್ಯಾಜ್ಯವೇ ಸರಿ. ಯುದ್ಧನೀತಿ ಶಾಸ್ತ್ರದಲ್ಲಿ ವ್ಯಾವಹಾರಿಕ ದೃಷ್ಟಿಕೋನಕ್ಕೇ ಮಹತ್ವ. ವ್ಯಾವಹಾರಿಕ ದೃಷ್ಟಿಕೋನವೇ ನೀತಿಶಾಸ್ತ್ರದ ಆಧಾರ. ಮಾನದಂಡ. ನೀತಿ–ಅನೀತಿ, ನ್ಯಾಯ–ಅನ್ಯಾಯ. ಒಳಿತು– ಕೆಡುಕು, ಸದ್ಗುಣ–ದುರ್ಗುಣ ಇತ್ಯಾದಿಗಳಿಗೆ ವ್ಯವಹಾರವೇ ಆಧಾರ. ಅದನ್ನು ವ್ಯಾವಹಾರಿಕ ಮಾನದಂಡದಿಂದ ನಿರ್ಧರಿಸಬೇಕು ಎನ್ನುತ್ತಾರೆ ನೀತಿಶಾಸ್ತ್ರಜ್ಞರು. ಮಾನವ ಬದುಕಿಗೆ ಉಪಯುಕ್ತವಾದ ಆಚಾರ–ವಿಚಾರಗಳೆಲ್ಲ ನೀತಿಸಮ್ಮತವಾದವುಗಳೇ. ಅಹಿಂಸಾವಾದ ವ್ಯವಹಾರ ಯೋಗ್ಯವಲ್ಲ....”

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ತಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬದು ಸಾವರ್ಕರ್ ದೃಷ್ಟಿಕೋನವಾಗಿತ್ತು. ವರ್ತಮಾನದ ಅಮೆರಿಕಾ–ಇರಾನ್ ಯುದ್ಧದಲ್ಲೂ ಅಷ್ಟೆ. ಆ ದೇಶಗಳು ಎಷ್ಟಾದರೂ ಬಡಿದಾಡಿಕೊಳ್ಳಲಿ. ಆದರೆ ಅದರಿಂದ ಭಾರತಕ್ಕೆ, ಇಲ್ಲಿನ ಜನಜೀವನಕ್ಕೆ ತೊಂದರೆ ಆಗುತ್ತದೆ ಎಂದಾದರೆ ಭಾರತ ಸರಕಾರವು ಅಮೆರಿಕ, ಇಸ್ರೇಲ್ ಮತ್ತು ಇರಾನ್ – ಈ ಎಲ್ಲ ದೇಶಗಳ ಮೇಲೆ ಒತ್ತಡ ಹೇರಿ ಯುದ್ಧ ಸ್ಥಗಿತಕ್ಕೆ ಆದ್ಯತೆ ನೀಡಬೇಕಾಗಿದೆ. ಅಂತಿಮವಾಗಿ ನಮಗೆ ನಮ್ಮ ದೇಶದ ಹಿತವೇ ಮುಖ್ಯವಾಗಬೇಕಾಗಿದೆ.

(ಆಧಾರ: Hindu Rashtra Darshan by Veer Sarvarkar, ಪ್ರಕಾಶಕರು: ಪ್ರಭಾತ್ ಪ್ರಕಾಶನ, ನವದೆಹಲಿ)


ಹರೆಯದವರ ಒತ್ತಡಗಳು

ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗಬೇಕು.

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ರಾಮು ಈಗ ಎರಡನೇ ಪಿಯುಸಿಯಲ್ಲಿ ಓದುತ್ತಿದ್ದಾನೆ. ಒಂಭತ್ತನೇ ತರಗತಿಯಲ್ಲಿ ಒಳ್ಳೆಯ ಅಂಕ ಗಳಿಸಿದ್ದ ರಾಮುವಿಗೆ ಹತ್ತನೇ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದವು. ಇದರಿಂದ ಅವನು ಮನೆಯವರಿಂದ ಹಲವಾರು ಟೀಕೆ ಟಿಪ್ಪಣಿಗಳನ್ನು ಎದುರಿಸಬೇಕಾಗಿ ಬಂತು. ನೀನು ಸರಿಯಾಗಿ ಓದಲಿಲ್ಲ, ಆಟ ಆಟ ಅಂತ ಟೈಮು ಕಳೆದೆ. ಅದಕ್ಕಾಗಿ ನಿನಗೆ ಕಡಿಮೆ ಅಂಕಗಳು ಬಂದವು ಎಂದು ಅಪ್ಪ ಹೇಳಿದರೆ, ಅಮ್ಮ ನೋಡು ನಿನ್ನ ಅಕ್ಕ ಚೆನ್ನಾಗಿ ಓದಿ ಹತ್ತನೇ ತರಗತಿಯಲ್ಲಿ ತೊಂಭತ್ತು ಪರ್ಸೆಂಟ್ ತಗೊಂಡಿದ್ಲು. ಈಗ ನೋಡು, ನಿನಗೆ ನಾವು ಏನು ಮಾಡ್ಬೇಕೂ ಅಂತಾ ಗೊತ್ತಾಗ್ತಿಲ್ಲ. ಅದೂ ಅಲ್ದೇ ನೋಡೋರ ಮುಂದೆ ತಲೆ ತಗ್ಗಿಸಬೇಕು ಎಂಬ ಟೀಕೆ. ಅವೆಲ್ಲವನ್ನೂ ಸಹಿಸಿಕೊಂಡ ರಾಮುವಿಗೆ ಮೊದಲನೇ ಪಿಯುಸಿಯಲ್ಲಿ ಒಳ್ಳೆಯ ಅಂಕಗಳು ಬಂದರೂ, ಅಕ್ಕನಿಗಿಂತ ಕಡಿಮೆಯಾಗಿತ್ತು. ಹೇಗಾದರೂ ಮಾಡಿ ಎರಡನೇ ಪಿಯುಸಿಯಲ್ಲಿ ಒಳ್ಳೆಯ ಅಂಕ ಪಡೆದು ಎಲ್ಲರಿಂದಲೂ ಹೊಗಳಿಸಿಕೊಳ್ಳಬೇಕೆಂಬ ಹಂಬಲ ರಾಮುವಿಗೆ. ಅದಕ್ಕಾಗಿ ಆಟವಾಡುವುದನ್ನು ಬಿಟ್ಟ, ಕಾಲೇಜಿನ ಯಾವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸ್ನೇಹಿತರೊಂದಿಗೆ ಬೆರೆಯುತ್ತಿರಲಿಲ್ಲ. ದಿನದ ಇಪ್ಪತ್ನಾಲ್ಕು ಗಂಟೇನೂ ಓದು ಓದು ಓದು. ಆದರೂ ಕೊನೆಗೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳು ಬರಲಿಲ್ಲ.



ಹರೆಯದವರಲ್ಲಿ ಒತ್ತಡ ತರುವ ಮುಖ್ಯವಾದ ಅಂಶವೆಂದರೆ ಪಾಠ ಮತ್ತು ಪರೀಕ್ಷೆ. ಪೋಷಕರು, ಉಪಾಧ್ಯಾಯರು, ಸ್ನೇಹಿತರು ಅಥವಾ ಸಂಬಂಧಿಕರೇ ಆಗಲಿ ಎಲ್ಲರ ಗಮನವೂ ತಮ್ಮ ಮಗ/ಮಗಳು ಎಷ್ಟು ಅಂಕ ಗಳಿಸುತ್ತಾರೆಂಬುದು. ಇದಕ್ಕೆ ಅವರು ಮಾಡುವ ಟೀಕೆ ಟಿಪ್ಪಣಿಗಳು. ಕೆಲವು ವಿದ್ಯಾರ್ಥಿಗಳು ಒತ್ತಡವನ್ನು ತಡೆಯಲಾರದೇ ಖಿನ್ನತೆಗೆ ಒಳಗಾಗುತ್ತಾರೆ. ಕೆಲವರು ರಾಮುವಿನ ಹಾಗೆ, ಪಠ್ಯೇತರ ಚಟುವಟಿಕೆಗಳನ್ನು ಬಿಟ್ಟು, ಬೇರೆ ಪ್ರಪಂಚವೇ ಇಲ್ಲವೆಂಬಂತೆ ಓದುವುದರಲ್ಲಿ ಮಗ್ನರಾಗುತ್ತಾರೆ. ಇದರಿಂದ ಅವರ ಒತ್ತಡ ಇನ್ನಷ್ಟು ಹೆಚ್ಚಾಗುತ್ತದೆಯೇ ವಿನಃ ಕಲಿಕೆಯಲ್ಲಿ ಉತ್ತಮವಾಗಲು ಸಾಧ್ಯವಿಲ್ಲ. ಇಂಗ್ಲೀಷಿನ "All study no play makes jack a dull boy" ಅಂದರೆ, ಜಾಣನೂ ಓದಿನಲ್ಲಿ ಮಗ್ನನಾಗಿ ಮರುಳಾದ ಕೂಚು ವಿದ್ಯಾರ್ಥಿಯಾಗುತ್ತಾನೆ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು.

ಸಾಮಾಜಿಕವಾಗಿ ಹರೆಯದವರು ಎದುರಿಸಬೇಕಾದ ಒತ್ತಡಗಳು ಹಲವು. ಮುಖ್ಯವಾಗಿ, ಹಿರಿಯರು ಮತ್ತು ಇತರರು ಹೇಳುವ, ನೀನು ಕುಡುಮಿ, ಬುದ್ಧು, ಎಂಬ ಟೀಕೆ ಟಿಪ್ಪಣಿಗಳು. ಉದಾಹರಣೆಗೆ ನೀನು ಕುಳ್ಳ ಕಣೋ, ನೋಡು ಅವನು ಎಷ್ಟು ಎತ್ತರವಾಗಿದ್ದಾನೆ. ನೀನೇನೋ ಇನ್ನೂ ಹೆಣ್ಣು ಆಗಿದೀಯ, ಜೋರು ಇರಬೇಕು ಕಣೋ, ಯಾಕೋ ಒಂಥರಾ ಇದೀಯಾ, ನಮ್ಮ ಜೊತೆಗೆ ಸೇರೋಲ್ಲ ಎಂಬ ಸ್ನೇಹಿತರ ಹೋಲಿಕೆಯ ಮಾತುಗಳು. ನಿನಗೆ ಲವ್ ಮಾಡೋದಕ್ಕೆ ಬರೋಲ್ಲ ಕಣೋ. ನೋಡು ಅವನು ಎಷ್ಟು ಧೈರ್ಯದಿಂದ ಮಾತಾಡ್ತಾನೆ. ಯಾರನ್ನಾದ್ರೂ ಲವ್ ಮಾಡ್ಬೇಕು ಕಣೋ ಅದು ಖುಷಿ ಕೊಡುತ್ತೆ ಎಂಬ ಸ್ನೇಹಿತರ ಉಚಿತ ಸಲಹೆಗಳು ಕೂಡ ಹರೆಯದವರ ಮನಸ್ಸಿನಲ್ಲಿ ತಡೆಯಲಾರದ ಒತ್ತಡವನ್ನುಂಟು ಮಾಡುತ್ತದೆ.

ಕಲುಷಿತ ಕೌಟುಂಬಿಕ ವಾತಾವರಣವೂ ಹರೆಯದವರ ಮನಸ್ಸನ್ನು ಇನ್ನಿಲ್ಲದ ಒತ್ತಡಕ್ಕೀಡು ಮಾಡುತ್ತದೆ. ಪೋಷಕ ದಂಪತಿಗಳ ಮಧ್ಯೆ ಜಗಳ, ವಿವಾಹ ವಿಚ್ಛೇಧನ, ಪೋಷಕರ ಅತಿಯಾದ ನಿರೀಕ್ಷೆ, ನಕಾರಾತ್ಮಕ ಸ್ವಭಾವದ ಪೋಷಕರು, ಆರ್ಥಿಕ ಮುಗ್ಗಟ್ಟು ಮತ್ತು ಸದಾ ಮಕ್ಕಳ ಕುರಿತು ಕೀಳು ನುಡಿಗಳನ್ನಾಡುವ ಕೆಲವು ಪೋಷಕರ ಹೀಗೆ ಇರಬೇಕು, ನಾವು ಹೇಳಿದ ಹಾಗೇ ಕೇಳಬೇಕು ಎಂಬ ಪೋಷಕರ ಕಠಿಣ ನಿರ್ದೇಶನಗಳು ಸಹ ಕುಟುಂಬದ ವಾತಾವರಣವನ್ನು ಕಲುಷಿತ ಗೊಳಿಸುತ್ತದೆ. ಇದು ಹರೆಯದವರ ಒತ್ತಡಕ್ಕೆ ಕಾರಣ.

ಹರೆಯದವರನ್ನು ಒತ್ತಡಕ್ಕೀಡು ಮಾಡುವ ಮತ್ತೊಂದು ಅಂಶ ‘ತನ್ನತನ’ವನ್ನು ಕಂಡುಕೊಳ್ಳುವ ತವಕ, ತಾನು ಹೇಗೆ ಬೇರೆಯಾಗಿ ಕಾಣಬೇಕು, ತನ್ನನ್ನು ಯಾರು ಗುರುತಿಸುತ್ತಾರೆ, ಯಾರ ಹಾಗೆ ಕಂಡರೆ ಚೆನ್ನ ಮತ್ತು ಯಾರಂತಾಗಬೇಕು ಎಂಬ ಹಲವಾರು ಪ್ರಶ್ನೆಗಳು. ತಾನು ಯಾರಂತೆ ಆಗಬೇಕು? ಯಾವ ಉಡುಪು ಧರಿಸಿದರೆ, ಎಲ್ಲರಿಗಿಂತ ಸುಂದರವಾಗಿ ಕಾಣುತ್ತೇನೆ? ಯಾವ ಉದ್ಯೋಗ ಆರಿಸಿಕೊಂಡರೆ ಒಳ್ಳೆಯದು? ಎಂಬ ಹಲವಾರು ಯೋಚನೆಗಳಿಂದ ‘ತನ್ನತನ’ವನ್ನು ಕಂಡುಕೊಳ್ಳುವುದು ಹರೆಯದವರಿಗೆ ಒತ್ತಡವನ್ನುಂಟು ಮಾಡುತ್ತದೆ.

ಮನೋವಿಕಾಸದಿಂದ, ತನ್ನ ಮುಂದಿನ ನಡೆ ಏನು? ಓದು ಮುಗಿಸಿದ ನಂತರ ಮುಂದೇನು? ತಾನು ಯಾವ ಹುದ್ದೆ ಆರಿಸಿಕೊಳ್ಳಬೇಕು, ಅದರಲ್ಲಿ ಸಾಧನೆ ಮಾಡುವುದು ಸಾಧ್ಯವೇ? ತನ್ನ ಸ್ನೇಹಿತರು ಯಾವ ವೃತ್ತಿಯನ್ನು ಆರಿಸಿಕೊಳ್ಳುತ್ತಾರೆ. ಮುಂದಿರುವ ಆಗು ಹೋಗುಗಳನ್ನು ನಿಭಾಯಿಸುವುದು ಹೇಗೆ? ಅದು ತಂನ್ನಿಂದ ಸಾಧ್ಯವೇ ಎಂಬ ಹಲವು ಪ್ರಶ್ನೆಗಳು ಹರೆಯದವರನ್ನು ಒತ್ತಡಕ್ಕೀಡು ಮಾಡುತ್ತವೆ.

ಸಾಮಾಜಿಕ ಜಾಲತಾಣಗಳಾದ, ಫೇಸ್‌ಬುಕ್, ವಾಟ್ಸ್‌ಅಪ್, ಯೂಟ್ಯೂಬ್, ಟ್ವಿಟರ್, ಟಿ.ವಿ. ಮುಂತಾದ ಸಾಮಾಜಿಕ ಮಾಧ್ಯಮಗಳಲ್ಲಿ ಆಕರ್ಷಕ ಜಾಹೀರಾತುಗಳು, ಕೆಲವು ಅಸಹಜವಾದ ದೃಶ್ಯಗಳನ್ನು ಅತ್ಯಾಕರ್ಷಕವಾಗಿ ತೋರಿಸುತ್ತಾರೆ. ಅಪಕ್ವವಾದ ಹರೆಯದ ಮನಸ್ಸಿಗೆ ಇವುಗಳಲ್ಲಿ ಯಾವುದು ಸಹಜ? ಯಾವುದು ಅಸಹಜ? ಅದರಿಂದ ತನ್ನ ಭವಿಷ್ಯಕ್ಕೆ ಏನು ಉಪಯೋಗವಾಗುತ್ತದೆ ಎಂಬ ಗೊಂದಲ ಉಂಟಾಗುತ್ತದೆ. ಅದರಂತೆ ಸನ್ಮಾರ್ಗ ತೆಗೆದುಕೊಳ್ಳಬೇಕು. ಇವೂ ಸಹ ಹರೆಯದ ಮನಸ್ಸನ್ನು ಒತ್ತಡಕ್ಕೀಡುಮಾಡುತ್ತವೆ.

ಪರಿಣಾಮಗಳು: ಮೇಲಿನ ಒತ್ತಡಗಳ ಪರಿಣಾಮ ಹರೆಯದ ಮನಸ್ಸು ಸದಾ ಗೊಂದಲದಿಂದ ಕೂಡಿರುತ್ತದೆ. ಇದರಿಂದ ಯೋಚನೆಗಳು ಹೊಳೆಯುವುದಿಲ್ಲ. ತನ್ನ ಭವಿಷ್ಯವೇ ಕತ್ತಲಾದಂತೆನಿಸುತ್ತದೆ. ಓದಲು ಆಸಕ್ತಿ ಕಡಿಮೆಯಾಗುತ್ತದೆ. ಆತ್ಮವಿಶ್ವಾಸದ ಕೊರತೆ ಉಂಟಾಗುತ್ತದೆ. ತನ್ನನ್ನು ಕುರಿತು ನಕಾರಾತ್ಮಕ ಭಾವನೆಗಳು ಆಳವಾಗಿ ಬೇರೂರುತ್ತವೆ. ಕೆಲವೊಮ್ಮೆ ನಾನೇಕೆ ಈ ಪ್ರಪಂಚಕ್ಕೆ ಬಂದೆ ಎಂಬ ಯೋಚನೆಯಿಂದ ಪಾಪ ಪ್ರಜ್ಞೆ ಉಂಟಾಗುತ್ತದೆ. ಓದುವುದರಲ್ಲಿ ನಿರಾಸಕ್ತಿ, ಏಕಾಗ್ರತೆಯ ಕೊರತೆ, ಓದಿದ್ದೆಲ್ಲವೂ ಮರೆತಂತೆನಿಸುತ್ತದೆ. ಸದಾ ಒಂದು ವಿಧದ ಭಯ, ಆತಂಕ ಮನಸ್ಸನ್ನು ಕಾಡುತ್ತವೆ. ಒಂಟಿತನವೇ ಮೇಲು ಎಂಬ ಭಾವನೆ ಉಂಟಾಗಿ ಯಾರೊಂದಿಗೂ ಬೆರೆಯುವುದಿಲ್ಲ. ಸದಾ ಯಾವುದೋ ಲೋಕದಲ್ಲಿ ಮಗ್ನನಾಗಿರುವಂತೆ ವರ್ತಿಸುತ್ತಾನೆ. ಕೆಲವೊಮ್ಮೆ ಖಿನ್ನತೆ ಉಂಟಾಗುತ್ತದೆ. ತೀವ್ರವಾದ ಖಿನ್ನತೆಯು ಆತ್ಮಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಅದಿಲ್ಲದಿದ್ದಲ್ಲಿ ಮದ್ಯ, ಮಾದಕ ವಸ್ತುಗಳ ವ್ಯಸನಕ್ಕೊಳಗಾಗಿ ಹರೆಯದವರು ದಾರಿ ತಪ್ಪಿದ ಮಕ್ಕಳಾಗುತ್ತಾರೆ. ಕೆಲವರು ಸಮಾಜಬಾಹಿರ ಕಾರ್ಯಗಳಲ್ಲಿ ಭಾಗಿಯಾಗಬಹುದು.

ಮೇಲಿನ ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗುತ್ತಾ ಸಾಧನೆಗೈಯುವುದು ಮುಖ್ಯ. ಇದಕ್ಕೆ ಅವಶ್ಯವಿರುವುದು ಸಹನೆ, ಆತ್ಮವಿಶ್ವಾಸ ಮತ್ತು ಹಿತವಾದ ಕೌಟುಂಬಿಕ ವಾತಾವರಣ. ಅದರೊಂದಿಗೆ ಪೋಷಕರ ಸಕಾರಾತ್ಮಕ ಮಾರ್ಗದರ್ಶನ. ಆತ್ಮೀಯ ಸ್ನೇಹಿತರು, ಉಪಾಧ್ಯಾಯರು ಮತ್ತು ಸಮಾಜಚಿಂತಕರೊಂದಿಗೆ ತಮ್ಮ ಒತ್ತಡಗಳನ್ನು ಹಂಚಿಕೊಂಡು ಪರಿಹಾರವನ್ನು ಕಂಡುಕೊಂಡಾಗ ಹರೆಯದವರ ಬಾಳು ಹಸನಾಗುತ್ತದೆ.

ಕೆಮ್ಮು ಒಂದು; ಅರ್ಥ ಹಲವು

ಕೆಮ್ಮುವುದರ ಪರಿ ಅಪಾರ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಕೆಮ್ಮಿದರೆ ಆ ಪರಿ ಕಸಿವಿಸಿಗೊಳ್ಳುವ, ಗುಮಾನಿಯ ಕಣ್ಣುಗಳಲ್ಲಿ ಕಾಣುವ ಕಾಲವೊಂದು ಬಂದೀತು ಎಂದು ಖುದ್ದು ‘ಕೆಮ್ಮು’ವೂ ಕೂಡಾ ಎಂದೂ ಭಾವಿಸಿರಲಿಕ್ಕಿಲ್ಲ. ಆದರೂ ‘ಕೆಮ್ಮು=ಡೇಂಜರ್!’ ಏನೋ ಎಂಬಂತೆ ಮಾಡಿದ ಕುಖ್ಯಾತಿ ಕೊರೊನಾಕ್ಕೆ ಸಲ್ಲುತ್ತದೆ. ಹಾಗೆ ನೋಡಿದರೆ ಮನುಷ್ಯರು ವಿವಿಧ ಸಂದರ್ಭಗಳಲ್ಲಿ, ಬೇರೆ ಬೇರೆ ಅರ್ಥ–ದನಿ–ಭಾವಗಳಲ್ಲಿ ‘ಯಾರೂ ಕೆಮ್ಮಂಗಿಲ್ಲ’ ಎಂದು ಹೇಳಿಕೊಂಡೇ ಬರುತ್ತಿದ್ದರು. ಆದರೆ ಕೊರೊನಾ ಕಾಲಘಟ್ಟದಲ್ಲಿ ಮಾತ್ರ ಆ ಸೂಚನೆಯ ತೀವ್ರತೆ ಬೇರೆಯದೇ ಮಟ್ಟವನ್ನು ತಲುಪಿತ್ತು. ‘ರೂಪ ಒಂದೇ, ಭಾವ ಹಲವು’ ಎಂಬ ಮಾತಿನಂತೆ ಕೆಮ್ಮು ಒಂದೇ ಆದರೂ ಅದರ ಹಿಂದಿನ ಭಾವ–ಅರ್ಥ ಹತ್ತು ಹಲವು. ಬನ್ನಿ, ಅಂಥ ಹತ್ತು ಬಗೆಯ ಕೆಮ್ಮುಗಳನ್ನು ಅರ್ಥೈಸಿಕೊಳ್ಳೋಣ...

1. ‘ನೆಗಡಿ’ಯಾರ ಕೆಮ್ಮು : ಇಲ್ಲಿ ‘ನೆಗಡಿ’ಯಾರ ಎಂಬ ಪದ ಬಳಸಿದ್ದು, ಒಂದು ನೆಗಡಿ ಯಾರನ್ನು ಬಿಟ್ಟಿದೆ ಎಂಬರ್ಥದಲ್ಲಾದರೆ, ಇನ್ನೊಂದು ಅನಾರೋಗ್ಯ ಕಾಲಿಡುವ, ಕಾಡುವ ಸಮಯ ಇದಾಗಿದೆ ಎಂಬ ಸೂಚನೆಯನ್ನು ಅದು ಹೊತ್ತು ತರುತ್ತದೆ ಎಂಬರ್ಥದಲ್ಲಿ. ಶೀತ–ನೆಗಡಿಯ ಬಲು ಹತ್ತಿರದ ನೆಂಟ ಈ ಕೆಮ್ಮು. ನೆಗಡಿಯೇ ತನ್ನ ಅಸ್ತಿತ್ವವನ್ನು, ಕೂಗಿ ಕೂಗಿ ಹೇಳುತ್ತಿದೆಯೋ ಎಂಬಂತೆ ನೆಗಡಿಬಾಧಿತರು ಕೆಮ್ಮುತ್ತಲೇ ಇರುತ್ತಾರೆ. ಈ ನೆಗಡಿ ಕೆಮ್ಮು, ಕಾಲಕ್ರಮೇಣ ಒಣ ಕೆಮ್ಮುವಾಗಿ ಮಾರ್ಪಟ್ಟರಂತೂ ಅದರ ಕಷ್ಟ ಹೇಳತೀರದು. ಆಗ, ರಾತ್ರಿ ಹಗಲೆನ್ನದೇ ನೆಗೆ ನೆಗೆದು ಕೆಮ್ಮಿದರೂ ಸಮಾಧಾನವಾಗುವುದಿಲ್ಲ. ನೆಗಡಿಗೆ ಇಂಗ್ಲೀಷ್‌ಲಿ ‘ರನ್ನಿಂಗ್ ನೋಸ್’, ರನ್ನೀ ನೋಸ್’ ಅಂತೆಲ್ಲ ಹೇಳುತ್ತಾರೆ. ಇದರ ಜೊತೆಗೆ ಕೆಮ್ಮುವೂ ಜೊತೆಯಾದರೆ, ನೋಸ್ ಅಲ್ಲಾ ನಾವೇ ಓಡಬೇಕಷ್ಟೇ!

2. ಸಿಕ್ ಲೀವ್ ಕೆಮ್ಮು: ದಾಸರು, ‘ಮಾಡು ಸಿಕ್ಕದಲ್ಲ..’ ಎಂದು ಹಾಡಿದರು. ಆದರೆ ಈಗಿನ ನರಮಾನವರಾದ ನಾವೆಲ್ಲರೂ ಸಿಕ್ಕದಲ್ಲ ಎಂದು ಹಲುಬುವ ಹಲವಾರು ವಿಷಯಗಳಲ್ಲಿ ‘ರಜೆ’ಯೂ ಕೂಡಾ ಒಂದು. ಅದು ಸುಲಭಕ್ಕೆ ಸಿಕ್ಕುವಂತೆ ಮಾಡುವಲ್ಲಿ ‘ಸಿಕ್ ಲೀವ್’ ಒಂದು ಮಟ್ಟಿಗೆ ನೆರವಿಗೆ ಬರುವುದು ನಿಜವಷ್ಟೇ! ಇಂತಿಪ್ಪ ಸಿಕ್ ಲೀವ್ ಪಡೆದುಕೊಳ್ಳುವ ಪ್ರಕ್ರಿಯೆ ಸಿಕ್ಕು ಸಿಕ್ಕಾಗಿ ಪರಿಣಮಿಸದೇ ಸರಾಗವಾಗಿ ನೆರವೇರುವಲ್ಲಿ ಕೆಮ್ಮು ನೆರವಿಗೆ ಬರುತ್ತದೆ. ರಜೆ ಕೇಳುವಾಗ, ರಜೆ ಮುಗಿಸಿ ಬಂದ ಮೇಲೆ, ಮಧ್ಯೆ ಯಾರಾದರೂ ಕಾಲ್ ಮಾಡಿದಾಗ ಮಾತಿನ ನಡು ನಡುವೆ ಕಾಣಿಸಿಕೊಳ್ಳುವ ಈ ಕೆಮ್ಮು 'ಸಿಕ್‌ಲೀವ್' ನ ಆಥೆಂಟಿಸಿಟಿನ್ನು ಸಾಬೀತುಪಡಿಸುತ್ತದೆ.

3. ಗಮನ ಸೆಳೆಯೋ ಕೆಮ್ಮು: ಮಾತಾಡುವುದಷ್ಟೇ ಮುಖ್ಯವಲ್ಲ. ಅವುಗಳನ್ನು ನಾಲ್ಕು ಜನ ಕೇಳುವಂತೆ ಆಡುವುದು ಬಹಳ ಮುಖ್ಯ. ಅದಕ್ಕೆಂದೇ ಕೆಲವರು – ವೇದಿಕೆಯ ಮೇಲೇ ಇರಲಿ, ಕೆಳಗೇ ಇರಲಿ – ತಮ್ಮ ಮಾತನ್ನು ಆರಂಭಿಸುವ ಮುನ್ನ ಸಣ್ಣಗೆ ಕೆಮ್ಮುತ್ತಾರೆ. ಅದು ಅತ್ತ ಗಂಟಲು ಸರಿಪಡಿಸಿಕೊಂಡಂತೆಯೂ ಆಯಿತು, ಇತ್ತ ಕೇಳುಗರ ಗಮನ ಸೆಳೆದಂತೆಯೂ ಆಯಿತು. ಮಧ್ಯೆ ಮಧ್ಯೆಯೂ ಕೆಲವರು ಈ ಕೆಮ್ಮಸ್ತ್ರವನ್ನು ಬಳಸುತ್ತಾರೆ. ಭಾರೀ ಗಲಾಟೆಯ ಕ್ಲಾಸ್ ರೂಮ್‌ನಲ್ಲಿ ಟೀಚರ್ ಬಂದು ಒಮ್ಮೆ ಜೋರಾಗಿ ಕೆಮ್ಮಿದರೆ, ಇಡೀ ಕ್ಲಾಸ್ ಗಪಚುಪ್ ಆಗುತ್ತದೆಂದರೆ, ಅದು ಕೆಮ್ಮುವಿನ ಪ್ರಭಾವವೋ, ಕೆಮ್ಮುತ್ತಿರುವವರ ಪ್ರಭಾವವೋ ಎಂದು ಯೋಚಿಸಲೇಬೇಕು.

4. ಕಾಯಿಲೆ ಕೆಮ್ಮು : ಕೆಮ್ಮು ಕೆಟ್ಟದ್ದು. ಕೆಮ್ಮುವಿನಿಂದ ತೊಂದರೆಯಾಗುತ್ತಿದೆ. ರೋಗದ ಕಾರಣಕ್ಕೆ ಕೆಮ್ಮುವಂತಾಗಿದೆ – ಹೀಗೆಲ್ಲ ಕೆಮ್ಮುವನ್ನು ದೂಷಿಸುವುದಿದೆ. ಆದರ ಧನಾತ್ಮಕ ಆಯಾಮ ನೋಡುವುದಾದರೆ, ಕೆಮ್ಮುವು ಮುಂದೆ ಬರುವ ಕಾಯಿಲೆ–ಕಸಾಲೆಗಳ ಬಗ್ಗೆ ಒಂದು ಮಟ್ಟಿಗಿನ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಒಳಗೇನೋ ಸರಿಯಿಲ್ಲ ಎನ್ನುವುದನ್ನು ದೇಹವು ಕೆಮ್ಮುವಿನ ಮೂಲಕವೇ ದಾಟಿಸಿದಂತಾಗುತ್ತದೆ. ಸಿನಿಮಾಗಳಲ್ಲಿ ತೋರಿಸುವಂತೆ ಒಮ್ಮಿಂದೊಮ್ಮೆಗೆ ಕೆಮ್ಮು ಆರಂಭವಾಗಿ, ಅದು ತೀವ್ರ ಸ್ವರೂಪ ಪಡೆದುಕೊಂಡು, ಬಳ್ ಎಂದು ರಕ್ತ ವಾಂತಿ ಮಾಡಿ, ಆಗಿಂದಾಗ್ಗೆ ಯಾವುದೋ ಗಂಭೀರ ಕಾಯಿಲೆಗೆ ತುತ್ತಾಗಿರುವ ಬಗ್ಗೆ ಗೊತ್ತಾದಂತೆಲ್ಲಾ ನಿಜ ಜೀವನದಲ್ಲಿ ಘಟಿಸದೇ ಹೋದರೂ ಕೆಮ್ಮು ಒಂದು ಮಟ್ಟಿಗೆ ವಾರ್ನ್ ಮಾಡುತ್ತಲೇ ಇರುತ್ತದೆ.

5. ದುಃಖ ಪ್ರಚೋದಿತ ಕೆಮ್ಮು : ದುಃಖವಾದಾಗ ಮೌನವಾಗುವುದು, ಕಣ್ಣಾಲಿಗಳು ತುಂಬುವುದು, ಅಳುವುದು ಸಹಜ. ಕೆಲವೊಮ್ಮೆ ಎಷ್ಟೇ ಅತ್ತರೂ ಯಾರೂ ಕ್ಯಾರೇ ಅನ್ನದಿದ್ದಾಗ ಅತ್ತು ಅತ್ತು ರಚ್ಚೆ ಹಿಡಿದು ಅದರ ಉಚ್ಛ್ರಾಯ ಸ್ಥಿತಿಯೋ ಎಂಬಂತೆ ಒಂದೇ ಸಮನೆ ಕೆಮ್ಮಲಾರಂಭಿಸುತ್ತಾರೆ. ಹಾಗಾದರೂ ಎದುರಿನವರಿಗೆ ಇವರ ದುಃಖ, ಸಂಕಟಗಳು ತಟ್ಟಲಿ ಎನ್ನುವುದೇ ಅದರ ಉದ್ದೇಶ. ‘ಅಯ್ಯೋ ಅಷ್ಟು ಕೆಮ್ಮುತ್ತಾರಲ್ಲ, ಏನಾಯ್ತು ನೋಡ್ರಪಾ’ ಎಂದು ಎಲ್ಲರೂ ಅತ್ತಲೆಡೆಗೆ ಕೊಂಚ ಅಲರ್ಟ್ ಆಗುತ್ತಾರೆ.

6. ಕಾಳು ಹಾಕೋ ಕೆಮ್ಮು : ‘ಒಣಕೆಮ್ಮು’ ಎಂದೇ ಇದೆಯೆಂಬ ಕಾರಣಕ್ಕೆ ಕೆಮ್ಮನ್ನು ‘ಡ್ರೈ’ ವಿಷಯ ಎಂಬಂತಿಲ್ಲ. ಅದರಲ್ಲೂ ರಸವತ್ತಾದ, ಪುಳಕ ಮೂಡಿಸುವ ಸಂಗತಿಗಳು ಘಟಿಸುತ್ತವೆ. ಯಾರೋ ತಮ್ಮೆಡೆಗೆ ನೋಟ ಹರಿಸುವಂತೆ ಮಾಡಿಕೊಳ್ಳಲು ಕೆಲವರು, ನಾಟಕೀಯ ಕೆಮ್ಮಿನ ಮೊರೆ ಹೋಗುತ್ತಾರೆ. ಆ ಕೆಮ್ಮಿನ ರೀತಿ ಮನ–ಮೋಹಕ, ಅತಿ ಮಧುರ. ಇಂಥ ಕೆಮ್ಮು ಕಾಯಿಲೆಯ ಸೂಚಕವಲ್ಲದೇ ಹೋದರೂ, ಅವು ‘ಪ್ರೇಮಜ್ವರದ’ ಕಾವು ಏರಿಸುವ ಸಾಧ್ಯತೆ ಹೆಚ್ಚಿರುವುದನ್ನು ತಳ್ಳಿ ಹಾಕುವಂತಿಲ್ಲ. ಕೆಲವೊಮ್ಮೆ ಈ ಕೆಮ್ಮಿಗೆ ಪ್ರತಿಯಾಗಿ ಎದುರಿನಿಂದ ಸಿಗುವ ಸಿಗ್ನಲ್ ಯಾವುದೇ ವೈ–ಫೈ ಸಿಗ್ನಲ್‌ನ್ನೂ ಮೀರಿಸುವಂತಿರುತ್ತದೆ. ಈ ಕೆಮ್ಮು ಕಳ್ಳ ನೋಟ, ಕಿರುನಗೆ, ಆತ್ಮೀಯ ಭಾವ ಹೀಗೇ ಮುಂದುವರಿದು ಮೆಸೇಜ್, ಕಾಲ್, ಮೀಟ್ ಹೀಗೆ ಯಾವ್ಯಾವುದೋ ಮಟ್ಟವನ್ನು ತಲುಪುತ್ತದೆ.

7. ಕರೆಗಂಟೆ ಕೆಮ್ಮು : ಒಳಗಿನಿಂದ ಬಾಗಿಲು ಹಾಕಿಕೊಂಡ ಯಾರದೋ ಮನೆಯ ಮುಂದೆ ನಿಂತಿದ್ದೀರಿ. ಒಳಗಿರುವವರನ್ನು ಕರೆಯಬೇಕು. ಅಲ್ಲೆಲ್ಲೂ ಬೆಲ್ ಇಲ್ಲ. ಯಾವುದೋ ಹೆಸರಿನಿಂದ ಕರೆಯಲು ಮುಜುಗರ. ಆಗ ಕೆಮ್ಮು ಕರೆಗಂಟೆಯಂತೆ ನಮ್ಮ ನೆರಗವಿಗೆ ಬರುವುದು. ಒಂದು ನಾಲ್ಕೈದು ಸಲ ಜೋರಾಗಿ ಕೆಮ್ಮುತ್ತಾ ಹೊರಗಡೆ ಅತ್ತಿಂದಿತ್ತ ನಡೆದಾಡಿದರೆ ಸಾಕು, ಒಳಗಿರುವವರಿಗೆ ಯಾರೋ ಬಂದಿದ್ದಾರೆ ಎಂಬ ವಿಷಯ ತಿಳಿದು, ಬಾಗಿಲು ತೆರೆದುಕೊಳ್ಳುತ್ತದೆ. ಅಂದರೆ ವ್ಯಕ್ತಿಯೊಬ್ಬ ಅಲ್ಲಿ ಬಂದಿದ್ದು, ಆ ವ್ಯಕ್ತಿಯ ಇರುವಿಕೆಯನ್ನು ಅಕ್ಕಪಕ್ಕದವರಿಗೆ ತಿಳಿಸಲು ಕೆಮ್ಮು ಸಹಕಾರಿಯಾಗಿದೆ.

8. ಆಕ್ರೋಶ ಪ್ರಣೀತ ಕೆಮ್ಮು : ಆಕ್ರೋಶ, ಉದ್ವೇಗಗಳು ಜೊತೆಯಾದಾಗ ಗಂಟಲು ಕಟ್ಟಿಕೊಳ್ಳುವುದಿದೆ. ಹಾಗೆ ಗಂಟಲು ಕಟ್ಟಿ ದನಿ ಹೊರ ಹೊಮ್ಮದೇ ಹೋದರೂ, ಆಕ್ರೋಶದ ಕಾರಣಕ್ಕೆ ಕಿರುಚುವ, ಅರಚುವ ಜನರೇ ಹೆಚ್ಚು. ಆ ಸಂದರ್ಭದಲ್ಲಿ ಮಾತು, ಕೂಗಾಟಗಳೆಲ್ಲ ಕೊನೆಗೆ ಹೋಗಿ ತಲುಪುವುದು ಈ ಕೆಮ್ಮುವ ಸ್ಥಿತಿಯನ್ನೇ. ಅಷ್ಟೇ ಏಕೆ, ‘ಯಾರೂ ನನ್ನ ಮುಂದೆ ಕೆಮ್ಮಂಗಿಲ್ಲ’ ಎಂದು ಸೂಚ್ಯವಾಗಿ ಹೇಳುವುದರ ಹಿನ್ನೆಲೆಯಲ್ಲಿ ಇರುವುದು ಇದೇ ಆಕ್ರೋಶ. ಈ ಕೆಮ್ಮಿನ ರೀತಿ ನೀತಿಯಲ್ಲೇ ಅರ್ಥವಾಗುತ್ತದೆ ಕೆಮ್ಮುವವರ ಕೋಪ–ತಾಪಗಳು. ಇನ್ನು ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ಕೆಮ್ಮುವುದೂ ಅನ್ಯರಿಗೆ ಕಿರಿ ಕಿರಿ ಉಂಟಾಗಿ ಆಕ್ರೋಶಕ್ಕೆ ತಿರುಗುವುದೂ ಇದೆ!

9. ಕ್ಯಾತೆ ಕೆಮ್ಮು : 'ನೋಡಿ ನಾನು ಆ ಸಭೆಯನ್ನು ಅದ್ಯಾವ ಪರಿ ಅದ್ದೂರಿಯಾಗಿ ವ್ಯವಸ್ಥಿತವಾಗಿ ಆಯೋಜಿಸುತ್ತೇನೆ ಎಂದರೆ ಯಾರೂ ಕೂಡಾ ಕೆಮ್ಮಂಗಿಲ್ಲ’ ಎಂದು ಹೇಳುವುದಿದೆ. ಅಂದರೆ ಕೆಲವರು ಸಣ್ಣಪುಟ್ಟದಕ್ಕೂ ಕೆಮ್ಮುತ್ತಲೇ ಇರುತ್ತಾರೆ ಎಂದರ್ಥವಲ್ಲವೇ? ಕೆಮ್ಮುವುದು ಎಂದರೆ ಕ್ಯಾತೆ ತೆಗೆಯುವುದು ಎಂದೇ ಆಯಿತಲ್ಲವೇ? ಇಲ್ಲಿ ಕೆಮ್ಮು ವಾಚ್ಯವಾಗದೇ, ಸೂಚ್ಯವಾಗಿರುವಂಥದ್ದು. ಅದೊಂದು ಸಂಕೇತ, ಅದೊಂದು ಸೂಚನೆ ಹಾಗೂ ಅದೊಂದು ಅನ್ವರ್ಥ. ಇನ್ನು ಅಸಲಿ ಕೆಮ್ಮುವಿಗಾದರೂ ಸೂಕ್ತ ಔಷಧಿ, ಚಿಕಿತ್ಸೆ ಇದೆ, ಆದರೆ ಈ ಮೇಲೆ ತಿಳಿಸಿದ ಕೆಮ್ಮುವಿನ ಉಪಶಮನ ಕಷ್ಟ ಸಾಧ್ಯವೇ ಸರಿ.

10. ಕೆಟ್ ಅಡುಗೆ ಕೆಮ್ಮು: ಬಾಯಿಗೆ ರುಚಿಸದ ಅಡುಗೆಯ ಬಗ್ಗೆ ಪ್ರತಿಕ್ರಿಯೆ ನೀಡುವ ಬೇರೆ ಬೇರೆ ಪರಿಗಳಿವೆ. ಮುಖ ಸಿಂಡರಿಸುವುದು, ಊಟಕ್ಕೇ ಕೈ ತೊಳೆದು ಎದ್ದೇಳುವುದು, ತಟ್ಟೆ ದೂರಕ್ಕೆ ತಳ್ಳುವುದು ಇನ್ನೂ ಹಲವು. ಅದೇ ರೀತಿಯಲ್ಲಿ ಕೆಮ್ಮುವುದೂ ಕೂಡಾ ಒಂದು. ಇದಕ್ಕೆ ಸಿನಿಮಾ, ಸೀರಿಯಲ್ ದೃಶ್ಯಗಳೇ ಪ್ರೇರಣೇ ಆದರೂ ಆಗಿದ್ದಿರಬಹುದು. ತುತ್ತೊಂ ದನ್ನು ಬಾಯಿಗಿಟ್ಟಕ್ಷಣ, ವಿಚಿತ್ರ ಪ್ರತಿಕ್ರಿಯೆ ನೀಡುತ್ತಾ ಗಂಟಲು, ಎದೆಯನ್ನೆಲ್ಲಾ ಹಿಡಿದು, ಕೆಮ್ಮುತ್ತಾ ತುತ್ತನ್ನು ಬಾಯಿಯಿಂದ ಹೊರಕ್ಕೆ ಚೆಲ್ಲುವ ಈ ವೈಖರಿಯು, ಅಡುಗೆ ಅದೆಷ್ಟು ಕೆಟ್ಟದಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ, ಯಾರು ಕೆಮ್ಮಿದರು ಅಷ್ಟೇ ಅಲ್ಲ, ಹೇಗೆ ಕೆಮ್ಮಿದರು ಎನ್ನುವುದೂ ಮುಖ್ಯವಾಗುತ್ತದೆ. ಅಂದರೆ ಅದನ್ನು ‘ಕೇಳಿಸದೆ ಕೆಮ್ಮು ಕೆಮ್ಮಿನಲಿ....’ ಎಂದು ಹಾಡಬಹುದು. ಹ್ಲಾಂ.. ಪಕ್ಕದಲ್ಲಿ ಯಾರೋ ಕೆಮ್ಮುತ್ತಿರುವ ದನಿ ಕೇಳಿಸುತ್ತಿದೆಯೇ?!

ಓವರ್‌ಡೋಸ್: ಯಾರಾದರೂ “ಹೇಗಿದ್ದೀರಿ?’ ಎಂದು ಕೇಳಿ, ನೀವು ಅದಕ್ಕೆ ಪ್ರತಿಯಾಗಿ 'ಚೆನ್ನಾಗಿದೀನಿ' ಎಂದುತ್ತರಿಸಿದ ಮರುಕ್ಷಣವೇ ಜೋರಾಗಿ ಬರುವ ಕೆಮ್ಮು, ನಾವು ನೀಡಿದ ಉತ್ತರವನ್ನೇ ಅನುಮಾನಿಸುವಂತೆ ಮಾಡುತ್ತದೆ!

ಕಿರುಸುದ್ದಿ

ಎಸ್‌ಆರ್ ಸಮೂಹ ಶಿಕ್ಷಣ ಸಂಸ್ಥೆಯಿಂದ ಪೊಲೀಸರಿಗೆ ಬ್ಯಾರಿಕೇಡ್ ಹಸ್ತಾಂತರ

ಹೆಬ್ರಿ: ಇಲ್ಲಿನ ಎಸ್‌ಆರ್ ಸಮೂಹ ಶಿಕ್ಷಣ ಸಂಸ್ಥೆಯ ವತಿಯಿಂದ ಎಸ್‌ಆರ್ ಆಡಿಟೋರಿಯಂನಲ್ಲಿ ಪೊಲೀಸ್ ಇಲಾಖೆಗೆ ಬ್ಯಾರಿಕೇಡ್ ಹಸ್ತಾಂತರ ಹಾಗೂ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಹೆಬ್ರಿ ಠಾಣಾ ಪಿಎಸ್‌ಐ ರವಿ ಬಿಕೆ ಮಾತನಾಡಿ, ರಸ್ತೆ ಅಪಘಾತಗಳನ್ನು ತಡೆಗಟ್ಟಲು ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅತ್ಯಾವಶ್ಯಕ. ಹೆಲ್ಮೆಟ್ ಧರಿಸುವುದು, ಸೀಟ್ ಬೆಲ್ಟ್ ಕಡ್ಡಾಯವಾಗಿ ಬಳಸುವುದು ಹಾಗೂ ಮದ್ಯಪಾನದ ನಂತರ ವಾಹನ ಚಾಲನೆ ಮಾಡದಿರುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ನಾಗರಾಜ್ ಶೆಟ್ಟಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜೆಸಿಐ ಅಧ್ಯಕ್ಷ ಸತೀಶ ಕುಲಾಲ್ ಹೆಬ್ರಿ, ಕಾಲೇಜಿನ ಪ್ರಾಂಶುಪಾಲ ಪ್ರಶಾಂತ ಎಚ್, ಶಾಲೆತ ಪ್ರಾಂಶುಪಾಲೆ ಭಗವತಿ, ಉಪಪ್ರಾಂಶುಪಾಲ ದೀಪಕ್.ಎನ್ ಉಪಸ್ಥಿತರಿದ್ದರು. ಭೌತಶಾಸ್ತ್ರ ಉಪನ್ಯಾಸಕಿ ಗೀತಾ ಪ್ರಭು ನಿರೂಪಿಸಿ, ವಂದಿಸಿದರು.

ಸಾಮೂಹಿಕ ಸಂಕಲ್ಪ ಪೂರ್ವಕ ಸಮುದ್ರ ಸ್ನಾನ

ಕುಂದಾಪುರ: ಗ್ರಸ್ತೋದಯ ಚಂದ್ರ ಗ್ರಹಣದ ಸಂದರ್ಭದಲ್ಲಿ ಕುಂಭಾಶಿ ಸಮೀಪದ ಕೊರವಡಿ ಸಮುದ್ರ ಕಿನಾರೆಯಲ್ಲಿ ವಿದ್ವಾನ್ ಕುಂಭಾಶಿ ಶ್ರೀಪತಿ ಉಪಾಧ್ಯಾಯರ ನೇತೃತ್ವದಲ್ಲಿ ಸಾಮೂಹಿಕ ಸಂಕಲ್ಪ ಪೂರ್ವಕ ಸಮುದ್ರ ಸ್ನಾನವನ್ನು ಮಾಡಲಾಯಿತು. ಸಂಜೆ 6.15 ಕ್ಕೆ ಮಹಿಳೆಯರೂ ಸೇರಿದಂತೆ 25 ಕ್ಕೂ ಹೆಚ್ಚು ಮಂದಿ ಸಮುದ್ರ ಕಿನಾರೆಯಲ್ಲಿ ಉಪಾಧ್ಯಾಯರ ನಿರ್ದೇಶನದಲ್ಲಿ ಸ್ನಾನ ಸಂಕಲ್ಪ ಹಾಗೂ ವರುಣ ಪೂಜೆಯನ್ನು ನೆರವೇರಿಸಿದರು. 6.40 ಕ್ಕೆ ಸಾಮೂಹಿಕವಾಗಿ ಸಮುದ್ರ ಸ್ನಾನವನ್ನು ಮಾಡಿ, ನಂತರ ದಾನಾದಿಗಳನ್ನು ನೀಡಲಾಯಿತು. ಗ್ರಹಣದ ವೇಳೆ ದೃಶ್ಯ ಪುಣ್ಯಕಾಲದ ಸ್ನಾನ ಶ್ರೇಷ್ಠ ಎಂದು ಶಾಸ್ತ್ರದಲ್ಲಿ ಹೇಳಲಾಗಿದೆ. ಅದೂ ಆ ವೇಳೆಯಲ್ಲಿ ಸಮುದ್ರ ಸ್ನಾನ ಸರ್ವಶ್ರೇಷ್ಠವಾದುದು. ಈ ಬಾರಿಯ ಚಂದ್ರ ಗ್ರಹಣವು ಚಂದ್ರ ಉದಯಿಸುವಾಗಲೇ ಆರಂಭವಾಗಿದ್ದುದರಿಂದ (ಗ್ರಸ್ತೋದಯ) ಏಳು ನಿಮಿಷಗಳಷ್ಟು ಕಾಲ ದೃಶ್ಯ ಪುಣ್ಯ ಕಾಲವಿತ್ತು.

ಪಾಂಡೇಶ್ವರ ಸ್ನೇಹ ಸಂಜೀವಿನಿ ಒಕ್ಕೂಟಕ್ಕೆ ಆಯ್ಕೆ

ಕೋಟ: ಪಾಂಡೇಶ್ವರ ಗ್ರಾಮಪಂಚಾಯತ್‌ನ ಸ್ನೇಹ ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳ ಬದಲಾವಣೆ ಇತ್ತೀಚಿಗೆ ನಡೆಯಿತು. ನೂತನ ಅಧ್ಯಕ್ಷರಾಗಿ ಸುಜಾತಾ ವೆಂಕಟೇಶ್ ಪೂಜಾರಿ, ಕಾರ್ಯದರ್ಶಿಯಾಗಿ ಅಮಿಷ, ಕೋಶಾಧಿಕಾರಿ ಮಮತಾ, ಉಪಾಧ್ಯಕ್ಷರಾಗಿ ಲವೀನಾ, ಜೊತೆ ಕಾರ್ಯದರ್ಶಿಯಾಗಿ ರತ್ನ ಆಯ್ಕೆಯಾದರು. ಆಯ್ಕೆ ಪ್ರಕ್ರಿಯೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಂದನಾ, ಒಕ್ಕೂಟದ ಅಧ್ಯಕ್ಷರು, ಕಾರ್ಯದರ್ಶಿ ಎಂಬಿಕೆ, ಎಲ್ ಸಿಆರ್‌ಪಿ ವಿವಿಧ ಘಟಕಗಳ ಸಖಿ, ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿ ಸಭೆಯಲ್ಲಿ ಉಪಸ್ಥಿತರಿದ್ದರು. ಎಂಬಿಕೆ ಉಷಾ ಗಣೇಶ್ ಪೂಜಾರಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಎಲ್‌ಸಿಆರ್‌ಪಿ ಸುಜಾತಾ ವಂದಿಸಿದರು.

ಕೋಟೇಶ್ವರ ಚರ್ಚಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಕುಂದಾಪುರ: ಕೋಟೇಶ್ವರ ಸಂತ ಅಂತೋನಿ ಚರ್ಚಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಚರ್ಚಿನ ಧರ್ಮಗುರು ಪ್ರವೀಣ್ ಪಿಂಟೊ ಪವಿತ್ರ ಬಲಿಪೂಜೆಯನ್ನು ಅರ್ಪಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶಾಂತಿ ಪಿರೇರಾ ಅವರು ಮಹಿಳೆಯ ಸಬಲೀಕರಣದ ಬಗ್ಗೆ ಮಾಹಿತಿ ನೀಡಿದರು. ಚರ್ಚಿನ ಉಪಾಧ್ಯಕ್ಷರು ಸಂದೇಶ ನೀಡಿದರು. ಸಮಾಜದಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದ ಐದು ಜನ ಮಹಿಳೆಯರನ್ನು ಸನ್ಮಾನಿಸಲಾಯಿತು. ಮಹಿಳಾ ಸಂಘಟನೇಯ ಅಧ್ಯಕ್ಷೆ, ಕಾರ್ಯದರ್ಶಿ, ಭಾವನ ಒಕ್ಕೂಟದ ಖಂಜಾಚಿ, ಚರ್ಚಿನ ಕಾರ್ಯದರ್ಶಿ, 20 ಆಯೋಗಗಳ ಸಂಯೋಜಕಿ, ಸಂತ ಅಂತೋನಿ ಕಾನ್ವೆಂಟಿನ ಮುಖ್ಯಸ್ಥೆ ಸಿಸ್ಟರ್ ಅವಿತಾ ಮೊಂತೇರೊ ಉಪಸ್ಥಿತರಿದ್ದರು. ಪ್ರಮೀಳಾ ಮಸ್ಕರೇನ್ಹಾಸ್ ಸ್ವಾಗತಿಸಿದರು. ಡಯಾನಾ ಸೆರಾವೊ ಕಾರ್ಯಕ್ರಮವನ್ನು ನಿರೂಪಿಸಿದರು. ಅಸ್ತುಂಮ್ತಾ ಸಾಲಿನ್ಸ್ ವಂದಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸರಸ್ವತಿ ಜಯರಾಮ ಭಟ್, ಕಲ್ಲಮುಂಡ್ಕೂರು ದೇವಸ್ಥಾನದ ಬಳಿ.
2. ಯೋಗೀಶ್ ಆಚಾರ್ಯ, ಶ್ರೀ ಸರ್ವಮಂಗಳಾ ಜುವೆಲ್ಲರ್ಸ್, ಬಜಪೆ, ಶ್ರೀ ವಿಜಯ ವಿಠಲ ಭಜನಾ ಮಂದಿರ ವಠಾರ.
3. ದಿ| ಮಂಜುನಾಥ ಜಿ.ಎಲ್. ಕುಡ್ವ ಸ್ಮರಣಾರ್ಥ ಸಹೋದರಿಯರು, ಮುಟ್ಟಿಕಲ್ಲು ಹೌಸ್, ದೇಲಂತಬೆಟ್ಟು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
4. ಬಯಲಾಟ ಸೇವಾ ಸಮಿತಿ ಮತ್ತು ಹತ್ತು ಸಮಸ್ತರು, ಆರಸಿನ ಮಕ್ಕಿ, ಬೆಳ್ತಂಗಡಿ (ತಾ).
5. ಜಗದೀಶ ಜೋಗಿ, ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬಳಿ, ಜೋಡುರಸ್ತೆ, ಕುಕ್ಕುಂದೂರು, ಕಾರ್ಕಳ (ತಾ).
6. ಭಾಸ್ಕರ ಸಾಲ್ಯಾನ್, ಪಿಂಟೊ ಕಂಪೌಂಡು, ಹೊಯ್ಗೆಬೈಲು, ಮೋಡರ್ನ್ ರೈಸ್ ಮಿಲ್ ಬಳಿ, ಉರ್ವ, ಮಂಗಳೂರು.
7. ಜೋಸ್ಲಿನ್ ಲೂವಿಸ್, 'ಲೂವಿಸ್ ಕಂಪೌಂಡು', ಒಡ್ಡೂರು ಗಂಜಿಮಠ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.

ಶ್ರೀ ಧರ್ಮಸ್ಥಳ ಮೇಳ
ಮೇಳಿಗೆ ಕುಂಟುವಳ್ಳಿಯಲ್ಲಿ
ಶ್ರೀ ಕೃಷ್ಣಪ್ಪ ಗೌಡ ಮತ್ತು ಮನೆಯವರು
ಮಂಜುನಾಥ ಸ್ವಾಮಿ ನಿಲಯ

ಶ್ರೀ ಸಾಲಿಗ್ರಾಮ ಮೇಳ
ಕೆಳನರಸೆಯಲ್ಲಿ ಬಯಲಾಟ
ಷಣ್ಮುಖಪ್ರಿಯ

ಶ್ರೀ ಪೆರ್ಡೂರು ಮೇಳ
ಪೆರ್ಡೂರಿನಲ್ಲಿ - ಶನೀಶ್ವರ ಮಹಾತ್ಮೆ, ಗದಾಯುದ್ಧ

ಶ್ರೀ ಹನುಮಗಿರಿ ಮೇಳ
ಕೋಟತಟ್ಟು- ಪಡುಕರೆಯಲ್ಲಿ

ಶ್ರೀ ಪಾವಂಜೆ ಮೇಳ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ
ಛಾಯಾನಂದನ



ಇತಿಹಾಸ ಪ್ರಸಿದ್ಧವಾದ ತ್ರಿಚಂಬಲ ದೇವಸ್ಥಾನದ ವಾರ್ಷಿಕ ಉತ್ಸವದ ಅಂಗವಾಗಿ ಶನಿವಾರ ಬೆಳಗ್ಗೆ ಶ್ರೀಕೃಷ್ಣ ಬಲರಾಮ ದೇವರ ನೃತ್ಯೋತ್ಸವದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಪಾಲ್ಗೊಂಡಿದ್ದರು.

ಅಂಗಡಿಗೆಂದು ಕರೆದೊಯ್ದು ವ್ಯಕ್ತಿಯ ಕೊಲೆ: ಆರೋಪಿ ಪೊಲೀಸರಿಗೆ ಶರಣು

ಮಡಿಕೇರಿ: ಅಂಗಡಿಗೆಂದು ಕರೆದೊಯ್ದು ವ್ಯಕ್ತಿಯೊಬ್ಬನನ್ನು ಕೊಲೆಗೈದಿರುವ ಘಟನೆ ಕುಶಾಲನಗರ ತಾಲೂಕಿನ ಚೆಟ್ಟಳ್ಳಿ ಸಮೀಪದ ಕಾನನಕಾಡು ಕೋಗಿಲೆಹಳ್ಳ ಎಸ್ಟೇಟ್‌ನಲ್ಲಿ ನಡೆದಿದ್ದು, ಒರಿಸ್ಸಾ ಮೂಲದ ಅಶ್ವಿನಾ ಗೊಮಾಂಗೊ (30) ಸಾವಿಗೀಡಾದವರಾಗಿದ್ದು, ಅದೇ ಎಸ್ಟೇಟ್‌ನ ಲೈನ್ ಮನೆಯಲ್ಲಿ ವಾಸಿಸುತ್ತಿದ್ದ ಮಹೇಶ್ ಕೊಲೆ ಆರೋಪಿ.

ಅಶ್ವಿನಾ ಗೊಮಾಂಗೊ ಅವರ ಪತ್ನಿ ಸುಂಬಾರಿ ಗೊಮಾಂಗೊ ಅವರು ನೀಡಿದ ದೂರಿನ್ವಯ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿ ಪೊಲೀಸರಿಗೆ ಶರಣಾಗಿದ್ದಾನೆ.

ಸುಂಬಾರಿ ಗೊಮಾಂಗೊ ತನ್ನ ದೊಡ್ಡಪ್ಪನ ಮಗಳು ಕುಮಾರಿ ಹಾಗೂ ಆಕೆಯ ಪತಿ ಅಶ್ವಿನಾ ಗೊಮಾಂಗೊ 13 ವರ್ಷಗಳ ಹಿಂದೆ ಕೆಲಸಕ್ಕೆಂದು ಕೋಗಿಲೆಹಳ್ಳ ಎಸ್ಟೇಟ್‌ಗೆ ಬಂದಿದ್ದು, ಜೊತೆಗೆ ಮಹೇಶನನ್ನೂ ಕರೆತಂದಿದ್ದರು. ಎರಡು ವರ್ಷಗಳವರೆಗೆ ಅಶ್ವಿನಾ ಗೊಮಾಂಗೊ ಜೊತೆ ಸಂಸಾರ ಮಾಡಿಕೊಂಡಿದ್ದ ಕುಮಾರಿ ನಂತರ ತನ್ನ ಮಗಳನ್ನು ಕರೆದುಕೊಂಡು ಶ್ರೀನಿವಾಸ್ ಎಂಬವರ ಜೊತೆ ಹೋಗಿದ್ದಳು. ಬಳಿಕ ಅಶ್ವಿನಾ ಗೊಮಾಂಗೊ ಸುಂಬಾರಿ ಜೊತೆ ಸಂಸಾರ ಮಾಡಿಕೊಂಡಿದ್ದರೆನ್ನಲಾಗಿದೆ. ಅದೇ ತೋಟದ ಲೈನ್ ಮನೆಯೊಂದರಲ್ಲಿ ತಾಯಿ ಹಾಗೂ ಇಬ್ಬರು ತಮ್ಮಂದಿರೊಂದಿಗೆ ಮಹೇಶ್ ವಾಸವಿದ್ದು, ತನ್ನ ಮನೆ ಸಮೀಪ ಕೆಲಸ ಮಾಡುತ್ತಿದ್ದಾಗ ಸುಂಬಾರಿ ಮಹೇಶ್‌ನ ತಮ್ಮ ನಾಗೇಶ್ ಜೊತೆ ಮಾತನಾಡುತ್ತಿರುವುದನ್ನು ಗಮನಿಸಿದ್ದ ಮಹೇಶ ಹಲವು ಬಾರಿ ಅಶ್ವಿನಾ ಗೊಮಾಂಗೊ ಜೊತೆ ಜಗಳವಾಡಿದ್ದನೆಂದು ಹೇಳಲಾಗಿದೆ. ಮಾ.2 ರಂದು ಮಧ್ಯಾಹ್ನ ಅಶ್ವಿನಾ ಗೊಮಾಂಗೊ ಮನೆಗೆ ಬಂದು ಅಂಗಡಿಗೆ ಹೋಗಿ ಬರುವ ಎಂದು ಅಶ್ವಿನಾನನ್ನು ಬಲವಂತವಾಗಿ ಕರೆದುಕೊಂಡು ಹೋಗಿದ್ದಾನೆ. ರಾತ್ರಿ 7.30 ಗಂಟೆಯಾದರೂ ಗಂಡ ಮನೆಗೆ ಬರದಿದ್ದಾಗ, ಕಾಫಿತೋಟಕ್ಕೆ ಹೋಗಿ ಟಾರ್ಚ್ ಬೆಳಕು ಸಹಾಯದಿಂದ ಹುಡುಕಿದಾಗ ಕಾಫಿತೋಟದ ಬಳಿ ಕಾಫಿ ಗಿಡದ ಕೆಳಗೆ ಅಶ್ವಿನಾ ಗೊಮಾಂಗೊ ಮೃತದೇಹ ಗೋಚರಿಸಿದೆ. ದೂರಿನ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿ ಮಹೇಶ ಪೊಲೀಸರಿಗೆ ಶರಣಾಗಿದ್ದಾನೆ.

ಕಾಡುಪ್ರಾಣಿಗಳ ದಾಳಿಗೆ ಅಮಾಯಕರ ಜೀವ ಬಲಿ | ಕೊಡಗು ಜಿಲ್ಲಾ ಬಿಜೆಪಿಯಿಂದ ಬೃಹತ್ ಪ್ರತಿಭಟನೆ

ಸರಕಾರ, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ

ಮಡಿಕೇರಿ: ಕಾಡಾನೆ ಸೇರಿದಂತೆ ಕೊಡಗು ಜಿಲ್ಲೆಯಲ್ಲಿ ವನ್ಯಪ್ರಾಣಿಗಳ ನಿರಂತರ ದಾಳಿಯಿಂದ ಅಮಾಯಕ ಮಾನವ ಜೀವಗಳು ಹಾಗೂ ಜಾನುವಾರುಗಳು ಬಲಿಯಾಗುತ್ತಿದ್ದರೂ ರಾಜ್ಯ ಸರಕಾರ ಹಾಗೂ ಅರಣ್ಯ ಇಲಾಖೆ ಯಾವುದೇ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲವೆಂದು ಆರೋಪಿಸಿ ಕೊಡಗು ಜಿಲ್ಲಾ ಬಿಜೆಪಿ ವತಿಯಿಂದ ಶುಕ್ರವಾರ ನಗರದ ಅರಣ್ಯ ಭವನದ ಎದುರು ಪ್ರತಿಭಟನೆ ನಡೆಯಿತು.

ಅರಣ್ಯ ಭವನದ ಬಳಿ ಮಡಿಕೇರಿ–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಅಸಮಾಧಾನ ವ್ಯಕ್ತಪಡಿಸಿದ ನೂರಾರು ಮಂದಿ ಬಿಜೆಪಿ ಕಾರ್ಯಕರ್ತರು ಮತ್ತು ಪ್ರಮುಖರು, ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಕಳೆದ ಎರಡು ವಾರಗಳಲ್ಲಿ ಸಿದ್ದಾಪುರ ವಿಭಾಗದಲ್ಲಿ ಇಬ್ಬರು ವ್ಯಕ್ತಿಗಳು ಹಾಗೂ ಬೆಟ್ಟತ್ತೂರು ಗ್ರಾಮದ ವಿದ್ಯಾರ್ಥಿನಿಯೊಬ್ಬಳು ಕಾಡಾನೆ ದಾಳಿಗೆ ಬಲಿಯಾಗಿದ್ದಾರೆ. ಸಾಲು ಸಾಲು ಸಾವುಗಳು ಸಂಭವಿಸಿದರೂ ಸರಕಾರ ಸಮಸ್ಯೆಯ ಗಂಭೀರತೆಯನ್ನು ಅರಿತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿ ಪ್ರಮುಖರು ಪೊಲೀಸರ ಬ್ಯಾರಿಕೇಡ್‌ಗಳನ್ನು ನೂಕಿ ಅರಣ್ಯ ಭವನದ ಕಚೇರಿಗೆ ನುಗ್ಗಲೆತ್ನಿಸಿದರು.





ಶಾಶ್ವತ ಪರಿಹಾರ ಬೇಕು

ಈ ಸಂದರ್ಭ ಮಾತನಾಡಿದ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರು, ಎರಡು ವಾರದ ಅವಧಿಯಲ್ಲಿ ಮೂವರು ಕಾಡಾನೆ ದಾಳಿಗೆ ಬಲಿಯಾಗಿದ್ದರೂ, ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡಿಲ್ಲ. ಕೇವಲ ಮೃತ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ನೀಡುವುದನ್ನು ಒಪ್ಪಲು ನಾವು ಸಿದ್ಧರಿಲ್ಲ., ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ವ್ಯಾಪ್ತಿಯಲ್ಲಿ ಕಾಡಾನೆ ಮತ್ತು ವನ್ಯ ಜೀವಿಗಳ ಉಪಟಳದಿಂದ ಜೀವಹಾನಿಯೊಂದಿಗೆ ಕೃಷಿಗೂ ಅಪಾರ ಹಾನಿಯಾಗುತ್ತಿದೆ. ಕಾಡುಪ್ರಾಣಿಗಳ ನಿಗ್ರಹಕ್ಕೆ ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಅರಣ್ಯದಿಂದ ಹೊರಬರುವ ವನ್ಯಜೀವಿಗಳ ಉಪಟಳಕ್ಕೆ ಅರಣ್ಯ ಇಲಾಖೆಯೇ ನೇರ ಜವಾಬ್ದಾರಿಯಾಗಿದ್ದು, ವನ್ಯಜೀವಿಗಳ ಉಪಟಳ ಸಂದರ್ಭ ಆಯಾ ಭಾಗದ ಅರಣ್ಯ ಅಧಿಕಾರಿಗಳ ವಿರುದ್ಧವೇ ಎಫ್ ಐಆರ್ ದಾಖಲಿಸಬೇಕೆಂದು ಕರೆ ನೀಡಿದರು.

ಕೊಡಗು ಬಂದ್‌ಗೂ ಸಿದ್ಧ

ಸಮಸ್ಯೆ ಬಗೆಹರಿಸಲು ಉನ್ನತ ಮಟ್ಟದ ಸಭೆ ಕರೆಯಬೇಕೆಂಬುದೂ ಸೇರಿದಂತೆ ನಮ್ಮ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿರುವ ಈ ಹೋರಾಟ ಕೇವಲ ಆರಂಭ ಮಾತ್ರ. ಸೂಕ್ತ ಸ್ಪಂದನ ದೊರಕದಿದ್ದಲ್ಲಿ ರಸ್ತೆ ತಡೆಯ ಜೊತೆಗೆ ಕೊಡಗು ಬಂದ್‌ಗೂ ಕರೆ ನೀಡುವುದಾಗಿ ರವಿ ಕಾಳಪ್ಪ ಎಚ್ಚರಿಕೆ ನೀಡಿದರು.

ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಒದಗಿಸುವುದರೊಂದಿಗೆ, ಸಿ ಮತ್ತು ಡಿ ಜಮೀನನ್ನು ಅರಣ್ಯಕ್ಕೆ ವರ್ಗಾಯಿಸುವ ಸುತ್ತೋಲೆಗಳಿಂದ ಸುಮಾರು 15 ಸಾವಿರ ಕುಟುಂಬಗಳು ಬೀದಿಗೆ ಬರುವ ಅಪಾಯವಿದೆ ಎಂದರು. ಖಾಸಗಿ ಜಮೀನುಗಳಲ್ಲಿನ ಮರಗಳ ಸರ್ವೆ ಕುರಿತ ಸುತ್ತೋಲೆ ಸೇರಿದಂತೆ ಜಿಲ್ಲೆಯ ಜನತೆಗೆ ಮಾರಕವಾಗಿರುವ ಸುತ್ತೋಲೆಗಳನ್ನು ತಕ್ಷಣ ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದರು.

ಬೆಳೆಗಾರರಿಗೆ ಅವರ ಜಾಗದಲ್ಲಿ ಬೆಳೆದ ಮರದಲ್ಲಿ ಸ್ವಂತ ಬಳಕೆಗೆ 100 ಸಿಎಫ್‌ಟಿ ಮರವನ್ನು ಬಳಸಲು ಅನುಮತಿ ನೀಡುವ ಅಧಿಕಾರ ರೇಂಜ್ ಫಾರೆಸ್ಟ್ ಆಫೀಸರ್'ಗೆ ಇತ್ತು. ಇದನ್ನು ಇದೀಗ ಹಿಂದಕ್ಕೆ ಪಡೆದಿರುವ ಉದ್ದೇಶವೇನೆಂದು ಪ್ರಶ್ನಿಸಿದರು.

ಪ್ರಣಾಳಿಕೆ ಕಾರ್ಯಗತವಾಗಿಲ್ಲ

ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆ ಸಂದರ್ಭ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ತಾವು ಅಧಿಕಾರಕ್ಕೆ ಬಂದರೆ ಆರು ತಿಂಗಳಲ್ಲಿ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವುದಾಗಿ ತಿಳಿಸಿತ್ತು, ಆದರೆ ಅದು ಕಾರ್ಯಗತವಾಗಿಲ್ಲ. ವನ್ಯಜೀವಿಗಳ ಹಾವಳಿ ತಡೆಗೆ ಕಳೆದ ಬಾರಿ 120 ಕೊಟಿ ರೂ.ಗಳನ್ನು ಘೋಷಿಸಿತ್ತು. ಆದರೆ, ಇಲ್ಲಿಯವರೆಗೆ ಇದರಲ್ಲಿ ನಯಾ ಪೈಸೆಯೂ ಖರ್ಚಾಗಿಲ್ಲವೆಂದು ಟೀಕಿಸಿದರು.

ರಾಜ್ಯ ಸರಕಾರ ತನ್ನ ಬಜೆಟ್‌ನಲ್ಲಿ ಕಾಡಾನೆ ಮಾನವ ಸಂಘರ್ಷ ತಡೆಗೆ 5 ವರ್ಷಗಳ 1500 ಕೋಟಿ ಯೋಜನೆಯನ್ನು ಪ್ರಕಟಿಸಿದ್ದು, ಈ ವರ್ಷಕ್ಕೆ 269 ಕೋಟಿ ನೀಡುವುದಾಗಿ ತಿಳಿಸಿದೆ. ಇದು ಕೇವಲ ಬೊಗಳೆಯಾಗಿದ್ದು, ಮುಂದಿನ ಚುನಾವಣೆಗೆ ಇನ್ನು ಎರಡು ವರ್ಷಗಳಿಗೂ ಕಡಿಮೆ ಅವಧಿ ಇರುವ ಹಂತದಲ್ಲಿ ಐದು ವರ್ಷದ ಅವಧಿಯ ಯೋಜನೆಯ ರೂಪಿಸಿದ್ದಾದರೂ ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೆದ್ದಾರಿಯಲ್ಲಿ ಪ್ರತಿಭಟನೆ

ಸ್ಥಳಕ್ಕೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೋನಲ್ ಅವರು ಬಾರದ್ದರಿಂದ ಆಕ್ರೋಶಗೊಂಡ ಪ್ರತಿಭಟನಾಕಾರರು, ಮತ್ತೆ ಅರಣ್ಯ ಕಚೇರಿಗೆ ನುಗ್ಗಲು ಯತ್ನಿಸಿದರು. ಪೊಲೀಸರು ತಡೆದ ನಂತರ ಪ್ರತಿಭಟನಾಕಾರರು ಮಡಿಕೇರಿ–ಮೈಸೂರು ರಾಷ್ಟ್ರೀಯ ಹೆದ್ದಾರಿಯನ್ನು ಕೆಲ ಕಾಲ ತಡೆದು ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಮಾತನಾಡಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಈ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳಿಗೆಮಾಹಿತಿನೀಡಿಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯರಾದ ಸುನಿಲ್ ಸುಬ್ರಮಣಿ, ಎಸ್.ಜಿ.ಮೇದಪ್ಪ, ಮಡಿಕೇರಿ ನಗರಸಭಾ ಅಧ್ಯಕ್ಷೆ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷರಾದ ಬಿ.ಬಿ.ಭಾರತೀಶ್, ರಾಬಿನ್ ದೇವಯ್ಯ, ಪಕ್ಷದ ಪ್ರಮುಖರಾದ ತಳೂರು ಕಿಶೋರ್ ಕುಮಾರ್, ಬಿ.ಕೆ.ಅರುಣ್ ಕುಮಾರ್, ಹೊಸೂರು ಸತೀಶ್ ಜೋಯಪ್ಪ, ಬಿ.ಕೆ.ಜಗದೀಶ್, ಅರುಣ್ ಶೆಟ್ಟಿ, ಮಹಿಳಾ ಬಿಜೆಪಿ ಅಧ್ಯಕ್ಷೆ ಅನಿತಾ ಪೂವಯ್ಯ, ಸವಿತಾ ರಾಕೇಶ್, ಡೀನ್ ಬೋಪಣ್ಣ, ಕಾಂತಿ ಸತೀಶ್ ಸೇರಿದಂತೆ ಹಲವು ಪ್ರಮುಖರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಉನ್ನತ ಮಟ್ಟದ ಸಭೆ

ರಸ್ತೆ ತಡೆಯ ಬಳಿಕ ಸ್ಥಳಕ್ಕೆ ಆಗಮಿಸಿದ ಅರಣ್ಯ ಸಂರಕ್ಷಣಾಧಿಕಾರಿ ಸೋನಲ್ ಅವರನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ಪ್ರಮುಖರು, ವನ್ಯಜೀವಿ–ಮಾನವ ಸಂಘರ್ಷ ತಡೆಗೆ ಶಾಶ್ವತ ಪರಿಹಾರ ಕ್ರಮಗಳನ್ನು ಕಂಡುಕೊಳ್ಳಲು ಮುಖ್ಯಮಂತ್ರಿ, ಅರಣ್ಯ ಸಚಿವರು, ಅರಣ್ಯಾಧಿಕಾರಿಗಳು ಹಾಗೂ ಜಿಲ್ಲೆಯ ಪ್ರಮುಖರ ಉನ್ನತ ಮಟ್ಟದ ಸಭೆ ಕರೆಯುವಂತೆ ಆಗ್ರಹಿಸಿದರು. ಕಾಡಾನೆ ದಾಳಿಯಿಂದ ಮೃತಪಟ್ಟವರ ಸಂತ್ರಸ್ತ ಕುಟುಂಬಕ್ಕೆ ತಲಾ ಒಂದು ಕೋಟಿ ರೂ. ಪರಿಹಾರ ನೀಡಬೇಕು. ವನ್ಯಜೀವಿಗಳಿಗೆ ಅರಣ್ಯದಲ್ಲೇ ಅಗತ್ಯ ಆಹಾರ ದೊರಕುವ ವ್ಯವಸ್ಥೆ ಮಾಡಬೇಕು ಮತ್ತು ಅಧಿಕ ಸಂಖ್ಯೆಯಲ್ಲಿರುವ ಕಾಡುಪ್ರಾಣಿಗಳನ್ನು ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದರು.

ಕುಂದಾಪುರ: ಪಾರ್ಕಿಂಗ್ ಶುಲ್ಕ ವಿವಾದ

ಕುಂದಾಪುರ: ಇಲ್ಲಿನ ಪುರಸಭೆ ವ್ಯಾಪ್ತಿಯಲ್ಲಿ ವಾಹನಗಳ ನಿಲುಗಡೆಗೆ ಶುಲ್ಕ ವಿಧಿಸುವ ಸಲುವಾಗಿ ಕರೆದಿದ್ದ ಹರಾಜು ಪ್ರಕ್ರಿಯೆಯನ್ನು ಈಗ ಪುರಸಭೆ ಮುಂದೂಡಿದೆ. ಪುರಸಭೆಯ ಈ ನಡೆಯ ವಿರುದ್ಧದ ಎಲ್ಲೆಡೆಯಿಂದ ವ್ಯಾಪಕ ವಿರೋಧ ವ್ಯಕ್ತವಾಗಿದ್ದರಿಂದ ಅನಿವಾರ್ಯವಾಗಿ ಈ ಹರಾಜನ್ನು ಮುಂದೂಡಿದೆ ಎನ್ನಲಾಗುತ್ತಿದೆ.

ಈ ಮೊದಲು ಪುರಸಭೆಯು ಪಾವತಿ ಪಾರ್ಕಿಂಗ್ ವ್ಯವಸ್ಥೆಗೆ ತೀರ್ಮಾನಿಸಿ, ವಾಹನಗಳ ನಿಲುಗಡೆ ಶುಲ್ಕ ವಿಸಲು ಟೆಂಡರ್ ಕರೆದಿತ್ತು. ಎ. 7 ರಂದು ಪುರಸಭೆ ಸಭಾಂಗಣದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆಯನ್ನು ನಿಗದಿಗೊಳಿಸಿತ್ತು. ಈಗ ಆ ಹರಾಜು ಪ್ರಕ್ರಿಯೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಮುಂದಿನ ಅವಧಿಯನ್ನು ತಿಳಿಸಲಾಗುವುದು ಎನ್ನುವುದಾಗಿ ಪುರಸಭೆ ಪ್ರಕಟನೆ ನೀಡಿದೆ.

ಪಾವತಿ ಪಾರ್ಕಿಂಗ್ ವ್ಯವಸ್ಥೆಗೆ ಮುಂದಾಗಿರುವ ಪುರಸಭೆಯ ಈ ನಡೆ ವಿರುದ್ಧ ವ್ಯಾಪಕ ಜನಾಕ್ರೋಶ ವ್ಯಕ್ತವಾಗುತ್ತಿದೆ. ಪುರಸಭೆಯ ಮಾಜಿ ಸದಸ್ಯರು, ವಿವಿಧ ಪಕ್ಷಗಳ ಮುಖಂಡರು, ಸಂಘ–ಸಂಸ್ಥೆಗಳು, ವರ್ತಕರು, ಸಾರ್ವಜನಿಕರ ಸಹಿತ ಬಹುತೇಕ ಎಲ್ಲರಿಂದಲೂ ವಿರೋಧ ವ್ಯಕ್ತವಾಗಿದೆ. ಈ ನಿರ್ಧಾರವನ್ನು ಹಿಂಪಡೆಯುವಂತೆ ಒತ್ತಾಯಿಸಿದ್ದಾರೆ. ರಸ್ತೆಬದಿ ವಾಹನ ನಿಲ್ಲಿಸಲು ಶುಲ್ಕ ವಿಧಿಸುವುದರಿಂದ ಸಾಮಾನ್ಯ ಜನರು, ಸಣ್ಣ ವ್ಯಾಪಾರಿಗಳು ಮತ್ತು ವ್ಯಾಪಾರಕ್ಕೆ ಬರುವ ಗ್ರಾಹಕರು ಅನಗತ್ಯ ತೊಂದರೆ ಅನುಭವಿಸಬೇಕಾಗುತ್ತದೆ. ಇದರಿಂದ ನಗರದ ವ್ಯಾಪಾರ ಚಟುವಟಿಕೆಗಳ ಮೇಲೂ ಕೆಟ್ಟ ಪರಿಣಾಮ ಬೀಳುವ ಸಾಧ್ಯತೆ ಇದೆ. ಇದು ಜನ ವಿರೋಧಿ ನಡೆ ಎಂಬ ಕೂಗು ಕೇಳಿ ಬರುತ್ತಿದೆ.

> **ವಾಹನ ನಿಲುಗಡೆಗೆ ಶುಲ್ಕ ವಿಧಿಸುವ ಸಲುವಾಗಿ ಕರೆದಿರುವ ಹರಾಜು ಪ್ರಕ್ರಿಯೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ. ನಗರದಲ್ಲಿ ಪಾರ್ಕಿಂಗ್ ಸಮಸ್ಯೆ ಇರುವ ಕಾರಣಕ್ಕೆ, ವ್ಯವಸ್ಥಿತ ಪಾರ್ಕಿಂಗ್ ಕಲ್ಪಿಸಲು ಈ ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ ಜನರು, ವರ್ತಕರು, ಸಂಘ-ಸಂಸ್ಥೆಗಳ ವಿರೋಧ ಇರುವುದರಿಂದ ಇದರ ಸಾಧಕ- ಬಾಧಕಗಳನ್ನು ಚರ್ಚಿಸಿ, ಮುಂದಿನ ದಿನಗಳಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು**
> ■ ಆನಂದ್ ಜೆ., ಪುರಸಭೆ ಮುಖ್ಯಾಧಿಕಾರಿ, ಕುಂದಾಪುರ

ಮಾ.16 ಕ್ಕೆ ನಗರದ ವರ್ತಕರಿಂದ ಸಭೆ

ನಗರದ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ವಾಹನ ನಿಲುಗಡೆಗೆ ಶುಲ್ಕ ವಿಸಲು ಮುಂದಾಗಿರುವ ಪುರಸಭೆಯ ನಡೆಯ ಕುರಿತಂತೆ ಚರ್ಚಿಸಲು ಕುಂದಾಪುರ ನಗರದ ವರ್ತಕರ ಸಂಘವು ಮಾ.16 ಕ್ಕೆ ಮಧ್ಯಾಹ್ನ 3.30 ಕ್ಕೆ ಹೊಟೇಲ್ ಹರಿಪ್ರಸಾದ್ ನ ಅಕ್ಷತಾ ಸಭಾಂಗಣದಲ್ಲಿ ಸಭೆ ಕರೆದಿದೆ.

ಅಪರಿಚಿತ ವ್ಯಕ್ತಿ ಸಾವು

ಕಡಬ: ಕಡಬ ಠಾಣಾ ವ್ಯಾಪ್ತಿಯ ಬಿಳಿನೆಲೆ ಗ್ರಾಮದ ಬಿಳಿನೆಲೆ ಜಂಕ್ಷನ್ ಬಳಿಯ ಅಂಗಡಿಯೊಂದರ ಬಳಿ ಅಸ್ವಸ್ಥನಾಗಿ ಪತ್ತೆಯಾಗಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ ಘಟನೆ ಮಾರ್ಚ್ 9 ರಂದು ನಡೆದಿದೆ.

ಮಾರ್ಚ್ 6 ರಂದು ಮಧ್ಯಾಹ್ನ ವೇಳೆಗೆ ಕಡಬ ತಾಲೂಕಿನ ಬಿಳಿನೆಲೆ ಗ್ರಾಮದ ಬಿಳಿನೆಲೆ ಜಂಕ್ಷನ್ ಸಮೀಪದ ಅಂಗಡಿಯ ಬಳಿ ಒಬ್ಬ ವ್ಯಕ್ತಿ ಅಸ್ವಸ್ಥಗೊಂಡು ಮಲಗಿರುವ ಸ್ಥಿತಿಯಲ್ಲಿ ಕಂಡುಬಂದಿದ್ದರು. ಸ್ಥಳೀಯರ ಸಹಾಯದಿಂದ ಅವರನ್ನು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ.

ಮೃತ ವ್ಯಕ್ತಿಗೆ ವಯಸ್ಸು ಸುಮಾರು 35 ರಿಂದ 40 ವರ್ಷ ಎಂದು ಅಂದಾಜಿಸಲಾಗಿದೆ. ಸಣ್ಣ ಮೈಕಟ್ಟು, ಕಪ್ಪು ಮೈಬಣ್ಣ, ಮುಖದಲ್ಲಿ ಗಡ್ಡ ಇದ್ದು, ಗುರುತು ಪತ್ತೆಯಾಗಿಲ್ಲ . ಮೃತ ದೇಹ ವೆನ್ಲಾಕ್ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಡಬ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತ ವ್ಯಕ್ತಿಯ ಸಂಬಂಧಿಕರು ಅಥವಾ ಯಾರಿಗಾದರೂ ಮಾಹಿತಿ ಇದ್ದಲ್ಲಿ ಕಡಬ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ. ಸಂಪರ್ಕಿಸಲು: 9480805364.

ಮಣೂರು ಫ್ರೆಂಡ್ಸ್ ರಜತ ಮಹೋತ್ಸವ ಆಮಂತ್ರಣ ಪತ್ರಿಕೆ ಬಿಡುಗಡೆ



ಕೋಟ: ಇಲ್ಲಿನ ಕೋಟ ಮಣೂರು ಮಹಾಲಿಂಗೇಶ್ವರ ಜಾತ್ರೆಯ ಪ್ರಯುಕ್ತ ಪ್ರತಿವರ್ಷ ಮಣೂರು ಫ್ರೆಂಡ್ಸ್ ಮಣೂರು ಆಶ್ರಯದಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಪರ್ವಕ್ಕೆ ಬೆಳ್ಳಿ ಹಬ್ಬದ ಸಂಭ್ರಮ ಈ ಪ್ರಯುಕ್ತ ರಜತ ಸಂಭ್ರಮ ಶೀರ್ಷಿಕೆಯಡಿ ವಿವಿಧ ಸಾಮಾಜಿಕ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿದ್ದು ಇದರ ಆಮಂತ್ರಣ ಪತ್ರಿಕೆಯನ್ನು ಮಣೂರು ಮಹಾಲಿಂಗೇಶ್ವರ ದೇಗುಲ ಆಡಳಿತ ಮಂಡಳಿಯ ಅಧ್ಯಕ್ಷ ಸತೀಶ್ ಹೆಚ್ ಕುಂದರ್ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಣೂರು ಫ್ರೆಂಡ್ಸ್ ಅಧ್ಯಕ್ಷ ರಾಘವೇಂದ್ರ ಆಚಾರ್ ,ಗೌರವ ಸಲಹೆಗಾರ ಸುಬ್ರಾಯ ಆಚಾರ್,ಗೌರವಾಧ್ಯಕ್ಷ ಸುರೇಶ್ ಆಚಾರ್,ದೇಗುಲದ ಟ್ರಸ್ಟಿ ಅಶೋಕ್ ಶೆಟ್ಟಿ ಕೊಯ್ಕೂರು, ಸಂಘದ ಪ್ರಮುಖರಾದ ಸುಧಾಕರ ಆಚಾರ್,ದಿನೇಶ್ ಆಚಾರ್, ದೇಗುಲದ ಜೀರ್ಣೋದ್ಧಾರ ಸಮಿತಿಯ ಪ್ರಮುಖರಾದ ವಿಷ್ಣುಮೂರ್ತಿ ಮಯ್ಯ, ಅರುಣಾಚಲ ಮಯ್ಯ, ಶಿವರಾಮ ಶೆಟ್ಟಿ,ಗೋಪಾಲ ಪೈ, ಸುರೇಶ್ ಶೆಟ್ಟಿ,ನಾಗರಾಜ್ ಅಮೀನ್, ಸೇರಿದಂತೆ ಅನೇಕ ಗಣ್ಯರು,ಮಣೂರು ಫ್ರೆಂಡ್ಸ್ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಕಾಪುತಕಾಡು ಶ್ರೀ ರಾಜಗುಳಿಗ ಸಾನಿಧ್ಯದ 4ನೇ ವರ್ಷದ ಪ್ರತಿಷ್ಠಾ ವಾರ್ಷಿಕೋತ್ಸವ

ಸವಣೂರು: ಪೆರುವಾಜೆ–ಪಾಲ್ತಾಡಿ–ಕೊಳ್ತಿಗೆ ಗ್ರಾಮದ ವ್ಯಾಪ್ತಿಗೆ ಸಂಬಂಧಪಟ್ಟ ಕಾಪುತಕಾಡು ಶ್ರೀರಾಜಗುಳಿಗ ಸಾನಿಧ್ಯದ 4ನೇ ಪ್ರತಿಷ್ಠಾ ವಾರ್ಷಿಕೋತ್ಸವ ಹಾಗೂ ದೈವದ ಕೋಲ ನಡೆಯಿತು.

ಮಾ.9ರಂದು ಬೆಳಗ್ಗೆ ಸರ್ವೇಶ್ ಹೆಬ್ಬಾರ್ ಪೆರುವಾಜೆ ಅವರ ಪೌರೋಹಿತ್ಯದಲ್ಲಿ ದೇವತಾ ಪ್ರಾರ್ಥನೆ, ಸ್ಥಳ ಶುದ್ಧಿ, ಶ್ರೀ ಮಹಾಗಣಪತಿ ಹೋಮ ನಡೆಯಿತು. ಸಂಜೆ ದೈವಕ್ಕೆ ಎಣ್ಣೆ ವೀಳ್ಯ ಕೊಟ್ಟು ರಾತ್ರಿ ಶ್ರೀರಾಜಗುಳಿಗ ದೈವದ ನರ್ತನ ಸೇವೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು. ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು.

ಈ ಸಂದರ್ಭ ಆದರ್ಶ ವಿವಿಧೋದ್ದೇಶ ಸಹಕಾರಿ ಸಂಘದ ಉಪಾಧ್ಯಕ್ಷ ಎನ್. ಸುಂದರ ರೈ ಸವಣೂರು, ರಾಮಕೃಷ್ಣ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ನಿರ್ದೇಶಕ ಬಿ. ದಯಾಕರ ಆಳ್ವ, ಚೆನ್ನಾವರ ಉಳ್ಳಾಕುಲು ದೈವಸ್ಥಾನದ ಕಾರ್ಯದರ್ಶಿ ದೀಕ್ಷಿತ್ ಜೈನ್ ಚೆನ್ನಾವರಗುತ್ತು, ಪೆರುವಾಜೆ ಗ್ರಾ.ಪಂ. ಮಾಜಿ ಸದಸ್ಯ ಸಚಿನ್‌ರಾಜ್ ಶೆಟ್ಟಿ ಪೆರುವಾಜೆಗುತ್ತು, ಕೊಳ್ತಿಗೆ ಗ್ರಾ.ಪಂ. ಮಾಜಿ ಸದಸ್ಯರಾದ ಸುನೀಲ್ ರೈ ಪಾಲ್ತಾಡು, ಶುಭಲತಾ ಜೆ. ರೈ, ಸುಂದರ ಪಾಲ್ತಾಡು, ಜಿಲ್ಲಾ ಕೃಷಿಕ ಸಮಾಜದ ಪ್ರಧಾನ ಕಾರ್ಯದರ್ಶಿ ರಾಕೇಶ್ ರೈ ಕೆಡೆಂಜಿ, ಸವಣೂರು ಪ್ರಾಥಮಿಕ ಕೃ.ಪ.ಸ. ಸಂಘದ ಅಧ್ಯಕ್ಷ ತಾರಾನಾಥ ಕಾಯರ್ಗ, ಉಪಾಧ್ಯಕ್ಷ ಚೇತನ್ ಕುಮಾರ್ ಕೋಡಿಬೈಲು, ಸವಣೂರು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷ ಪ್ರಭಾಕರ ಶೆಟ್ಟಿ ನಡುಬೈಲು, ರಾಮಕೃಷ್ಣ ಪ್ರಭು, ಯು.ಪಿ. ರೈ ನಡುಬೈಲು, ಮುರುಳ್ಯ ಗ್ರಾ.ಪಂ. ಮಾಜಿ ಅಧ್ಯಕ್ಷೆ ಜಾನಕಿ ಶಾಂತಿನಗರ, ಸವಣೂರು ಗ್ರಾ.ಪಂ. ಮಾಜಿ ಸದಸ್ಯರಾದ ಗಿರಿಶಂಕರ ಸುಲಾಯ, ವಿನೋದಾ ರೈ, ಸತೀಶ್ ಬಲ್ಯಾಯ, ಪೆರುವಾಜೆ ಶ್ರೀ ಜಲದುರ್ಗಾದೇವಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಮಾಜಿ ಸದಸ್ಯೆ ದಾಮೋದರ ನಾಯ್ಕ ನಾಗನಮಜಲು, ಪುತ್ತೂರು ಮೆಸ್ಕಾಂ ಅಧಿಕಾರಿ ವಿದ್ಯಾ ಚೆನ್ನಕೇಶವ, ಮಹಾಲಿಂಗ ನಾಯ್ಕ ಪೆಲತಡ್ಕ, ರವಿಪ್ರಸಾದ್ ಆಳ್ವ ಪಾಲ್ತಾಡು ಹಾಗೂ ಶ್ರೀ ರಾಜ ಗುಳಿಗ ಸೇವಾ ಸಮಿತಿಯ ಗೌರವಾಧ್ಯಕ್ಷರಾದ ಪಿ. ಮಂಜಪ್ಪ ರೈ, ಕಾರ್ಯಾಧ್ಯಕ್ಷ ದೇವರಾಜ ಆಳ್ವ, ಅಧ್ಯಕ್ಷ ಡಾ. ಹರಿಕೃಷ್ಣ ರೈ ಜಿ.ಎನ್., ಪ್ರಧಾನ ಕಾರ್ಯದರ್ಶಿ ಪ್ರವೀಣ್ ಚೆನ್ನಾವರ, ಉಪಾಧ್ಯಕ್ಷರಾದ ಸುಧಾಮ ಮಣಿಯಾಣಿ, ಸುಂದರ ನಾಯ್ಕ, ಜತೆ ಕಾರ್ಯದರ್ಶಿಗಳಾದ ದಿನೇಶ್ ಶಾಂತಿಮೂಲೆ, ಶಶಿಕುಮಾರ್, ಕೋಶಾಧಿಕಾರಿ ಬಾಬು ನಾಯ್ಕ ಶಾಂತಿಮೂಲೆ ಮತ್ತಿತರರಿದ್ದರು.



ಹೆಚ್ಚುತ್ತಿರುವ ಭಕ್ತರ ಸಂಖ್ಯೆ

4 ವರ್ಷದ ಹಿಂದೆ ಜೀರ್ಣೋದ್ಧಾರಗೊಂಡು ದೈವದ ಪ್ರತಿಷ್ಠೆ ನಡೆದು ದೈವದ ನೇಮೋತ್ಸವ ಪ್ರತೀ ವರ್ಷ ನಡೆಯುತ್ತಿದ್ದು, ಪ್ರತೀ ವರ್ಷದ ನೇಮೋತ್ಸವಕ್ಕೆ ಆಗಮಿಸುವ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದು ಕ್ಷೇತ್ರದ ದೈವದ ಕಾರಣಿಕತೆಗೆ ಸಾಕ್ಷಿಯಾಗಿದೆ. ಅಲ್ಲದೆ, ಪ್ರತೀ ತಿಂಗಳ 9ನೇ ತಾರೀಕಿನಂದು ನಡೆಯುವ ದೀಪಾರಾಧನೆಯ ಸೇವೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಮಾಡುತ್ತಿದ್ದಾರೆ.

ಅಚ್ಚುಕಟ್ಟಾದ ವ್ಯವಸ್ಥೆ

ಬೆಟ್ಟದ ತುದಿಯಲ್ಲಿ ಇರುವ ಶ್ರೀರಾಜಗುಳಿಗ ಸಾನಿಧ್ಯದಲ್ಲಿ ನೇಮೋತ್ಸವದ ಹಿನ್ನೆಲೆಯಲ್ಲಿ ಮಾಡಿರುವ ವ್ಯವಸ್ಥೆ, ಸಸ್ಯಾಹಾರಿ–ಮಾಂಸಹಾರಿ ಪ್ರತ್ಯೇಕ ಊಟದ ವ್ಯವಸ್ಥೆ, ಸಂಪರ್ಕ ರಸ್ತೆಯ ಅಭಿವೃದ್ಧಿ ಸೇರಿದಂತೆ ಕ್ಷೇತ್ರದ ವ್ಯಾಪ್ತಿಯಲ್ಲಿ ಆಗಿರುವ ಧನಾತ್ಮಕ ಬದಲಾವಣೆಗಳಿಗೆ ಭಕ್ತಾದಿಗಳು ಶ್ಲಾಘನೆ ವ್ಯಕ್ತಪಡಿಸಿದರು.

ಜನಾಂಗೀಯ ಅಧ್ಯಯನದ ಮಾದರಿ ಸೃಷ್ಟಿಸಿದ ವಾಮನ ನಂದಾವರರು: ಡಾ. ಚಲಪತಿ



ಮಂಗಳೂರು: ಜಾನಪದ ಸಂಶೋಧಕರಾಗಿದ್ದ ಡಾ. ವಾಮನ ನಂದಾವರ ಅವರು ವೈಯಕ್ತಿಕ ನೆಲೆಯಲ್ಲಿ ನಡೆಸಿದ ಅಧ್ಯಯನ ಕೇವಲ ಕರಾವಳಿಯ ಜನಪದೀಯ ಹಾಗೂ ಜನಾಂಗೀಯ ಅಧ್ಯಯನಕ್ಕೆ ಮಾತ್ರ ಸೀಮಿತವಾದುದಲ್ಲ, ಅದು ಒಟ್ಟು ಕರ್ನಾಟಕದ ಒಳಗೆ ಜನಪದೀಯವಾಗಿ ಜನಾಂಗೀಯ ಅಧ್ಯಯನವನ್ನುಹೇಗೆಮಾಡಬೇಕೆಂಬ ಮಾದರಿಯನ್ನು ತೋರಿಸಿಕೊಟ್ಟಿತು ಎಂದು ಮೈಸೂರು ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದ ಸಂಶೋಧಕ ಡಾ. ಚಲಪತಿ ಹೇಳಿದರು .

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ಆಕೃತಿ ಆಶಯ ಪಬ್ಲಿಕೇಷನ್ಸ್ ಸಹಯೋಗದೊಂದಿಗೆ ತುಳು ಅಕಾಡೆಮಿಯಲ್ಲಿ ಶನಿವಾರ ನಡೆದ ಜಾನಪದ ವಿದ್ವಾಂಸ ಹಾಗೂ ತುಳು ಅಕಾಡೆಮಿ ಮಾಜಿ ಅಧ್ಯಕ್ಷ ಡಾ. ವಾಮನ ನಂದಾವರ ಅವರ ಸಂಸ್ಮರಣೆ ಹಾಗೂ ಚಂದ್ರಕಲಾ ನಂದಾವರ ಅವರು ಸಂಪಾದಿಸಿದ ನಂದಾವರ ಅವರ ಜಾತಿ ಜನಾಂಗಗಳ ಅಧ್ಯಯನ ಕೃತಿ 'ಆದಿಮ' ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಶೈಕ್ಷಣಿಕ ವ್ಯಾಪ್ತಿಯಲ್ಲಿ ಜಾನಪದ ಅಧ್ಯಯನ ಆರಂಭವಾಗುತ್ತಿದ್ದ ಎಂಬತ್ತರ ದಶಕದಲ್ಲಿ ವಾಮನ ನಂದಾವರ ಅವರು ಕೈಗೊಂಡ ಅಧ್ಯಯನ ಮಾರ್ಗವು ಜಾನಪದ ಅಧ್ಯಯನ ಲೋಕದಲ್ಲಿ ಒಂದು ವಿಭಿನ್ನ ಮಾದರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಕೃತಿಗಳ ಬಿಡುಗಡೆಯನ್ನು ಮಾಡಿದರು. ನಂದಾವರ ಅವರು ತುಳು ಸಂಶೋಧಕನಾಗಿ ಕಾರ್ಯನಿರ್ವಹಿಸಿದಷ್ಟೇ ಕಾಳಜಿಯಲ್ಲಿ ತುಳುವಿನ ಕಾರ್ಯಕರ್ತ ಹಾಗೂ ನಾಯಕನಾಗಿಯೂ ಕಾರ್ಯನಿರ್ವಹಿಸಿದ್ದರು ಎಂದು ಅಭಿಪ್ರಾಯಪಟ್ಟರು.

ಉಚ್ಚಿಲ ಕಲಾ ಗಂಗೋತ್ರಿ ನಿರ್ದೇಶಕರಾದ ನಿವೃತ್ತ ಪ್ರಾಂಶುಪಾಲ ಸದಾಶಿವ ಅವರು 'ವಾಮನ ನಂದಾವರ' ಚಾವಡಿಯ ನಾಮ ಫಲಕವನ್ನು ಅನಾವರಣಗೊಳಿಸಿದರು. ಡಾ. ವಾಮನ ನಂದಾವರ ಅವರ 'ತಾಳಮೇಳ' ಕೃತಿಯನ್ನು ಪರಿಚಯಿಸಿದ ಕವಯಿತ್ರಿ ಜ್ಯೋತಿ ಮಹಾದೇವ, ನಂದಾವರ ಅವರ ಕವನಗಳಲ್ಲಿ ವಿಶಿಷ್ಟವಾದ ಭಾಷಾ ಪ್ರಯೋಗವನ್ನು ಮಾಡಿದ್ದಾರೆ ಎಂದು ಹೇಳಿದರು.

ಸಂಗೀತ ಕಲಾವಿದೆ ರತ್ನಾವತಿ ಬೈಕಾಡಿ ಅವರನ್ನು ಸನ್ಮಾನಿಸಲಾಯಿತು. ತುಳು ಸಾಹಿತ್ಯ ಅಕಾಡೆಮಿಯ ಸದಸ್ಯ ಸಂಚಾಲಕರಾದ ಬಾಬು ಪಾಂಗಳ ಉಪಸ್ಥಿತರಿದ್ದರು.

ತುಳು ಅಕಾಡೆಮಿಯ ಮಾಜಿ ಸದಸ್ಯ ಬೆನೆಟ್ ಅಮ್ಮಣ್ಣ ಕಾರ್ಯಕ್ರಮ ನಿರೂಪಿಸಿದರು. ಆಕೃತಿ ಆಶಯ ಪ್ರಕಾಶಕ ಕಲ್ಲೂರು ನಾಗೇಶ್ ಸ್ವಾಗತಿಸಿ ಪ್ರಸ್ತಾವಿಕಮಾತನಾಡಿದರು. ಚಂದ್ರಕಲಾ ನಂದಾವರ ವಂದಿಸಿದರು.

'ಪರಪು' ವತಿಯಿಂದ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜರಿಗೆ ಮನವಿ

ತುಳು ಎಂಎ ಕೋರ್ಸ್ ಸ್ಥಳಾಂತರ ಬೇಡ



ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯದ ತುಳು ಎಂ.ಎ. ಸ್ನಾತಕೋತ್ತರ ಪದವಿಯನ್ನು ನಗರದ ಹಂಪನಕಟ್ಟೆ ವಿಶ್ವವಿದ್ಯಾಲಯ ಕಾಲೇಜಿನಲ್ಲೇ ಮುಂದುವರೆಸಬೇಕು ಎಂದು ಒತ್ತಾಯಿಸಿ ಮಂಗಳೂರು ವಿವಿ ತುಳು ಎಂಎ ಹಿರಿಯ ವಿದ್ಯಾರ್ಥಿಗಳ ಸಂಘ 'ಪರವು' ವತಿಯಿಂದ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅವರಿಗೆ ಮನವಿ ಸಲ್ಲಿಸಲಾಯಿತು.

ಮಂಗಳೂರು ವಿಶ್ವವಿದ್ಯಾಲಯವು 2018ರಲ್ಲಿ ತುಳು ಎಂಎ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಹಂಪನ ಕಟ್ಟೆಯ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಪ್ರಾರಂಭಿಸಲಾಗಿತ್ತು. ಇದುವರೆಗೆ ಸುಮಾರು 100 ವಿದ್ಯಾರ್ಥಿಗಳು ಇಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಆದರೆ, 2025–26ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಅಧಿಸೂಚನೆಯಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಈ ಕೋರ್ಸನ್ನು ಮಂಗಳೂರು ವಿಶ್ವವಿದ್ಯಾಲಯ ಕೊಣಾಜೆ ಕ್ಯಾಂಪಸ್‌ಗೆ ಸ್ಥಳಾಂತರಿಸುವುದಾಗಿ ಸೂಚನೆ ನೀಡಲಾಗಿತ್ತು. ಈ ಪ್ರಸ್ತಾವ ಬಂದಾಗಿನಿಂದ ಈ ಶೈಕ್ಷಣಿಕ ವರ್ಷದಲ್ಲಿ ಸೇರ್ಪಡೆ ಬಯಸಿದ್ದ ಅಭ್ಯರ್ಥಿಗಳು ಆತಂಕಗೊಂಡು ಪ್ರಥಮ ವರ್ಷದ ಸೇರ್ಪಡೆಗೆ ಹಿನ್ನಡೆಯಾಗಿದೆ ಎಂದು ಮನವಿಯಲ್ಲಿ ಹೇಳಲಾಗಿದೆ.

'ತುಳು ಅಧ್ಯಯನ ಕೇಂದ್ರವನ್ನು ವಿವಿ ಕಾಲೇಜಿನಲ್ಲಿ ಉಳಿಸಲು ಸರಕಾರ ಬಯಸುವುದಿಲ್ಲ. ವಿವಿ ಕಾಲೇಜಿನಲ್ಲಿ ಈ ಕೇಂದ್ರವನ್ನು ಉಳಿಸಬೇಕಾದರೆ ಸರ್ಕಾರದ ಪ್ರತ್ಯೇಕ ಆದೇಶ ಬೇಕಾಗುತ್ತದೆ ಎಂಬುದಾಗಿ ಉಪಕುಲಪತಿ ತಿಳಿಸಿದ್ದಾರೆ'. ಸರಕಾರದಲ್ಲಿ ತುಳುವನ್ನು ಎರಡನೇ ಅಧಿಕೃತ ಭಾಷೆಯನ್ನಾಗಿ ಮಾಡಲು ಉತ್ಸುಕವಾಗಿರುವ ಈ ಸಂದರ್ಭದಲ್ಲಿ ತುಳು ಅಧ್ಯಯನ ಕೇಂದ್ರದ ರಕ್ಷಣೆ ಹಾಗೂ ಅದರ ಉಳಿವಿಗೆ ಮಧ್ಯಪ್ರವೇಶ ಮಾಡಿ ಮಂಗಳೂರು ತುಳು ಎಂಎ ಅಧ್ಯಯನ ಕೇಂದ್ರ ವಿಶ್ವವಿದ್ಯಾಲಯ ಕಾಲೇಜು ಹಂಪನಕಟ್ಟೆ ಇಲ್ಲಿ ಉಳಿಯುವಂತೆ ಮಾಡಿ ಉಭಯ ಜಿಲ್ಲೆಯಿಂದ ಬರುವ ತುಳು ಅಧ್ಯಯನ ಆಸಕ್ತರಿಗೆ ಅನುಕೂಲ ಮಾಡಿಕೊಡಲು ಸರಕಾರದಿಂದ ಆದೇಶ ಹೊರಡಿಸಲು ಒತ್ತಾಯಿಸಬೇಕಾಗಿ ವಿನಮ್ರವಾಗಿ ವಿಜ್ಞಾಪಿಸುತ್ತೇವೆ. ಪ್ರಸ್ತುತ ನಮ್ಮ ನಾಡಿನ ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿಸುವ ಪ್ರಕ್ರಿಯೆ ನಡೆಯುತ್ತಿದ್ದು ತುಳು ಭಾಷೆ ಶೈಕ್ಷಣಿಕವಾಗಿಯೂ ಮಾನ್ಯತೆಯನ್ನು ಪಡೆದಲ್ಲಿ ತುಳುವಿಗೆ ಅಧಿಕೃತ ಸ್ಥಾನಮಾನ ಪಡೆಯಲು ಹೆಚ್ಚು ಅನುಕೂಲವಾಗಬಹುದು ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಗೃಹ ಕಚೇರಿಯಲ್ಲಿ ಮನವಿ ಸ್ವೀಕರಿಸಿದ ಐವನ್ ಡಿಸೋಜ ಅವರು, ಈ ಬಗ್ಗೆ ವಿಧಾನ ಪರಿಷತ್ ಕಲಾಪದಲ್ಲಿ ಚರ್ಚಿಸುವುದಾಗಿ ಭರವಸೆ ನೀಡಿದರು.

ಮನವಿ ನೀಡಿದ ನಿಯೋಗದಲ್ಲಿ ತುಳು ಎಂಎ ಹಿರಿಯ ವಿದ್ಯಾರ್ಥಿಗಳ ಸಂಘ 'ಪರವು' ಉಪಾಧ್ಯಕ್ಷ ಹರೀಶ್ ಎ., ಸದಸ್ಯರಾದ ಶಿವರಾಮ ಶೆಟ್ಟಿ, ಗೀತಾ ಜೈನ್, ಭಾಗ್ಯಶ್ರೀ ಶೆಟ್ಟಿ ಉಪಸ್ಥಿತರಿದ್ದರು.



ಮಂಗಳೂರು ಮಹಾನಗರ ಪಾಲಿಕೆಯ 2ನೇ ವಾರ್ಡ್ ವ್ಯಾಪ್ತಿಗೆ ಒಳಪಟ್ಟ ಮಧ್ಯ ಅಂಬೇಡ್ಕರ್ ಕಾಲನಿಯಲ್ಲಿರುವ ಸಾರ್ವಜನಿಕರ ಕುಡಿಯುವ ನೀರಿನ ಬಾವಿ ಬತ್ತಿ ಹೋಗಿದ್ದು, ಶಾಸಕ ಡಾ. ವೈ. ಭರತ್ ಶೆಟ್ಟಿ ಅವರು ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರು. ಈ ಸಂದರ್ಭ, ಸ್ಥಳೀಯರ ಬಹು ಬೇಡಿಕೆಯಂತೆ ಶೀಘ್ರವಾಗಿ ಕುಡಿಯುವ ನೀರಿನ ಬಾವಿಯ ಹೆಚ್ಚುವರಿ ಕಾಮಗಾರಿಯನ್ನು ನಡೆಸಿ ಹೂಳೆತ್ತಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು.

ಕೆನರಾ ಕಾಲೇಜಿನಲ್ಲಿ ಕನ್ನಡ ತುಳು ವಿಕಿಲರ್ನ್ ವಿಕಿಪೀಡಿಯ ಕಾರ್ಯಾಗಾರ



ಮಂಗಳೂರು: ನಗರದ ಕೆನರಾ ಕಾಲೇಜಿನ (ಸ್ವಾಯತ್ತ) ಕಂಪ್ಯೂಟರ್ ಸೈನ್ಸ್ ಮತ್ತು ಅಪ್ಲಿಕೇಶನ್ ವಿಭಾಗ ಹಾಗೂ ತುಳು ಸಂಘದ ಸಹಯೋಗದಲ್ಲಿ ಕನ್ನಡ–ತುಳು ವಿಕಿಮೀಡಿಯಾ ಮೆಟಾ ಸಮುದಾಯ ಜೊತೆಗೂಡಿ 'ಕನ್ನಡ– ತುಳು ವಿಕಿಲರ್ನ್' ವಿಕಿಪೀಡಿಯ ಕಾರ್ಯಾಗಾರ ಕಾಲೇಜಿನಕಂಪ್ಯೂಟರ್ ಲ್ಯಾಬ್‌ನಲ್ಲಿ ಶನಿವಾರ ಆಯೋಜಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ಕಾಲೇಜಿನ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸ್ಮಿತಾ ಎಂ. ಮಾತನಾಡಿ, ಇಂದಿನ ಡಿಜಿಟಲೀಕರಣದ ಯುಗದಲ್ಲಿ ಜ್ಞಾನವನ್ನು ಸಂಗ್ರಹಿಸಿ ಹಂಚಿಕೊಳ್ಳುವ ಪ್ರಮುಖ ವೇದಿಕೆಯಾಗಿ ವಿಕಿಪೀಡಿಯ ಬೆಳೆದಿದೆ. ಕನ್ನಡ ಮತ್ತು ತುಳು ಭಾಷೆಗಳ ವಿಷಯಗಳನ್ನು ವಿಕಿಪೀಡಿಯದಲ್ಲಿ ದಾಖಲಿಸುವುದರಿಂದ ನಮ್ಮ ಸ್ಥಳೀಯ ಭಾಷೆಗಳು ವಿಶ್ವದ ಮಟ್ಟದಲ್ಲಿ ಪರಿಚಿತರಾಗುತ್ತವೆ. ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಂಡು ತಮ್ಮ ಭಾಷೆಯ ಜ್ಞಾನವನ್ನು ಡಿಜಿಟಲ್ ವೇದಿಕೆಯಲ್ಲಿ ಹಂಚಿ ಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ. ಪ್ರೇಮಲತಾ ವಿ. ಮಾತನಾಡಿ, ವಿಕಿಪೀಡಿಯವು ಇಂದಿನ ವಿದ್ಯಾರ್ಥಿಗಳಿಗೆ ಜ್ಞಾನ ಸಂಪಾದನೆ ಹಾಗೂ ಹಂಚಿಕೆಗಾಗಿ ಅತ್ಯಂತ ಉಪಯುಕ್ತವಾದ ವೇದಿಕೆ. ಇಂತಹ ಕಾರ್ಯಾಗಾರಗಳ ಮೂಲಕ ಸಂಶೋಧನಾ ಮನೋಭಾವವನ್ನು ಬೆಳೆಸಿಕೊಳ್ಳುವುದರ ಜೊತೆಗೆ ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಡಿಜಿಟಲ್ ಜಗತ್ತಿನಲ್ಲಿ ಉಳಿಸಿ ಬೆಳೆಸುವ ಕಾರ್ಯದಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಸಂಪನ್ಮೂಲವ್ಯಕ್ತಿ, ವಿಕಿಮೀಡಿಯಾದ ಆಡ್ಮಿನ್ ಮತ್ತು ತಾಂತ್ರಿಕ ಸಂಪಾದಕ ಅನುಪ್ ರಾವ್, ತುಳು ಮತ್ತು ಕನ್ನಡ ವಿಕಿಪೀಡಿಯದ ಆಗತ್ಯತೆ, ಅದರ ಬಳಕೆ ಹಾಗೂ ಲೇಖನ ರಚನೆ ಮಾಡುವ ವಿಧಾನಗಳ ಕುರಿತು ವಿವರವಾದ ಮಾಹಿತಿನೀಡಿದರು. ವಿಕಿಪೀಡಿಯದಲ್ಲಿ ವಿಷಯಗಳನ್ನು ಹೇಗೆ ಬರೆಯಬೇಕು, ಸಂಪಾದನೆ ಮಾಡಬೇಕು ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಹೇಗೆ ಸೇರಿಸಬೇಕು ಎಂಬುದರ ಬಗ್ಗೆ ಅವರು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಮಾರ್ಗದರ್ಶನ ನೀಡಿದರು.

> ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಭಾಷೆಯ ಜ್ಞಾನವನ್ನು ಡಿಜಿಟಲ್ ವೇದಿಕೆಯಲ್ಲಿ ಹಂಚಿಕೊಳ್ಳಬೇಕು

ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಬಬಿತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ತುಳು ಸಂಘದ ಸಂಯೋಜಕರಾದ ಕನ್ನಡ ವಿಭಾಗದ ಮುಖ್ಯಸ್ಥೆ, ಪ್ರಾಧ್ಯಾಪಕಿ ವಾಣಿ ಯು. ಎಸ್., ಇಂಗ್ಲಿಷ್ ಉಪನ್ಯಾಸಕಿ ಮನಿಷಾ ಉಪಸ್ಥಿತರಿದ್ದರು. ಡಿವಿಕಾಸ್ ಸ್ವಾಗತಿಸಿದರು. ತ್ರಿಷಾ ವಂದಿಸಿದರು. ವೈಷ್ಣವ್ ನಿರೂಪಿಸಿದರು.

ಓವರ್ ಸ್ಪೀಡ್‌ಗೆ ದಂಡ ವಿಧಿಸಿ, ಕಾನೂನು ಅರಿವು ಮೂಡಿಸಿದ ಕುಂದಾಪುರ ಟ್ರಾಫಿಕ್ ಪೊಲೀಸರು



ಕುಂದಾಪುರ: ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಗದಿಪಡಿಸಿದ ವೇಗಕ್ಕಿಂತ ಜಾಸ್ತಿಯಾದ ವೇಗದಲ್ಲಿ ಸಂಚರಿಸುತ್ತಿದ್ದ ಹಲವು ವಾಹನಗಳಿಗೆ ಕುಂದಾಪುರ ಸಂಚಾರ ಠಾಣೆ ಪೊಲೀಸರು ಶನಿವಾರ ಸಂಜೆ ಮೋಟಾರು ನಿಯಮ ಕಾಯ್ದೆಯಡಿ ದಂಡ ವಿಧಿಸಿ, ಕಾನೂನು ಪಾಲನೆ ಅರಿವು ಮೂಡಿಸಿದರು.

ನಗರದ ಹೊರವಲಯದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಎದುರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಜೆ ಕಾರ್ಯಾಚರಣೆಗಿಳಿದ ಪೊಲೀಸರು ಈ ಪ್ರದೇಶದಲ್ಲಿ ನಿಗದಿಪಡಿಸಿದ (80 ಕಿ.ಮೀ.) ವೇಗಕ್ಕಿಂತ ಹೆಚ್ಚು ವೇಗದಲ್ಲಿ ಸಂಚರಿಸಿದ ವಾಹನಗಳನ್ನು ಸ್ಪೀಡ್ ರಾಡರ್ ಗನ್ (ವೇಗ ಪರಿಶೀಲನೆ ಯಂತ್ರ) ಮೂಲಕ ಪತ್ತೆ ಮಾಡಿ ವಾಹನ ತಡೆದು ಸಂಬಂದಪಟ್ಟವರಿಗೆ ವೇಗ ಮಿತಿಯ ಬಗ್ಗೆ ಮಾಹಿತಿ ನೀಡಿದರು ಹಾಗೂ ಅತೀ ವೇಗದಲ್ಲಿ ಸಂಚರಿಸಿದ ಒಂದಷ್ಟು ಮಂದಿಗೆ ದಂಡ ವಿಧಿಸಿದರು.

ಹೆಚ್ಚುತ್ತಿರುವ ರಸ್ತೆ ಅಪಘಾತಕ್ಕೆ ವಾಹನಗಳ ಅತೀಯಾದ ವೇಗವೂ ಒಂದು ಕಾರಣವಾಗಿದ್ದು ಇಲಾಖಾ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಈಗಾ ಗಲೇ ಮೂರ್ನಾಲ್ಕು ಬಾರಿ ಅತೀ ವೇಗ ಪರಿಶೀಲನೆ ಕಾರ್ಯಾಚರಣೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾಡಲಾಗಿದೆ. ವರದಿಯಾಗುತ್ತಿರುವ ಅಪಘಾತ ಪ್ರಕರಣಗಳಲ್ಲಿ ಸಾವಿನ ಸಂಖ್ಯೆಯೂ ಹೆಚ್ಚಿದ್ದು ಈ ಬಗ್ಗೆ ಇಲಾಖೆ ಗಂಭೀರವಾಗಿ ಪರಿಗಣಿಸುತ್ತದೆ. ಮುಂಬರುವ ದಿನದಲ್ಲಿ ರಾಜ್ಯ ಹೆದ್ದಾರಿ ಸಹಿತ ಅಗತ್ಯ ಕಡೆಗಳಲ್ಲಿ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಕುಂದಾಪುರ ಸಂಚಾರ ಠಾಣೆ ಪಿಎಸ್ಐ ಅನೂಪ್ ನಾಯಕ್ ಮಾಹಿತಿ ನೀಡಿದರು.

ಈ ವೇಳೆ ಟ್ರಾಫಿಕ್ ಠಾಣೆ ಪಿಎಸ್ಐ ಸುಧಾ ಪ್ರಭು, ಎಎಸ್ಐಗಳಾದ ಸುರೇಶ್, ನಾಗರಾಜ್ ಕುಲಾಲ್, ನಾಗಪ್ಪ, ಹೆಡ್ ಕಾನ್‌ಸ್ಟೇಬಲ್ ಕೇಶವ, ವೀರಪ್ಪ, ಶ್ರೀನಿವಾಸ, ಕಾನ್‌ಸ್ಟೇಬಲ್ ಪ್ರಸಾದ್, ವೆಂಕಟೇಶ್ ಕಾರ್ಯಾಚರಣೆಯಲ್ಲಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-46) ಡ್ರಾ ಮಾರ್ಚ್ 15ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MV 216603 (THRISSUR)
Consolation Prize Rs.5,000/-
MN 216603 MO 216603 MP 216603 MR 216603
MS 216603 MT 216603 MU 216603 MW 216603
MX 216603 MY 216603 MZ 216603
2nd Prize Rs.25,00,000/- [25 Lakhs]
MR 806466 (THIRUVANANTHAPURAM)
3rd Prize Rs.5,00,000/- [5 Lakhs]
MN 737578 (GURUVAYOOR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0028 0341 0606 0763 0845 1625 3837 4192 4475 4759 4881 6281 6910 7033 7751 8091 8198 9676 9761

5th Prize Rs.2,000/-
0375 5199 6274 7947 9343 9437

6th Prize Rs.1,000/-
0140 0268 0677 1127 1219 1868 1952 1964 2432 2721 3399 3922 3950 4177 4363 4379 4619 4944 6487 6489 7020 8185 8298 9084 9306

7th Prize Rs.500/-
0016 0214 0344 0449 0516 0519 0550 0820 0942 1102 1164 1503 1614 1729 2422 2640 2695 2707 2789 3335 3381 3450 3465 3479 3814 3858 4039 4112 4172 4233 4302 4340 4398 4530 4548 4595 4760 4886 4915 5295 5380 5516 5568 5647 5711 5733 5806 5918 5987 6062 6100 6102 6195 6264 6549 6994 7017 7054 7060 7550 7627 7889 7977 8297 8615 8680 8904 9038 9059 9078 9409 9439 9447 9448 9457 9460

8th Prize Rs.200/-
0041 0103 0151 0236 0296 0320 0541 0549 0685 0991 1017 1079 1096 1178 1195 1342 1462 1493 1671 1674 1719 2001 2081 2106 2170 2421 2457 2500 2621 2719 2740 2764 2765 2863 3079 3170 3239 3433 3443 3474 3661 3821 3983 4476 4712 4765 4838 4843 4861 4918 5161 5387 5429 5570 5611 5644 5649 5688 5891 5922 6027 6068 6098 6174 6344 6860 7119 7215 7408 7626 7705 7711 8004 8029 8036 8048 8239 8246 8285 8327 8394 8527 8541 8610 8703 8756 8927 9099 9149 9252 9411 9443

9th Prize Rs.100/-
0062 0097 0104 0148 0154 0351 0474 0498 0523 0533 0593 0732 0956 0959 1409 1414 1448 1517 1602 1695 1731 1760 2134 2177 2183 2215 2368 2448 2547 2558 2590 2665 2699 2769 2807 3006 3058 3138 3147 3250 3288 3312 3339 3417 3447 3552 3570 3587 3752 3762 3962 3990 4099 4107 4265 4310 4596 4649 4666 4747 4810 4826 4862 4906 4935 4947 4987 4997 5059 5096 5238 5494 5508 5529 5533 5552 5661 5712 5713 5795 5801 5828 5888 5947 6122 6124 6139 6302 6326 6524 6606 6749 6804 6907 6932 6952 6967 7106 7137 7260 7325 7336 7359 7416 7417 7442 7444 7513 7770 7787 7837 7879 7883 7915 7985 8015 8064 8077 8085 8113 8175 8200 8213 8280 8323 8328 8358 8397 8399 8606 8620 8654 8820 8934 8948 9013 9030 9108 9233 9250 9289 9398 9420 9495 9547 9584 9641 9863 9889 9928

ಕೋಡಿ ಕನ್ಯಾಣದ ರಾಮಪರ್ವದಲ್ಲಿ ನಿವೃತ್ತ ಯೋಧರಿಗೆ ಸನ್ಮಾನ

ಸಂಘ ಸಂಸ್ಥೆಗಳು ಗ್ರಾಮದ ಅಭಿವೃದ್ಧಿಗೆ ಪೂರಕ



ಕೋಟ: ಸಂಘ–ಸಂಸ್ಥೆಗಳು ಗ್ರಾಮದ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸುತ್ತವೆ ಇದಕ್ಕೆ ಇಲ್ಲಿನ ಕೋಡಿ ಶ್ರೀರಾಮ ಗೆಳೆಯರ ಬಳಗದ ಯೋಜನೆ ಯೋಚನೆ ಸಾಕ್ಷಿಯಾಗಿದೆ ಎಂದು ಕೋಟದ ಮಣೂರು ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್ ಹೇಳಿದರು.

ಶನಿವಾರ ಕೋಡಿ ಕನ್ಯಾಣದಲ್ಲಿ ಶ್ರೀರಾಮ ಗೆಳೆಯರ ಬಳಗ ಇದರ ವಾರ್ಷಿಕೋತ್ಸವ ರಾಮ ಪರ್ವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ 27 ನಿವೃತ್ತ ಯೋಧರನ್ನು ಗೌರವಿಸಲಾಯಿತು.

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮೂರ್ತೆದಾರ ಸಂಘದ ಸ್ಥಾಪಕಾಧ್ಯಕ್ಷ ಕೊರಗ ಪೂಜಾರಿ, ಯಕ್ಷಗಾನ ಸಾಮಾಜಿಕ ಕ್ಷೇತ್ರದ ರಾಘವೇಂದ್ರ ಕರ್ಕೇರ ಅವರನ್ನು ಅಭಿನಂದಿಸಲಾಯಿತು.

> ಸಮಾಜ ಕಟ್ಟುವ ಕಾಯಕ ಇಂದಿನ ಯುವ ಜನಾಂಗ ದಿಂದಾಗಬೇಕು ಅಲ್ಲದೆ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಕಾರ್ಯಕ್ರಮ ರೂಪಿಸಿ ಗ್ರಾಮೀಣ ಹಳ್ಳಿ ಭಾಗಕ್ಕೆ ಅತೀ ಅವಶ್ಯವಾದ ಕಾರ್ಯಕ್ಕೆ ಮುನ್ನುಡಿ ಬರೆಯುತ್ತಿರುವುದು ಶ್ಲಾಘನೀಯ
> ■ ಆನಂದ್ ಸಿ. ಕುಂದರ್

ಕೋಡಿ ಕನ್ಯಾಣ ಸರಕಾರಿ ಶಾಲೆಯ ದೈಹಿಕ ಶಿಕ್ಷಕ ವಿಜಯ ನಾಯರಿ ಇವರಿಗೆ ಗುರುವಂದನೆ ಸಲ್ಲಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಯಾದವ ಕರ್ಕೇರ ವಹಿಸಿದ್ದರು.

ಮುಖ್ಯ ಅಭ್ಯಾಗತರಾಗಿ ಶ್ರೀಕೃಷ್ಣ ಪ್ರಸಾದ ಕ್ಯಾಶು ಇಂಡಸ್ಟ್ರಿ ಮಾಲಿಕ ಸಂಪತ್ ಶೆಟ್ಟಿ, ಮಾಜಿ ತಾ.ಪಂ ಅಧ್ಯಕ್ಷೆ ಜ್ಯೋತಿ ಉದಯ ಪೂಜಾರಿ, ಶ್ರೀರಾಮ ಪ್ರಸಾದಿತ ಯಕ್ಷಗಾನ ಸಂಘದ ಅಧ್ಯಕ್ಷ ಕೋಡಿ ಜಗನಾಥ್ ಅಮೀನ್, ಕೋಡಿ ಪಂಚಾಯತ್ ಮಾಜಿ ಅಧ್ಯಕ್ಷ ಪ್ರಭಾಕರ್ ಮೆಂಡನ್, ಶ್ರೀ ಮಾರಿಕಾಂಬಾ ದೇಗುಲದ ಅಧ್ಯಕ್ಷ ಕೃಷ್ಣಮಾಸ್ಟರ್, ಮಾಜಿ ಜಿ.ಪಂ ಸದಸ್ಯ ರಾಘವೇಂದ್ರ ಕಾಂಚನ್, ಉದ್ಯಮಿ ಪ್ರಜ್ವಲ್, ಉಡುಪಿ ಅಜ್ಜರಕಾಡು ಆಸ್ಪತ್ರೆಯ ರವೀಂದ್ರ ಖಾರ್ವಿ, ಕ್ವಾಲಿಟಿ ಸೀ ಫುಡ್ ಮಾಲಿಕ ಶಂಕರ್ ಕುಂದರ್, ಪಿಡಿಒ ಹರೀಶ್ ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸಂಘದ ನಿಖಿಲ್ ಕರ್ಕೇರ ಸ್ವಾಗತಿಸಿದರು. ಕಾರ್ಯಕ್ರಮವನ್ನು ಪ್ರಣುತ್ ಗಾಣಿಗ ನಿರೂಪಿಸಿದರು. ಸ್ಥಳೀಯ ಪ್ರತಿಭೆಗಳಿಂದ ನೃತ್ಯ ವೈವಿಧ್ಯಮಯ ಕಾರ್ಯಕ್ರಮ, ಅರೆಹೊಳೆ ಪ್ರತಿಷ್ಠಾನದಿಂದ ಮಂದಾರ್ತಿ ಮಾದೇವಿ ನೃತ್ಯ ರೂಪಕ ಪ್ರದರ್ಶನಗೊಂಡಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಶ್ರೀಶಾ ಆಚಾರ್ ಪಾಂಡೇಶ್ವರ ನಿರ್ವಹಿಸಿದರು.

ಕಿರುಸುದ್ದಿ

ಕುಂದಾಪುರದ ನ್ಯಾಯಾಲಯದಲ್ಲಿ 891 ಪ್ರಕರಣಗಳು ಇತ್ಯರ್ಥ

ಕುಂದಾಪುರ : ತ್ವರಿತವಾಗಿ ಪ್ರಕರಣಗಳನ್ನು ವಿಲೇವಾರಿ ಮಾಡುವ ನಿಟ್ಟಿನಲ್ಲಿ ಹಮ್ಮಿಕೊಂಡ ಲೋಕ ಅದಾಲತ್‌ನಲ್ಲಿ ಶನಿವಾರ ಕುಂದಾಪುರದ ನ್ಯಾಯಾಲಯದಲ್ಲಿ ಒಟ್ಟು 891 ಪ್ರಕರಣಗಳು ಇತ್ಯರ್ಥಗೊಂಡಿದ್ದು, 5.39 ಕೋ. ರೂ. ಮೊತ್ತವನ್ನು ಪರಿಹಾರ ರೂಪದಲ್ಲಿ ಪಾವತಿಸುವಂತೆ ಆದೇಶಿಸಲಾಗಿದೆ. 17,973 ವ್ಯಾಜ್ಯ ಪೂರ್ವ ಪ್ರಕರಣವನ್ನು ಅದಾಲತ್‌ನಲ್ಲಿ ಇತ್ಯರ್ಥಪಡಿಸಿದ್ದು, ಅದರಲ್ಲಿ ಪರಿಹಾರ ರೂಪದಲ್ಲಿ 95.44 ಲಕ್ಷ ರೂ. ನೀಡುವಂತೆ ಸೂಚಿಸಲಾಗಿದೆ. ಇನ್ನು ಕುಂದಾಪುರದ 891 ಪ್ರಕರಣಗಳ ಪೈಕಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 17 ಪ್ರಕರಣ ಇತ್ಯರ್ಥಗೊಂಡು, 89.65 ಲಕ್ಷ ರೂ. ಪರಿಹಾರ, ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 54 ಇತ್ಯರ್ಥಗೊಂಡು, 2.56 ಕೋ.ರೂ. ಪರಿಹಾರ, ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ – 100 ಇತ್ಯರ್ಥಗೊಂಡು, 89.28 ಲಕ್ಷ ಪರಿಹಾರ, ಎರಡನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 208 ಇತ್ಯರ್ಥಗೊಂಡು, 58.86 ಲಕ್ಷ ರೂ. ಪರಿಹಾರ ಹಾಗೂ ಒಂದನೇ ಹೆಚ್ಚವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 512 ಪ್ರಕರಣ ಇತ್ಯರ್ಥಗೊಂಡಿದ್ದು, 44.73 ಲಕ್ಷ ರೂ. ಪರಿಹಾರ ನೀಡುವಂತೆ ಆದೇಶಿಸಲಾಗಿದೆ.

ಕಟೀಲು ಪದವಿ ಕಾಲೇಜಿನ ವಾರ್ಷಿಕ ಕ್ರೀಡಾಕೂಟ



ಕಟೀಲು : ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ಕ್ರೀಡಾಕೂಟವು ನಡೆಯಿತು. ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ವೃಂದಾ ಶಶಿಧರ ಹೆಗ್ಡೆ ಉದ್ಘಾಟಿಸಿ, ಕ್ರೀಡಾಕೂಟದ ಪುರುಷ ಮತ್ತು ಮಹಿಳಾ ಚಾಂಪಿಯನ್‌ಗಳಿಗೆ ನಗದು ಬಹುಮಾನಗಳನ್ನು ಘೋಷಿಸಿದರು. ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಿರಣ್ ಕುಮಾರ್ ಶೆಟ್ಟಿ, ಅಂತಿಮ ಬಿ.ಕಾಂ. ವಿದ್ಯಾರ್ಥಿನಿ ಶ್ರೇಯಾ ಅವರಿಗೆ ಯೋಗದಲ್ಲಿ ರಾಷ್ಟ್ರೀಯ ಮಟ್ಟದ ಸಾಧನೆಗಾಗಿ ಹಾಗೂ ದ್ವಿತೀಯ ಬಿ.ಕಾಂ. ವಿದ್ಯಾರ್ಥಿನಿ ಶಮಿತಾ ಅವರಿಗೆ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ಮಟ್ಟದ ಸಾಧನೆಗಾಗಿ ನಗದು ಬಹುಮಾನಗಳನ್ನು ಪ್ರದಾನ ಮಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ವಿಜಯ್ ವಿ., ದೈಹಿಕ ಶಿಕ್ಷಣ ನಿರ್ದೇಶಕ ಅಶ್ವತ್, ಕ್ರೀಡಾ ಕಾರ್ಯದರ್ಶಿ ಸುರಜ್, ಜತೆ ಕಾರ್ಯದರ್ಶಿ ಶ್ರೇಯಾ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾರ್ತಿಕ್ ನಾಯಕ್, ಉಪಾಧ್ಯಕ್ಷ ತರುಣ್ ಡಿ. ದೇವಾಡಿಗ ಮತ್ತು ಜತೆ ಕಾರ್ಯದರ್ಶಿ ಪ್ರಾರ್ಥನಾ ವೇದಿಕೆಯಲ್ಲಿದ್ದರು. ಶ್ರಾವ್ಯ ಮಲ್ಯಾ ಸ್ವಾಗತಿಸಿದರು. ಪ್ರೀತಿ ವಂದಿಸಿದರು. ಕೃಪಾ ಟಿ. ಶೆಟ್ಟಿ ನಿರೂಪಿಸಿದರು.

ತಂದೆಯ ಕಾಯಿಲೆಯ ನೆಪವೊಡ್ಡಿ ಯುವತಿಯಿಂದ 14 ಲಕ್ಷ ರೂ. ವಸೂಲಿ

ಉಡುಪಿ: ವಿವಿಧ ಸಮಸ್ಯೆಗಳ ನೆಪವೊಡ್ಡಿ ಪರಿಚಿತ ಯುವತಿಯೊಬ್ಬರಿಂದ ಹಂತ ಹಂತವಾಗಿ ಹಣ ಪಡೆದು, ಬಳಿಕ ಜೀವ ಬೆದರಿಕೆ ಹಾಕಿ ಬರೋಬ್ಬರಿ 14 ಲಕ್ಷ ರೂಪಾಯಿ ವಸೂಲಿ ಮಾಡಿದ ಘಟನೆ ಉಡುಪಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮಾರ್ಪಳ್ಳಿಯ ಮಹಿಮಾ (22) ವಂಚನೆಗೊಳಗಾದ ಯುವತಿ. ಶರತ್ ಈ ಕೃತ್ಯವೆಸಗಿದ ಆರೋಪಿ. ಈತ ಮೊದಲಿನಿಂದಲೂ ಮಹಿಮಾ ಅವರಿಗೆ ಪರಿಚಿತನಾಗಿದ್ದು, ಸಣ್ಣಪುಟ್ಟ ಸಮಸ್ಯೆಗಳನ್ನು ಹೇಳಿಕೊಂಡು 500, 1000 ಹಾಗೂ 2000 ರೂಪಾಯಿಗಳಂತೆ ಹಣ ಪಡೆಯುತ್ತಿದ್ದನು. ಮಹಿಮಾ ಅವರು ಕೊಟ್ಟ ಹಣವನ್ನು ವಾಪಸ್ ಕೇಳಿದಾಗಲೆಲ್ಲ ಯಾವುದಾದರೊಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದ. ಫೆಬ್ರವರಿ ತಿಂಗಳಲ್ಲಿ ಶರತ್ ಯುವತಿಗೆ ಕರೆ ಮಾಡಿ, ತನ್ನ ತಂದೆಗೆ ಹುಷಾರಿಲ್ಲ ಎಂದು ಹೇಳಿ 15 ಲಕ್ಷ ರೂಪಾಯಿ ನೀಡುವಂತೆ ಬೇಡಿಕೆಯಿಟ್ಟಿದ್ದಾನೆ. ಅಷ್ಟು ದೊಡ್ಡ ಮೊತ್ತದ ಹಣ ನೀಡಲು ಮಹಿಮಾ ನಿರಾಕರಿಸಿದಾಗ, ಫೋನ್‌ನಲ್ಲಿಯೇ ಅವಾಚ್ಯ ಶಬ್ದಗಳಿಂದ ಬೈದು, 'ಹಣ ನೀಡದಿದ್ದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ' ಎಂದು ಕೊಲೆ ಬೆದರಿಕೆ ಹಾಕಿದ್ದಾನೆ. ಆರೋಪಿಯ ಬೆದರಿಕೆಗೆ ಭಯಗೊಂಡ ಮಹಿಮಾ ಅವರು ಒತ್ತಾಯಪೂರ್ವಕವಾಗಿ ಒಟ್ಟು 14 ಲಕ್ಷ ರೂಪಾಯಿ ಹಣವನ್ನು ನೀಡಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಉಡುಪಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಜಕ ಶ್ರೀ ವಿಶ್ವೇಶತೀರ್ಥ ಪದವಿ ಕಾಲೇಜಿನಲ್ಲಿ ಉಚಿತ ಆರೋಗ್ಯ ತಪಾಸಣೆ

ಶಿರ್ವ: ಉಡುಪಿ ಶ್ರೀಪೇಜಾವರ ಮಠದ ಆಡಳಿತಕ್ಕೆ ಒಳಪಟ್ಟ ಪಾಜಕ ಶ್ರೀ ವಿಶ್ವೇಶತೀರ್ಥ ಮಹಾವಿದ್ಯಾಲಯ ಪದವಿ ಕಾಲೇಜು ಹಾಗೂ ಜೆಸಿಐ ಕಟಪಾಡಿ ಜಂಟಿ ಆಶ್ರಯದಲ್ಲಿ ಒಂದು ದಿನದ ಸಾರ್ವಜನಿಕ ಉಚಿತ ಆರೋಗ್ಯ ತಪಾಸಣೆ, (ಮಧುಮೇಹ, ಕಣ್ಣಿನ ತಪಾಸಣೆ, ಮೂಳೆ) ಹಾಗೂ ರಕ್ತದಾನ ಶಿಬಿರವು ಉಡುಪಿ ಜಿಲ್ಲಾ ಆಸ್ಪತ್ರೆ ಮತ್ತು ಸಿಎಸ್‌ಐ ಲೊಂಬಾರ್ಡ್ ಮೆಮೋರಿಯಲ್ ಆಸ್ಪತ್ರೆ ಸಹಯೋಗದೊಂದಿಗೆ ಕಾಲೇಜು ಸಭಾಂಗಣದಲ್ಲಿ ನಡೆಯಿತು. ಸಂಸ್ಥೆಯ ಟ್ರಸ್ಟಿ ಸುದರ್ಶನ್‌ರಾವ್ ಶಿಬಿರ ಉದ್ಘಾಟಿಸಿದರು. ಶಿಬಿರದಲ್ಲಿ ಕಟಪಾಡಿ ಜೆಸಿಐನ ಪ್ರಶಾಂತ್ ಆರ್.ಎಸ್., ವೃಂದಿತಾ ಪ್ರಶಾಂತ್, ರೋಹಿ ರತ್ನಾಕರ್, ವೈದ್ಯರುಗಳಾದ ಡಾ. ಓಜಸ್ವಿ, ಡಾ. ಕವಿನ್, ಡಾ. ಅಭಿನವ್, ಡಾ. ರೆಬೆಕಾ ಹಾಗೂ ದಾದಿಯರು ಸಹಕರಿಸಿದರು. ಕಾರ್ಯಕ್ರಮದಲ್ಲಿ ಪ್ರಿನ್ಸಿಪಾಲ್ ವಿಜಯ್ ಪಿ. ರಾವ್, ಸಂಯೋಜಕಿ ಸೌಮ್ಯಾ ಶ್ರೀಹರಿ, ಕಾಲೇಜಿನ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಭಾಗ್ಯಶ್ರೀ, ವಿದ್ಯಾರ್ಥಿ ಮುಖಂಡರಾದ ಅಭಿಜಿತ್, ಶಿಲ್ಪಾ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಶ್ರೇಯಾ ಜಿ.ಆರ್. ಕಾರ್ಯಕ್ರಮ ನಿರೂಪಿಸಿ, ಐಶ್ವರ್ಯ ಕೆ.ಎನ್. ಸ್ವಾಗತಿಸಿ, ಶಿಲ್ಪಾ ವಂದಿಸಿದರು. ಶಿಬಿರದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಸೇರಿದಂತೆ ಸುಮಾರು 200ಕ್ಕೂ ಅಧಿಕ ಜನ ಆರೋಗ್ಯ ಶಿಬಿರದ ಪ್ರಯೋಜನ ಪಡೆದುಕೊಂಡರು. ಹಾಗೂ 50 ಯುನಿಟ್ ರಕ್ತ ಸಂಗ್ರಹಿಸಲಾಯಿತು.



ಕಾಸರಗೋಡು ನಗರಸಭಾ ವ್ಯಾಪ್ತಿಯ 165ನೇ ಬೂತ್ ಎನ್‌ಡಿಎ ಕುಟುಂಬ ಸಂಗಮವು ಭೂಪಾಸ್ ಕಂಪೌಂಡ್‌ನಲ್ಲಿ ಜರಗಿತು. ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಉದ್ಘಾಟಿಸಿ ಮಾತನಾಡಿದರು. ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ನಗರಸಭಾ ಕೌನ್ಸಿಲರ್ ರವೀಂದ್ರ ಪೂಜಾರಿ, ಬೂತ್ ಸಮಿತಿ ಅಧ್ಯಕ್ಷ ಸೋಮಶೇಖರ, ಕಾರ್ಯದರ್ಶಿ ಸುಬ್ರಹ್ಮಣ್ಯ, ಪ್ರಮುಖರಾದ ಸುರೇಂದ್ರ ಪೂಜಾರಿ, ಮಾಧವ ಮಾಸ್ತರ್, ಶೃತಿ ಮುಂತಾದವರು ಉಪಸ್ಥಿತರಿದ್ದರು.

ಏ.20–ಮೇ 20: ಪುತ್ತೂರು ವಿದ್ಯಾಮಾತಾ ಅಕಾಡೆಮಿಯಿಂದ ಬೇಸಿಗೆ ಕೌಶಲ ಸಂಭ್ರಮ

ಪುತ್ತೂರು: ವಿದ್ಯಾರ್ಥಿಗಳ ರಜೆಯ ಸಮಯವನ್ನು ಜ್ಞಾನವರ್ಧನೆ ಮತ್ತು ಕೌಶಲಾಭಿವೃದ್ಧಿಗೆ ಪೂರಕವಾಗಿಸುವ ನಿಟ್ಟಿನಲ್ಲಿ ಪ್ರತಿಷ್ಠಿತ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯಾದ ವಿದ್ಯಾಮಾತಾ ಅಕಾಡೆಮಿಯು 4ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಏ.20–ಮೇ 20ರವರೆಗೆ ಒಂದು ತಿಂಗಳ ವಿಶೇಷ 'ಬೇಸಿಗೆ ಕೌಶಲ ಸಂಭ್ರಮ–2026' ಶಿಬಿರವನ್ನು ಪುತ್ತೂರು ಮತ್ತು ಸುಳ್ಯದಲ್ಲಿ ಆಯೋಜಿಸಿದ್ದು, ಶಿಬಿರಕ್ಕೆ ನೋಂದಣಿ ಆರಂಭಿಸಲಾಗಿದೆ. ಕೇವಲ ಪಠ್ಯಕ್ಕೆ ಸೀಮಿತವಾಗದೆ, ವಿದ್ಯಾರ್ಥಿಗಳ ಬೌದ್ಧಿಕ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡುವ ಈ ಶಿಬಿರವು ಈ ಬಾರಿ ಹತ್ತು ಹಲವು ವಿಶೇಷತೆಗಳನ್ನು ಒಳಗೊಂಡಿದೆ.

ಅನುಭವಿ ತರಬೇತುದಾರರು

ವಿದ್ಯಾಮಾತಾ ಅಕಾಡೆಮಿಯ ನುರಿತ ತರಬೇತುದಾರರು ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಮಕ್ಕಳ ಭವಿಷ್ಯವನ್ನು ಕೇಂದ್ರೀಕರಿಸಿ ಬೆಳಗ್ಗೆ 10ರಿಂದ ಸಂಜೆ 3 ಗಂಟೆಯವರೆಗೆ ತರಬೇತಿಗಳು ನಡೆಯಲಿದೆ. ತರಬೇತಿ ಪಡೆದುಕೊಳ್ಳುವ ವಿದ್ಯಾರ್ಥಿಗಳಿಗೆ ಮಾಥ್ಸ್ ಕ್ಲಬ್, ಅಬಾಕಸ್, ನವೋದಯ ಶಾಲೆ, ಸೈನಿಕ ಶಾಲೆ, ಮೊರಾರ್ಜಿ ಶಾಲೆ, ಆದರ್ಶ ವಿದ್ಯಾಲಯ ಸೇರಿದಂತೆ ವಿವಿಧ ವಸತಿ ಶಾಲಾ ಪ್ರವೇಶ ಪರೀಕ್ಷೆಗಳು, ವಿವಿಧ ಸ್ಕಾಲರ್‌ಶಿಪ್‌ಗಳು ಸೇರಿದಂತೆ ಭವಿಷ್ಯದ ಶೈಕ್ಷಣಿಕ ವ್ಯಾಸಂಗ ಹಾಗೂ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಗಮನವಹಿಸಿ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡಲಾಗುತ್ತದೆ. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು.

ನೋಂದಣಿಗಾಗಿ ಸಂಪರ್ಕಿಸಿ

ಶಿಬಿರಕ್ಕೆ ಈಗಾಗಲೇ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಆಸಕ್ತ ಪೋಷಕರು ತಮ್ಮ ಮಕ್ಕಳ ಹೆಸರನ್ನು ನೋಂದಾಯಿಸಲು **9620468869 / 9148935808** ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

ಕುಂಬಳೆ ಪಂಚಾಯತ್ ಸಮಿತಿಯಿಂದ ಮಹಿಳಾ ಸಂಗಮ | ಬಿಜೆಪಿ ಜಿಲ್ಲಾಧ್ಯಕ್ಷೆ ಅಶ್ವಿನಿ ಅಭಿಮತ

ಮೋದಿ ಸರ್ಕಾರದಿಂದ ಸರ್ವ ಅಭಿವೃದ್ಧಿ

ಕುಂಬಳೆ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಪ್ರತೀ ಕುಟುಂಬಕ್ಕೂ ಮೂಲಭೂತ ಸೌಕರ್ಯಗಳು ಮತ್ತು ಆರ್ಥಿಕ ಸವಲತ್ತುಗಳನ್ನು ಒದಗಿಸುವ ಮೂಲಕ ಭಾರತದ ಕೋಟ್ಯಾಂತರ ಜನಸಾಮಾನ್ಯರ ಜೀವನ ಮಟ್ಟವನ್ನು ಗಣನೀಯವಾಗಿ ಸುಧಾರಿಸಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.

ಭಾರತೀಯ ಜನತಾ ಮಹಿಳಾಮೋರ್ಚಾದ ಕುಂಬಳೆ ಪಂಚಾಯತ್ ಸಮಿತಿಯ ಆಶ್ರಯದಲ್ಲಿ ಕುಂಬಳೆಯಲ್ಲಿ ಆಯೋಜಿಸಲಾಗಿದ್ದ ಮಹಿಳಾ ಸಂಗಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರಕಾರದ ಯೋಜನೆಗಳಿಗೆ ರಾಜ್ಯದ ನಿರಾಸಕ್ತಿ: ಕೆ.ಸುರೇಂದ್ರನ್

ಕೇಂದ್ರ ಸರಕಾರವು ಕೇರಳಕ್ಕೆ ಹಲವಾರು ಯೋಜನೆಗಳನ್ನು ನೀಡಲು ಬದ್ಧವಾಗಿದ್ದರೂ ಪಿಣರಾಯಿ ವಿಜಯನ್ ನೇತೃತ್ವದ ರಾಜ್ಯ ಸರಕಾರವು ಅಂತಹ ಅಭಿವೃದ್ಧಿ ಯೋಜನೆಗಳನ್ನು ಬಳಸಿಕೊಳ್ಳಲು ಮತ್ತು ಕೇರಳದಲ್ಲಿ ಕೇಂದ್ರದ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರಲು ನಿರ್ಲಕ್ಷ್ಯ ವಹಿಸಿರುವ ಬಗ್ಗೆ ಜನಸಾಮಾನ್ಯರಿಗೆ ಸ್ಪಷ್ಟವಾಗಿ ಅರಿವಿದೆ ಎಂದು ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ, ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ತಮ್ಮ ಮುಖ್ಯ ಭಾಷಣದಲ್ಲಿ ತಿಳಿಸಿದರು.



ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿಯ ಆಶ್ರಯದಲ್ಲಿ ಕುಂಬಳೆಯಲ್ಲಿ ಆಯೋಜಿಸಲಾಗಿದ್ದ ಮಹಿಳಾ ಸಂಗಮ

ಅಭಿವೃದ್ಧಿ ಯೋಜನೆಗಳಲ್ಲಿಯೂ ಕೂಡಾ ತಾರತಮ್ಯ ಮಾಡುವ ಮೂಲಕ ಯುಡಿಎಫ್ ಶಾಸಕರು ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳ ಜನರನ್ನು ವಂಚಿಸಿದ್ದಾರೆ. ಇಂದಿಗೂ ಜಿಲ್ಲೆಯ ಜನರು ತಮ್ಮ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗದ ಅಗತ್ಯಗಳಿಗಾಗಿ ಕರ್ನಾಟಕದ ನಗರಗಳನ್ನು ಅವಲಂಬಿಸಬೇಕಾಗಿದೆ. ಕನ್ನಡ ಭಾಷಿಗರ ಭಾಷಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಅವರಿಗೆ ಸಾಧ್ಯವಾಗಲಿಲ್ಲ. ಮಾತ್ರವಲ್ಲದೆ ಮಂಜೇಶ್ವರ ಮತ್ತು ಕಾಸರಗೋಡಿನ ಮುಸ್ಲಿಂಲೀಗ್ ಶಾಸಕರಿಗೆ ಮಲೆಯಾಳ ಭಾಷೆಯನ್ನು ಕಡ್ಡಾಯಗೊಳಿಸಿದ ಮಸೂದೆಯಲ್ಲಿ ಕಾಸರಗೋಡು ಮತ್ತು ಮಂಜೇಶ್ವರ ತಾಲೂಕುಗಳ ಜನರಿಗೆ ವಿನಾಯಿತಿ ಪಡೆಯಲು ಸಾಧ್ಯವಾಗದಿರುವುದು ದುರಂತವಾಗಿದೆ ಎಂದು ಅವರು ಇದೇ ವೇಳೆ ನುಡಿದರು.

ಕೇರಳದಲ್ಲಿ ಹೆಚ್ಚಿದ ಭೂಮಿಯ ಬೆಲೆಗಳನ್ನು ಪರಿಗಣಿಸಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯ ವೆಚ್ಚದ ನಿರ್ದಿಷ್ಟ ಶೇಕಡಾವಾರು ಮೊತ್ತವನ್ನು ಭರಿಸುವುದಾಗಿ ಪಿಣರಾಯಿ ವಿಜಯನ್ ಸರಕಾರವು ನೀಡಿದ್ದ ಭರವಸೆಯನ್ನು ಈಡೇರಿಸಲಾಗಿಲ್ಲ. ಆದರೆ ನರೇಂದ್ರ ಮೋದಿ ಸರಕಾರವು ರಾಷ್ಟ್ರೀಯ ಹೆದ್ದಾರಿಯ ಸಮಗ್ರ ಅಭಿವೃದ್ಧಿಯೊಂದಿಗೆ ಮುಂದುವರಿಯಿತು ಎಂದು ಕೆ.ಸುರೇಂದ್ರನ್ ಗಮನ ಸೆಳೆದರು.

ಮಹಿಳಾಮೋರ್ಚಾ ಕುಂಬಳೆ ಪಂಚಾಯತ್ ಸಮಿತಿಯ ಅಧ್ಯಕ್ಷೆ ಶಾರದಾ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಜ್ಯ ಸಮಿತಿ ಸದಸ್ಯರಾದ ವಿ.ರವೀಂದ್ರನ್, ಕೋಳಾರು ಸತೀಶ್ಚಂದ್ರ ಭಂಡಾರಿ, ಮಹಿಳಾಮೋರ್ಚಾ ಜಿಲ್ಲಾಧ್ಯಕ್ಷೆ ಕೆ.ಎಸ್. ರಮಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅನಿತಾ ನಾಯ್ಕ್, ಪ್ರೇಮಲತಾ ಎಸ್., ಬಿಜೆಪಿ ಕುಂಬಳೆ ಮಂಡಲಾಧ್ಯಕ್ಷ ಸುನೀಲ್ ಅನಂತಪುರ, ಪಂಚಾಯತ್ ಸಮಿತಿಯ ಅಧ್ಯಕ್ಷರಾದ ಕೆ.ಸುಜಿತ್ ರೈ, ಶಿವಪ್ರಸಾದ್ ರೈ ಮಡ್ವ, ಮಂಡಲ ಉಪಾಧ್ಯಕ್ಷೆ ಪ್ರೇಮಾವತಿ ಶೆಟ್ಟಿ, ವಿದ್ಯಾ ಎನ್.ಪೈ, ಪ್ರೇಮಾ ವಿ.ಶೆಟ್ಟಿ, ಅಮಿತ್ ಆಳ್ವ ಮುಂತಾದವರು ಮಾತನಾಡಿದರು.

ಬೃಹತ್ ಮೆರವಣಿಗೆ

ಮಹಿಳಾ ಸಂಗಮ ಕಾರ್ಯಕ್ರಮಕ್ಕೂ ಮೊದಲು ಕುಂಬಳೆ ನಗರದಲ್ಲಿ ನೂರಾರು ಮಂದಿ ಮಹಿಳೆಯರು ಭಾಗವಹಿಸಿದ್ದ ಬೃಹತ್ ಮೆರವಣಿಗೆ ನಡೆಯಿತು. ಬಿಜೆಪಿ ಕುಂಬಳೆ ಮಂಡಲ ಸಮಿತಿ ಕಚೇರಿ ಆವರಣದಿಂದ ಆರಂಭವಾದ ಮೆರವಣಿಗೆಯು ಕುಂಬಳೆ ಸೇವಾ ಸಹಕಾರಿ ಬ್ಯಾಂಕ್ ಪರಿಸರದಲ್ಲಿ ಸಮಾಪ್ತಿಗೊಂಡಿತು.

ಹಾರಂಗಿ ಅಣೆಕಟ್ಟೆಯ ಗೇಟ್‌ಗಳು ಸುಭದ್ರ, ವರ್ಷಕ್ಕೆರಡು ಬಾರಿ ನಿರ್ವಹಣೆ ಕಾರ್ಯ: ನೀರಾವರಿ ಇಲಾಖೆ ಸ್ಪಷ್ಟನೆ

ಕುಶಾಲನಗರ: ಜಿಲ್ಲೆಯ ಪ್ರಮುಖ ಅಣೆಕಟ್ಟೆಯಾದ ಹಾರಂಗಿ ಜಲಾಶಯದ ಗೇಟ್‌ಗಳು ಸುಭದ್ರವಾಗಿದ್ದು, ವರ್ಷಕ್ಕೆರಡು ಬಾರಿ ನಿರ್ವಹಣೆ ಮಾಡಲಾಗುತ್ತಿದೆ ಎಂದು ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಐ.ಕೆ. ಪುಟ್ಟಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಈ ಸಾಲಿನಲ್ಲಿ ವಾಡಿಕೆಗಿಂತ ಮೊದಲೇ ಜಲಾಶಯ ಸಂಪೂರ್ಣವಾಗಿ ಭರ್ತಿಯಾಗಿದ್ದು, ಹೆಚ್ಚುವರಿ ನೀರನ್ನು ಹಂತ ಹಂತವಾಗಿ ನದಿಗೆ ಹರಿಸಲಾಗಿದೆ. ಹಾರಂಗಿ ಅಣೆಕಟ್ಟೆಯ ಪ್ರಮುಖ ಗೇಟ್‌ಗಳು ಸುಭದ್ರವಾಗಿದ್ದು, ವರ್ಷಕ್ಕೆ ಎರಡು ಬಾರಿ ಆಧುನಿಕ ತಂತ್ರಜ್ಞಾನದಡಿ ಗೇಟ್‌ಗಳ ನಿರ್ವಹಣೆ ಮಾಡಲಾಗುತ್ತಿದೆ. ಹಾರಂಗಿ ಅಣೆಕಟ್ಟೆಯ ಮುಖ್ಯ ಬಾಗಿಲುಗಳ ಮೂಲಕ ನದಿಗೆ 1.20 ಲಕ್ಷ ಕ್ಯೂಸೆಕ್ಸ್ ನೀರನ್ನು ಹರಿಸುವ ಸಾಮರ್ಥ್ಯ ಹೊಂದಿವೆ ಎಂದು ಅವರು ವಿವರಿಸಿದ್ದಾರೆ.

ಅಣೆಕಟ್ಟೆಯು 4 ಮುಖ್ಯ ಗೇಟ್‌ಗಳು, 6 ನಾಲೆಯ ಗೇಟ್‌ಗಳು, ಅಲ್ಲದೆ ಅಣೆಕಟ್ಟೆಯ ನೀರಿನ ಕೆಳ ಭಾಗದ ನದಿ ನೀರಿನ ಮಟ್ಟದಲ್ಲಿ ಮೂರು ಗೇಟ್‌ಗಳನ್ನು ಹೊಂದಿದೆ, ಎಲ್ಲಾ ಗೇಟ್‌ಗಳಿಗೂ ವಯರ್ ರೋಪ್‌ಗಳನ್ನು ಅಳವಡಿಕೆ ಮಾಡಲಾಗಿದೆ ಎಂದರು.

ಹಾರಂಗಿ ಅಣೆಕಟ್ಟೆಯ ನಾಲ್ಕು ಮುಖ್ಯ ಗೇಟ್‌ಗಳ ನಿರ್ವಹಣೆ, ಮತ್ತು ಗೇಟ್ ಎತ್ತುವಿಕೆ ಮತ್ತು ಇಳಿಸುವಿಕೆಯ ಕಾರ್ಯ ವಯರ್ ರೋಪ್ (ಹಗ್ಗ) ಮೂಲಕ ನಡೆಯುತ್ತಿದ್ದು, ಅದಕ್ಕೆ ಸಂಬಂಧಿಸಿದ ನಿಖರವಾದ ದುರಸ್ತಿಯನ್ನು ಕ್ರಮಬದ್ಧವಾಗಿ ಮಾಡಲಾಗುತ್ತಿದೆ. ಹಾರಂಗಿ ಅಣೆಕಟ್ಟೆಗೆ ಒಳ ಹರಿವಿನ ಪ್ರಮಾಣ ಸಂದರ್ಭದಲ್ಲಿ ಮತ್ತು ವರ್ಷದ ಕೊನೆಯ ತಿಂಗಳುಗಳಲ್ಲಿ ಅಣೆಕಟ್ಟೆಯ ಗೇಟ್‌ಗಳ ತಪಾಸಣೆಯನ್ನು ನುರಿತ ತಜ್ಞರಿಂದ ನಿಯಮಾನುಸಾರ ಮಾಡಲಾಗುತ್ತಿದೆ. ಈಗಾಗಲೇ ಅಣೆಕಟ್ಟೆಗೆ 43 ವರ್ಷಗಳು ಪೂರ್ಣಗೊಂಡಿವೆ.



ಹಾರಂಗಿ ಅಣೆಕಟ್ಟೆ ಒಂದು ಗೇಟ್ 25 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸುವ ಸಾಮರ್ಥ್ಯವನ್ನು ಹೊಂದಿದ್ದು, ನಾಲ್ಕು ಗೇಟ್‌ಗಳ ಮೂಲಕ ಒಂದೇ ಬಾರಿಗೆ 1.20 ಲಕ್ಷ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸಬಹುದಾಗಿದೆ ಎಂದು ಅಣೆಕಟ್ಟೆಯ ಉಸ್ತುವಾರಿ ಇಂಜಿನಿಯರ್ ಸೌಮ್ಯ ತಿಳಿಸಿದರು.

2018ರ ಆಗಸ್ಟ್‌ನಲ್ಲಿ ಮಾತ್ರ ಪ್ರಥಮ ಬಾರಿಗೆ 80 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಹರಿಸಲಾಗಿದೆ. ಅಣೆಕಟ್ಟೆಯ ಭದ್ರತೆ ಹಿತದೃಷ್ಟಿಯಿಂದ ವರ್ಷಕ್ಕೆ ಎರಡು ಬಾರಿ ನಿರ್ವಹಣೆಯ ಜೊತೆಗೆ ಮುಂಜಾಗ್ರತಾ ಕ್ರಮವಾಗಿ ಇಲಾಖೆಯ ನಿಯಮಾನುಸಾರ ಗೋದಾಮಿನಲ್ಲಿ ಹೆಚ್ಚುವರಿಯಾಗಿ ವಯರ್ ರೋಪ್ (ಕಬ್ಬಿಣದ ಸುರುಳಿನ ಹಗ್ಗ) ವನ್ನು ದಾಸ್ತಾನು ಇಡಲಾಗುತ್ತದೆ.

ಹಾರಂಗಿ ಅಣೆಕಟ್ಟೆಯು 8.5 ಟಿ.ಎಂ.ಸಿ.ನೀರು ಸಂಗ್ರಹದ ಸಾಮರ್ಥ್ಯ ಹೊಂದಿದ್ದು, ಅದರಲ್ಲಿ ಉಪಯುಕ್ತ ನೀರಿನ ಸಾಮರ್ಥ್ಯ 7.75. ಟಿ.ಎಂ.ಸಿ. ಮಾತ್ರ. ಅಣೆಕಟ್ಟೆಯ ನಾಲೆಗಳಲ್ಲಿ ನೀರನ್ನು ಮೂಲಕ ಕೊಡಗು, ಹಾಸನ ಮತ್ತು ಮೈಸೂರು ಜಿಲ್ಲೆಯ 1 ಲಕ್ಷದ 35 ಸಾವಿರ ಎಕರೆಗಳಷ್ಟು ಪ್ರದೇಶದ ಜಮೀನಿಗೆ ಬೇಸಾಯಕ್ಕೆ ಒದಗಿಸಲಾಗುತ್ತಿದೆ ಎಂದು ವೃತ್ತ ಅಭಿಯಂತರ ತಿಳಿಸಿದ್ದಾರೆ.

2025ರ ಸಾಲಿನಲ್ಲಿ ಅಣೆಕಟ್ಟೆಗೆ 48.413. ಟಿ.ಎಂ.ಸಿ. ನೀರು ಬಂದಿದ್ದು, ಅದರಲ್ಲಿ 39.76. ಟಿ.ಎಂ.ಸಿ. ನೀರನ್ನು ನದಿಗೆ ಮತ್ತು 10.234 ಟಿ.ಎಂ. ಸಿ ನೀರನ್ನು ನಾಲೆಗೆ ಹರಿಸಲಾಗಿದೆ. ಈಗಲೂ ಅಣೆಕಟ್ಟೆಯ ಹಿತದೃಷ್ಟಿಯಿಂದ ನೀರಿನ ಮಟ್ಟವನ್ನು ಕಾಯ್ದುಕೊಳ್ಳಲಾಗಿದೆ. ಆದರೆ ಅಣೆಕಟ್ಟೆಯ ಒಳ ಹರಿವಿನ ಪ್ರಮಾಣವನ್ನು ದಿನದ 24 ಗಂಟೆಗಳಲ್ಲಿ ಇಲಾಖೆಯ ನಿಯಮಾನುಸಾರ ಜಲಾಶಯದ ಪರೀಕ್ಷಾ ಕೇಂದ್ರದಲ್ಲಿ ನೋಡಿಕೊಂಡು ಅದರ ಏರಿಳಿತವನ್ನು ಗಮನದಲ್ಲಿಟ್ಟುಕೊಂಡು ಗಂಟೆ ಗಂಟೆಗೆ ಒಳಹರಿವಿನ ಪ್ರಮಾಣವನ್ನು ಲೆಕ್ಕ ಮಾಡುತ್ತಾ ನದಿಗೆ ಹರಿಸಲಾಗುತ್ತದೆ. ಅಲ್ಲದೆ ಈಗಾಗಲೇ ಅಣೆಕಟ್ಟೆಯ ನಾಲೆಯ ಗೇಟ್‌ಗಳ ಮೂಲಕ ರೈತರ ಬೇಸಾಯಕ್ಕೆ ನೀರನ್ನು ಹರಿಸಲಾಗುತ್ತಿದೆ ಎಂದು ಅಣೆಕಟ್ಟೆಯ ಉಸ್ತುವಾರಿ ಇಂಜಿನಿಯರ್ ತಿಳಿಸಿದ್ದಾರೆ.

ಇದೀಗ ಹಾರಂಗಿ ಅಣೆಕಟ್ಟೆಯ ಮುಖ್ಯ ನಾಲೆಯ ಆಧುನಿಕ ತಂತ್ರಜ್ಞಾನ ಕಾಂಕ್ರೀಟಿರಣ ಕಾಮಗಾರಿ ಆರಂಭಗೊಂಡಿದೆ. ಅದರ ಮೂಲಕ ಕೊನೆಯ ಭಾಗದ ರೈತರ ಬೇಸಾಯಕ್ಕೂ ಸಮರ್ಪಕವಾಗಿ ಹಂತ ಹಂತವಾಗಿ ಒದಗಿಸಲಾಗುವುದು ಎಂದರು.

ಅಣೆಕಟ್ಟೆಯ ಒಳ ಮತ್ತು ಹೊರ ಹರಿವಿನ ಅಳತೆ ಮಾಡುವ ತಂತ್ರಜ್ಞಾನ ನೌಕರರ ನೇಮಕಾತಿ ಕಳೆದ 20 ವರ್ಷಗಳಿಂದ ನೀರಾವರಿ ಇಲಾಖೆ ವತಿಯಿಂದ ನಡೆದಿಲ್ಲ. ಇರುವ ನೌಕರರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಲಾಗುತ್ತಿದೆ. ಅತಿ ಅಗತ್ಯವಿರುವ ಸಿಬ್ಬಂದಿಗಳನ್ನು ಸರಕಾರ ನೇರ ನೇಮಕಾತಿ ಮಾಡಿಕೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಕೆ.ಪಿ.ರಾಜು, ಹಾಗೂ ಸ್ಥಳೀಯ ಮುಖಂಡರು ಒತ್ತಾಯಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ

ಸಮುದಾಯ ಸೇವೆ ಶಿಕ್ಷೆ ವಿಧಿಸಿದ ನ್ಯಾಯಾಲಯ



ಸುಳ್ಯ: ಸುಳ್ಯ ಪಟ್ಟಣದಲ್ಲಿ ಹಲವು ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿದ್ದ ವ್ಯಕ್ತಿಯ ವಿರುದ್ಧ ಐಎಂವಿ ಕಾನೂನು ಅಡಿಯಲ್ಲಿ ಪ್ರಕರಣ ಸಂಬಂಧಿಸಿದಂತೆ ಆರೋಪಿಗೆ ನ್ಯಾಯಾಲಯ ಸಮುದಾಯ ಸೇವೆ ಶಿಕ್ಷೆ ವಿಧಿಸಿ ಆದೇಶಿಸಿದ ಘಟನೆ ನಡೆದಿದೆ.

ಸುಳ್ಯ ನಿವಾಸಿ ರಕ್ಷಿತ್ ಜಿ ಎಂಬಾತ ಪದೇ ಪದೇ ನಿಯಮ ಉಲ್ಲಂಘನೆ ಕುರಿತು ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಸಿದ ಹಿನ್ನಲೆಯಲ್ಲಿ ಎಸ್‌ಸಿಜೆ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ ವಿಚಾರಣೆ ನಡೆಸಿ ನ್ಯಾಯಾಲಯವು ಆರೋಪಿಗೆ ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಒಟ್ಟು ಮೂರು ಸಾವಿರ ದಂಡವನ್ನು ಹಾಗೂ ಮೂರು ಪ್ರಕರಣಗಳಲ್ಲಿ ತಲಾ ಐದು ದಿನಗಳಂತೆ ಮಾ. 15 ರಿಂದ 29ರವರೆಗೆ ಒಟ್ಟು 15 ದಿನಗಳ ಕಾಲ ಸಮುದಾಯ ಸೇವೆಯನ್ನು ನಿರ್ವಹಿಸುವಂತೆ ಹಾಗೂ ಸಂಚಾರ ನಿಯಮಗಳನ್ನು ಒಳಗೊಂಡ ಫಲಕಗಳನ್ನು ಹಿಡಿದು ಸುಳ್ಯ ಪೇಟೆಯ ಜಂಕ್ಷನ್‌ಗಳಲ್ಲಿ ನಿಂತು ಸಾರ್ವಜನಿಕರಿಗೆ ಸಂಚಾರ ನಿಯಮ ಪಾಲನೆಯ ಅರಿವನ್ನು ಮೂಡಿಸುವಂತೆ ಆದೇಶಿಸಿದ್ದು ಜೊತೆಗೆ ಆತನ ಚಾಲನ ಪರವಾನಿಗೆಯನ್ನು ಮೂರು ತಿಂಗಳ ಕಾಲ ಅಮಾನತಿನಲ್ಲಿಡಲು ಆದೇಶಿಸಿದೆ.

ಪುತ್ತೂರು –ಬೆಳ್ತಂಗಡಿ ತಾಲೂಕಿನ ಸಂಪರ್ಕ ಕೊಂಡಿ ಮುಗೇರಡ್ಕದ ಏತ ನೀರಾವರಿ, ಸೇತುವೆ ಅಭಿವೃದ್ಧಿ ಕಾಮಗಾರಿ ವೀಕ್ಷಣೆ

ಗುಣಮಟ್ಟ ಕಾಪಾಡಲು ಅಧಿಕಾರಿಗಳಿಗೆ ಪೂಂಜ ಸೂಚನೆ





ಬೆಳ್ತಂಗಡಿ: ಶಾಸಕ ಹರೀಶ್ ಪೂಂಜ ಅವರು ಪುತ್ತೂರು –ಬೆಳ್ತಂಗಡಿ ತಾಲೂಕಿನ ಸಂಪರ್ಕ ಕೊಂಡಿಯಾಗಿರುವ ಮೊಗ್ರು ಗ್ರಾಮದ ಮುಗೇರಡ್ಕ ಎಂಬಲ್ಲಿ ರೂ. 240 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಏತ ನೀರಾವರಿ ಯೋಜನೆ ಮತ್ತು ಸೇತುವೆ ಅಭಿವೃದ್ಧಿ ಕಾಮಗಾರಿ ಪ್ರಗತಿಯನ್ನು ಮಾ 15 ರಂದು ಸ್ಥಳಕ್ಕೆ ಭೇಟಿ ನೀಡಿ , ಗುಣಮಟ್ಟವನ್ನು ಕಾಪಾಡುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

ಕಣಿಯೂರು ಮಹಾಶಕ್ತಿ ಕೇಂದ್ರ ಅಧ್ಯಕ್ಷ ಬಾಲಕೃಷ್ಣ ಗೌಡ ಮುಗೇರಡ್ಕ, ಪದ್ಮುಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಕ್ಷಿತ್ ಪಣೆಕ್ಕರ, ನಿರ್ದೇಶಕ ಪ್ರಭಾಕರ ಗೌಡ ಗುತ್ಯೋಡಿ, ಬಂದಾರು ಪಂಚಾಯತ್ ಮಾಜಿ ಉಪಾಧ್ಯಕ್ಷ ಗಂಗಾಧರ ಪೂಜಾರಿ, ಬಂದಾರು ಪಂಚಾಯತ್ ಮಾಜಿ ಸದಸ್ಯ ಶಿವಪ್ರಸಾದ್ ಗೌಡ ಸುದೆಪ್ಪಿಲ, ಮುಗೇರಡ್ಕ ದೈವಸ್ಥಾನ ಆಡಳಿತ ಮೊಕ್ತೇಸರರಾದ ಮನೋಹರ ಗೌಡ ಅಂತರ, ಚಂದ್ರಹಾಸ ಗೌಡ ದೇವಸ, ರಾಮಣ್ಣ ಗೌಡ ವೈ. ಏರ್ಮಾಳ, ಬೆಳ್ತಂಗಡಿ ಮಂಡಲ ಬಿಜೆಪಿ ಯುವಮೋರ್ಚಾ ಕಾರ್ಯದರ್ಶಿ ಗಿರೀಶ್ ಗೌಡ ಬಿ. ಕೆ ಬಂದಾರು, ಪ್ರವೀಣ್ ಮತ್ತಿಲಾರು, ಅಶೋಕ ಗೌಡ ಬರುಂಗುಡೆಲು, ಜಗದೀಶ್ ಗೌಡ ಅರ್ಬಿ,ಇಲಾಖಾ ಅಧಿಕಾರಿಗಳು, ಗುತ್ತಿಗೆದಾರರು, ಹಲವಾರು ಪ್ರಮುಖರು ಹಾಗೂ ನಾಗರಿಕರು ಉಪಸ್ಥಿತರಿದ್ದರು.

ಅಂತರ್ಜಲಮಟ್ಟ ಹೆಚ್ಚಾಗಲು ಸಹಕಾರಿ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಮೊಗ್ರು ಗ್ರಾಮದ ಮುಗೇರಡ್ಕ ಎಂಬಲ್ಲಿ ಏತ ನೀರಾವರಿ ಯೋಜನೆ ಮತ್ತು ಸೇತುವೆ ಕಾಮಗಾರಿಯು ನಡೆಯುತ್ತಿದ್ದು , ಸುಮಾರು ರೂ. 240 ಕೋಟಿ ವೆಚ್ಚದ ಈ ಯೋಜನೆಯು ಜಿಲ್ಲೆಯಲ್ಲೇ ಅತ್ಯಂತ ದೊಡ್ಡ ಹಾಗೂ ಮೊದಲ ಏತ ನೀರಾವರಿ ಯೋಜನೆಯಾಗಿದೆ.

ಈ ಯೋಜನೆಯಿಂದ ಸುಮಾರು 16 ಗ್ರಾಮಗಳ 1,100 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರೆಯಲಿದೆ. ಮುಗೇರಡ್ಕ ಮಾತ್ರವಲ್ಲದೆ ಸುತ್ತಮುತ್ತಲಿನ ಹಲವಾರು ಗ್ರಾಮದ ರೈತರ ಜಮೀನುಗಳಿಗೆ ವರ್ಷವಿಡೀ ನೀರಿನ ಸೌಲಭ್ಯ ದೊರೆಯ ಲಿದ್ದು, ಕೃಷಿ ಚಟುವಟಿಕೆ ಗಳಿಗೆ ವೇಗ ಸಿಗಲಿದೆ. ನೇತ್ರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಈ ಸೇತುವೆಯು ಮುಗೇರಡ್ಕದಿಂದ ಬೆದ್ರೋಡಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗೆ ನೇರ ಸಂಪರ್ಕ ಕಲ್ಪಿಸುತ್ತದೆ

ನೇತ್ರಾವತಿ ನದಿಯ ಪುತ್ತೂರು – ಬೆಳ್ತಂಗಡಿ ತಾಲೂಕಿನ ಎರಡೂ ದಂಡೆಗಳ ಜನರಿಗೆ ಹೊಸ ಸೇತುವೆಯಿಂದಾಗಿ ಪ್ರಯಾಣದ ದೂರ ಮತ್ತು ಸಮಯ ಗಣನೀಯವಾಗಿ ಕಡಿಮೆಯಾಗಲಿದೆ.

ಕಿಂಡಿ ಅಣೆಕಟ್ಟು ಮಾದರಿಯ ಈ ಯೋಜನೆಯಿಂದಾಗಿ ಸುತ್ತಮುತ್ತಲಿನ ಭಾಗಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಲು ಸಹಕಾರಿಯಾಗುತ್ತದೆ.

ಕಿರುಸುದ್ದಿ

ಅಯೋಧ್ಯೆಗೆ ಮಾತಾ ಅಮೃತಾನಂದಮಯಿ



ಮಂಗಳೂರು: ರಾಮ ರಕ್ಷಾ ಯಂತ್ರ ಪ್ರತಿಷ್ಠಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಾತಾ ಅಮೃತಾನಂದಮಯಿ ಅವರು ಭಾನುವಾರ ಅಯೋಧ್ಯೆಗೆ ತೆರಳಿದರು. ಅಮ್ಮಾ ಒಂದು ಸಾವಿರ ಅನುಯಾಯಿಗಳೊಂದಿಗೆ ವಿಶೇಷ ರೈಲಿನ ಮೂಲಕ ಕಾಯಂಕುಲಂ ರೈಲು ನಿಲ್ದಾಣದಿಂದ ಹೊರಟರು. ಮಾ. 19ರಂದು ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಅಮ್ಮನವರ ಜೊತೆಗೆ ಗೌರವಾನ್ವಿತ ರಾಷ್ಟ್ರಪತಿಯವರೂ ಉಪಸ್ಥಿತರಿರಲಿದ್ದಾರೆ.

ಕುಡಿಯುವ ನೀರಿನ ವ್ಯವಸ್ಥೆ: ಅಧಿಕಾರಿಗಳಿಂದ ಮುಂಜಾಗ್ರತಾ ಕ್ರಮ

ಕುಶಾಲನಗರ: ಎಲ್ಲಾ ಗ್ರಾಮ ಪಂಚಾಯತ್ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗೆ ಧಕ್ಕೆಯಾಗದಂತೆ ಅಧಿಕಾರಿಗಳು ಕ್ರಮವಹಿಸಬೇಕೆಂದು ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರು ಸೂಚನೆ ನೀಡಿದ್ದು, ಅದರಂತೆ ಸಂಬಂಧಿಸಿದ ತಾಲೂಕು ಮಟ್ಟದ ಅಧಿಕಾರಿಗಳು ತಾಲೂಕು ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯತ್‌ಗಳಿಗೆ ಭೇಟಿ ನೀಡಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ.ಸೋಮವಾರಪೇಟೆ ತಾಲೂಕಿನ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ವೀರೇಂದ್ರ ಕುಮಾರ್ ನೇತೃತ್ವದಲ್ಲಿ ಸಂಬಂಧಿಸಿದ ಸಿಬ್ಬಂದಿ ವರ್ಗದವರು ತಾಲೂಕು ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯತ್‌ಗಳಿಗೆ ಭೇಟಿ ನೀಡಿ ಗ್ರಾಮ ಪಂಚಾಯತ್ ವತಿಯಿಂದ ಕುಡಿಯುವ ನೀರು ಸರಬರಾಜು ಆಗುತ್ತಿರುವ ಮಾಹಿತಿಯ ಜೊತೆಗೆ, ಮುಂದಿನ ದಿನಗಳಲ್ಲಿ ಬೇಸಿಗೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಅಂತರ್ಜಲ ಕುಸಿತ ಕಂಡುಬರುವ ಕೊಳವೆ ಬಾವಿಗಳ ಪರಿಶೀಲನೆ ನಂತರ ನೂತನ ಕೊಳವೆ ಬಾವಿ ಕೊರೆಸಲು ಸಿದ್ಧತೆ ಮಾಡುತ್ತಿದ್ದು, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕುಶಾಲನಗರ ಪಟ್ಟಣ ಹಾಗೂ ಸುತ್ತಲ ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಹೆಬ್ಬಾಲೆಯ ನೀರು ಶುದ್ಧೀಕರಣ ಘಟಕಕ್ಕೂ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಿಧನ ಸುದ್ದಿ

ಹಿರಿಯ ರಂಗ ಕಲಾವಿದ ಶೇಖರ ಶೆಟ್ಟಿ



ಮಂಗಳೂರು: ಹಿರಿಯ ರಂಗನಟ, ಉರ್ವ ಹೊಯ್ಗೆಬೈಲ್ ನಿವಾಸಿ ಶೇಖರ ಶೆಟ್ಟಿ ಹೊಯ್ಗೆಬೈಲ್ (76) ಅವರು ಅಸೌಖ್ಯದಿಂದ ಮಾ.14ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಪತ್ನಿಯನ್ನು ಅಗಲಿದ್ದಾರೆ. ಶೇಖರ ಶೆಟ್ಟಿ ಅವರು ಸುಮಾರು 150 ನಾಟಕಗಳಲ್ಲಿ ಅಭಿನಯಿಸಿದ್ದು, ನಟನಾಗಿ, ಗೀತರಚನೆಗಾರನಾಗಿ, ಹಿನ್ನೆಲೆ ಬೋಧಕನಾಗಿ ಜನಪ್ರಿಯತೆ ಗಳಿಸಿದ್ದರು. ಹೊಯ್ಗೆಬೈಲ್ ಜೈಭಾರತಿ ತರುಣ ವೃಂದ ಹಾಗೂ ಅಶೋಕನಗರ ಬಂಟರ ಸಂಘದ ಸ್ಥಾಪಕ ಸದಸ್ಯರಾಗಿದ್ದ ಅವರು ಬಿಜೆಪಿ ಹಾಗೂ ಅಶೋಕನಗರ ರಾಮಾಂಜನೇಯ ಮಂದಿರದಲ್ಲಿ ಸಕ್ರಿಯರಾಗಿದ್ದರು. ಉತ್ತಮ ಕ್ರೀಡಾಪಟುವಾಗಿದ್ದ ಅವರು ಕ್ರಿಕೆಟ್ ಪಂದ್ಯಾವಳಿಯ ಸಂಘಟಕರಾಗಿ, ಅನೇಕ ಕ್ರಿಕೆಟ್ ಪಂದ್ಯಾಟಗಳಲ್ಲಿ ತೀರ್ಪುಗಾರರಾಗಿದ್ದರು.

ಎಂ.ಲಕ್ಷ್ಮೀನಾರಾಯಣ ರಾವ್



ಉಡುಪಿ: ಮಾರ್ಪಳ್ಳಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಸದಸ್ಯ ಎಂ.ಲಕ್ಷ್ಮೀನಾರಾಯಣ ರಾವ್ (58) ಶನಿವಾರ ರಾತ್ರಿ ಪೂನದ ಮಗಳ ಮನೆಯಲ್ಲಿ ಹೃದಯಾಘಾತದಿಂದ ಕುಸಿದು ಬಿದ್ದು ನಿಧನರಾಗಿದ್ದಾರೆ. ಮೃತರು ತಂದೆ, ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಸಹೋದರರನ್ನು ಅಗಲಿದ್ದಾರೆ.

ರಾಮಕೃಷ್ಣ ಶಿಬರೂರಾಯ

ಬದಿಯಡ್ಕ: ಮುನಿಯೂರು ನಿವಾಸಿ ರಾಮಕೃಷ್ಣ ಶಿಬರೂರಾಯ (76) ನಿಧನ ಹೊಂದಿದರು. ಅವರು ಈ ಹಿಂದೆ ಸುಮಾರು 45 ವರ್ಷಗಳ ಕಾಲ ಬದಿಯಡ್ಕದಲ್ಲಿ ಜೀಪು ಚಾಲಕರಾಗಿದ್ದರು. ಮೃತರು ಪತ್ನಿ ಸರಸ್ವತಿ, ಮಕ್ಕಳಾದ ಗುರುಪ್ರಸಾದ್, ರಾಜೇಶ್ವರಿ ಅವರನ್ನು ಅಗಲಿದ್ದಾರೆ.

ಬಾಬು ಪೊಯ್ಯೆಕಂಡ

ಬದಿಯಡ್ಕ: ಪೊಯ್ಯೆಕಂಡ ನಿವಾಸಿ ಬಾಬು (80) ನಿಧನ ಹೊಂದಿದರು. ಮೃತರು ಪತ್ನಿ ದೇವಕಿ, ಮಕ್ಕಳಾದ ಉದಯಕುಮಾರ್, ನಾರಾಯಣ, ಚಂದ್ರನ್ ಪೊಯ್ಯೆಕಂಡ, ಪ್ರೇಮಾ ಅವರನ್ನು ಅಗಲಿದ್ದಾರೆ.



ಪಚ್ಚನಾಡಿ ವಾರ್ಡಿನ ಪದವಿನಂಗಡಿಯಲ್ಲಿ ಪಾರಾದೀಪ್ ಫ್ರೋಸ್ಫೇಟ್ ಲಿಮಿಟೆಡ್ (ಎಂಸಿಎಫ್) ಸಂಸ್ಥೆಯ ಸಿಎಸ್‌ಆರ್ ನಿಧಿಯಡಿ 30 ಲಕ್ಷ ರೂ. ಅನುದಾನದಿಂದ ನಿರ್ಮಾಣಗೊಂಡ ನೂತನ ಅಂಗನವಾಡಿ ಕಟ್ಟಡವನ್ನು ಶಾಸಕ ಡಾ. ವೈ. ಭರತ್ ಶೆಟ್ಟಿ ಭಾನುವಾರ ಉದ್ಘಾಟಿಸಿದರು. ಈ ಸಂದರ್ಭ ಪಚ್ಚನಾಡಿ ವಾರ್ಡಿನ ನಿಕಟ ಪೂರ್ವ ಕಾರ್ಪೊರೇಟರ್ ಸಂಗೀತಾ ಆರ್. ನಾಯಕ್, ಪಾರಾದೀಪ್ ಫ್ರೋಸ್ಫೇಟ್ ಲಿಮಿಟೆಡ್ ಸಂಸ್ಥೆಯ ಸಿಎಂಒ ಗಿರೀಶ್, ಜಾಯಿಂಟ್ ಜನರಲ್ ಮ್ಯಾನೇಜರ್ ಡಾ. ಯೋಗೀಶ್, ರಾಕೇಶ್ ವಿವೇಕ್ ಕೋಟಿಯನ್, ಸುಭಾಷ್, ರವಿಚಂದ್ರ, ಭೂ ನ್ಯಾಯ ಮಂಡಳಿಯ ಮಾಜಿ ಸದಸ್ಯ ಸಂದೀಪ್ ಬೋಂದೆಲ್, ಪದವಿನಂಗಡಿ ಯೂತ್ ಕ್ಲಬ್‌ನ ಅಧ್ಯಕ್ಷ ಶೇಖರ್ ಪೂಜಾರಿ, ಗೌರವ ಅಧ್ಯಕ್ಷ ಕೇಶವ್ ಮಾರ್ಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಸಿಂಧೂ, ಅಂಗನವಾಡಿ ಶಿಕ್ಷಕಿ ಲೋಲಕ್ಷಿ ಉಪಸ್ಥಿತರಿದ್ದರು.

ಉದ್ಯಮಿ ಉಜ್ವಲ್ ಪ್ರಭು ಕುರಿತು ಅಪಪ್ರಚಾರ ಆರೋಪ : ಕ್ರಿಮಿನಲ್ ಕೇಸ್ ದಾಖಲು

ಪುತ್ತೂರು: ನೆಹರೂನಗರ ನಿವಾಸಿಯಾಗಿರುವ ರಿಯಲ್ ಎಸ್ಟೇಟ್ ಉದ್ಯಮಿ ಉಜ್ವಲ್ ಕುಮಾರ್ ಪ್ರಭು (39) ಅವರ ಕುರಿತು ಅಪಪ್ರಚಾರ ಮಾಡಿದ ಆರೋಪದಡಿ ಬಿಎಲ್ ಆರ್ ಪೋಸ್ಟ್ ವೆಬ್‌ಸೈಟ್‌ನ ಪಬ್ಲಿಷರ್, ಎಡಿಟರ್ ಮತ್ತು ಕಾಂಗ್ರೆಸ್ ಮುಖಂಡ ಎಚ್. ಮಹಮ್ಮದ್ ಆಲಿ ಸೇರಿ ಮೂವರ ವಿರುದ್ಧ ಪುತ್ತೂರಿನ ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ವಿಚಾರಣೆಗೆ ಹಾಜರಾಗಲು ನ್ಯಾಯಾಲಯದಿಂದ ನೊಟೀಸ್ ಜಾರಿಯಾಗಿದೆ. ಮುಂದಿನ ವಿಚಾರಣೆ ಮಾ.24 ರಂದು ನಡೆಯಲಿದೆ.

ಉಜ್ವಲ್ ಕುಮಾರ್ ಪ್ರಭು ಅವರು ದಾಖಲಿಸಿರುವ ಕ್ರಿಮಿನಲ್ ಕೇಸ್‌ನಲ್ಲಿ 'ನಾನು 10 ವರ್ಷಗಳಿಂದ ಯು. ಆರ್. ಪ್ರಾಪರ್ಟೀಸ್ ಎಂಬ ಹೆಸರಿನಡಿ ಡೆವಲಪರ್ ಆಗಿ ಕೆಲಸಮಾಡುತ್ತಿದ್ದೇನೆ. 2 ವಾರಗಳ ಹಿಂದೆ ವಾಟ್ಸಾಪ್ ಗ್ರೂಪ್‌ನಲ್ಲಿ ಬಿಎಲ್‌ಆರ್. ಪೋಸ್ಟ್ ಎಂಬ ವೆಬ್ ನ್ಯೂಸ್ ಸೈಟ್‌ನಲ್ಲಿ ನಮ್ಮ ಕಂಪೆನಿಯ ಬಗ್ಗೆ ಮತ್ತು ನನ್ನ ಬಗ್ಗೆ, ಅನಧಿಕೃತವಾಗಿ ಸರಕಾರದ ಜಾಗವನ್ನು ಕಬಳಿಸಿರುತ್ತೇವೆ ಎಂದು ಅಪಪ್ರಚಾರ ಮಾಡಿ ನ್ಯೂಸ್ ಐಟಂಗಳನ್ನು ಹಾಕಿದ್ದಾರೆ. ಸದರಿ ನ್ಯೂಸ್ ಐಟಂಗಳು ವಾಟ್ಸಾಪ್ ಗ್ರೂಪ್‌ಗಳಲ್ಲಿ ವೈರಲ್ ಆಗಿವೆ. ಈ ಸುಳ್ಳು ಸುದ್ದಿಯನ್ನು ಪುತ್ತೂರು ಬ್ಲಾಕ್ ಕಾಂಗ್ರೆಸ್, ಪುತ್ತೂರು ಎಂಎಲ್‌ಎ ಅಶೋಕ್ ಕುಮಾರ್ ರೈ, ರಾಜಕೀಯ ವೇದಿಕೆ ಎಂಬ ವಾಟ್ಸಾಪ್ ಗ್ರೂಪ್‌ಗಳಿಗೆ ಮತ್ತು ನನ್ನ ಸ್ನೇಹಿತರಾದ ರಾಕೇಶ್, ನಿತಿನ್, ಸಂದೀಪ್ ನೆಲ್ಲಿಕಟ್ಟೆ ಸಹಿತ ಸಾರ್ವಜನಿಕರಿಗೆ ಕಳುಹಿಸಿದ್ದಾರೆ. ನಮ್ಮ ಸೈಟ್ ಅನ್ನು ಜನರು ಖರೀದಿಸದಂತೆ ಮಾಡಿದ್ದಾರೆ. ಆರೋಪಿತರು ಈ ರೀತಿ ಮಾಡಿದ್ದರಿಂದ ನಮ್ಮ ಪ್ರಾಜೆಕ್ಟ್‌ಗಳ ಬಗ್ಗೆ ಗ್ರಾಹಕರಲ್ಲಿ ಆತಂಕ ಮೂಡಿ ಪ್ರಾಜೆಕ್ಟ್‌ಗಳನ್ನು ಯಾರೂ ಖರೀದಿಸಿರುವುದಿಲ್ಲ. ಇದರಿಂದ ಆರ್ಥಿಕವಾಗಿ ನಷ್ಟವಾಗಿದೆ. ನಮಗೆ ಸುಮಾರು 5 ಕೋಟಿಯಷ್ಟು ನಷ್ಟವುಂಟಾಗಿದೆ ಎಂದು ತಿಳಿಸಿದ್ದಾರೆ.

ನ್ಯಾಯಾಲಯ ಉಜ್ವಲ್ ಪ್ರಭು ಅವರ ಹೇಳಿಕೆ ದಾಖಲಿಸಿಕೊಂಡಿದೆ. ಉಜ್ವಲ್ ಪ್ರಭು ಪರ ವಕೀಲ ನಾಗೇಶ್ ಶರ್ಮ ವಾದ ಮಂಡಿಸಿದ್ದರು.

ಪುತ್ತೂರಿನ ಬನ್ನೂರು ಡಂಪಿಂಗ್ ಯಾರ್ಡ್‌ನಲ್ಲಿ ಕಂಪ್ರೆಸ್ಡ್ ಬಯೋಗ್ಯಾಸ್ ಘಟಕ ಉದ್ಘಾಟನೆ

ನಗರಸಭೆಗಳ ಪೈಕಿ ಮೊದಲ ಪ್ರಯೋಗ

ಪುತ್ತೂರು: ನಗರಸಭಾ ವ್ಯಾಪ್ತಿಯ ಬನ್ನೂರು ಡಂಪಿಂಗ್ ಯಾರ್ಡ್ (ನೆಲಭರ್ತಿ ಸ್ಥಳ)ನಲ್ಲಿ ಕಾರ್ಯಾರಂಭಗೊಂಡ ಕಂಪ್ರೆಸ್ಡ್ ಬಯೋಗ್ಯಾಸ್ ಘಟಕವನ್ನು ಭಾನುವಾರ ಉದ್ಘಾಟಿಸಿ ಲೋಕಾರ್ಪಣೆ ಮಾಡಲಾಯಿತು.

ಉದ್ಘಾಟನೆ ನೆರವೇರಿಸಿದ ಶಾಸಕ ಅಶೋಕ್ ರೈ ಮಾತನಾಡಿ, ನಗರ ಸ್ವಚ್ಛತೆ ಅತ್ಯಂತ ಮುಖ್ಯವಾದುದು. ಈ ವಿಚಾರದಲ್ಲಿ ನಾಗರಿಕರಲ್ಲಿ ಜಾಗೃತಿ ಇರುವುದು ಅಗತ್ಯ. ಸಮರ್ಪಕವಾಗಿ ತ್ಯಾಜ್ಯ ವಿಂಗಡಿಸಿ ನೀಡುವ ಮೂಲಕ ಸಂಸ್ಕರಣೆಯೂ ನಾಗರೀಕ ಜವಾಬ್ದಾರಿ. ಯಾವುದೇ ನಗರದಲ್ಲಿ ತ್ಯಾಜ್ಯ ಸಂಸ್ಕರಣೆ ವೈಜ್ಞಾನಿಕವಾಗಿ ನಡೆದರೆ ಮಾತ್ರ ಆ ನಗರ ಅಭಿವೃದ್ಧಿ ಪಥದತ್ತ ಹೋಗಲು ಸಾಧ್ಯವಿದೆ. ಪುತ್ತೂರಿನಲ್ಲಿ ಸ್ಥಾಪನೆಯಾಗಿರುವ ಕಸದಿಂದ ಗ್ಯಾಸ್ ಉತ್ಪಾದಿಸುವ ಘಟಕ ರಾಜ್ಯದ ನಗರಸಭೆಗಳ ಪೈಕಿ ಮೊದಲ ಪ್ರಯೋಗ ಎಂಬುದು ನಮಗೆಲ್ಲ ಹೆಮ್ಮೆಯ ವಿಚಾರ ಎಂದರು.

ಬೆಂಗಳೂರಿನ ಬಿಬಿಎಂಪಿಯಲ್ಲಿ ಕೂಡ ಪುತ್ತೂರು ಘಟಕದ ವಿಚಾರ ಚರ್ಚೆಯಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಅನೇಕ ನಗರ ಸ್ಥಳೀಯ ಸಂಸ್ಥೆಗಳಿಂದ ಈ ಘಟಕದ ಅಧ್ಯಯನಕ್ಕೆ ಬರಲಿದ್ದಾರೆ. ಆ ಮೂಲಕ ಪುತ್ತೂರಿನ ವ್ಯವಸ್ಥೆ ಎಲ್ಲರಿಗೂ ಮಾದರಿಯಾಗಲಿದೆ ಎಂದರು.



ಪುತ್ತೂರಿಗೆ 50 ಕೋಟಿಯಲ್ಲಿ ಒಳಚರಂಡಿ

ವಿದೇಶಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಪುತ್ತೂರು ನಗರದಲ್ಲಿ ರೂ. 50 ಕೋಟಿ ವೆಚ್ಚದಲ್ಲಿ ಒಳಚರಂಡಿ ಯೋಜನೆ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ 20 ಕೋಟಿ ರೂ. ಕಾಮಗಾರಿ ನಗರದ ಪ್ರಮುಖ ಭಾಗದಲ್ಲಿ ಕಾರ್ಯರೂಪಕ್ಕೆ ಬರಲಿದೆ ಎಂದು ಹೇಳಿದ ಶಾಸಕ ಅಶೋಕ್ ರೈ, ಪ್ರತೀ ದಿನ 8 ಟನ್ ಕಸವನ್ನು ಗ್ಯಾಸ್ ಆಗಿ ಪರಿವರ್ತಿಸುವ ಶಕ್ತಿ ಈ ಘಟಕಕ್ಕಿದೆ. ಈಗ 3 ಟನ್ ಮಾತ್ರ ಹಸಿ ತ್ಯಾಜ್ಯ ಸಿಗುತ್ತಿದೆ ಎಂದು ತಿಳಿದು ಬಂದಿದೆ. ಮುಂದಿನ ದಿನಗಳಲ್ಲಿ 8 ಟನ್ ಹಸಿ ತ್ಯಾಜ್ಯ ಘಟಕಕ್ಕೆ ಸಿಗುವ ವ್ಯವಸ್ಥೆ ಆಗಬೇಕು. ದೇವಳದವರು ಕೂಡ ಇಲ್ಲಿಗೆ ತಮ್ಮ ತ್ಯಾಜ್ಯವನ್ನು ಕೊಡುವುದು ಉತ್ತಮ ಎಂದು ಶಾಸಕರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ ಮಾತನಾಡಿ, ಸ್ಥಳೀಯಾಡಳಿತದಲ್ಲಿ ಸ್ವಚ್ಛತೆಯ ನಿರ್ವಹಣೆ ಸವಾಲಿನ ಕೆಲಸವಾಗಿದೆ. ಪುತ್ತೂರು ನಗರದಲ್ಲಿ ಇಂತಹದೊಂದು ವೈಜ್ಞಾನಿಕ ಮಾದರಿಯ ಘಟಕ ನಿರ್ಮಾಣಗೊಂಡಿರುವುದು ಉತ್ತಮ ವಿಚಾರ. ಸ್ವಚ್ಛ ಭಾರತ ಕಲ್ಪನೆಗೆ ಇದು ಪೂರಕ ಎಂದರು.

ಮುಳಿಯ ಗ್ರೀನ್ ಎನರ್ಜಿ ಎಲ್‌ಎಲ್‌ಪಿ ಆಡಳಿತ ನಿರ್ದೇಶಕ ಕೃಷ್ಣ ನಾರಾಯಣ ಮುಳಿಯ ಅಧ್ಯಕ್ಷತೆ ವಹಿಸಿದ್ದರು. ಅಶ್ವಿನಿ ಕೃಷ್ಣ ಮುಳಿಯ, ಮಾಜಿ ರೋಟರಿ ಜಿಲ್ಲಾ ಗವರ್ನರ್ ಎಚ್.ಆರ್. ಕೇಶವ, ಪುತ್ತೂರು ನಗರಸಭೆ ಪೌರಾಯುಕ್ತೆ ವಿದ್ಯಾ ಎಂ.ಕಾಳೆ, ನಗರಸಭೆಯ ಮಾಜಿ ಅಧ್ಯಕ್ಷೆ ಲೀಲಾವತಿ ಅಣ್ಣು ನಾಯ್ಕ, ರೀಟ್ಯಾಪ್ ಸೊಲ್ಯೂಶನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ನಿರ್ದೇಶಕಿ ಡಾ.ದಿವ್ಯಾ ಪ್ರಶಾಂತ್, ರೋಟರಿ ಕ್ಲಬ್ ಪುತ್ತೂರು ಈಸ್ಟ್ ಅಧ್ಯಕ್ಷ ಶಶಿಧರ ಕಿನ್ನಿಮಜಲು, ರೋಟರಿ ಸ್ವಚ್ಛಭಾರತ್ ಚಾರಿಟೇಬಲ್ ಟ್ರಸ್ಟ್ ಕಾರ್ಯದರ್ಶಿ ರವಿಕುಮಾರ್ ರೈ ಕೆದಂಬಾಡಿ ಮಠ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಾಜೆಕ್ಟ್ ಡೈರೆಕ್ಟರ್ ಡಾ.ರಾಜೇಶ್ ಬೆಜ್ಜಂಗಳ ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು.

₹3 ಕೋ. ಯೋಜನೆ

ಪುತ್ತೂರು ನಗರಸಭೆಗೆ ಸೇರಿದ ಬನ್ನೂರು ಡಂಪಿಂಗ್ ಯಾರ್ಡ್‌ನಲ್ಲಿ ಬಯೋಗ್ಯಾಸ್ ಘಟಕ ಸ್ಥಾಪಿಸಲಾಗಿದೆ. 12 ವರ್ಷಗಳ ಹಿಂದೆ ಟಿಸಿಲೊಡೆದ ಕನಸು ಸಾಕಾರಗೊಂಡಿದೆ. ರೋಟರಿ ಕ್ಲಬ್ ಪುತ್ತೂರು ಈಸ್ಟ್ ಸಂಸ್ಥೆಯ ಮುತುವರ್ಜಿಯಿಂದ, ಕೃಷ್ಣ ನಾರಾಯಣ ಮುಳಿಯ ಅಧ್ಯಕ್ಷತೆ ಅವಧಿಯಲ್ಲಿ ರೋಟರಿ ಸ್ವಚ್ಛ ಭಾರತ್ ಚ್ಯಾರಿಟೇಬಲ್ ಟ್ರಸ್ಟ್ ಸ್ಥಾಪಿಸಿ ಆ ಮೂಲಕ ಸುಮಾರು 25 ಲಕ್ಷ ಗಳನ್ನು ಘಟಕ ಸ್ಥಾಪನೆಗಾಗಿ ಸಂಗ್ರಹಿಸಲಾಗಿತ್ತು. 3 ಕೋಟಿ ಯೋಜನೆಯಾದ ಕಾರಣ ಹಣಕಾಸು ಕೊರತೆ ಉಂಟಾದಾಗ ಕೃಷ್ಣನಾರಾಯಣ ಮುಳಿಯ ಅವರು ಕೃಷ್ಣಮುಳಿಯ ಗ್ರೀನ್ ಎನರ್ಜಿ ಎಲ್‌ಎಲ್‌ಪಿ ಎಂಬ ತಮ್ಮ ಸಂಸ್ಥೆಯ ಮೂಲಕ ಬ್ಯಾಂಕ್‌ನಿಂದ ಲೋನ್ ಪಡೆದು ಯೋಜನೆ ಅನುಷ್ಠಾನ ಮಾಡಿದ್ದಾರೆ. 1 ವರ್ಷ 8 ತಿಂಗಳಿನಿಂದ ಪ್ರತೀ ತಿಂಗಳು 6 ಲಕ್ಷ ಬ್ಯಾಂಕ್ ಲೋನ್ ಕಂತು ಪಾವತಿಸುತ್ತಿದ್ದು, ಇದುವರೆಗೆ ಒಂದೇ ಒಂದು ಪೈಸೆ ಲಾಭ ಬಂದಿಲ್ಲ. ಮಂಗಳೂರಿನ ರೀಟ್ಯಾಪ್ ಸೊಲ್ಯೂಶನ್ ಪ್ರೈ.ಲಿ.ಸಂಸ್ಥೆ ಯೋಜನೆ ಅನುಷ್ಠಾನಗೊಳಿಸಿದೆ. ಪ್ರಸ್ತುತ ದಿನವೊಂದಕ್ಕೆ 250 ಕಿಲೋ ಬಯೋಗ್ಯಾಸ್ ಉತ್ಪಾದನೆ ಮಾಡಲಿದ್ದು, ಭವಿಷ್ಯದಲ್ಲಿ 400 ಕಿಲೋ ಉತ್ಪಾದಿಸಲಿದೆ. ಈ ಅನಿಲವು ಅಡುಗೆ ಮತ್ತು ವಾಹನ ಇಂಧನವಾಗಿ ಮಾರುಕಟ್ಟೆ ಪ್ರವೇಶಿಸಲಿದೆ. ಮಾರಾಟದಿಂದ ಬಂದ ಹಣದಿಂದ ಕಿಲೋ ಒಂದಕ್ಕೆ ರೂ. 1 ರಾಜಸ್ವ ನಗರಸಭೆಗೆ ಸಂಸ್ಥೆಗಳು ನೀಡಲಿವೆ.

ಮೂರು ವರ್ಷಗಳಿಂದ ಸತತ ಕಾಡುತ್ತಿದ್ದ ಕೊಬ್ಬಿದ ಗೂಳಿ ಸೆರೆ



ಹೆಬ್ರಿ: ಕಳೆದ ಮೂರು ವರ್ಷಗಳಿಂದ ಗ್ರಾಮಸ್ಥರಿಗೆ ತೊಂದರೆ ಉಂಟುಮಾಡುತ್ತಿದ್ದ ಕೊಬ್ಬಿದ ಗೂಳಿಯನ್ನು ಗ್ರಾಮಸ್ಥರು ಹಾಗೂ ಇಲಾಖೆಯ ಸಹಕಾರದಿಂದ ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಹೆಬ್ರಿ ತಾಲೂಕು ನಾಡ್ಪಾಲು ಸೀತಾನದಿ ತಿಂಗಳೆ ಭಾಗದ ಗೂಳಿಯ ಮೆಗದ್ದೆ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಗೂಳಿ ಜನರಿಗೆ ಆತಂಕ ಉಂಟುಮಾಡುತ್ತಿತ್ತು. ಸುಮಾರು 25ಕ್ಕೂ ಹೆಚ್ಚು ಮನೆಗಳಿರುವ ಈ ಭಾಗದ ನಿವಾಸಿಗಳು ಗೂಳಿಯ ಕಾಟದಿಂದ ಹಲವು ವರ್ಷಗಳಿಂದ ಸಂಕಷ್ಟ ಅನುಭವಿಸುತ್ತಿದ್ದರು. ತೋಟಗಳಿಗೆ ನುಗ್ಗಿ ಬೆಳೆ ಹಾನಿ ಮಾಡುವುದು, ಹಟ್ಟಿಗಳಲ್ಲಿ ನುಗ್ಗಿ ಜನರನ್ನು ಓಡಿಸುವುದು ಮುಂತಾದ ಘಟನೆಗಳು ಆಗಾಗ ನಡೆಯುತ್ತಿದ್ದು, ಗ್ರಾಮಸ್ಥರು ಭಯಭೀತರಾಗಿದ್ದರು.

ಶಾಲೆಗೆ ಹೋಗುವ ಮಕ್ಕಳನ್ನು ಕೂಡ ಗೂಳಿ ಅಟ್ಟಿಸಿಕೊಂಡು ಹೋಗುತ್ತಿದ್ದುದಾಗಿ ಗ್ರಾಮಸ್ಥರು ದೂರಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ 20ಕ್ಕೂ ಹೆಚ್ಚು ಬಾರಿ ಮಕ್ಕಳು ಗೂಳಿಯಿಂದ ಓಡಿಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಈ ಕುರಿತು ಕಳೆದ ವರ್ಷವೇ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದರೂ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಬಳಿಕ ಸಮಸ್ಯೆ ಗಂಭೀರವಾಗುತ್ತಿದ್ದಂತೆ ಹೆಬ್ರಿ ತಾಲೂಕು ಕಚೇರಿ ಎದುರು ಗ್ರಾಮಸ್ಥರು ಧರಣಿ ನಡೆಸಿದರು. ಸಬ್ ಇನ್ಸ್‌ಪೆಕ್ಟರ್ ರವಿ ಬಿಕೆ ಹಾಗೂ ತಹಶೀಲ್ದಾರ್ ಪ್ರಸಾದ್ ಅವರಿಗೆ ಮನವಿ ಸಲ್ಲಿಸಿ ಗೂಳಿಯನ್ನು ಹಿಡಿಯುವಂತೆ ಒತ್ತಾಯಿಸಿದರು.

ಧರಣಿಯ ಬಳಿಕ ಗ್ರಾಮಸ್ಥರ ಒತ್ತಡದ ಮೇರೆಗೆ ಇಲಾಖೆಯ ಸಹಕಾರದೊಂದಿಗೆ ಸ್ಥಳೀಯರು ಶುಕ್ರವಾರ ರಾತ್ರಿ ಕಾರ್ಯಾಚರಣೆ ನಡೆಸಿ ಗೂಳಿಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾದರು. ಶನಿವಾರ ಸಂಜೆ ಸೆರೆಹಿಡಿದ ಗೂಳಿಯನ್ನು ಹೆಬ್ರಿಯ ಗಿಲ್ಲಾಳಿಯ ಗೋಶಾಲೆಗೆ ಒಪ್ಪಿಸಲಾಗಿದೆ.

ಈ ಸಂದರ್ಭದಲ್ಲಿ ಪಂಚಾಯತ್ ಮಾಜಿ ಅಧ್ಯಕ್ಷ ನವೀನ್ ಕುಮಾರ್, ವಿಜಯಕುಮಾರ್ ಸೆಟ್ಟಿ ಸೀತಾನದಿ, ಭಾಸ್ಕರ್ ಸೆಟ್ಟಿ ಗುಲ್ಕಾಡು, ರಮೇಶ್ ಶೆಟ್ಟಿ ಅಜ್ಜೊಳ್ಳಿ, ರಾಜೇಶ್ ಶೆಟ್ಟಿ, ರಕ್ಷಿತ್ ಶೆಟ್ಟಿ, ಸುದರ್ಶನ್ ಹೆಗ್ಡೆ ಅಜ್ಜೊಳ್ಳಿ, ಸದಾಶಿವ ಗೌಡ, ಮಹೇಶ್ ಶೆಟ್ಟಿ, ಬಾಲಕೃಷ್ಣ ಶೆಟ್ಟಿ ಗುಡ್ಡೆಮನೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪೊಳಲಿ ಜಾತ್ರೆ ಆರಂಭ: ಸಾವಿರ ಸೀಮೆಯ ಒಡತಿ ಶ್ರೀ ರಾಜರಾಜೇಶ್ವರೀ ಅಮ್ಮನ ಸನ್ನಿಧಿಯಲ್ಲಿ ಸಂಭ್ರಮ



ಬಂಟ್ವಾಳ: ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ಜಾತ್ರಾ ಮಹೋತ್ಸವ ಮಾ. 14ರಂದು ರಾತ್ರಿ ಧ್ವಜಾರೋಹಣಗೊಂಡು 29 ದಿನಗಳ ಜಾತ್ರಾ ಮಹೋತ್ಸವ ನಡೆಯಲಿದೆ.

ಮಾ. 15ರಂದು ಬೆಳಗ್ಗೆ ದೀಪದ ಬಳಿ ಕಂಚಿಲು ಸೇವೆಯೊಂದಿಗೆ ಚಿಕ್ಕ ರಥದಲ್ಲಿ ದೇವರ ಉತ್ಸವ ಮೂರ್ತಿಯನ್ನು ದೇವಳದ ರಥ ಬೀದಿಯಲ್ಲಿ ಎಳೆಯಲಾಯಿತು.

ನಂತರ ನಟ್ಟೋಜರು ಹಿಂಗಾರದ ಹಾಳೆಯೊಂದಿಗೆ ಗೋಪುರದ ಮುಂಭಾಗದಲ್ಲಿ ಸೇರಿಗಾರನ ಕೈಯಲ್ಲಿ ಕೊಟ್ಟು ಕಿವಿಯಲ್ಲಿ ಆರಾಢದ ದಿನವನ್ನು ತಿಳಿಸುತ್ತಾರೆ.

ನಂತರ ಶ್ರೀಭಗವತಿ ದೇವಿಯ ಆವೇಶದಲ್ಲಿದ್ದ ಪಂಬದನ ಕೈಯಲ್ಲಿ ಶೇರಿಗಾರನು ಹಿಂಗಾರದ ಹಾಳೆಯನ್ನು ಕೊಟ್ಟು ಕಿವಿಯಲ್ಲಿ ಗುಟ್ಟಾಗಿ ಆರಾಢದ ದಿನವನ್ನು ತಿಳಿಸುತ್ತಾನೆ. ಆಗ ಸಾವಿರ ಸೀಮೆಯ ಭಕ್ತರು, ತಂತ್ರಿಗಳು, ಅರ್ಚಕರು, ಗುತ್ತಿನವರು ಅಮ್ಮನವರ ಜಾತ್ರೆಯ ದಿನ ತಿಳಿದುಕೊಳ್ಳಲು ಕುತುಹಲದಿಂದ ಕಾದು ಕುಳಿತಿರುತ್ತಾರೆ. ಆಗ ಪಂಬದನು ಮೂರು ಬಾರಿ ಕೂಗಿ 'ಇರುವತ್ತೊರುಂಬ ಪೊಪಿನಾನಿ ಆರಾಢ' (29 ದಿವಸದ) ಅಂತ ತುಳುವಿನಲ್ಲಿ ಜೋರಾಗಿ ಹೇಳುತ್ತಾನೆ. ಹೀಗೆ ಪೊಳಲಿ ಜಾತ್ರೆಯ ಒಂದು ತಿಂಗಳ ಜಾತ್ರೆಯ ಗೌಪ್ಯವಾಗಿಡಲಾದ ದಿನವನ್ನು ತಿಳಿಸುತ್ತಾರೆ.



ಈ ಸಲ 29 ದಿನದ ಜಾತ್ರೆ ನಡೆಯಲಿದೆ ಏ.. 6ರಂದು ಪ್ರಥಮ ಚೆಂಡು, 7 ರಂದು ಎರಡನೇ ಚೆಂಡು, 8 ರಂದು ಮೂರನೇ ಚೆಂಡು, 9ರಂದು ನಾಲ್ಕನೇ ಚೆಂಡು, 10 ರಂದು ಕಡೇಚೆಂಡು, 11 ರಂದು ಮಹಾ ರಥೋತ್ಸವ ನಡೆಯಲಿದೆ. 12 ರಂದು ಆರಾಢ ಹೀಗೆ ಇಪ್ಪತ್ತೊಂಬತ್ತು ದಿನದ ಜಾತ್ರೆಯು ನಡೆಯಲಿದೆ.

ತೀಯಾಸಮಾಜಬಾಂಧವರ ಕೇಂದ್ರಸ್ಥಾನವಾದ ಶ್ರೀ ಕ್ಷೇತ್ರ ನಂದ್ಯದಿಂದ ಶ್ರೀ ಭಗವತೀ ಮಾತೆಯ ಭಂಡಾರವು ಸೂಟೆಯ ಬೆಳಕಿನಲ್ಲಿ ಪಲ್ಗುಣಿ ನದಿ ತಟಕ್ಕೆ ಬಂದು ಅಲ್ಲಿಂದ ದೋಣಿಯ ಮುಖಾಂತರ ನದಿ ದಾಟಿ ತೀಯಾ ಸಮಾಜದ ಗುರಿಕಾರರಿಗೆ ಪ್ರಸಾದ ನೀಡಿ ಆ ಬಳಿಕ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದ ಧ್ವಜಾರೋಹಣ ನಡೆಯುವುದು ಸಂಪ್ರದಾಯ.

ಮರುದಿನ ಪುನಃ ಮೊದಲ ದಿನದಂತೆ ಪೊಳಲಿ ಕ್ಷೇತ್ರದಲ್ಲಿ ಆರಢ ಕರೆದು ಅವರನ್ನು ದೋಣಿಯ ಮೂಲಕ ಪಲ್ಗುಣಿ ನದಿ ದಾಟಿಸಿ, ನಂಡ್ಯ ಕ್ಷೇತ್ರಕ್ಕೆ ಬರಮಾಡಿಕೊಂಡು ಅಲ್ಲಿ ಶ್ರೀ ಭಗವತೀ ಸಾನಿಧ್ಯದಲ್ಲಿ ಆರಢ ಕರೆಯುವುದು ಅನಾದಿ ಕಾಲದ ಅವಿನಾಭಾವ ಸಂಪ್ರದಾಯವಾಗಿದೆ.

» ಶ್ರೀ ಭಗವತಿ ದೇವಿಯ ಆವೇಶದಲ್ಲಿದ್ದ ಪಂಬದನ ಕೈಯಲ್ಲಿ ಶೇರಿಗಾರನು ಹಿಂಗಾರದ ಹಾಳೆಯನ್ನು ಕೊಟ್ಟು ಕಿವಿಯಲ್ಲಿ ಗುಟ್ಟಾಗಿ ಆರಾಢದ ದಿನವನ್ನು ತಿಳಿಸುತ್ತಾನೆ.

» ಪಂಬದನು ಮೂರು ಬಾರಿ ಕೂಗಿ 'ಇರುವತ್ತೊರುಂಬ ಪೊಪಿನಾನಿ ಆರಾಢ' (29 ದಿವಸದ) ಅಂತ ತುಳುವಿನಲ್ಲಿ ಜೋರಾಗಿ ಹೇಳುತ್ತಾನೆ.

ಆಳ್ವಾಸ್ ಪುನರ್ಜನ್ಮ ಸಮಗ್ರ ವೈದ್ಯಕೀಯ ಚಿಕಿತ್ಸೆಯ ದುಶ್ಚಟ ನಿವಾರಣಾ ಕೇಂದ್ರದ ಆರನೇ ವರ್ಷದ ವಾರ್ಷಿಕೋತ್ಸವ | ಕುಟುಂಬ ಸಮ್ಮಿಲನ ಕಾರ್ಯಕ್ರಮ

ಅಮಲು ಪದಾರ್ಥ ವ್ಯಸನ ಸಮಾಜದ ಗಂಭೀರ ಪಿಡುಗು: ಡಾ. ರಾವ್

ಮೂಡುಬಿದಿರೆ: ಅಮಲು ಪದಾರ್ಥಗಳ ವ್ಯಸನವು ಸಾಮಾನ್ಯ ಸಾಮಾಜಿಕ ಪಿಡುಗಾಗಿದ್ದು, ಇದು ಕೇವಲ ದೈಹಿಕ ಸಮಸ್ಯೆಯಷ್ಟೇ ಅಲ್ಲದೆ ಮಾನಸಿಕ ಹಾಗೂ ಸಾಮಾಜಿಕ ಕಾಯಿಲೆಯೂ ಆಗಿದೆ ಎಂದು ಜಸ್ಟಿಸ್ ಕೆ.ಎಸ್. ಹೆಗ್ಡೆ ಆಸ್ಪತ್ರೆಯ ಮನೋವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಡಾ. ಸತೀಶ್ ರಾವ್ ಹೇಳಿದರು.

ಅವರು ಆಳ್ವಾಸ್ ಪುನರ್ಜನ್ಮ ಸಮಗ್ರ ವೈದ್ಯಕೀಯ ಚಿಕಿತ್ಸೆಯ ದುಶ್ಚಟ ನಿವಾರಣಾ ಕೇಂದ್ರದ ಆರನೇ ವರ್ಷದ ವಾರ್ಷಿಕೋತ್ಸವ ಹಾಗೂ ಕುಟುಂಬ ಸಮ್ಮಿಲನ ಕಾರ್ಯಕ್ರಮವನ್ನು ಆಳ್ವಾಸ್ ಪುನರ್ಜನ್ಮ ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದರು.

ಅಮಲು ಪದಾರ್ಥಗಳ ವ್ಯಸನದಿಂದ ವ್ಯಕ್ತಿಯ ಜೀವನದಲ್ಲಿ ಆರ್ಥಿಕ ಹಾಗೂ ಕೌಟುಂಬಿಕ ಸಂಕಷ್ಟಗಳು ಉಂಟಾಗುತ್ತವೆ. ಸಮಾಜ ಆರೋಗ್ಯಕರವಾಗಿರಬೇಕಾದರೆ ಇಂತಹ ದುಶ್ಚಟಗಳು ಇರಬಾರದು. ದುರದೃಷ್ಟವಶಾತ್ ಇಂದಿಗೂ ಸಮಾಜದಲ್ಲಿ ಈ ಸಮಸ್ಯೆ ಮುಂದುವರಿದಿರುವುದು ಆತಂಕಕಾರಿ ಸಂಗತಿ. ಸಾಮಾನ್ಯವಾಗಿ ಯುವಕರು ಸುಮಾರು ಇಪ್ಪತ್ತು ವರ್ಷದ ವಯಸ್ಸಿನಲ್ಲಿ ಕುತೂಹಲ, ಸ್ನೇಹಿತರ ಒತ್ತಡ (ಪೀರ್ ಪ್ರೆಷರ್) ಮುಂತಾದ ಕಾರಣಗಳಿಂದ ಅಮಲು ಪದಾರ್ಥಗಳತ್ತ ಆಕರ್ಷಿತರಾಗುತ್ತಾರೆ. ಆರಂಭದಲ್ಲಿ ನಾವು ಅದನ್ನು ಸೇವಿಸುತ್ತೇವೆ, ನಂತರ ಅದು ನಮ್ಮನ್ನೇ ಆಳುತ್ತದೆ ಮತ್ತು ಕೊನೆಗೆ ನಾವು ಅದರ ದಾಸರಾಗುತ್ತೇವೆ. ಇದರ ಪರಿಣಾಮವಾಗಿ ವ್ಯಕ್ತಿಯ ಕುಟುಂಬ ಜೀವನವೇ ಹಾಳಾಗುವ ಸ್ಥಿತಿ ಉಂಟಾಗುತ್ತದೆ ಎಂದರು. ದುಶ್ಚಟ ನಿವಾರಣಾ ಚಿಕಿತ್ಸೆಯ ನಂತರ ಮತ್ತೆ ಆ ಚಟಕ್ಕೆ ಒಳಗಾಗದಂತೆ ಮನಸ್ಸನ್ನು ಗಟ್ಟಿಗೊಳಿಸಿಕೊಳ್ಳುವುದು ಅತ್ಯಂತ ಮುಖ್ಯ. ಚಿಕಿತ್ಸೆಯ ಜೊತೆಗೆ ಕುಟುಂಬದ ಬೆಂಬಲ ಮತ್ತು ದೃಢ ಮನೋಬಲವೂ ಅಗತ್ಯ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿ ಧರ್ಮಸ್ಥಳದ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್‌ನ ನಿರ್ದೇಶಕ ವಿವೇಕ್ ವಿನ್ಸೆಂಟ್ ಪಾಯ್ಸ್ ಮಾತನಾಡಿ, ಮಾದಕ ವ್ಯಸನವು ವ್ಯಕ್ತಿಯ ಜೀವನವನ್ನಷ್ಟೇ ಅಲ್ಲ, ಸಂಪೂರ್ಣ ಕುಟುಂಬದ ಶಾಂತಿ ಮತ್ತು ನೆಮ್ಮದಿಯನ್ನೂ ಹಾಳುಮಾಡುವ ದುಶ್ಚಟ. ಇದರ ಪರಿಣಾಮವಾಗಿ ಕುಟುಂಬದಲ್ಲಿ ಅಶಾಂತಿ, ಆರ್ಥಿಕ ಸಂಕಷ್ಟ ಮತ್ತು ಸಂಬಂಧಗಳಲ್ಲಿ ಬಿರುಕು ಉಂಟಾಗುತ್ತದೆ. ವ್ಯಸನಕ್ಕೆ ಒಳಗಾದ ವ್ಯಕ್ತಿ ನಿಧಾನವಾಗಿ ತನ್ನ ಜವಾಬ್ದಾರಿಗಳನ್ನು ಮರೆತು ಕುಟುಂಬದ ಸದಸ್ಯರಿಂದ ದೂರವಾಗುತ್ತಾನೆ. ಇದರಿಂದ ಪತ್ನಿ, ಮಕ್ಕಳು ಮತ್ತು ಹಿರಿಯರು ಮಾನಸಿಕವಾಗಿ ನೋವನ್ನು ಅನುಭವಿಸುತ್ತಾರೆ. ಕೆಲವೊಮ್ಮೆ ಕುಟುಂಬದ ಸದಸ್ಯರ ನಡುವೆ ಕಲಹಗಳು ಹೆಚ್ಚಾಗಿ, ಮನೆಯ ನೆಮ್ಮದಿ ಸಂಪೂರ್ಣವಾಗಿ ಕಳೆದುಹೋಗುವ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ದುಶ್ಚಟಗಳಿಗೆ ಅವಕಾಶ ನೀಡದೆ, ಕುಟುಂಬದೊಂದಿಗೆ ಹೆಚ್ಚಿನ ಸಮಯ ಕಳೆಯಲು ಪ್ರಯತ್ನಿಸಬೇಕು. ಸಮಾಜದ ಸುಸ್ಥಿರ ಅಭಿವೃದ್ಧಿಗೆ ಆರೋಗ್ಯಕರ ಕುಟುಂಬ ವ್ಯವಸ್ಥೆ ಅತ್ಯಂತ ಮುಖ್ಯ. ಆದ್ದರಿಂದ ವ್ಯಸನದಿಂದ ದೂರವಿದ್ದು, ಕುಟುಂಬದ ನೆಮ್ಮದಿಯನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.



> **ಸಮಾಜದ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಆಳ್ವಾಸ್, ಎಸ್‌ಡಿಎಂ ಹಾಗೂ ನಿಟ್ಟೆ ಸಂಸ್ಥೆಗಳ ಕಾರ್ಯ ಸದಾ ಶ್ಲಾಘನೀಯ. ಒಬ್ಬ ವ್ಯಕ್ತಿ ಒಂದು ಸಂಸ್ಥೆಯನ್ನು ಕಟ್ಟಬಹುದು; ಅದೇ ರೀತಿ ಒಂದು ಸಂಸ್ಥೆ ಕೂಡ ವ್ಯಕ್ತಿಯನ್ನು ರೂಪಿಸುತ್ತದೆ. ವ್ಯಕ್ತಿ ಮತ್ತು ಸಂಸ್ಥೆಗಳ ನಡುವೆ ಪರಸ್ಪರ ಸಂಬಂಧ ಅತ್ಯಂತ ಮಹತ್ವದ್ದಾಗಿದೆ. ಸಮಾಜದ ಏಳಿಗೆ ಜನರ ಸಕ್ರಿಯ ಭಾಗವಹಿಸುವಿಕೆಯಿಂದ ಸಾಧ್ಯವಾಗುತ್ತದೆ. ಆದ್ದರಿಂದ ಉತ್ತಮ ಸಮಾಜ ನಿರ್ಮಾಣ ಮತ್ತು ದೇಶದ ಅಭಿವೃದ್ಧಿ ಕಾರ್ಯದಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು.**
>
> ■ ಡಾ. ವಿನಯ್ ಆಳ್ವ
> ಪುನರ್ಜನ್ಮ ಕೇಂದ್ರದ ನಿರ್ದೇಶಕ

ಕಾರ್ಯಕ್ರಮದಲ್ಲಿ ವ್ಯಸನ ಮುಕ್ತರಾದ ವಿನಯ್ ಕುರ್ಡೇಕರ್, ಹರೀಶ್ ಕೋಟ್ಯಾನ್, ಸಚಿನ್, ಭವಿನ್, ಸೃಜನ್ ಹಾಗೂ ಗೋಪಾಲ್ ಅವರನ್ನು ಸನ್ಮಾನಿಸಲಾಯಿತು.

ಆಳ್ವಾಸ್ ಪುನರ್ಜನ್ಮದ ಆಪ್ತ ಸಮಾಲೋಚಕ ಲೋಹಿತ್ ಬಂಟ್ವಾಳ ಕಾರ್ಯಕ್ರಮ ನಿರೂಪಿಸಿದರು. ಆಪ್ತ ಸಮಾಲೋಚಕಿ ಸುಮನ್ ಪಿಂಟೋ ಸ್ವಾಗತಿಸಿ ಪ್ರಸ್ತಾವನೆಗೈದರು. ಬೆನ್ಸನ್ ಪಿಂಟೋ ವಂದಿಸಿದರು. ಕಾರ್ಯಕ್ರಮದಲ್ಲಿ ಪುನರ್ಜನ್ಮ ಕೇಂದ್ರದ ಸದಸ್ಯರು, ಚಿಕಿತ್ಸೆ ಪಡೆದು ಚೇತರಿಸಿಕೊಂಡವರು ಹಾಗೂ ಅವರ ಕುಟುಂಬಸ್ಥರು ಭಾಗವಹಿಸಿದ್ದರು.

ಕಿರುಸುದ್ದಿ

ಯುದ್ಧದ ಬಿಸಿ: ಎಫ್-1 ರೇಸ್ ಮುಂದೂಡಿಕೆ

• **ದುಬೈ:** ಸೌದಿ ಅರೇಬಿಯಾ ಮತ್ತು ಬಹ್ರೇನ್‌ನಲ್ಲಿ ನಡೆಯಬೇಕಿದ್ದ ಫಾರ್ಮುಲಾ 1 ರೇಸ್ ಮಧ್ಯಪ್ರಾಚ್ಯದಲ್ಲಿ ಹೆಚ್ಚಾಗುತ್ತಿರುವ ಯುದ್ಧ ತೀವ್ರತೆಯಿಂದ ಮುಂದೂಡಲಾಗಿದೆ. ಗಲ್ಫ್ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾದ ಪರಿಣಾಮ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಂತಾರಾಷ್ಟ್ರೀಯ ಮೋಟಾರ್ ಸ್ಪೋರ್ಟ್ಸ್ ಸಂಸ್ಥೆ ಶನಿವಾರದಂದು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದೆ. ವಿಶ್ವಾದ್ಯಂತ ಹೆಚ್ಚಾದ ಯುದ್ಧ ಉದ್ವೇಗದಿಂದಾಗಿ ಈ ಬಾರಿಯ ಗ್ರ್ಯಾಂಡ್ ಪ್ರಿಕ್ಸ್ ಕೂಟ ಮುಂದೂಡಲಾಗಿದೆ ಎಂದು ಹೇಳಿದೆ. ಮುಂದೂಡಿಕೆ ಅನಿರ್ದಿಷ್ಟಾವಧಿಗೆ ಸಿಮೀತವಾಗಿರಲಿದೆ. ಮುಂದಿನ ದಿನಾಂಕ ಚರ್ಚಿಸಿ ಪರಿಸ್ಥಿತಿಗೆ ತಕ್ಕಂತೆ ತೀರ್ಮಾನ ಮಾಡಲಾಗುವುದು ಎಂದು ಸಂಸ್ಥೆ ತಿಳಿಸಿದೆ. ಏಪ್ರಿಲ್ 10-12ರವರೆಗೆ ಕೂಟ ನಡೆಯಬೇಕಿತ್ತು.

ಓಪನ್ ಜಂಪ್ಸ್: ಸರ್ವೇಶ್ ಚಾಂಪಿಯನ್

• **ಬೆಂಗಳೂರು:** ಇಲ್ಲಿ ನಡೆಯುತ್ತಿರುವ 5ನೇ ಓಪನ್ ಜಂಪ್ಸ್ ಕ್ರೀಡಾಕೂಟದಲ್ಲಿ ಮಹಾರಾಷ್ಟ್ರದ ಸರ್ವೇಶ್ ಕುಶಾರೆ ಚಾಂಪಿಯನ್ ಆನಿಸಿಕೊಂಡರು. ಬೆಂಗಳೂರಿನ ಅಂಜು ಬೊಬ್ಬಿ ಹೈ ಪರ್ಫಾಮನ್ಸ್ ಸೆಂಟರ್‌ನಲ್ಲಿ ನಡೆದ ಈ ಕೂಟದಲ್ಲಿ ಮಿಂಚಿದ ಅವರು ಪದಕ ಗಿಟ್ಟಿಸಿಕೊಂಡರೂ ದಾಖಲೆ ಬರೆಯಲಾಗಲಿಲ್ಲ. 2.16 ಮೀ. ದೂರದ ಜಿಗಿತದೊಂದಿಗೆ ಸರ್ವೇಶ್ ಈ ಸಾಧನೆ ಮಾಡಿದರು. 2020ರ ಟೋಕಿಯೊ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಪ್ಯಾರಾ ಅಥ್ಲೀಟ್ ನಿಶಾದ್ ಕುಮಾರ್ ಅವರು 2.10 ಮೀ. ದೂರ ಜಿಗಿದರೂ ಐದನೇ ಸ್ಥಾನಕ್ಕೆ ತೃಪ್ತರಾದರು. ಅಬ್ದುಲ್ಲಾ 16.83ಮೀ.ದೊಂದಿಗೆ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರವೀಣ್ 16.78ಮೀ.ದೊಂದಿಗೆ ಹೊರನಡೆದರು.

ದ್ರಾವಿಡ್, ಬಿನ್ನಿ, ಮಿಥಾಲಿಗೆ ಜೀವಮಾನ ಸಾಧನೆ ಪ್ರಶಸ್ತಿ | ದಿಲ್ಲಿಯಲ್ಲಿ ಸಂಪನ್ನಗೊಂಡ ನಮನ್ ಕಾರ್ಯಕ್ರಮ

ಅಪ್ರತಿಮ ಕ್ರಿಕೆಟಿಗರಿಗೆ ಅತ್ಯುನ್ನತ ಗರಿ





• **ಹೊಸದಿಲ್ಲಿ:** ಕ್ರಿಕೆಟ್ ದಿಗ್ಗಜಗರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಮತ್ತು ಮಹಿಳಾ ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಬಿಸಿಸಿಐ ದಿಲ್ಲಿಯಲ್ಲಿ ಭಾನುವಾರ ನಡೆದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಿತು.

ಹಿರಿಯ ಕ್ರಿಕೆಟಿಗರು, ಹಾಲಿ-ಮಾಜಿ ಚಾಂಪಿಯನ್‌ಗಳು ಮತ್ತು ಕ್ರೀಡಾಳಿತ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಾರು ಕ್ರಿಕೆಟಿಗರಿಗೆ ಗೌರವ ಸಲ್ಲಿಸಲಾಗಿದೆ. ಭಾರತೀಯ ಕ್ರಿಕೆಟಿಗೆ ಆಟಗಾರರಾಗಿ ಮಾರ್ಗದರ್ಶಕರಾಗಿ, ನಾಯಕರಾಗಿ ಮುಂದೆ ಕೋಚ್ ಆಗಿ ದೊಡ್ಡ ಕೊಡುಗೆಗಳನ್ನು ನೀಡಿರುವ ರಾಹುಲ್ ದ್ರಾವಿಡ್ ಅವರನ್ನು ದಿಗ್ಗಜ ಎಂದು ಬಣ್ಣಿಸಲಾದರೆ, ಇತ್ತ ರೋಜರ್ ಬಿನ್ನಿ ಅವರನ್ನು ಅಪ್ರತಿಮ ಕ್ರಿಕೆಟಿಗ, ಅತ್ಯುತ್ತಮ ಆಡಳಿತಗಾರ ಎನ್ನಲಾಗಿದೆ. ಇಬ್ಬರಿಗೂ ಕರ್ನಲ್ ಸಿ.ಕೆ. ನಾಯ್ಡು ಪ್ರಶಸ್ತಿ ನೀಡಲಾಗಿದೆ. ಇನ್ನು ಮಹಿಳಾ ಕ್ರಿಕೆಟ್‌ನಲ್ಲಿ ಅಚ್ಚಳಿಯದ ದಾಖಲೆಗಳನ್ನು ಮಾಡಿರುವ ಮಿಥಾಲಿ ರಾಜ್ ಅವರನ್ನು ಮಹಿಳಾ ಕ್ರಿಕೆಟ್‌ನ ಐಕಾನ್ ಎಂದು ಬಣ್ಣಿಸಲಾಗಿದ್ದು, ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.

ಇದರ ಜೊತೆಗೆ ಶುಭಮನ್ ಗಿಲ್ ಅವರಿಗೆ ವಾರ್ಷಿಕ ಅತ್ಯುತ್ತಮ ಆಟಗಾರ ಎಂಬ ಪಾಲಿ ಪ್ರಶಸ್ತಿ ನೀಡಲಾಗಿದೆ. ಮಂಧಾನ ಅವರಿಗೆ ಅತ್ಯುತ್ತಮ ಮಹಿಳಾ ಕ್ರಿಕೆಟರ್ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿದ ಆಟಗಾರರಿಗೆ ಇನ್ನಷ್ಟು ಉತ್ಸಾಹ ನೀಡುವುದಕ್ಕೆ ವಿವಿಧ ಪ್ರಶಸ್ತಿಗಳನ್ನೂ ನೀಡಲಾಗಿದೆ.

ರಾಹುಲ್ ಕೊಡುಗೆಗೆ ತಕ್ಕ ಗರಿ: ರಾಹುಲ್ ದ್ರಾವಿಡ್ ಅವರಿಗೆ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು. ಟೀಂ ಇಂಡಿಯಾದ ಬಿಗ್ ಫೋರ್' ಬ್ಯಾಟಿಂಗ್ ಲೈನ್ ಅಪ್‌ನ ಭಾಗವಾಗಿದ್ದ ರಾಹುಲ್ ದ್ರಾವಿಡ್, ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ಮತ್ತು ವಿವಿಎಸ್ ಲಕ್ಷ್ಮಣ್ ಅಂತಹ ದಿಗ್ಗಜರ ಪಟ್ಟಿಯಲ್ಲಿ ಒಬ್ಬರಾಗಿದ್ದರು. ಏಕದಿನ ಹಾಗೂ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡಕ್ಕೆ ದ್ರಾವಿಡ್ ನೀಡಿರುವ ಕೊಡುಗೆ ಅಪಾರ. ಏಕದಿನ ಮಾದರಿಯಲ್ಲಿ 10,000 ಕ್ಕೂ ಹೆಚ್ಚು ರನ್ ಗಳಿಸಿರುವ ದ್ರಾವಿಡ್, ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಪರ ಅತಿ ಹೆಚ್ಚು ರನ್ (13,288) ಗಳಿಸಿದ ಎರಡನೇ ಆಟಗಾರ ಎನಿಸಿಕೊಂಡಿದ್ದಾರೆ. 2012 ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ನಿಂದ ನಿವೃತ್ತರಾದ ದ್ರಾವಿಡ್, ಆ ಬಳಿಕ ವೀಕ್ಷಕ ವಿವರಣೆಗಾರನಾಗಿ ಕಾಣಿಸಿಕೊಂಡರು. ನಂತರ ತರಬೇತುದಾರರಾಗಿ ಭಾರತ 19 ವರ್ಷದೊಳಗಿನವರ ತಂಡವನ್ನು 2018 ರ ವಿಶ್ವಕಪ್‌ನಲ್ಲಿ ಚಾಂಪಿಯನ್ ಮಾಡಿದರು. ಮುಂದೆ ಹಿರಿಯರ ತಂಡಕ್ಕೆ ಪ್ರಧಾನ ಕೋಚ್ ಆಗಿ ನೇಮಕಗೊಂಡಿದ್ದ ದ್ರಾವಿಡ್, ತಮ್ಮ ಅವಧಿಯಲ್ಲಿ ತಂಡವನ್ನು 2023ರ ಏಕದಿನ ವಿಶ್ವಕಪ್ ಫೈನಲ್‌ಗೇರಿಸಿದ್ದರು. ಬಳಿಕ 2024 ರಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ತಂಡವನ್ನು ಚಾಂಪಿಯನ್ ಕೂಡ ಮಾಡಿದ್ದರು.

ರೋಜರ್ ಬಿನ್ನಿಗೆ ಅತ್ಯುತ್ತಮ ಸಾಧನೆಗೆ ಪ್ರಶಸ್ತಿ

1983ರಲ್ಲಿ ಭಾರತ ಮೊದಲ ಬಾರಿಗೆ ವಿಶ್ವಕಪ್ ಗೆದ್ದಾಗ ತಂಡದ ಭಾಗವಾಗಿದ್ದ ರೋಜರ್ ಬಿನ್ನಿ ಕೂಡ ಕನ್ನಡಿಗರು. ವಿಶ್ವಕಪ್ ಗೆದ್ದ ತಂಡದ ಪ್ರಮುಖ ಆಟಗಾರ ಅನ್ನಿಸಿಕೊಂಡಿದ್ದ ಅವರು, ಭಾರತವೆಂದೂ ಮರೆಯಲಾಗದ ಕೊಡುಗೆಗಳನ್ನು ನೀಡಿದ್ದಾರೆ. ವಿಶ್ವಕಪ್‌ನಲ್ಲಿ ನೆನಪಿಗೆ ಬರುವಂಥ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ. ಅಷ್ಟಕ್ಕೇ ಸಿಮೀತವಾಗದೆ ಕೋಚ್ ಹುದ್ದೆಯಲ್ಲೂ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ. ಬಿಸಿಸಿಐ ಆಡಳಿತಾಧಿಕಾರಿ ಕೂಡ ಆಗಿದ್ದ ಅವರು, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ವಿಭಿನ್ನ ಯೋಜನೆಗಳೊಂದಿಗೆ ಕೊಡುಗೆ ನೀಡಿದ್ದಾರೆ.

ಮಿಥಾಲಿ ರಾಜ್ ಆಟಕ್ಕೆ ಸಂದ ಪ್ರಶಸ್ತಿ

ಭಾರತ ಮಹಿಳೆಯರ ಕ್ರಿಕೆಟ್ ಎಂದ ತಕ್ಷಣಕ್ಕೆ ನೆನಪಾಗಲೇ ಬೇಕಾದ ಹೆಸರಿದು. ವಿಶ್ವದ ಯಾವುದೇ ಮಹಿಳೆ ಮಾಡಲಾಗದ ದಾಖಲೆಗಳನ್ನು ಮಾಡಿದ್ದಾರೆ. ಇಲ್ಲಿಯವರೆಗೂ ಅತಿ ಹೆಚ್ಚು ರನ್ ಗಳಿಸಿದ ದಾಖಲೆಗಳನ್ನು ಮಾಡಿದ್ದಾರೆ. ಸಾಧನೆಗೆ ಯಾವುದೇ ಸರಿಸಾಟಿ ಇಲ್ಲದಂತೆ ಮುಂದೆ ನಾಯಕಿಯಾದ ಅವರು, ತಂಡ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮಹಿಳಾ ಕ್ರಿಕೆಟ್‌ನಲ್ಲಿ ಭಾರತ ಎತ್ತರಕ್ಕೆ ಬೆಳೆಯಬೇಕಾದರೆ ಅವರ ಪಾತ್ರ ದೊಡ್ಡದು. ಈ ಎಲ್ಲಾ ಸಾಧನೆಗಳನ್ನು ಗಮನಿಸಿ ಅವರಿಗೆ ಪ್ರಶಸ್ತಿ ನೀಡಲಾಗಿದೆ.

ಪ್ರಮುಖ ಪ್ರಶಸ್ತಿ ಪಟ್ಟಿ

ಆಟಗಾರ/ ಆಟಗಾರ್ತಿ	ಪ್ರಶಸ್ತಿ
ರೋಜರ್ ಬಿನ್ನಿ	ಸಿ.ಕೆ. ನಾಯ್ಡು ಜೀವಮಾನ ಸಾಧನೆ
ರಾಹುಲ್ ದ್ರಾವಿಡ್	ಸಿ.ಕೆ. ನಾಯ್ಡು ಜೀವಮಾನ ಸಾಧನೆ
ಮಿಥಾಲಿ ರಾಜ್	ಜೀವಮಾನ ಸಾಧನೆ
ಶುಭಮನ್ ಗಿಲ್	ಪಾಲಿ ಉಮ್ರಿಗರ್
ಸ್ಮೃತಿ ಮಂಧಾನ	ವರ್ಷದ ಅತ್ಯುತ್ತಮ ಅಂತಾರಾಷ್ಟ್ರೀಯ ಆಟಗಾರ್ತಿ
ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ	ಎನ್ ಶ್ರೀ ಚರಣಿ
ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ	ಹರ್ಷಿತ್ ರಾಣಾ

ವಿವಿಧ ಆಟಗಾರರಿಗೆ ಪ್ರಶಸ್ತಿ

ಕಾರ್ಯಕ್ರಮದಲ್ಲಿ ವಿವಿಧ ಆಟಗಾರರಿಗೆ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ, ವಿಕೆಟ್ ಪಡೆದ ಆಟಗಾರರಿಗೂ ಪ್ರಶಸ್ತಿ ನೀಡಲಾಗಿದೆ. ಹರ್ಷಿತ್ ರಾಣ ಅವರಿಗೆ ವರ್ಷದಲ್ಲಿ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ ಎಂಬ ಪ್ರಶಸ್ತಿ ನೀಡಿದರೆ, ಸ್ನೇಹ ರಾಣಾ ಅವರಿಗೆ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ ಎಂಬ ಪ್ರಶಸ್ತಿ ನೀಡಲಾಗಿದೆ.

ವಿಶ್ವಕಪ್ ಗೆದ್ದ ತಂಡಗಳಿಗೆ ಬಿಸಿಸಿಐ ಸನ್ಮಾನ



ಪುರುಷರ ಟಿ20 ವಿಶ್ವಕಪ್ ಚಾಂಪಿಯನ್ಸ್



ಚಾಂಪಿಯನ್ಸ್ ಟ್ರೋಫಿ ಚಾಂಪಿಯನ್ಸ್



ಮಹಿಳಾ ಏಕದಿನ ವಿಶ್ವಕಪ್ ಚಾಂಪಿಯನ್ಸ್



ಅಂಡರ್-19 ಏಕದಿನ ವಿಶ್ವಕಪ್ ಚಾಂಪಿಯನ್ಸ್



ಕಪ್ ವಿಜೇತ ನಾಯಕರು

• **ಹೊಸದಿಲ್ಲಿ:** ದಿಲ್ಲಿಯಲ್ಲಿ ನಡೆದ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಶ್ವಕಪ್ ಗೆದ್ದ ಭಾರತೀಯ ತಂಡಗಳಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸನ್ಮಾನಿಸಿದೆ.

ಕ್ರಿಕೆಟ್‌ನಲ್ಲಿ ಭಾರತ 2025-26ರಲ್ಲಿ ಹೆಚ್ಚು ಸಾಧನೆಗಳನ್ನು ಮಾಡಿದ್ದು, ಈ ಬಗ್ಗೆ ಶ್ಲಾಘಿಸಿದ ಬಿಸಿಸಿಐ ಅಂಡರ್-19 ತಂಡ, ಏಕದಿನ ವಿಶ್ವಕಪ್ ಗೆದ್ದ ಮಹಿಳೆಯರ ಕ್ರಿಕೆಟ್ ತಂಡ ಹಾಗೂ ಟಿ20 ವಿಶ್ವಕಪ್ ಗೆದ್ದ ತಂಡಗಳನ್ನು ಸನ್ಮಾನಿಸಿತು.

ಕಳೆದ ವರ್ಷ ಭಾರತದಲ್ಲೇ ನಡೆದಿದ್ದ ಮಹಿಳೆಯರ ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆದ್ದ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ಮಹಿಳಾ ತಂಡ ಇತಿಹಾಸ ಬರೆದಿತ್ತು. ವರ್ಷಾಂತ್ಯದಲ್ಲಿ ನಡೆದಿದ್ದ ಅಂಡರ್-19 ವಿಶ್ವಕಪ್ ಪಂದ್ಯಾವಳಿಯಲ್ಲಿ ಆಯುಷ್ ಮಾತ್ರೆ ನೇತೃತ್ವದ ಭಾರತ ತಂಡ ವಿಶ್ವಕಪ್ ಗೆದ್ದು ಬೀಗಿತ್ತು. ಕಳೆದ ವಾರವಷ್ಟೇ ಮುಕ್ತಾಯಗೊಂಡಿರುವ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಕಪ್ ಗೆದ್ದಿತ್ತು. ಈ ಮೂರೂ ತಂಡಗಳಿಗೆ ಬಿಸಿಸಿಐ ಸನ್ಮಾನಿಸಿದೆ.

ಸ್ವದೇಶಕ್ಕೆ ಇರಾನಿ ಆಟಗಾರ್ತಿಯರು

• **ಪರ್ತ್:** ಇರಾನಿ ಬೆಂಬಲಿಗರು ದಾಳಿ ಮಾಡಲೆತ್ನಿಸಿದ ನಂತರ ಆಸ್ಟ್ರೇಲಿಯಾದಲ್ಲೇ ಆಶ್ರಯ ಪಡೆದಿದ್ದ ಮೂವರು ಇರಾನಿ ಫುಟ್‌ಬಾಲ್ ಆಟಗಾರ್ತಿಯರು ತಮ್ಮ ದೇಶಕ್ಕೆ ಮರಳಿದರು. ಏಷ್ಯಾಕಪ್ ಫುಟ್ ಬಾಲ್ ಪಂದ್ಯಾವಳಿ ಆಸ್ಟ್ರೇಲಿಯಾದಲ್ಲಿ ನಡೆದಿತ್ತು. ಈ ಕೂಟದಲ್ಲಿ ಇರಾನ್ ಕೂಡ ಭಾಗವಹಿಸಿ ಸೋತು ಹೊರಬಂದಿತ್ತು. ಆದರೆ ಮೊದಲನೇ ಪಂದ್ಯದಲ್ಲಿ ಇರಾನಿ ಪಡೆಯ ಮೂವರು ಆಟಗಾರ್ತಿಯರು ಪ್ರತಿಭಟನೆ ರೂಪವಾಗಿ ಇರಾನ್‌ನ ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದರು. ಅಲ್ಲಿನ ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಪ್ರತಿಭಟನೆ ನಡೆಸಲೆತ್ನಿಸಿದ್ದರು ಎಂಬ ವರದಿಗಳಿವೆ. ಹೀಗೆ ಮಾಡಿರುವುದಕ್ಕೆ ಹತಾಶಗೊಂಡಿದ್ದ ಆಸ್ಟ್ರೇಲಿಯಾದಲ್ಲಿನ ಇರಾನಿ ಬೆಂಬಲಿಗರು, ಆಟಗಾರರ ಹೋಟೆಲಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಸುರಕ್ಷತಾ ಕ್ರಮವಾಗಿ ಆಸ್ಟ್ರೇಲಿಯಾ ಆ ಆಟಗಾರ್ತಿಯರನ್ನು ತನ್ನಲ್ಲೇ ಉಳಿಸಿಕೊಂಡಿತ್ತು. ಸೇಫ್ ಹೌಸ್‌ಗೆ ಕಳುಹಿಸಿತ್ತು. ಆದರೆ ಪರಿಸ್ಥಿತಿ ಸುಧಾರಿಸಿಕೊಂಡಿರುವ ನಂತರ ಮೂವರೂ ಆಟಗಾರ್ತಿಯರನ್ನು ಬಿಡುಗಡೆ ಮಾಡಿದೆ. ಇರಾನ್ ಫುಟ್‌ಬಾಲ್ ಸಂಸ್ಥೆ ಮೂವರೂ ಆಟಗಾರ್ತಿಯರ ಹೆಸರನ್ನು ಬಹಿರಂಗ ಪಡಿಸಿದ್ದು, ಮೊನಾ ಹಮೌದಿ, ಜಹ್ರಾ ಸಬಾರ್ಲಿ ಮತ್ತು ಜಹ್ರಾ ಮೇಷ್ಟೆಕರ್ ಎಂದು ಗುರುತಿಸಿದೆ. ಆಟಗಾರ್ತಿಯರು ಮಲೇಷ್ಯಾಗೆ ಅಲ್ಲಿಂದ ಪೂರ್ತಿ ತಂಡ ತೆಹ್ರಾನ್ ಮೂಲಕ ಸ್ವದೇಶಕ್ಕೆ ತಲುಪಲಿದೆ ಎಂದು ಹೇಳಲಾಗಿದೆ.



» ಸೇಫ್ ಹೌಸ್‌ನಲ್ಲಿದ್ದ ಮೂವರು
» ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದ ವಿವಾದ

ಕೊಚ್ಚಿಯಲ್ಲಿ ಫುಟ್ಬಾಲ್ ಏಷ್ಯಾಕಪ್ ಅರ್ಹತಾ ಸುತ್ತು


• **ಕೊಚ್ಚಿ:** ಭಾರತದ ಹಿರಿಯ ಪುರುಷರ ಫುಟ್ಬಾಲ್ ತಂಡ ಏಷ್ಯಾಕಪ್ 2027 ಅರ್ಹತಾ ಸುತ್ತಿನ ಕೊನೆಯ ಪಂದ್ಯವನ್ನು ಮಾರ್ಚ್ 31ರಂದು ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಹಾಂಗ್ ಕಾಂಗ್ ವಿರುದ್ಧ ಆಡಲಿದೆ.

ಈ ಪಂದ್ಯ ಕೊಚ್ಚಿ ಮೈದಾನದಲ್ಲಿ ಭಾರತೀಯ ತಂಡಕ್ಕೆ ವಿಶೇಷವಾಗಿದ್ದು, ಸುಮಾರು 10 ವರ್ಷಗಳ ನಂತರ ಇಲ್ಲಿ ಹಿರಿಯ ಪುರುಷರ ತಂಡದ ಪಂದ್ಯ ನಡೆಯಲಿದೆ. 2016 ಮಾರ್ಚ್‌ನಲ್ಲಿ ಇದೇ ಮೈದಾನದಲ್ಲಿ ಭಾರತ ತುರ್ಕ್ಮೆನಿಸ್ತಾನ್ ವಿರುದ್ಧ ವಿಶ್ವಕಪ್ ಅರ್ಹತಾ ಪಂದ್ಯ ಆಡಿತ್ತು. ಅದು ಕೇರಳದಲ್ಲಿ ಭಾರತೀಯ ತಂಡ ಆಡಿದ ಕೊನೆಯ ಪಂದ್ಯವಾಗಿತ್ತು. ಈ ಬಾರಿ ಏಷ್ಯಾ ಕಪ್ 2027 ಅರ್ಹತಾ ಸುತ್ತಿನಲ್ಲಿ ಭಾರತ ಈಗಾಗಲೇ ಮುಂದಿನ ಹಂತಕ್ಕೆ ಹೋಗುವ ಅವಕಾಶ ಕಳೆದುಕೊಂಡಿದೆ. ಆದರೂ ಅಂತಿಮ ಪಂದ್ಯದಲ್ಲಿ ಗೆಲುವಿನೊಂದಿಗೆ ಅಭಿಯಾನವನ್ನು ಮುಕ್ತಾಯಗೊಳಿಸುವುದು ತಂಡದ ಗುರಿಯಾಗಿದೆ. ಈ ಪಂದ್ಯದಲ್ಲಿ ಎರಡೂ ತಂಡಗಳು ಟೂರ್ನಿಯಿಂದ ಹೊರಬಿದ್ದಿರುವುದರಿಂದ ಫಲಿತಾಂಶ ಅರ್ಹತೆಯ ದೃಷ್ಟಿಯಿಂದ ಮಹತ್ವ ಹೊಂದಿಲ್ಲ. ಆದರೆ ಅಂತರರಾಷ್ಟ್ರೀಯ ಶ್ರೇಯಾಂಕ ಅಂಕಗಳು ಲಭ್ಯವಿರುವುದರಿಂದ ಪಂದ್ಯ ಇನ್ನೂ ಮಹತ್ವ ಪಡೆದುಕೊಂಡಿದೆ. ಉತ್ತಮ ಪ್ರದರ್ಶನ ನೀಡುವುದರಿಂದ ವಿಶ್ವ ಶ್ರೇಯಾಂಕದಲ್ಲಿ ಸುಧಾರಣೆ ಸಾಧಿಸಲು ಭಾರತ ಪ್ರಯತ್ನಿಸಲಿದೆ. ಈ ಅರ್ಹತಾ ಸುತ್ತಿನ ಅಂತಿಮ ಹಂತದಲ್ಲಿ ಭಾರತ ಮೂರು ವಿಭಿನ್ನ ತವರು ಮೈದಾನಗಳಲ್ಲಿ ಪಂದ್ಯಗಳನ್ನು ಆಡುತ್ತಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಬಾಂಗ್ಲಾದೇಶ ವಿರುದ್ಧದ ಪಂದ್ಯವನ್ನು ಶಿಲ್ಲಾಂಗ್ ಆತಿಥ್ಯ ವಹಿಸಿತ್ತು. ಅದೇ ವರ್ಷ ಅಕ್ಟೋಬರ್‌ನಲ್ಲಿ ಸಿಂಗಾಪುರ್ ವಿರುದ್ಧದ ಪಂದ್ಯವನ್ನು ಮಾರ್ಗಾವ್‌ನಲ್ಲಿ ನಡೆಸಲಾಗಿತ್ತು. ಈಗ ಕೊಚ್ಚಿ ಮೂರನೇ ತವರು ಮೈದಾನವಾಗಿ ಆತಿಥ್ಯ ವಹಿಸುತ್ತಿದೆ.



ಪದಬಂಧ 5925

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ಹಿತವಾಗಿ ನಡೆದುಕೊಳ್ಳುವವನು (5)
5.ತೀಕ್ಷ್ಣ-ಭಯಂಕರವಾದುದು ತಿರುಗಿದೆ (2)
6.ಹೊಸದಾಗಿ ಕರು ಹಾಕಿದ ಹಸು (2)
7.ಜಗಳ-ಹೊಡೆದಾಟ(3)
9.ಅವನು ನಿಂತದ್ದು ಈ ಭೂಮಿಯ ಮೇಲೆ (3)
11.ಕಾದಿರುವಂತೆ ಮಾಡುವುದು ತಿರುಗಿದೆ (3)
13.ಮಂದಿಗೆ ಮೊದಲು ಕಂಡ ತಾಯಿ (3)
15.ಬಲವನ್ನು ಉಪಯೋಗಿಸಿದ ರಾಮಪುತ್ರ (2)
16. ಉಗ್ರ ದೇವತೆಯಿಲ್ಲಿ ತಿರುಗಿದ್ದಾಳೆ (2)
17.ಕರಾರುವಾಕ್ಕಾಗಿ ನಡೆಯುವಂತೆ ಸರಿಹೊಂದಿಸು (5)

ಮೇಲಿನಿಂದ ಕೆಳಕ್ಕೆ
1.ಆಕೆಯ ಕರ್ಕಶ ದನಿಯಲ್ಲಿಯೂ ಸೆಳೆತವಿದೆ (4)
2.ಸಿಕ್ಕ ಕೃಪೆ-ಆಶೀರ್ವಾದವಿದು (4)
3.ಅಗದ ನಡುವಿನ ಪ್ರೇಮ ತಲೆಕೆಳಗಾಗಿದೆ (4)
4.ಮಾಂಸಮಿಶ್ರಿತವಾದ ಕಲಸನ್ನ (4)
8.ಹಿಂದಿ ಭಾಷೆಯಲ್ಲಿ ಜಗಳ (3)
10.ಅಂದು ಬಂದವನ ಮುಖ (3)
11.ಒಳ್ಳೆಯ ಇತಿಹಾಸ ಹೊಂದಿರುವ ವ್ಯಕ್ತಿ (4)
12.ಗತಿಶೀಲವಾದ ಸಮಯ (4)
13.ಮಾಯಿ ನಡುವೆ ಇರುವ ಸಂಗ್ರಹಿಸು (4)
14.ನೋವು ಕಡೆಯಲ್ಲಿರುವ ಅರಿಕೆ (4)

5924 ಉತ್ತರ

ಎಡದಿಂದ ಬಲಕ್ಕೆ:
2.ನಮನ 5.ವಿಧ 7.ಅಕ್ಷ
8.ತಂಬೂರಿ 9.ಹಸನು
10.ವಾಮನ 12.ಬೇಸರ
13.ಖೇದ 14.ಹಣ
16.ಹರಳು

ಮೇಲಿನಿಂದ ಕೆಳಕ್ಕೆ:
1.ಕ್ರೋಧಾಂಧ 2.ನರಹರಿ
3.ನವಗ್ರಹ 4.ಸಮಕ್ಷ
6.ವಿತಂಡವಾದ
7.ಅನುಕರಣ
11.ಹನುಮಾನ
12.ಬೇನೆಬೀಳು
13.ಖೇಚರ 15.ಹಲಗೆ

ಉತ್ಪಾದನೆ, ಪರಿವರ್ತನೆ ಮತ್ತು ವೈವಿಧ್ಯೀಕರಣ: ಭಾರತದ ಇಂಧನ ವ್ಯವಸ್ಥೆಯ ಭದ್ರ ಬುನಾದಿ

ಇಂಧನ ಕ್ಷೇತ್ರದಲ್ಲಿನ ರಚನಾತ್ಮಕ ಬದಲಾವಣೆಗಳು ಸುಗಮವಾದ ಕಾಲಘಟ್ಟದಲ್ಲಿ ಸಂಭವಿಸುವುದು ವಿರಳ. ಯಾವುದಾದರೂ ಬಿಕ್ಕಟ್ಟು ಎದುರಾಗಿ, ಕ್ರಮ ಕೈಗೊಳ್ಳದಿದ್ದರೆ ಆಗುವ ನಷ್ಟವು ಅತಿಯಾದಾಗ ಮಾತ್ರ ಇಂತಹ ಬದಲಾವಣೆಗಳು ಅನಿವಾರ್ಯವಾಗುತ್ತವೆ. ಆದರೆ, ಕಳೆದ 11 ವರ್ಷಗಳಲ್ಲಿ ಮೋದಿ ಸರ್ಕಾರವು ಇದಕ್ಕೆ ಭಿನ್ನವಾದ ಹಾದಿ ಆರಿಸಿಕೊಂಡಿದೆ. ಯಾವುದೇ ತುರ್ತು ಪರಿಸ್ಥಿತಿ ಇಲ್ಲದಿದ್ದಾಗಲೂ ಇಂಧನ ವಲಯದಲ್ಲಿ ದೀರ್ಘಕಾಲಿಕ ಸುಧಾರಣೆಗಳನ್ನು ಜಾರಿಗೆ ತಂದಿತು. ಈ ಮುನ್ನೆಚ್ಚರಿಕೆಯ ಕ್ರಮಗಳು ಜಾಗತಿಕ ಪೂರೈಕೆ ಸರಪಳಿಯಲ್ಲಿ ಉಂಟಾಗುವ ಏರಿಳಿತಗಳನ್ನು ತಡೆದುಕೊಳ್ಳುವ ಬಲಿಷ್ಠ ಸಾಮರ್ಥ್ಯವನ್ನು ಭಾರತಕ್ಕೆ ಒದಗಿಸಿವೆ. ದೇಶೀಯ ಉತ್ಪಾದನೆಯ ವಿಸ್ತರಣೆ, ಹೊಸ ಇಂಧನ ಮೂಲಗಳಿಗೆ ವ್ಯವಸ್ಥಿತ ಪರಿವರ್ತನೆ ಮತ್ತು ಪೂರೈಕೆಯ ಮೂಲಗಳ ವೈವಿಧ್ಯೀಕರಣದ ಮೂಲಕ ಮೋದಿ ಸರ್ಕಾರವು ಇಂಧನ ಭದ್ರತೆಯನ್ನು ಖಾತರಿಪಡಿಸಿದೆ ಮತ್ತು ಬಾಹ್ಯ ಆಘಾತಗಳಿಂದ ದೇಶದ ಮೇಲಿನ ಪರಿಣಾಮವನ್ನು ಯಶಸ್ವಿಯಾಗಿ ತಗ್ಗಿಸಿದೆ.

ಭಾರತವು ಸಾಗಬೇಕಾದ ಹಾದಿ ಎಂದಿಗೂ ಅಸ್ಪಷ್ಟವಾಗಿರಲಿಲ್ಲ; ಅದಕ್ಕೆ ಬೇಕಿದ್ದುದು ಆ ಹಾದಿಯಲ್ಲಿ ಸ್ಥಿರವಾಗಿ ಸಾಗುವ 'ರಾಜಕೀಯ ಇಚ್ಛಾಶಕ್ತಿ' ಮಾತ್ರ. ಕಳೆದ ಒಂದು ದಶಕದಲ್ಲಿ ಮೋದಿ ಸರ್ಕಾರವು ಅಂತಹ ಬದ್ಧತೆಯನ್ನೇ ತೋರಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಅವರಿಗೆ ಉತ್ತರದಾಯಿಯಾಗಿರುವ ಆಡಳಿತವನ್ನೇ ಸರ್ಕಾರವು ತನ್ನ ಆದ್ಯತೆಯನ್ನಾಗಿಸಿಕೊಂಡಿತು. ಈ ಇಡೀ ಕಾರ್ಯತಂತ್ರವು ಮೂರು ಮುಖ್ಯ ಸ್ತಂಭಗಳ ಮೇಲೆ ನಿಂತಿದ್ದು, ಪ್ರತಿಯೊಂದು ಸ್ತಂಭವೂ ಸರ್ಕಾರದ ಕಡೆಯಿಂದ ಭಿನ್ನವಾದ ಮತ್ತು ಗಟ್ಟಿಯಾದ ಬದ್ಧತೆಯನ್ನು ನಿರೀಕ್ಷಿಸಿದ್ದವು.

ಎಥೆನಾಲ್ ಮಿಶ್ರಣದ ಪ್ರಭಾವ: ಮೊದಲನೆಯ ಸ್ತಂಭ 'ದೇಶೀಯ ಉತ್ಪಾದನೆ'. ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವ ಪ್ರಕ್ರಿಯೆ 2001ರಲ್ಲೇ ಪ್ರಾಯೋಗಿಕ ಯೋಜನೆಯಾಗಿ ಆರಂಭವಾಗಿತ್ತು. ಆದರೆ ದಶಕಗಳ ಕಾಲ ಭಾರತವು ಈ ನಿಟ್ಟಿನಲ್ಲಿ ಯಾವುದೇ ಗಣನೀಯ ಪ್ರಗತಿ ಕಾಣದೆ, ಎಥೆನಾಲ್ ಉತ್ಪಾದನೆಯು ಕುಂಠಿತವಾಗಿತ್ತು. 2014ರ ನಂತರವಷ್ಟೇ, ಸರಣಿ ಸಮಗ್ರ ಸುಧಾರಣೆಗಳ ಮೂಲಕ ಈ ಉಪಕ್ರಮದ ನೈಜ ಸಾಮರ್ಥ್ಯವನ್ನು ಅನಾವರಣಗೊಳಿಸಲು ಭಾರತಕ್ಕೆ ಸಾಧ್ಯವಾಯಿತು. ಇಂಧನ ಭದ್ರತೆಯನ್ನು ಬಲಪಡಿಸಲು, ಹವಾಮಾನ ಬದಲಾವಣೆಯನ್ನು ಎದುರಿಸಲು ಮತ್ತು ಗ್ರಾಮೀಣ ಆರ್ಥಿಕತೆಗೆ ಚೈತನ್ಯ ನೀಡಲು ಮೋದಿ ಸರ್ಕಾರವು ಬೃಹತ್ ಸುಧಾರಣಾ ಕ್ರಮಗಳನ್ನು ಕೈಗೊಂಡಿತು. 'ಎಥೆನಾಲ್ ಮಿಶ್ರಣ ಕಾರ್ಯಕ್ರಮ'ದ (ಇಬಿಪಿ) ಅಡಿಯಲ್ಲಿ ಪೆಟ್ರೋಲ್ ನಲ್ಲಿ ಶೇ. 20 ರಷ್ಟು ಎಥೆನಾಲ್ ಬೆರೆಸುವ ಗುರಿಯನ್ನು ಆರಂಭದಲ್ಲಿ 2030ಕ್ಕೆ ನಿಗದಿಪಡಿಸಲಾಗಿತ್ತು.

ಆದರೆ, 2020ರಲ್ಲಿ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು (ಸಿಸಿಇಎ) ಈ ಗುರಿಯನ್ನು ಐದು ವರ್ಷ ಮುಂಚಿತವಾಗಿ ಅಂದರೆ 2025ಕ್ಕೇ ಅಂತಿಮಗೊಳಿಸಿತು. ಈ ನೀತಿಬದ್ಧ ನಿರ್ಧಾರಗಳ ಫಲವಾಗಿ, 2014ರಲ್ಲಿ ಕೇವಲ ಶೇ. 1.5ರಷ್ಟಿದ್ದ ಎಥೆನಾಲ್ ಮಿಶ್ರಣದ ಪ್ರಮಾಣವು 2025ರ ವೇಳೆಗೆ ಶೇ. 20ಕ್ಕೆ ಏರಿಕೆಯಾಗಿದೆ. ಇದು ಕಳೆದ 11 ವರ್ಷಗಳಲ್ಲಿ ಕಂಡ 13 ಪಟ್ಟು ಭಾರಿ ಹೆಚ್ಚಳವಾಗಿದೆ. ಅಷ್ಟೇ ಅಲ್ಲದೆ, ಎಥೆನಾಲ್ ಉತ್ಪಾದನೆಯು 2014ರಲ್ಲಿದ್ದ 38 ಕೋಟಿ ಲೀಟರ್ ಗಳಿಂದ ಜೂನ್ 2025ರ ವೇಳೆಗೆ 661.1 ಕೋಟಿ ಲೀಟರ್ ಗಳಿಗೆ ಜಿಗಿದಿದೆ. ಈ ಶೇ. 20 ಎಥೆನಾಲ್ ಮಿಶ್ರಣ ಕಾರ್ಯಕ್ರಮವು ಈಗ ವಾರ್ಷಿಕವಾಗಿ ಸುಮಾರು 44 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲದ ಬಳಕೆಯನ್ನು ಉಳಿಸುತ್ತಿದೆ.

ಇವಿ ಬಳಕೆ ಹೆಚ್ಚಳ: ಇಂಧನ ಭದ್ರತೆಯ ಎರಡನೆಯ ಸ್ತಂಭ 'ಇಂಧನ ಪರಿವರ್ತನೆಯನ್ನು ಸಮರ್ಪಕವಾಗಿ ಜಾರಿಗೆ ತರುವುದು'. ದೇಶದ ಎಲೆಕ್ಟ್ರಿಕ್ ವಾಹನ (ಇವಿ) ಉದ್ಯಮದ ಅಭಿವೃದ್ಧಿಗೆ ಮೋದಿ ಸರ್ಕಾರವು ಎಲ್ಲಾ ಹಂತಗಳಲ್ಲೂ ಬೆಂಬಲ ನೀಡಿದೆ. ಆಟೋಮೊಬೈಲ್ ವಲಯದಲ್ಲಿ ಶೇ. 100ರಷ್ಟು ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡಿದ್ದರಿಂದ, 4 ವರ್ಷಗಳಲ್ಲಿ ಈ ಕ್ಷೇತ್ರವು ಸುಮಾರು 36 ಬಿಲಿಯನ್ ಡಾಲರ್ ಹೂಡಿಕೆ ಆಕರ್ಷಿಸಿದೆ. ತಾಂತ್ರಿಕ ಆವಿಷ್ಕಾರಗಳನ್ನು ಉತ್ತೇಜಿಸಲು ಮತ್ತು ವಾಹನ ಉತ್ಪಾದನಾ ವಲಯದಲ್ಲಿ ಪೂರೈಕೆ ಸರಪಳಿಯನ್ನು ಬಲಪಡಿಸಲು ವಿವಿಧ ಯೋಜನೆಗಳನ್ನು ಜಾರಿಗೆ ತರಲಾಯಿತು. ಎಲೆಕ್ಟ್ರಿಕ್ ಮತ್ತು ಹೈಬ್ರಿಡ್ ವಾಹನಗಳ ಬಳಕೆಯನ್ನು ಹೆಚ್ಚಿಸಲು 2015 ರಲ್ಲಿ 'ಫೇಮ್-1' ಯೋಜನೆಯನ್ನು ಅಧಿಕೃತವಾಗಿ ಆರಂಭಿಸಲಾಯಿತು.



ಮೊದಲ ಹಂತದಲ್ಲಿ, 2.78 ಲಕ್ಷ ಎಲೆಕ್ಟ್ರಿಕ್ ವಾಹನಗಳು ರಸ್ತೆಗಿಳಿದವು, ಇದರಿಂದ ಸರಿಸುಮಾರು 59 ಮಿಲಿಯನ್ ಲೀಟರ್ ಇಂಧನ ಉಳಿತಾಯವಾಯಿತು. 'ಫೇಮ್-1' ಯೋಜನೆಯ ಯಶಸ್ಸು ಮತ್ತು ಅನುಭವದ ಆಧಾರದ ಮೇಲೆ, 2019 ರಲ್ಲಿ ಇದರ ಎರಡನೇ ಹಂತವನ್ನು (ಫೇಮ್-ಐಐ) ಆರಂಭಿಸಲಾಯಿತು. ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ಬೆಲೆಯನ್ನು ನೇರವಾಗಿ ಕಡಿತಗೊಳಿಸುವ ಮೂಲಕ ಗ್ರಾಹಕರಿಗೆ ಆಕರ್ಷಕ ರಿಯಾಯಿತಿ ಮತ್ತು ಉತ್ತೇಜಕಗಳನ್ನು ನೀಡಲಾಯಿತು. ಇದರೊಂದಿಗೆ 16 ಲಕ್ಷ ಎಲೆಕ್ಟ್ರಿಕ್ ವಾಹನಗಳ ಖರೀದಿ ಮತ್ತು ಅಗತ್ಯ ಚಾರ್ಜಿಂಗ್ ಮೂಲಸೌಕರ್ಯಗಳ ನಿರ್ಮಾಣಕ್ಕೆ ಸಬ್ಸಿಡಿ ನೀಡಲಾಯಿತು, ಇದು ಒಟ್ಟಾರೆಯಾಗಿ 42.9 ಮಿಲಿಯನ್ ಲೀಟರ್ ಇಂಧನವನ್ನು ಉಳಿಸಲು ಸಹಕಾರಿಯಾಯಿತು. ಇದಲ್ಲದೆ, ಸರ್ಕಾರದ ಈ ಸತತ ಪ್ರಯತ್ನಗಳ ಫಲವಾಗಿ, 2019-20ಕ್ಕೆ ಹೋಲಿಸಿದರೆ 2023-24ನೇ ಸಾಲಿನಲ್ಲಿ ಭಾರತದಲ್ಲಿ ನೋಂದಾಯಿಸಲಾದ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಯಲ್ಲಿ 9.7 ಪಟ್ಟು ಭಾರಿ ಹೆಚ್ಚಳ ಕಂಡುಬಂದಿದೆ. ಎಲೆಕ್ಟ್ರಿಕ್ ವಾಹನಗಳು ಮತ್ತು ನವೀಕರಿಸಬಹುದಾದ ಇಂಧನ ಮೂಲಗಳು ಸರಿಯಾದ ದಿಕ್ಕಿನಲ್ಲಿಯೇ ಸಾಗುತ್ತಿವೆಯಾದರೂ, ಈ ಇಂಧನ ಪರಿವರ್ತನೆಯು 'ನಿರ್ಣಾಯಕ ಖನಿಜಗಳ' ಮೇಲಿನ ಅವಲಂಬನೆಯ ಸವಾಲನ್ನು ಹೊತ್ತುತಂದಿದೆ. ಈ ಅಪಾಯವನ್ನು ಮೊದಲೇ ಅರಿತ ಮೋದಿ ಸರ್ಕಾರ, ಇಂಧನ ಭದ್ರತೆಯಲ್ಲಿನ ಈ ದುರ್ಬಲತೆಯನ್ನು ಹೋಗಲಾಡಿಸಲು 'ರಾಷ್ಟ್ರೀಯ ನಿರ್ಣಾಯಕ ಖನಿಜ ಮಿಷನ್' ಅನ್ನು ಪ್ರಾರಂಭಿಸಿದೆ. ನಿರ್ಣಾಯಕ ಖನಿಜಗಳ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಭಾರತದ ಖನಿಜ ಮೌಲ್ಯ ಸರಪಳಿಯನ್ನು ಬಲಪಡಿಸುವುದು ಸರ್ಕಾರದ ಮುಖ್ಯ ಗುರಿಯಾಗಿದೆ.

ಪೂರೈಕೆ ಪಾಲುದಾರರ ವೈವಿಧ್ಯೀಕರಣ: ಇಂಧನ ಭದ್ರತೆಯ ಮೂರನೆಯ ಸ್ತಂಭ 'ಇಂಧನ ಮೂಲಗಳು ಮತ್ತು ಪೂರೈಕೆ ಪಾಲುದಾರರ ವೈವಿಧ್ಯೀಕರಣ'. ಪ್ರಧಾನಿ ನರೇಂದ್ರ ಮೋದಿ 'ಬಹು-ಪಕ್ಷೀಯ ಹಿತಾಸಕ್ತಿ' ಎಂಬ ರಾಜತಾಂತ್ರಿಕ ನೀತಿಯನ್ನು ಅನುಸರಿಸಿದರು. ಇದು ಭಾರತಕ್ಕೆ ಹಲವಾರು ರಾಷ್ಟ್ರಗಳೊಂದಿಗೆ ಏಕಕಾಲದಲ್ಲಿ ಆಳವಾದ ಮತ್ತು ಸಮಾನಾಂತರವಾದ ಸಂಬಂಧಗಳನ್ನು ಬೆಳೆಸಲು ಹಾಗೂ ದೇಶದ ಹಿತಾಸಕ್ತಿಗಳನ್ನು ರಕ್ಷಿಸಲು ನೆರವಾಗಿದೆ. ರಾಜತಾಂತ್ರಿಕ ಸಂಪರ್ಕದ ಫಲವಾಗಿ, ಕಚ್ಚಾ ತೈಲಕ್ಕಾಗಿ ಭಾರತವು ಅವಲಂಬಿಸಿರುವ ದೇಶಗಳ ಸಂಖ್ಯೆ ದಶಕದ ಹಿಂದಿನ 27 ರಿಂದ ಇಂದು 40ಕ್ಕೂ ಹೆಚ್ಚು ದೇಶಗಳಿಗೆ ವಿಸ್ತರಿಸಿದೆ.

ಈ ಎಲ್ಲಾ ಕ್ರಮಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ಒಂದು ಉತ್ತಮ ಮಾರ್ಗವೆಂದರೆ, ಒಂದು ವೇಳೆ ಈ ಕ್ರಮಗಳನ್ನು ಕೈಗೊಳ್ಳದಿದ್ದರೆ ಪರಿಸ್ಥಿತಿ ಇಂದು ಹೇಗಿರುತ್ತಿತ್ತು ಎಂದು ಊಹಿಸುವುದು. ರಷ್ಯಾ-ಉಕ್ರೇನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿಯ ಸುತ್ತಲಿನ ಉದ್ವಿಗ್ನತೆಗಳಂತಹ ಘಟನೆಗಳು, ಜಾಗತಿಕ ಪೂರೈಕೆ ಸರಪಳಿಗಳು ಎಷ್ಟು ವೇಗವಾಗಿ ಅಸ್ತವ್ಯಸ್ತಗೊಳ್ಳಬಲ್ಲವು ಎಂಬುದನ್ನು ಪದೇ ಪದೇ ಸಾಬೀತುಪಡಿಸಿವೆ. ಉದಾಹರಣೆಗೆ, ಎಥೆನಾಲ್ ಮಿಶ್ರಣದಂತಹ ದೇಶೀಯ ಪರ್ಯಾಯಗಳ ವಿಸ್ತರಣೆಯನ್ನೇ ತೆಗೆದುಕೊಳ್ಳಿ; 2014 ರಿಂದ ಈವರೆಗೆ ಇದು 190 ಮಿಲಿಯನ್ ಮೆಟ್ರಿಕ್ ಟನ್ ಗೂ ಹೆಚ್ಚು ಕಚ್ಚಾ ತೈಲ ಆಮದನ್ನು ಮಿತಗೊಳಿಸಿದೆ ಮತ್ತು ಅಂದಾಜು 1.55 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ವಿದೇಶಿ ವಿನಿಮಯವನ್ನು ಉಳಿಸಿದೆ. ಒಂದು ವೇಳೆ ಎಥೆನಾಲ್ ಮಿಶ್ರಣಕ್ಕೆ ಆದ್ಯತೆ ನೀಡದಿದ್ದಲ್ಲಿ, ಇಂತಹ ಜಾಗತಿಕ ಬಿಕ್ಕಟ್ಟುಗಳಿಗೆ ಭಾರತವು ಅತಿ ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಆ ಸನ್ನಿವೇಶದಲ್ಲಿ, ಜಾಗತಿಕ ಪೂರೈಕೆಯಲ್ಲಾಗುವ ಸಣ್ಣ ವ್ಯತ್ಯಯವೂ ಭಾರತದ ದೇಶೀಯ ಆರ್ಥಿಕತೆಯ ಮೇಲೆ ತೀವ್ರವಾದ ಒತ್ತಡವನ್ನು ಉಂಟುಮಾಡುತ್ತಿತ್ತು. ನೀತಿಗಳನ್ನು ಅನುಸರಿಸದಿದ್ದರೆ, ಜಾಗತಿಕ ಪೂರೈಕೆಯಲ್ಲಿನ ಅಡೆತಡೆಗಳು ಭಾರತದ ಇಂಧನ ವ್ಯವಸ್ಥೆಯಲ್ಲಿ ತೀವ್ರ ಅಸ್ಥಿರತೆಯನ್ನು ಉಂಟುಮಾಡುತ್ತಿದ್ದವು. ಭಾರತದಂತಹ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗೆ ಇದರ ಪರಿಣಾಮಗಳು ಅಕ್ಷರಶಃ 'ಹಾಹಾಕಾರ' ಅಥವಾ ತಲ್ಲಣಕ್ಕೆ ಕಾರಣವಾಗುವ ಸಾಧ್ಯತೆಯಿತ್ತು. ಆದರೆ, ಕಳೆದ ದಶಕದಲ್ಲಿ ಕೈಗೊಂಡ ಸುಧಾರಣೆಗಳು, ಭೌಗೋಳಿಕ ರಾಜಕೀಯ ಅನಿಶ್ಚಿತತೆಯ ನಡುವೆಯೂ ಭಾರತಕ್ಕೆ ತನ್ನ ಇಂಧನ ಅಗತ್ಯಗಳನ್ನು ನಿರ್ವಹಿಸುವಲ್ಲಿ ಹೆಚ್ಚಿನ ನಮ್ಯತೆಯನ್ನು ಒದಗಿಸಿವೆ. ಭಾರತದ ಇಂಧನ ಭದ್ರತೆಯು ಕೇವಲ ಒಂದು ಸಮುದ್ರ ಮಾರ್ಗದ ಪರಿಸ್ಥಿತಿಯನ್ನು ಅವಲಂಬಿಸಿ ಏರಿಳಿತ ಕಾಣುತ್ತಿದ್ದ ಕಾಲ ಈಗ ಮುಗಿದಿದೆ. ಯಾವುದೇ ಮಾರ್ಗದಲ್ಲಿ ಅಡೆತಡೆ ಉಂಟಾದರೂ, ಅದು ಕೇವಲ 'ಪೂರೈಕೆಯ ಹೊಂದಾಣಿಕೆ'ಗೆ ಕಾರಣವಾಗುತ್ತದೆಯೇ ಹೊರತು, ತುರ್ತು ಪರಿಸ್ಥಿತಿಯನ್ನಲ್ಲ. ಭಾರತೀಯ ತೈಲ ಸಂಸ್ಕರಣಾಗಾರಗಳು ಈಗ ಕೇವಲ ನಿಶ್ಚಿತ ದೇಶ ಅಥವಾ ನಿಶ್ಚಿತ ಮೂಲದ ಮೇಲೆ ಅವಲಂಬಿತವಾಗಿಲ್ಲ; ಈ ನಮ್ಯತೆಯೇ ದೇಶದ ಇಂಧನ ಭದ್ರತೆಯ ಪ್ರಮುಖ ಆಸ್ತಿಯಾಗಿದೆ. ಹಾರ್ಮುಜ್ ಜಲಸಂಧಿಯು ಇಂದಿಗೂ ಒಂದು ಪ್ರಮುಖ ಮಾರ್ಗವಾಗಿದ್ದರೂ, ಅಗತ್ಯಬಿದ್ದಲ್ಲಿ ಭಾರತವು ತನ್ನ ಹಡಗುಗಳನ್ನು ಮರುಮಾರ್ಗಗೊಳಿಸಿ ಇತರ ರಫ್ತುದಾರ ರಾಷ್ಟ್ರಗಳ ಕಡೆಗೆ ತನ್ನ ಕಾರ್ಯತಂತ್ರವನ್ನು ಬದಲಿಸುವ ಸಾಮರ್ಥ್ಯ ಹೊಂದಿದೆ. ಒಂದು ದಶಕದ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ, ಭಾರತವು ಜಾಗತಿಕ ಮಾರುಕಟ್ಟೆಯ ಅನಿಶ್ಚಿತತೆಗಳನ್ನು ನಿಭಾಯಿಸಲು ಅತ್ಯಂತ ಸದೃಢವಾದ ಸ್ಥಿತಿಯಲ್ಲಿದೆ. ಪೂರೈಕೆ ಸರಪಳಿಗಳು ಅನಿಶ್ಚಿತವಾಗಿರುವ ಇಂದಿನ ಜಗತ್ತಿನಲ್ಲಿ, ಇಂಧನ ಮೂಲಗಳು ಮತ್ತು ಪಾಲುದಾರಿಕೆಗಳ ಈ ವೈವಿಧ್ಯಮಯ ನೆಲೆಯು ಭಾರತದ ಇಂಧನ ಪೂರೈಕೆಯ ಸುಸ್ಥಿರತೆಗೆ ಪ್ರಬಲ ರಕ್ಷಣಾ ಕವಚವಾಗಿ ಮಾರ್ಪಟ್ಟಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮಾಹಿತಿ

ಕಿರುಸುದ್ದಿ

ಅಡ್ಡ ಬಂದ ನಾಯಿ: ರಿಕ್ಷಾ ಪಲ್ಟಿಯಾಗಿ ಚಾಲಕ ಸಾವು

ಬ್ರಹ್ಮಾವರ: ನಾಯಿ ಅಡ್ಡ ಬಂದ ಪರಿಣಾಮ ರಿಕ್ಷಾವೊಂದು ಪಲ್ಟಿಯಾಗಿ ಚಾಲಕ ಮೃತಪಟ್ಟ ಘಟನೆ ಹೆಗ್ಗುಂಜೆ ಗ್ರಾಮದ ಮೈರ್‌ಕೋಮೆ ಹಾಲು ಡೈರಿ ಬಳಿ ನಡೆದಿದೆ. ಮೃತರನ್ನು ರಿಕ್ಷಾ ಚಾಲಕ ನರಸಿಂಹ ಪೂಜಾರಿ ಎಂದು ಗುರುತಿಸಲಾಗಿದೆ. ಮಾ.13ರಂದು ಮಧ್ಯಾಹ್ನ ವೇಳೆ ಶಿರೂರು ಮೂರು ಕೈ ಕಡೆಯಿಂದ ಕೊಕ್ಕರ್ಣೆ ಕಡೆಗೆ ಹೋಗುತ್ತಿದ್ದ ರಿಕ್ಷಾಕ್ಕೆ ನಾಯಿ ಅಡ್ಡ ಬಂದಿದ್ದು, ಅದಕ್ಕೆ ನರಸಿಂಹ ಪೂಜಾರಿ ರಿಕ್ಷಾವನ್ನು ಒಮ್ಮೆಲೆ ಎಡಕ್ಕೆ ಚಲಾಯಿಸಿದ್ದರಿಂದ, ರಿಕ್ಷಾದ ನಿಯಂತ್ರಣ ತಪ್ಪಿ ರಸ್ತೆಗೆ ಮಗುಚಿ ಬಿತ್ತೆನ್ನಲಾಗಿದೆ. ಇದರಿಂದ ಗಂಭೀರವಾಗಿ ಗಾಯಗೊಂಡ ನರಸಿಂಹ ಪೂಜಾರಿ ಚಿಕಿತ್ಸೆ ಫಲಕಾರಿಯಾಗದೆ ಮಣಿಪಾಲ ಆಸ್ಪತ್ರೆಯಲ್ಲಿ ಮಾ.14ರಂದು ಬೆಳಗ್ಗೆ 8.30ರ ಸುಮಾರಿಗೆ ಮೃತಪಟ್ಟರು ಎಂದು ತಿಳಿದುಬಂದಿದೆ. ಈ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಲಾ ಬಾಲಕಿಗೆ ಲೈಂಗಿಕ ಕಿರುಕುಳ: ರಿಕ್ಷಾ ಚಾಲಕನ ಬಂಧನ

ಕಾರ್ಕಳ: ಪರಿಶಿಷ್ಟ ಪಂಗಡಕ್ಕೆ ಸೇರಿದ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಕಾಮುಕ ರಿಕ್ಷಾ ಚಾಲಕನನ್ನು ಕಾರ್ಕಳ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಾರ್ಕಳ ತಾಲೂಕಿನ ಎರ್ಲಪಾಡಿ ಗ್ರಾಮದ ನಿವಾಸಿ ವಸಂತ ಪೂಜಾರಿ (52) ಎಂಬಾತ ಬಂಧಿತ ಆರೋಪಿ. ವಸಂತ ಪೂಜಾರಿ ರಿಕ್ಷಾ ಚಾಲಕನಾಗಿದ್ದು ರಿಕ್ಷಾದಲ್ಲಿ ತನ್ನ ಮನೆಗೆ ಹೋಗುವ ಸಂದರ್ಭದಲ್ಲಿ ಶಾಲೆಯಿಂದ ಮನೆಗೆ ನಡೆದುಕೊಂಡು ಹೋಗುತ್ತಿದ್ದ ಬಾಲಕಿಯನ್ನು ಮನೆಗೆ ಬಿಡುವುದಾಗಿ ಹೇಳಿ ಪುಸಲಾಯಿಸಿ ರಿಕ್ಷಾ ಹತ್ತಿಸಿ ಆಕೆಯೊಂದಿಗೆ ಅಸಭ್ಯವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಆರೋಪಿಸಲಾಗಿದೆ. ಈ ಕುರಿತು ಆರೋಪಿ ವಸಂತ ಪೂಜಾರಿಯನ್ನು ಬಂಧಿಸಿರುವ ಕಾರ್ಕಳ ನಗರ ಠಾಣಾ ಪೊಲೀಸರು ಪೋಕ್ಸೋ ಹಾಗೂ ದಲಿತ ದೌರ್ಜನ್ಯ ತಡೆ ಕಾಯಿದೆಯನ್ವಯ ಪ್ರಕರಣ ದಾಖಲಿಸಿ ಜೈಲಿಗಟ್ಟಿದ್ದಾರೆ.

ಸುಳ್ಯ: ಯುವಕರಿಬ್ಬರಿಗೆ ಚೂರಿ ಇರಿತ, ಇಬ್ಬರು ಪೊಲೀಸರ ವಶಕ್ಕೆ

ಸುಳ್ಯ: ಸುಳ್ಯದ ಶ್ರೀರಾಂಪೇಟೆಯಲ್ಲಿರುವ ಬಾರೊಂದರ ಮುಂಭಾಗದಲ್ಲಿ ನಿಂತಿದ್ದ ಯುವಕರಿಬ್ಬರಿಗೆ ದುಷ್ಕರ್ಮಿಗಳು ಚೂರಿಯಿಂದ ಇರಿದ ಘಟನೆ ಶನಿವಾರ ಸಂಜೆ ನಡೆದಿದ್ದು, ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಚೂರಿ ಇರಿತಕ್ಕೊಳಗಾದ ಯುವಕರನ್ನು ಸುಳ್ಯ ಬೀರಮಂಗಲ ಬಂಗ್ಲಗುಡ್ಡೆ ನಿವಾಸಿಗಳಾದ ಹರೀಶ್ ಹಾಗೂ ನಿತೇಶ್ ಕೆ.ಆರ್. ಎಂದು ಗುರುತಿಸಲಾಗಿದ್ದು ಗಾಯಗೊಂಡ ಅವರನ್ನು ತಾಲೂಕು ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಚೂರಿ ಇರಿದ ಅಜ್ಜಾವರ ಗ್ರಾಮದ ಕಾಂತಮಂಗಲ ನಿವಾಸಿಗಳಾದ ದಯಾನಂದ ಮತ್ತು ರಾಜೇಶ್ ಬಿ. ಆರ್. ಅವರನ್ನು ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಚೂರಿ ಇರಿತಕ್ಕೆ ಕಾರಣವೇನು ಎಂಬುದು ತನಿಖೆಯಿಂದ ಹೊರಬರಬೇಕಿದೆ.

ಉಡುಪಿ ವಸತಿಗೃಹದಲ್ಲಿ ನೆಲ್ಯಾಡಿ ನಿವಾಸಿ ಆತ್ಮಹತ್ಯೆ

ಉಡುಪಿ: ನಗರದ ಹಳೆ ಸರಕಾರಿ ಬಸ್ಸು ನಿಲ್ದಾಣದ ಸನಿಹದ ವಸತಿ ಗೃಹದಲ್ಲಿ ಕೊಠಡಿ ಪಡೆದುಕೊಂಡಿದ್ದ ವ್ಯಕ್ತಿಯೊಬ್ಬರು ಫ್ಯಾನಿಗೆ ಬಟ್ಟೆಯಿಂದ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ನಡೆದಿದೆ. ಪುತ್ತೂರು ನೆಲ್ಯಾಡಿ ನಿವಾಸಿ ಜಿನ್ಸನ್ ಪಿ. ಎಮ್. ಆತ್ಮಹತ್ಯೆ ಮಾಡಿಕೊಂಡಾತ ಎಂದು ತಿಳಿದುಬಂದಿದೆ. ನಗರ ಪೊಲೀಸ್ ಠಾಣಾಧಿಕಾರಿ ಭರತೇಶ್, ಪಿಎಸ್‌ಐ ನಾರಾಯಣ, ಎಎಸ್‌ಐ ವಿಜಯ್ ಘಟನಾ ಸ್ಥಳದಲ್ಲಿದ್ದು, ಮಹಜರು ಪ್ರಕ್ರಿಯೆ ನಡೆಸಿದರು. ನಿತ್ಯಾನಂದ ಒಳಕಾಡು ಶವವನ್ನು ಜಿಲ್ಲಾಸ್ಪತ್ರೆಯ ಮರಣೋತ್ತರ ಪರೀಕ್ಷಾ ಕೇಂದ್ರಕ್ಕೆ ಸಾಗಿಸಲು ನೆರವಾದರು.

ತೆಂಗಿನ ಮರದಿಂದ ಕಾಲು ಜಾರಿ ಬಿದ್ದು ವ್ಯಕ್ತಿ ಸಾವು

ಉಡುಪಿ: ತೋಟದಲ್ಲಿ ತೆಂಗಿನಕಾಯಿ ಕೀಳಲು ಮರ ಹತ್ತಿದ್ದ ವೇಳೆ ಕಾಲು ಜಾರಿ ಕೆಳಗೆ ಬಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಘಟನೆ ಕುಂದಾಪುರ ತಾಲೂಕಿನ ಗುಲ್ವಾಡಿ ಗ್ರಾಮದ ಶೆಟ್ರಕಟ್ಟೆ ಎಂಬಲ್ಲಿ ಭಾನುವಾರ ನಡೆದಿದೆ. ಗುಲ್ವಾಡಿ ನಿವಾಸಿ ಗೋಪಾಲ (66) ಮೃತಪಟ್ಟ ದುರ್ದೈವಿ. ಇವರು ಭಾನುವಾರ ಬೆಳಗ್ಗೆ 8.30ರ ಸುಮಾರಿಗೆ ತಮಗೆ ಸೇರಿದ ತೋಟದಲ್ಲಿ ತೆಂಗಿನಕಾಯಿ ಕೀಳಲು ಮರ ಹತ್ತಿದ್ದರು. ಈ ವೇಳೆ ಆಕಸ್ಮಿಕವಾಗಿ ಹಿಡಿತ ತಪ್ಪಿ ಮರದಿಂದ ಕೆಳಗೆ ಬಿದ್ದಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ತಕ್ಷಣವೇ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಚಿಕಿತ್ಸೆ ಸ್ಪಂದಿಸದೆ ಮಧ್ಯಾಹ್ನ 12.25ರ ಸುಮಾರಿಗೆ ಅವರು ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಈ ಬಗ್ಗೆ ಮೃತರ ಭಾವ ಚಂದ್ರಶೇಖರ ಅವರು ನೀಡಿದ ದೂರಿನಂತೆ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಣಿಜ್ಯ ಬಳಕೆ ಎಲ್‌ಪಿಜಿ ಅಭಾವ ನಡುವೆ ಗೃಹಬಳಕೆಯ ಗ್ಯಾಸ್ ಗ್ರಾಹಕರಿಗೂ ಕಾಡುತ್ತಿದೆ ಆತಂಕ

ಚಾಲ್ತಿಯಲ್ಲಿದ್ದ ಮಿಸ್ಡ್‌ಕಾಲ್ ಸಂಖ್ಯೆ ಸ್ತಬ್ಧ!

ಉಡುಪಿ: ಜಿಲ್ಲೆಯಲ್ಲಿ ಒಂದೆಡೆ ವಾಣಿಜ್ಯ ಬಳಕೆಯ ಅನಿಲ ಅಭಾವ ಹೋಟೆಲ್ ಉದ್ಯಮವನ್ನು ಹೈರಾಣಾಗಿಸುತ್ತಿದ್ದರೆ, ಇನ್ನೊಂದೆಡೆ ಗೃಹಬಳಕೆಯ ಗ್ಯಾಸ್ ಗ್ರಾಹಕರು ಹೊಸ ರೀತಿಯ ತಾಂತ್ರಿಕ ಮತ್ತು ಕೃತಕ ಸಮಸ್ಯೆಗೆ ಸಿಲುಕಿದ್ದಾರೆ. ಸದಾ ಚಾಲ್ತಿಯಲ್ಲಿದ್ದ 'ಮಿಸ್ಡ್ ಕಾಲ್' ಬುಕ್ಕಿಂಗ್ ನಂಬರ್ ಈಗ ಡಯಲ್ ಆಗುತ್ತಿಲ್ಲ, ಇತ್ತ ಏಜೆನ್ಸಿಗಳ ಹಠಾತ್ ಹೊಸ ನಿಯಮಗಳಿಂದ ಜನಸಾಮಾನ್ಯರು ಕಂಗಾಲಾಗಿದ್ದಾರೆ.

ಏನಿದು ತಾಂತ್ರಿಕ ಗೊಂದಲ?

ಎಲ್‌ಪಿಜಿ ಗ್ಯಾಸ್ ಗ್ರಾಹಕರು ಸುಲಭವಾಗಿ ಗ್ಯಾಸ್ ಬುಕ್ ಮಾಡಲು ಬಳಸುತ್ತಿದ್ದ ಮಿಸ್ಡ್ ಕಾಲ್ ಸಂಖ್ಯೆ ಕಳೆದ ಕೆಲವು ದಿನಗಳಿಂದ ಸಂಪರ್ಕಕ್ಕೆ ಸಿಗುತ್ತಿಲ್ಲ. ಈ ಬಗ್ಗೆ ಗ್ಯಾಸ್ ಏಜೆನ್ಸಿಗಳನ್ನು ಪ್ರಶ್ನಿಸಿದರೆ, 'ಹಿಂದಿನ ಸಿಲಿಂಡರ್ ಪಡೆದು 45 ದಿನಗಳು ಪೂರ್ಣಗೊಳ್ಳದೆ ಹೊಸ ಬುಕ್ಕಿಂಗ್ ಮಾಡಲು ಸಾಧ್ಯವಿಲ್ಲ' ಎಂಬ ಉತ್ತರ ಸಿಗುತ್ತಿದೆ. ಸರ್ಕಾರದ ಅಧಿಕೃತ ನಿಯಮಗಳ ಪ್ರಕಾರ ಎರಡು ಸಿಲಿಂಡರ್ ಹೊಂದಿರುವವರಿಗೆ 15 ರಿಂದ 30 ದಿನಗಳ ಅಂತರವಿರಬೇಕು. ಆದರೆ, ಏಜೆನ್ಸಿಗಳು ಸ್ವಯಂಪ್ರೇರಿತವಾಗಿ ಹೇರುತ್ತಿರುವ ಈ '45 ದಿನಗಳ' ನಿಯಮವು ಕೃತಕ ಅಭಾವ ಸೃಷ್ಟಿಸುವ ತಂತ್ರವೇ ಎಂಬ ಅನುಮಾನ ಮೂಡಿಸಿದೆ.

ಕೇಂದ್ರದ ಭರವಸೆ ಹಾಗೂ ವಾಸ್ತವದ ಪರಿಸ್ಥಿತಿ

ಕೇಂದ್ರ ಸರ್ಕಾರವು ದೇಶದಲ್ಲಿ ಗ್ಯಾಸ್ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ ಎಂದು ಪದೇ ಪದೇ ಹೇಳುತ್ತಿದೆ. ಆದರೆ ಉಡುಪಿಯ ವಾಸ್ತವ ಸ್ಥಿತಿ ಹಾಗಿಲ್ಲ. ಏಜೆನ್ಸಿಗಳ ಈ ಚೆಲ್ಲಾಟದಿಂದಾಗಿ ತುರ್ತಾಗಿ ಗ್ಯಾಸ್ ಬೇಕಾದವರು ಪರದಾಡುವಂತಾಗಿದೆ. ಬುಕ್ಕಿಂಗ್ ಸಂಖ್ಯೆ ಕೆಲಸ ಮಾಡದಿರುವುದು ಮತ್ತು ಆನ್‌ಲೈನ್ ಆಪ್‌ಗಳಲ್ಲಿಯೂ 'ಸರ್ವರ್ ದೋಷ' ಕಾಣಿಸಿಕೊಳ್ಳುತ್ತಿರುವುದು ಗ್ರಾಹಕರ ಆಕ್ರೋಶಕ್ಕೆ ಕಾರಣವಾಗಿದೆ.

ಕೃತಕ ಅಭಾವದ ಸಂಚು?

ಮಾರುಕಟ್ಟೆಯಲ್ಲಿ ಗ್ಯಾಸ್ ಪೂರೈಕೆಯನ್ನು ನಿಯಂತ್ರಿಸಿ, ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡಲು ಅಥವಾ ಸಣ್ಣ ಹೋಟೇಲ್‌ಗಳಿಗೆ ಅಕ್ರಮವಾಗಿ ವರ್ಗಾಯಿಸಲು ಇಂತಹ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ. ಜಿಲ್ಲಾಡಳಿತ ಮತ್ತು ಆಹಾರ ಇಲಾಖೆಯು ತಕ್ಷಣವೇ ಗ್ಯಾಸ್ ಏಜೆನ್ಸಿಗಳ ಈ ಮೊಂಡುತನಕ್ಕೆ ಕಡಿವಾಣ ಹಾಕಿ, ಬುಕ್ಕಿಂಗ್ ವ್ಯವಸ್ಥೆಯನ್ನು ಸರಳಗೊಳಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ವಾಣಿಜ್ಯ ಸಿಲಿಂಡರ್ ಆಗಿ ಪರಿವರ್ತನೆ ಆಗಿರುವ ಶಂಕೆ?

ಉಡುಪಿಯಂತಹ ಕರಾವಳಿ ಜಿಲ್ಲೆಯಲ್ಲಿ ಹೋಟೆಲ್ ಉದ್ಯಮವು ಪ್ರಬಲವಾಗಿದೆ. ವಾಣಿಜ್ಯ ಸಿಲಿಂಡರ್‌ಗಳ ಕೊರತೆಯ ನೆಪವೊಡ್ಡಿ, ಗೃಹಬಳಕೆಯ ಸಿಲಿಂಡರ್‌ಗಳನ್ನು ಅಕ್ರಮವಾಗಿ ಅತ್ತ ಕಡೆಗೆ ವರ್ಗಾಯಿಸುವ ದೊಡ್ಡ ಜಾಲವೇ ಕೆಲಸ ಮಾಡುತ್ತಿರಬಹುದು ಎಂಬ ಸಂಶಯ ದಟ್ಟವಾಗಿದೆ. ಆನ್‌ಲೈನ್ ಬುಕ್ಕಿಂಗ್ ಅಪ್ಲಿಕೇಶನ್‌ಗಳಲ್ಲಿ 'ಔಟ್ ಆಫ್ ಸ್ಟಾಕ್' ಅಥವಾ 'ಸರ್ವರ್ ಎರರ್' ಎಂಬ ಸಂದೇಶಗಳು ಪದೇ ಪದೇ ಬರುತ್ತಿರುವುದು ಈ ಸಂಶಯಕ್ಕೆ ಪುಷ್ಟಿ ನೀಡುತ್ತಿದೆ. ಜಿಲ್ಲಾಧಿಕಾರಿಗಳು ಮತ್ತು ಆಹಾರ ಇಲಾಖೆಯ ಅಧಿಕಾರಿಗಳು ತಕ್ಷಣವೇ ಗ್ಯಾಸ್ ಗೋಡೌನ್‌ಗಳಿಗೆ ಭೇಟಿ ನೀಡಿ ದಾಸ್ತಾನು ಪರಿಶೀಲನೆ ನಡೆಸಬೇಕಿದೆ ಎಂಬ ಆಗ್ರಹ ಕೇಳಿಬರುತ್ತಿದೆ.

ಊಟ ಹೇಗೆ ಮಾಡಬೇಕು?

ಗ್ಯಾಸ್ ಬುಕ್ಕಿಂಗ್ ವ್ಯವಸ್ಥೆಯಲ್ಲಿನ ಈ ಹಠಾತ್ ಬದಲಾವಣೆಯು ಕೇವಲ ತಾಂತ್ರಿಕ ದೋಷವೋ ಅಥವಾ ಉದ್ದೇಶಪೂರ್ವಕ ವಿಳಂಬವೋ ಎಂಬ ಚರ್ಚೆ ಜಿಲ್ಲೆಯಾದ್ಯಂತ ಕಾವೇರಿದೆ. ಸಾಮಾನ್ಯವಾಗಿ ಮಧ್ಯಮ ವರ್ಗದ ಕುಟುಂಬವೊಂದಕ್ಕೆ ಒಂದು ಸಿಲಿಂಡರ್ 30 ರಿಂದ 35 ದಿನಗಳವರೆಗೆ ಬರುತ್ತದೆ. ಆದರೆ ಏಜೆನ್ಸಿಗಳು ಹೇಳುತ್ತಿರುವ '45 ದಿನಗಳ ಕಡ್ಡಾಯ ನಿಯಮ'ವು ಜನಸಾಮಾನ್ಯರ ಅಡುಗೆಮನೆಯ ಲೆಕ್ಕಾಚಾರವನ್ನೇ ತಲೆಕೆಳಗಾಗಿಸಿದೆ. 'ಒಂದು ವೇಳೆ ಅತಿಥಿಗಳು ಬಂದಾಗ ಅಥವಾ ಹಬ್ಬದ ಸಂದರ್ಭದಲ್ಲಿ ಗ್ಯಾಸ್ ಬೇಗ ಖಾಲಿಯಾದರೆ ನಾವು ಮುಂದಿನ 10-15 ದಿನಗಳ ಕಾಲ ಉಪವಾಸ ಇರಬೇಕೇ?'' ಎಂದು ಗ್ರಾಹಕರು ಆಕ್ರೋಶದಿಂದ ಪ್ರಶ್ನಿಸುತ್ತಿದ್ದಾರೆ.

ಹೊಟೇಲ್‌ಗಳು ಕಟ್ಟಿಗೆ ಬಳಸಲಿ: ಜಿಲ್ಲಾಧಿಕಾರಿ

ಗೃಹ ಬಳಕೆ ಸಿಲಿಂಡರ್‌ಗಳ ಸರಬರಾಜಿನಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಿರುವುದಿಲ್ಲ. ವಾಣಿಜ್ಯ ಬಳಕೆಯ ಅನಿಲ ಹೊರ ದೇಶಗಳಿಂದ ಪೂರ್ಣ ಪ್ರಮಾಣದಲ್ಲಿ ಆಮದು ಆಗುತ್ತಿದ್ದು, ಯುದ್ಧ



ಭೀತಿಯಿಂದಾಗಿ ಅನಿಲ ಆಮದು ನಿಗಧಿತ ಪ್ರಮಾಣದಲ್ಲಿ ಆಗದೆ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ. ಇದು ತಾತ್ಕಾಲಿಕ ಸಮಸ್ಯೆ ಆಗಿದೆ. ಇದಕ್ಕೆ ಪರ್ಯಾಯ ಉರುವಲುಗಳ ಬಳಕೆಯೊಂದೇ ಮಾರ್ಗ. ಈಗಾಗಲೇ ಜಿಲ್ಲೆಯಲ್ಲಿ ಕೆಲವು ಹೊಟೇಲ್ ಉದ್ಯಮಗಳು ಕಟ್ಟಿಗೆ, ವಿದ್ಯುತ್ ಸೇರಿದಂತೆ ಮತ್ತಿತರ ಉರುವಲುಗಳನ್ನು ಬಳಸಿ ಆಹಾರ ಪದಾರ್ಥಗಳನ್ನು ತಯಾರಿಸುತ್ತಿದ್ದಾರೆ. ಜಿಲ್ಲೆಯ ಎಲ್ಲ ಹೊಟೇಲ್ ಉದ್ಯಮಗಳು ಇದಕ್ಕೆ ಒತ್ತು ನೀಡುವುದರೊಂದಿಗೆ ಹೊಟೇಲ್ ಉದ್ಯಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಉದ್ಯೋಗವಕಾಶವನ್ನು ಮುಂದುವರೆಸುವುದು ಉತ್ತಮ. ಈಗಾಗಿರುವ ವ್ಯತ್ಯಯವು ತಾತ್ಕಾಲಿಕವಾಗಿದ್ದು, ಮುಂದೆ ಸಮಸ್ಯೆ ಸರಿಹೋಗಬಹುದಾಗಿದೆ ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಹೇಳಿದ್ದಾರೆ.

ಮೈದಾನದಲ್ಲಿ ತೆಂಕು-ಬಡಗು ತಿಟ್ಟು ಕಲಾವಿದರ 'ಕಾದಾಟ'

ಶ್ರೀ ದುರ್ಗಾ ಟ್ರೋಫಿಗಾಗಿ ಆಟದವರ ಆಟ!

ಕಟೀಲು: ತೆಂಕು-ಬಡಗು ತಿಟ್ಟುಗಳ ಯಕ್ಷಗಾನದ ಮೇಳಗಳ ಕಲಾವಿದರಿಗಾಗಿ ಎರಡನೇ ವರ್ಷದ ಕ್ರಿಕೆಟ್ ಪಂದ್ಯಾಟ ಏ. 21ರಂದು ನಡೆಯಲಿದೆ. ಈ ಆಟದವರ ಆಟದಲ್ಲಿ ಗೆದ್ದವರು ಶ್ರೀ ದುರ್ಗಾ ಟ್ರೋಫಿಯೊಂದಿಗೆ ನಗದು ಬಹುಮಾನ ಪಡೆಯಲಿದ್ದಾರೆ.

ಏ.21ರಂದು ಕಟೀಲು ದೇವಸ್ಥಾನದಲ್ಲಿ ಆರಟ. ಹಾಗಾಗಿ ಅಂದು ಮೇಳಗಳಿಗೆ ರಜೆ. ಹಾಗೆ ಕಟೀಲು ಮೇಳದ ಕಲಾವಿದರಾದ ರಾಮಪ್ರಕಾಶ ಕಲ್ಲೂರಾಯ, ಸಂದೇಶ ಬಡಗಬೆಳ್ಳೂರು ಹಾಗೂ ಸ್ನೇಹಿತರು ಸೇರಿ ಎರಡನೇ ವರ್ಷದ ಶ್ರೀ ದುರ್ಗಾ ಟ್ರೋಫಿಗಾಗಿ ಕ್ರಿಕೆಟ್ ಪಂದ್ಯಕೂಟ ಆಯೋಜಿಸಿದ್ದಾರೆ. ಶಿಮಂತೂರು ಶ್ರೀ ಶಾರದಾ ಸೆಂಟ್ರಲ್ ಶಾಲೆಯ ಮೈದಾನದಲ್ಲಿ ತೆಂಕು ಬಡಗು ತಿಟ್ಟುಗಳ ಯಕ್ಷಗಾನದ ಮೇಳಗಳ ಕಲಾವಿದರಿಗಾಗಿ ಕ್ರಿಕೆಟ್ ಪಂದ್ಯಾಟ ನಡೆಯಲಿದೆ. ಕಳೆದ ವರುಷ ಹದಿಮೂರು ಮೇಳಗಳ ತಂಡಗಳು ಭಾಗವಹಿಸಿದ್ದರೆ ಈ ಬಾರಿ ಈಗಾಗಲೇ ಏಳು ತಂಡಗಳು ಹೆಸರು ನೋಂದಾಯಿಸಿದ್ದು, ಕಳೆದ ವರುಷಕ್ಕಿಂತ ಹೆಚ್ಚು ಮೇಳಗಳ ಕಲಾವಿದರು ಭಾಗವಹಿಸುವ ನಿರೀಕ್ಷೆ ಇದೆ.



- ಹಿಮ್ಮೇಳ ಮುಮ್ಮೇಳ ಕಲಾವಿದರಿಗೆ ಮಾತ್ರ ಭಾಗವಹಿಸುವ ಅವಕಾಶ
- ಮೂರು ಓವರ್‌ಗಳ 50 ಗಜದ ಲೀಗ್ ಮಾದರಿಯ ಓವರ್ ಆರ್ಮ್ ಪಂದ್ಯಾಟ

ಹಿಮ್ಮೇಳ ಮುಮ್ಮೇಳ ಕಲಾವಿದರಿಗೆ ಮಾತ್ರ ಭಾಗವಹಿಸುವ ಅವಕಾಶವಿದ್ದು, ಮೂರು ಓವರ್‌ಗಳ 50 ಗಜದ ಲೀಗ್ ಮಾದರಿಯ ಓವರ್ ಆರ್ಮ್ ಕ್ರಿಕೆಟ್ ಪಂದ್ಯಾಟ ಇರುತ್ತದೆ. ಉತ್ತಮ ಹೊಡೆತಗಾರ, ಎಸೆತಗಾರ, ಪಂದ್ಯಶ್ರೇಷ್ಠ ಇತ್ಯಾದಿ ಬಹುಮಾನಗಳೂ ಇರುತ್ತವೆ. ತೆಂಕು ಬಡಗಿನಲ್ಲಿ ನಲವತ್ತಕ್ಕೂ ಹೆಚ್ಚು ಯಕ್ಷಗಾನ ಮೇಳಗಳಿದ್ದು, ಎಲ್ಲ ಮೇಳಗಳ ಕಲಾವಿದರನ್ನೂ ಸಂಪರ್ಕಿಸಲಾಗಿದ್ದು, ಕಳೆದ ವರುಷದ ಪಂದ್ಯಾಟದ ಯಶಸ್ಸು ಈ ಬಾರಿ ಹೆಚ್ಚಿನ ತಂಡಗಳ ಪಾಲ್ಗೊಳ್ಳುವಿಕೆಯ ನಿರೀಕ್ಷೆಯನ್ನು ಹೆಚ್ಚಿಸಿದೆ.

ನೇಪಥ್ಯ ಕಲಾವಿದರಿಗೆ ಪ್ರತ್ಯೇಕ ಪಂದ್ಯಾಟ!

ಈ ಬಾರಿ ಕಟೀಲಿನ ಏಳೂ ಮೇಳಗಳ ನೇಪಥ್ಯ ಕಲಾವಿದರಿಗಾಗಿ ಸೂಪರ್ ಸಿಕ್ಸ್ ಮಾದರಿಯ ಅಂಡರ್ ಆರ್ಮ್ ಕ್ರಿಕೆಟ್ ಪಂದ್ಯಾಟ ಆಯೋಜಿಸಿಲಾಗಿದೆ. ಗೆದ್ದ ಎರಡು ಮೇಳಗಳ ತಂಡಗಳಿಗೆ ಬಹುಮಾನವಿದೆ.

ಕರಾವಳಿ ಜನತೆಯ ಕನಸಿನ ರಥ ಪಂಚಗಂಗಾ ರೈಲಿಗೆ ಪಂಚವರ್ಷ!

ಕುಂದಾಪುರ: ಕರಾವಳಿಗರ ಕನಸಿನ ರಥ ಪಂಚಗಂಗಾ ರೈಲಿಗೆ ಪಂಚವರ್ಷಗಳು ತುಂಬಿವೆ. ಕರಾವಳಿ ಭಾಗವನ್ನು ರಾಜ್ಯ ರಾಜಧಾನಿಯೊಂದಿಗೆ ಬೆಸೆಯುವ ಪಂಚಗಂಗಾ ರೈಲು ಕಳೆದ ಆರು ವರ್ಷಗಳಿಂದ ಕರಾವಳಿ ಭಾಗದ ಸಂಪರ್ಕ ಕೊಂಡಿಯಾಗಿ ಉತ್ತಮ ಸೇವೆ ನೀಡುತ್ತಿದೆ.

ರಾತ್ರಿ ಹೊರಟು ಸೂರ್ಯೋದಯಕ್ಕೂ ಮುಂಚೆ ಕರಾವಳಿ ಹಾಗೂ ರಾಜಧಾನಿ ತಲುಪುವ ರೈಲೊಂದು ಬರಲು ಸಾಧ್ಯವೇ ಇಲ್ಲ ಎಂಬ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ, ರೈಲು ಸಂಚಾರಕ್ಕೆ ಎದುರಾದ ಅನೇಕ ತೊಡಕುಗಳನ್ನು ನಿವಾರಿಸಿಕೊಂಡು ಪ್ರಾರಂಭಗೊಂಡ ಪಂಚಗಂಗಾ ರೈಲು ಇಂದು ಕರಾವಳಿ ಭಾಗದ ಜನರ ಜೀವನಾಡಿಯಾಗಿದೆ.

ಪ್ರಾರಂಭದಲ್ಲಿ ಮೈಸೂರು ಮೇಲೆ ಓಡುತಿದ್ದ ಪಂಚಗಂಗಾ ರೈಲನ್ನು ನಾಲ್ಕು ದಿನ ಕುಣಿಗಲ್ ಮೂಲಕ ಓಡಿಸಿ ಮೂರು ದಿನ ಮೈಸೂರು ಮೂಲಕ ಓಡಿಸಲಾಗುತಿತ್ತು. ಬೆಂಗಳೂರಿಂದ ರಾತ್ರಿ ಹೊರಟು ಮಂಗಳೂರು ಸೆಂಟ್ರಲ್ ನಿಲ್ದಾಣದಲ್ಲಿ ಗಂಟೆಗಟ್ಟಲೆ ನಿಂತು ಸಿಗ್ನಲ್ ಸಿಗದೇ, ಇಂಜಿನ್ ರಿವರ್ಸ್ ಮಾಡುತ್ತ, ಮತ್ತೇ ಹೋದ ದಾರಿಯಲ್ಲೇ ಮಂಗಳೂರು ಜಂಕ್ಷನ್ ಬಂದು ಅಲ್ಲಿಂದ ಉಡುಪಿ ಕಾರವಾರಕ್ಕೆ ಮಧ್ಯಾಹ್ನ ತಲುಪುತಿದ್ದ ಪಂಚಗಂಗಾ ರೈಲಿನ ಬಗ್ಗೆ ಅಪಸ್ವರಗಳು ಎದ್ದಿತ್ತು. ಕೇವಲ ವಿರಾಮದವರಿಗೆ, ನಿವೃತ್ತರಿಗೆ ಮಾತ್ರ ಸೂಕ್ತವಾದ ರೈಲು ಎಂದು ಪಂಚಗಂಗಾ ರೈಲಿನ ಬಗ್ಗೆ ಪ್ರಯಾಣಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ರೈಲು ಸಂಚಾರ ಆರಂಭವಾಗಬಾರದೆಂಬ ಉದ್ದೇಶದಿಂದ ಬಹಳಷ್ಟು ಲಾಬಿ ಕೆಲಸ ಮಾಡುತ್ತಿದೆ ಎಂಬ ಆರೋಪಗಳೂ ಕೇಳಿ ಬಂದಿತ್ತು.

ಬೆಂಗಳೂರು ಮತ್ತು ಕಾರವಾರ ನಡುವೆ ಎಲ್ಲೂ ವಿಳಂಬವಿಲ್ಲದ, ಇಂಜಿನ್ ರಿವರ್ಸ್ ಇಲ್ಲದ ಪಡೀಲ್ ಬೈಪಾಸ್ ನೇರ ಮಾರ್ಗದಲ್ಲಿ ಉಡುಪಿ ಉತ್ತರ ಕನ್ನಡದ ಜನರಿಗೆ ಸೂಕ್ತವಾದ ರೈಲೊಂದು ಬೇಕು ಎಂದು ನಿರ್ಣಯ ಕೈಗೊಂಡ ಕುಂದಾಪುರ ರೈಲು ಪ್ರಯಾಣಿಕರ ಹಿತರಕ್ಷಣಾ ಸಮಿತಿ, ಅಂದಿನ ಉಡುಪಿ ಸಂಸದರಾದ ಶೋಭಾ ಕರಂದ್ಲಾಜೆಯವರಿಗೆ ಮನವಿ ಮಾಡಿ, ರೈಲ್ವೆ ರಾಜ್ಯ ಖಾತೆ ಸಚಿವ ಸುರೇಶ ಅಂಗಡಿ ಅವರಿಗೆ ಮನವಿ ಸಲ್ಲಿಸಿತ್ತು. ಅಂದು ರಾಜ್ಯದ ಸಚಿವರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ ಅವರು ಸುರೇಶ್ ಅಂಗಡಿಯವರಿಗೆ ಸಮಿತಿಯ ಮನವಿಯನ್ನು ತಿಳಿಸುವುದರ ಜತೆಗೆ ಈ ಭಾಗದ ಜನರ ಬೇಡಿಕೆಯನ್ನು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದರು. ಉತ್ತರ ಕನ್ನಡದ ರೈಲ್ವೇ ಹೋರಾಟಗಾರ ರಾಜೀವ್ ಗಾಂವ್ಕರ್ ಕೂಡ ಕುಮಟಾ ಶಾಸಕ ದಿನಕರ್ ಶೆಟ್ಟಿ ಮತ್ತು ಅಂದಿನ ಕಾರವಾರ ಸಂಸದ ಅನಂತ್ ಕುಮಾರ್ ಹೆಗಡೆ ಮತ್ತು ಶ್ರೀ ರಾಮಚಂದ್ರಾಪುರ ಮಠಾಧೀಶ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮಿಯವರ ಮೂಲಕವೂ ಮನವಿಯನ್ನು ಕೇಂದ್ರ ರೈಲ್ವೆ ಇಲಾಖೆಗೆ ಸಲ್ಲಿಸಿ ಬೆಂಗಳೂರು-ಕಾರವಾರ ನಡುವೆ ನೇರ ರೈಲು ಪ್ರಾರಂಭಿಸಬೇಕೆಂದು ಒತ್ತಡ ಹೇರಲು ಪ್ರಾರಂಭಿಸಿತು.



> ಕರಾವಳಿ ಭಾಗವನ್ನು ರಾಜ್ಯ ರಾಜಧಾನಿಯೊಂದಿಗೆ ಬೆಸೆಯುವ ಪಂಚಗಂಗಾ ರೈಲು ಕಳೆದ ಆರು ವರ್ಷಗಳಿಂದ ಕರಾವಳಿ ಭಾಗದ ಸಂಪರ್ಕ ಕೊಂಡಿಯಾಗಿ ಉತ್ತಮ ಸೇವೆ ನೀಡುತ್ತಿದೆ. ಪಂಚಗಂಗಾ ರೈಲಿಗೆ 6 ವರ್ಷ ತುಂಬುತ್ತಿರುವ ಈ ಸಂದರ್ಭದಲ್ಲಿ ಪಂಚಗಂಗಾ ರೈಲಿನ ಪ್ರಾರಂಭಕ್ಕೆ ನೆರವಾದ ಅಂದಿನ ರೈಲ್ವೆ ಖಾತೆ ರಾಜ್ಯ ಸಚಿವ ಸುರೇಶ ಅಂಗಡಿಯವರನ್ನು ಸ್ಮರಿಸಿಕೊಳ್ಳಬೇಕಿದೆ
>
> ■ **ಗಣೇಶ ಪುತ್ರನ್,** ಅಧ್ಯಕ್ಷ, ರೈಲ್ವೆ ಪ್ರಯಾಣಿಕರ ಹಿತರಕ್ಷಣಾ ಸಮಿತಿ, ಕುಂದಾಪುರ

ಈ ಎಲ್ಲಾ ಬೇಡಿಕೆ ಗಮನಿಸಿದ ಸುರೇಶ್ ಅಂಗಡಿಯವರು, ಕುಂದಾಪುರ ರೈಲು ಪ್ರಯಾಣಿಕರ ಹಿತರಕ್ಷಣಾ ಸಮಿತಿಯನ್ನು ಬೆಳಗಾವಿಯ ತಮ್ಮ ಕಚೇರಿಗೆ ಕರೆಸಿ ಸಮಸ್ಯೆಯನ್ನು ಆಲಿಸಿ ಮಂಗಳೂರು ಸೆಂಟ್ರಲ್ ಮೂಲಕ ಬರುವ ರೈಲುಗಳಿಂದ ಆಗುವ ವಿಳಂಬವನ್ನು ಪರಿಗಣಿಸಿ ಉಡುಪಿ-ಕುಂದಾಪುರ-ಕಾರವಾರ ಭಾಗದವರಿಗೆ ಪಡೀಲ್ ಬೈಪಾಸ್ ಮೂಲಕವೇ ರೈಲು ಸೇವೆ ಆರಂಭಿಸುವಂತೆ ಸೂಚಿಸಿದರು. ಮುಂದಿನ ಒಂದು ತಿಂಗಳಲ್ಲಿ ಭಾರತೀಯ ರೈಲ್ವೇ ಹಲವು ಸುತ್ತಿನ ಮಾತುಕಥೆ ನಡೆಸಿತಾದರೂ, ಹೊಸ ರೈಲಿನ ಬದಲು ಹಳೆಯ ರೈಲಿನ ಒಂದು ಭಾಗವನ್ನೇ ಪಡೀಲ್ ಬೈಪಾಸ್ ಮೂಲಕ ಕಳಿಸುವ ಆದೇಶ ನೀಡಿತು. ಈ ಆದೇಶದಿಂದ ರೈಲು ಸುಮಾರು ಒಂದು ಘಂಟೆಯಷ್ಟೇ ಬೇಗನೆ ಬರುವ ಮಾಹಿತಿ ಸಿಕ್ಕ ಕಾರಣ, ಕುಂದಾಪುರ ರೈಲ್ವೇ ಸಮಿತಿ ಮತ್ತೆ ತನ್ನ ಆಕ್ರೋಶ ಹೊರ ಹಾಕಿತ್ತು.

ರಾಜಕೀಯ ಮತ್ತು ಸಾರ್ವಜನಿಕ ಸಂಘರ್ಷಗಳ ಪರಿಣಾಮ ಫೆ.26, 2020ರಂದು ಸಚಿವ ಸುರೇಶ ಅಂಗಡಿಯವರ ಸೂಚನೆಯಂತೆ ನೈರುತ್ಯ ರೈಲ್ವೆಯ ಅಧಿಕಾರಿಗಳ ವಿಶೇಷ ಪ್ರಯತ್ನದಿಂದ ಬೆಂಗಳೂರು-ಕಾರವಾರ-ಪಡೀಲ್ ಬೈಪಾಸ್ ಮೂಲಕ ಹೊಸ ನಿತ್ಯ ರೈಲಿನ ಘೋಷಣೆಯಾಯಿತು. 2020ರ ಮಾರ್ಚ್ 7ರಂದು ರೈಲು ಉದ್ಘಾಟನೆಗೊಂಡು ಪ್ರತಿನಿತ್ಯ ಬೆಂಗಳೂರು-ಕಾರವಾರ ನಡುವೆ ಸಂಚಾರ ಪ್ರಾರಂಭ ಮಾಡಿತು. ಅಂದಿನಿಂದ ಇಂದಿನವರೆಗೆ ಈ ರೈಲು ಪ್ರಯಾಣಿಕರಿಂದ ತುಂಬಿ ಪ್ರತಿನಿತ್ಯ ಸಂಚರಿಸುತ್ತಿದೆ. ಪ್ರತಿನಿತ್ಯ ನೂರಾರು ಪ್ರಯಾಣಿಕರು ಕರಾವಳಿ ಭಾಗದಿಂದ ಬೆಂಗಳೂರಿಗೆ ಆರಾಮವಾಗಿ ಸಂಚರಿಸುತ್ತಿದ್ದಾರೆ.

ಕಾಞಂಗಾಡು ರಸ್ತೆ ಅಪಘಾತ: ಇಬ್ಬರು ಬಲಿ

ಕಾಸರಗೊಡು: ಕಾಞಂಗಾಡು ಮಾಣಿಕೋತ್ ಮಡಿಯನ್‌ನಲ್ಲಿ ರಸ್ತೆ ದಾಟುತ್ತಿದ್ದ ವೇಳೆ ಉಂಟಾದ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿದ ಘಟನೆ ಭಾನುವಾರ ಸಂಭವಿಸಿದೆ.





ಮೃತಪಟ್ಟವರು ಚಿತ್ತಾರಿ ಮೂಲದ ದಿ.ಮೊಹಮ್ಮದ್ ಅವರ ಪುತ್ರ ಮಜೀದ್ (55) ಮತ್ತು ಮೀನಾಪೀಸ್ ಮೂಲದ ರಹೀಮ್ ಅವರ ಪುತ್ರ ನಫೀಹ್ (17) ಎಂದು ಗುರುತಿಸಲಾಗಿದೆ.

ಭಾನುವಾರ ಮುಂಜಾನೆ 2.30ರ ವೇಳೆಗೆ ಮಾಣಿಕೋತ್ ಮಡಿಯನ್‌ನಲ್ಲಿರುವ ರಹಮಾನಿಯಾ ರೆಸ್ಟೋರೆಂಟ್ ಬಳಿ ರಸ್ತೆ ದಾಟುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. ಇವರ ಜೊತೆಗಿದ್ದ ಮಿನಾಪೀಸ್ ನಿವಾಸಿ ಹಾಶಿಂ ಎಂಬವರ ಪುತ್ರ ಶೇಖ್ ಅಮಾಸ್ ಹಾಶಿಂ (17) ಅಪಘಾತದಲ್ಲಿ ಗಾಯಗೊಂಡಿದ್ದಾರೆ. ಗಾಯಾಳು ಕಾಞಂಗಾಡಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೃತದೇಹಗಳನ್ನು ಕಾಞಂಗಾಡು ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಹೊಳೆಯಲ್ಲಿ ಸ್ನಾನಕ್ಕಿಳಿದ ಕಾಲೇಜು ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ಸಾವು

ಕಾಸರಗೋಡು: ಸಹಪಾಠಿಗಳ ಜೊತೆ ಹೊಳೆಯಲ್ಲಿ ಸ್ನಾನ ಮಾಡುತ್ತಿದ್ದ ಕಾಲೇಜು ವಿದ್ಯಾರ್ಥಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ನಡೆದಿದೆ. ರಾಜಪುರಂ ಸೈಂಟ್ ಪಾಯಿಸ್ ಕಾಲೇಜಿನ ತೃತೀಯ ವರ್ಷ ಬಿಎಸ್‌ಸಿ ಲೈಫ್ ಸಯನ್ಸ್ ವಿದ್ಯಾರ್ಥಿ, ಹೊಸದುರ್ಗ ಮಡಿಕೈ ಕಾರಾಕೋಡು ತೋಣಿಕಲ್ಲು ನಿವಾಸಿ ವಿ.ಎಂ. ಅಶ್ವಿನ್‌ರಾಜ್ (19) ಸಾವನ್ನಪ್ಪಿದ ದುರ್ದೈವಿ. ತನ್ನ ಸಹಪಾಠಿಗಳೊಂದಿಗೆ ಕಾಲೇಜಿನಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು, ನಂತರ ಅಲ್ಲಿಂದ ಸಹಪಾಠಿಗಳೊಂದಿಗೆ ಕೊಟ್ಟೋಡಿ ಕುಡುಂ ಬೂರು ಹೊಳೆಯಲ್ಲಿ ಸ್ನಾನಕ್ಕೆ ಇಳಿದಿದ್ದನು. ಈ ವೇಳೆ ನೀರಿನಲ್ಲಿ ಮುಳುಗಿದ ಅಶ್ವಿನ್‌ರಾಜ್‌ನನ್ನು ಸಹಪಾಠಿಗಳು ರಕ್ಷಿಸಲೆಂದು ಯತ್ನಿಸಿದರೂ ಫಲಕಾರಿಯಾಗಲಿಲ್ಲ. ಕೂಡಲೇ ಪರಿಸರವಾಸಿ ಗಳು ಸೇರಿ ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತಾದರೂ ಪ್ರಾಣ ಉಳಿ ಸಲು ಸಾಧ್ಯವಾಗಲಿಲ್ಲ. ರಾಜಪುರಂ ಸಮೀಪದ ತೋಣಿಕ್ಕಲ್‌ನ ರವೀಂದ್ರನ್ ಮತ್ತು ಗಿರಿಜಾ ದಂಪತಿಯ ಪುತ್ರನಾದ ಅಶ್ವಿನ್‌ರಾಜ್ ಸಹೋದರಿ ಅಶ್ವತಿ ಅವರನ್ನು ಅಗಲಿದ್ದಾರೆ.

ಇಲೆಕ್ಟ್ರಿಕ್ ಬಾಯ್ಲರ್, ಇಂಡಕ್ಷನ್ ತಂದರೂ ದೋಸೆ ಮಾಡಲು ಆಗುವುದಿಲ್ಲ । ಕಟ್ಟಿಗೆ ಉರಿಸಿದರೆ ಎಲ್ಲೆಲ್ಲೂ ಹೊಗೆ, ಅಕ್ಕಪಕ್ಕದ ಅಂಗಡಿಗೆ ಕಿಡಿ ಹಾರುವ ಭಯ

ಸೌದೆ ಒಲೆ ಮೊರೆ ಹೋದ್ರೂ ಹೊಟೇಲ್‌ಗಳಿಗೆ ತಪ್ಪಿಲ್ಲ ಸಂಕಷ್ಟದ ಸರಮಾಲೆ!

▸ ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಕಮರ್ಷಿಯಲ್ ಸಿಲಿಂಡರ್ ಸಪ್ಲೈ ಇಲ್ಲದೇ ಕೆಲ ಹೊಟೇಲ್‌ಗಳು ಬಂದ್ ಆಗಿವೆ. ಇನ್ನು ಕೆಲ ಹೊಟೇಲ್‌ಗಳಲ್ಲಿ ಸೌದೆ ಒಲೆಯ ಮೂಲಕ ಅಡುಗೆ ತಯಾರಿಸುತ್ತಿದ್ದಾರೆ. ಆದರೂ ಸಹ ಹೊಟೇಲ್ ಮಾಲೀಕರು ಸಾಲು ಸಾಲು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಹಳೆಯ ಪದ್ಧತಿಗೆ ಮರಳಿದ ಹೊಟೇಲ್ ಮಾಲೀಕರು

ಗ್ಯಾಸ್ ಸಿಲಿಂಡರ್ ಕೊರತೆಯಿಂದಾಗಿ ಹಲವು ಹೊಟೆಲ್ ಮಾಲೀಕರು ಹಳೆಯ ಪದ್ಧತಿಯಾದ ಸೌದೆ ಒಲೆಗಳತ್ತ ಮುಖ ಮಾಡುತ್ತಿದ್ದಾರೆ. ಗ್ಯಾಸ್ ಸಿಗದ ಕಾರಣ ಕೆಲವು ಹೊಟೇಲ್‌ಗಳು ತಮ್ಮ ಕಿಚನ್‌ಗಳನ್ನು ಸಂಪೂರ್ಣವಾಗಿ ಮುಚ್ಚಿ ಹೊರಗಡೆ ತಾತ್ಕಾಲಿಕ ಅಡುಗೆ ಮಾಡಿಕೊಳ್ಳಲು ಸೌದೆ ಒಲೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಕೆಲ ಹೊಟೇಲ್‌ಗಳಲ್ಲಿ ಈ ಮೊದಲಿನಿಂದಲೇ ಸೌದೆ ಒಲೆ ಬಳಸಿ ಅಡುಗೆ ಮಾಡುತ್ತಿರುವುದೂ ಉಂಟು.

> ನಮ್ಮ ತಾಯಂದಿರು ಮತ್ತು ಅಜ್ಜಿಯರು ಸೌದೆ ಬಳಸಿ ಅಡುಗೆ ಮಾಡು ತ್ತಿದ್ದರು. ಹಬ್ಬ-ಹರಿದಿನಗಳಲ್ಲಿ ಇದರಿಂದ ಅಡುಗೆ ಮಾಡುವುದು ಒಂದು ರೀತಿ ತೃಪ್ತಿ ಭಾವನೆಯನ್ನು ನೀಡುತ್ತಿತ್ತು. ಇದರಿಂದ ತಯಾರಿಸಿದ ಭಕ್ಷ್ಯಗಳ ರುಚಿ ವಿಶೇಷವಾಗಿದ್ದು, ಎಲ್ಲರೂ ಇಷ್ಟಪಟ್ಟು ಸೇವಿಸುತ್ತಿದ್ದರು. ಸದ್ಯ ಈಗ ಜನರು ಹಿಂದಿನ ಸಂಪ್ರದಾಯಗಳನ್ನೇ ಆಚರಿಸುವತ್ತ ಮುಖ ಮಾಡಿದ್ದಾರೆ.
>
> ■ **ಪ್ರಕಾಶ್ ಮಡಿವಾಳ,** ಮಾಜಿ ಅಧ್ಯಕ್ಷರು, ಯುವಕ ಮಂಡಲ, ಸಾಣೂರು.

ದಿಗಂತ ವಿಶೇಷ

ಹೊಟೇಲ್ ಮಾಲೀಕರ ಸಮಸ್ಯೆಗಳೇನು?

ಇಲೆಕ್ಟ್ರಿಕ್ ಬಾಯ್ಲರ್, ಇಂಡಕ್ಷನ್‌ಗಳಲ್ಲಿ ದೋಸೆ ಮಾಡುವುದಕ್ಕೆ ಆಗುವುದಿಲ್ಲ, ಇದರಿಂದ ದೋಸೆಗೆ ಫೇಮಸ್ ಆದ ಹೊಟೇಲ್‌ಗಳು ಮುಚಿವೆ. ನಗರದ ಹೊಟೇಲ್‌ನಲ್ಲಿ ಒಂದು ಕಡೆ ವಾಸನೆ, ಮತ್ತೊಂದೆಡೆ ಬೆಂಕಿಯ ಕಿಡಿಯಿಂದ ಅಕ್ಕ ಪಕ್ಕದ ಅಂಗಡಿಯವರಿಗೆ ತೊಂದರೆ. ಮತ್ತೆ ಬಹುತೇಕ ಹೊಟೇಲ್ ಸಿಬ್ಬಂದಿಗೆ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಗೊತ್ತಿಲ್ಲ.



ಇಂದಿರಾ ಕ್ಯಾಂಟೀನ್‌ಗೆ ಸದ್ಯಕಿಲ್ಲ ಚಿಂತೆ...!

ಕಾರ್ಕಳದ ಬಂಡಿಮಠದಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಇನ್ನೂ 5-6 ದಿನಗಳಿಗೆ ಗ್ಯಾಸ್ ಲಭ್ಯ ವಿರುವುದರಿಂದ ತೊಂದರೆ ಇಲ್ಲ. ಮುಂದಿನ ಲಭ್ಯತೆ ಬಗ್ಗೆ ಜಿಲ್ಲಾಡಳಿತ ಹಾಗೂ ಕಾರ್ಕಳ ಪುರಸಭೆಗೆ ಪತ್ರ ಮುಖೇನ ತಿಳಿಸಿದ್ದೇನೆ ಎಂದು ಗುತ್ತಿಗೆದಾರರು ಹೊಸದಿಗಂತಕ್ಕೆ ತಿಳಿಸಿದ್ದಾರೆ. ಕಾರ್ಕಳ ಪೇಟೆಯಲ್ಲಿ ಈಗಾಗಲೇ ಕೆಲವು ಹೋಟೇಲ್‌ಗಳು ಇದೇ ಸಮಸ್ಯೆಯಿಂದ ಸಂಕಷ್ಟ ಅನುಭವಿಸುತ್ತಿದ್ದು, ಪರಿಸ್ಥಿತಿ ಇದೇ ರೀತಿಯಲ್ಲಿ ಮುಂದುವರಿದರೆ ಇನ್ನೂ ಹಲವು ಹೋಟೇಲ್‌ಗಳು ಕೂಡ ತಮ್ಮ ಕಾರ್ಯಾಚರಣೆ ಸ್ಥಗಿತಗೊಳಿಸುವ ಸಾಧ್ಯತೆ ಇದೆ ಎಂದು ಹೋಟೇಲ್ ಮಾಲೀಕರು ಆತಂಕ ವ್ಯಕ್ತಪಡಿಸಿದ್ದಾರೆ.

ಗ್ರಾಹಕರು ಗೊಂದಲ ಪಡುವ ಆತಂಕ ಬೇಡ

> ತಾಲೂಕಿನಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲ ಗೃಹಬಳಕೆ ಸಿಲಿಂಡರ್‌ಗಳು ಕೇಂದ್ರ ಸರಕಾರ ಯಾವುದೇ ತೊಂದರೆಯಾಗದಂತೆ ನಿಯಮಾನುಸಾರ ವಿತರಿಸಲಾಗುತ್ತಿವೆ. ಗ್ರಾಹಕರು ಬುಕ್ ಮಾಡಿದ 25 ದಿನಗಳಲ್ಲಿ ಸಿಲಿಂಡರ್ ದೊರೆಯುತ್ತದೆ. ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ. ವಾಣಿಜ್ಯ ಬಳಕೆದಾರರಿಗೆ ಸ್ವಲ್ಪ ತೊಂದರೆ ಆಗುತ್ತಿದೆ ಶೀಘ್ರದಲ್ಲೇ ಸರಿಯಾಗುವ ಆಶ್ವಾಸನೆ ಇದೆ. ಗ್ಯಾಸ್ ವಿತರಕರು ಅಕ್ರಮ ದಾಸ್ತಾನು ಮಾಡುತ್ತಿದ್ದಾರೆ ಎಂದು ದೂರುತ್ತಿರುವುದು ಕಂಡುಬಂದಿದೆ. ಉಡುಪಿ, ಮಂಗಳೂರು ಜಿಲ್ಲೆಯ ಎಲ್ಲಾ ಗ್ಯಾಸ್ ವಿತರಕರು ವಾಣಿಜ್ಯ ಸಿಲಿಂಡರನ್ನು ಅಕ್ರಮವಾಗಿ ಯಾರಿಗೂ ಮಾರಿದ ಉದಾಹರಣೆ ಕಂಡುಬಂದಿಲ್ಲ. ಅಕ್ರಮ ದಾಸ್ತನಾಗಿ ಇಟ್ಟುಕೊಳ್ಳುವುದು ಅಥವಾ ಹೆಚ್ಚು ರೇಟಿಗೆ ಮಾರುವುದು ಸಾಧ್ಯವೇ ಇಲ್ಲ
>
> ■ **ಎಸ್. ನಿತ್ಯಾನಂದ ಪೈ,** ಆಲ್ ಇಂಡಿಯಾ ಎಲ್.ಪಿ.ಜಿ ಅಸೋಸಿಯೇಷನ್ ಉಪಾಧ್ಯಕ್ಷರು ಹಾಗೂ ಎಚ್. ಪಿ. ಗ್ಯಾಸ್, ವಿತರಕರು, ಕಾರ್ಕಳ

ಹೊಟೇಲ್‌ನಲ್ಲಿ ಮೆನು ಕಡಿತ, ಕಾಫಿ ಬದಲು ಜ್ಯೂಸ್!

ಇಲ್ಲಿನ ಕೆಲವೊಂದು ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಸಿಲಿಂಡರ್ ಉಳಿಸುವ ಸಲುವಾಗಿ ದೋಸೆ, ಚಹಾ, ಕಾಫಿ ಅಂತಹ ಮೆನುಗಳನ್ನು ಕಡಿತಗೊಳಿಸಿ, ಸೀಮಿತ ಸಂಖ್ಯೆಯ ಆಹಾರವನ್ನು ಮಾತ್ರ ಮಾರಾಟ ಮಾಡಲಾಗುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Diganta Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 34° 23° | ಉಡುಪಿ 31° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 16 ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಪುಟ 4

ಹತೋಟಿಗೆ ಬಂತು ಆತ್ರಾಡಿ ಕಿಂಡಿ ಅಣೆಕಟ್ಟೆ ನೀರು ಸೋರಿಕೆ

ಪುಟ 5

ಬೇಸಿಗೆ ಕಾಲದ ಆರಂಭದಲ್ಲೇ ಎದುರಾಗಿದೆ ನೀರಿನ ಸಮಸ್ಯೆ!

ಮಾಣಿ ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಕಾರು





ಪುತ್ತೂರು ಕಡೆಯಿಂದ ಸುಳ್ಯಕ್ಕೆ ಬರುತ್ತಿದ್ದ ಕಾರು ಮಾಣಿ ಮೈಸೂರು ರಾಷ್ಟ್ರೀಯ ಹೆದ್ದಾರಿಯ ಬೋಳುಬೈಲು ಎಂಬಲ್ಲಿ ಭಾನುವಾರ ಪಲ್ಟಿಯಾಗಿದ್ದು, ಕಾರಿನಲ್ಲಿದ್ದ ಪುಟ್ಟ ಮಗು ಸೇರಿದಂತೆ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ. ಗಾಯಾಳುಗಳನ್ನು ಸ್ಥಳೀಯರು ಹಾಗೂ ಆ್ಯಂಬುಲೆನ್ಸ್ ಚಾಲಕರ ಸಹಕಾರದಿಂದ ಆಸ್ಪತ್ರೆಗೆ ದಾಖಲಿಸಲಾಯಿತು.

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಮತ್ತಷ್ಟು ತೀವ್ರಗೊಂಡ ಸೆಕೆ: ಎಲ್ಲೆಡೆ ಮಳೆ ನಿರೀಕ್ಷೆ

ಮಂಗಳೂರು: ಕರಾವಳಿ ಭಾಗದಲ್ಲಿ ಭಾನುವಾರ ತಾಪಮಾನ ಮತ್ತಷ್ಟು ಏರಿಕೆಯಾಗಿದೆ. ಬಿಸಿ ಹಾಗೂ ಆರ್ದ್ರ ವಾತಾವರಣ ಎಲ್ಲೆಡೆ ಕಂಡುಬರುತ್ತಿದ್ದು, ಜನತೆ ಬೇಸಗೆ ಮಳೆಯ ನಿರೀಕ್ಷೆಯಲ್ಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರ 37 ಡಿಗ್ರಿ ಸೆಲ್ಸಿಯೆಸ್ ಗರಿಷ್ಠ ತಾಪಮಾನ ದಾಖಲಾಗಿದ್ದು, ಉಡುಪಿಯಲ್ಲಿ 33, ಕಾಸರಗೋಡಿನಲ್ಲಿ 32 ಡಿಗ್ರಿ ಸೆಲ್ಸಿಯೆಸ್ ಗರಿಷ್ಠ ತಾಪಮಾನ ಕಂಡುಬಂದಿದೆ. ಸೆಕೆಯ ಅನುಭವ ಮಾತ್ರ 40 ಡಿಗ್ರಿ ಸೆಲ್ಸಿಯೆಸ್‌ನಷ್ಟು ತೀವ್ರವಾಗಿದೆ.

ಮುಂದಿನ ಐದು ದಿನಗಳ ಕಾಲ ದಕ್ಷಿಣ ಕನ್ನಡದ ಕೆಲವೆಡೆ ಮಳೆ?

ಮಂಗಳೂರು: ಸುಡು ಬಿಸಿಲಿನಿಂದ ಬಳಲಿ ಬೆಂಡಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಜನತೆಗೆ ಹವಾಮಾನ ಇಲಾಖೆ ಸಿಹಿ ಸುದ್ದಿ ನೀಡಿದ್ದು, ಇಂದಿನಿಂದ ಮುಂದಿನ ಐದು ದಿನಗಳ ಕಾಲ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಿದೆ. ಶನಿವಾರವಷ್ಟೇ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶಗಳಾದ ಸುಬ್ರಹ್ಮಣ್ಯ, ಬೆಳ್ತಂಗಡಿ ಭಾಗದಲ್ಲಿ ತುಂತುರು ಮಳೆಯಾಗಿದ್ದು, ಉಡುಪಿ ಜಿಲ್ಲೆಯ ಕಾರ್ಕಳದಲ್ಲಿಯೂ ಮಳೆಯಾಗಿತ್ತು.

ಗ್ಯಾಸ್ ಅಭಾವ ನೆಪದಲ್ಲಿ ಸೈಬರ್ ವಂಚನೆ ಸಾಧ್ಯತೆ: ಪೊಲೀಸರಿಂದ ಎಚ್ಚರಿಕೆ

ಮಂಗಳೂರು: ಕಳೆದ ಕೆಲವು ದಿನಗಳಿಂದ ಕಾಡುತ್ತಿರುವ ವಾಣಿಜ್ಯ ಬಳಕೆಯ ಅನಿಲ ಅಭಾವದ ಸಂದರ್ಭ ಇದನ್ನೇ ನೆಪವಾಗಿಟ್ಟುಕೊಂಡು ಸೈಬರ್ ವಂಚಕರು ತಮ್ಮ 'ಜಾಲ' ಬೀಸುವ ಸಾಧ್ಯತೆಯಿದೆ ಎಂದು ಪೊಲೀಸ್ ಇಲಾಖೆ ಎಚ್ಚರಿಸಿದೆ.
ಈ ವಂಚಕರು ಕಂಪನಿಗಳ ಅಸಲಿ ಲಿಂಕ್‌ಗಳಂತೆಯೇ ಕಾಣುವ ನಕಲಿ ಬುಕ್ಕಿಂಗ್ ವೆಬ್‌ಸೈಟ್‌ಗಳ ಲಿಂಕ್‌ಗಳ ಮೂಲಕ ವಂಚಿಸುವ ಸಾಧ್ಯತೆಯಿದ್ದು, ನಾಗರಿಕರು ಎಚ್ಚರಿಕೆಯಿಂದ ಇರುವಂತೆ ಸೂಚಿಸಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ಮತ್ತಷ್ಟು ಹೊಟೇಲ್‌ಗಳು ಬಂದ್

ಕಾಸರಗೋಡು: ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ತೀವ್ರ ಸಂಕಷ್ಟದಿಂದ ಹೊಟೇಲ್‌ಗಳು ಒಂದೊಂದಾಗಿ ಮುಚ್ಚುಗಡೆಯಾಗುತ್ತಿದೆ. ಕೇರಳ ರಾಜ್ಯದಲ್ಲಿ ಈಗಾಗಲೇ ಶೇ.40 ಹೊಟೇಲ್ ಬಂದ್ ಆಗಿವೆ.

ಇನ್ನಷ್ಟು ಸುರಕ್ಷತೆಯತ್ತ ಪಾಲಕ್ಕಾಡ್ ಚಿತ್ತ

ರೈಲಿಗೆ AI ನಿಗಾ!

ಬೋಗಿ ಮೇಲೆ ಕಣ್ಣು | ಸ್ವಚ್ಛತೆಗೂ ಸಾಥ್

ಕಾಸರಗೋಡು: ಹಳಿ, ರೈಲ್ವೆ ಬೋಗಿಗಳ ಮೇಲೆ ನಿಗಾ, ಪ್ರಯಾಣಿಕರ ಸುರಕ್ಷತೆಗೆ ಎಐ (ಕೃತಕ ಬುದ್ಧಿಮತ್ತೆ) ನೆರವುಗಳನ್ನು ಪಡೆಯಲು ರೈಲ್ವೆ ಸಜ್ಜಾಗಿದೆ.

ಶೀಘ್ರ ಡ್ರೋನ್, ಎಐ ಟೆಕ್ನಾಲಜಿ
ಮಂಗಳೂರು, ಕಾಸರಗೋಡು, ಕಣ್ಣೂರು ಸಹಿತ ಪಾಲಕ್ಕಾಡು ವಿಭಾಗದಲ್ಲಿ ಶೀಘ್ರವೇ ಎಐ, ಡ್ರೋನ್ ಮೊದಲಾದ ಹೈಟೆಕ್ ತಂತ್ರಜ್ಞಾನ ಬಳಕೆಯಾಗಲಿದೆ. ಮದ್ರಾಸ್ ಐಐಟಿ ಸಂಸ್ಥೆಯ ಸಹಕಾರದೊಂದಿಗೆ ಡ್ರೋನ್ ಆಧರಿತ ವೈಮಾನಿಕ ವೀಕ್ಷಣೆ ನಡೆಸಲು ಯೋಜನೆ ರೂಪಿಸಲಾಗಿದ್ದು, ಎಐ ತಂತ್ರಜ್ಞಾನದೊಂದಿಗೆ ಡ್ರೋನ್ ಬಳಸಿಕೊಂಡು ರೈಲು ಬೋಗಿಗಳನ್ನು ಶುಚಿಗೊಳಿಸುವ ಪರೀಕ್ಷೆಯನ್ನು ಕೂಡಾ ಇಲಾಖೆ ಈಗಾಗಲೇ ನಡೆಸಿದೆ.

ಪಾಲಕ್ಕಾಡುವಿಗೂ ವಿಸ್ತರಣೆ
ರಾಯ್‌ಪುರ್ ವಿಭಾಗದಲ್ಲಿ ಈಗಾಗಲೇ ಥರ್ಮಲ್ ಇಮೇಜಿಂಗ್ ಉಪಯೋಗಿಸಿ ಡ್ರೋನ್ ಕಣ್ಗಾವಲು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಈ ಯೋಜನೆಯನ್ನು ಪಾಲಕ್ಕಾಡು ವಿಭಾಗದಲ್ಲೂ ಅನುಷ್ಠಾನಕ್ಕೆ ತರಲು ಇಲಾಖೆ ತೀರ್ಮಾನಿಸಿದೆ.



ಹೇಗಿರಲಿದೆ ಇಲ್ಲಿ ಡ್ರೋನ್ ಕಣ್ಗಾವಲು?
ರೈಲುಗಾಡಿಗಳ ಮೇಲ್ಭಾಗದಲ್ಲಿ ಸಮರ್ಪಕ ಉಪಕರಣಗಳನ್ನು ಅಳವಡಿಸಿ ಡ್ರೋನ್ ವೀಕ್ಷಣೆಯ ಮೂಲಕ ಪ್ರಯಾಣಿಕರ ಮತ್ತು ರೈಲಿನ ಮೇಲೆ ತೀವ್ರ ನಿಗಾ ಇರಿಸಲು ಈ ಯೋಜನೆ ನೆರವಾಗಲಿದೆ.

ಅತಿಕ್ರಮಣ ತಡೆಗೆ ಇದು ಸಾಥ್ ನೀಡಲಿದೆ
ಪಾಲಕ್ಕಾಡು ವ್ಯಾಪ್ತಿಯಲ್ಲಿ ರೈಲ್ವೆ ಭೂಮಿ ಅತಿಕ್ರಮಣ ತಿಳಿಯಲು ಹಾಗೂ ನಿಯಂತ್ರಿಸಲು ಡ್ರೋನ್‌ಗಳು, ಎಐ ಸಾಫ್ಟ್‌ವೇರ್ ಮತ್ತಿತರ ಅತ್ಯಾಧುನಿಕ ಮಾದರಿಯ ತಂತ್ರಜ್ಞಾನಗಳು ರೈಲ್ವೆ ಇಲಾಖೆಗೆ ಬಹಳಷ್ಟು ನೆರವಾಗಲಿದೆ.

ಲೋಕೋ ಪೈಲಟ್ ಕೆಲಸ ಇನ್ನೂ ಸಲೀಸು
ಮೋಡ, ಮಳೆ, ಬಿಸಿಲು, ಚಳಿ ಸಹಿತ ಹವಾಮಾನ ಮಾಹಿತಿ ಪಡೆಯುವುದಕ್ಕಾಗಿ ಲೋಕೋ ಪೈಲಟ್‌ಗಳಿಗೆ ನೂತನ ತಂತ್ರಜ್ಞಾನ ನೆರವಾಗಲಿದೆ.

ಚಲಿಸುತ್ತಿರುವ ವೇಳೆ ನಿಗಾ ಇರಿಸಲು ಸಾಧ್ಯ
ಸಂಚರಿಸುತ್ತಿರುವ ರೈಲುಗಾಡಿಗಳಲ್ಲಿ ನೇತಾಡುವ, ಕಳಚುವ, ಕಳೆದು ಹೋಗುವ ಸಾಮಗ್ರಿ ಪತ್ತೆಹಚ್ಚಲು ಎಐ ನೆರವಾಗಲಿದೆ.

ಅಸ್ಸಾಂನಲ್ಲಿ ಪರೀಕ್ಷೆ ಯಶಸ್ವಿಯಾಗಿದೆ
ಅಸ್ಸಾಂ ರಾಜ್ಯದ ಕಾಮಾಖ್ಯಾ ರೈಲು ನಿಲ್ದಾಣದಲ್ಲಿ ಈಶಾನ್ಯ ಗಡಿ ರೈಲ್ವೆಯು ಡ್ರೋನ್ ಪರೀಕ್ಷೆ ಯಶಸ್ವಿಯಾಗಿದೆ.

ಸುಳ್ಯದಲ್ಲಿ ಗುಡುಗು, ಮಿಂಚು

ಕುಕ್ಕೆ ಸುತ್ತಮುತ್ತ ಎರಡನೇ ಮಳೆ!

ಮಂಗಳೂರಲ್ಲಿ ಧಗಧಗ ಬಿಸಿಲು

ಸುಳ್ಯ: ಕುಕ್ಕೆಸುಬ್ರಹ್ಮಣ್ಯ ಹಾಗೂ ಆಸುಪಾಸಿನಲ್ಲಿ ಭಾನುವಾರ ಸಂಜೆ ಮತ್ತೆ ಮಳೆಯಾಗಿದೆ.
ಶನಿವಾರ ಸಂಜೆಯ ಬಳಿಕ ತುಂತುರು ಮಳೆಯಾಗಿದ್ದ ಈ ಪ್ರದೇಶದಲ್ಲಿ ಭಾನುವಾರ ಸಂಜೆಯ ಬಳಿಕ ಮತ್ತೆ ಎರಡನೇ ಬಾರಿಗೆ ಮಳೆಯಾಗಿದ್ದು, ಇಳೆಗೆ ತುಸು ತಂಪೆರೆದಿದೆ.

ಎಲ್ಲೆಲ್ಲಿ ಬಿದ್ದಿತು ವರ್ಷಧಾರೆ?
ಸುಬ್ರಹ್ಮಣ್ಯ, ಪಂಜ, ಗುತ್ತಿಗಾರು, ಕರಿಕ್ಕಳ ಸೇರಿದಂತೆ ಇತರೆ ಭಾಗದಲ್ಲಿ ಭಾನುವಾರ ಸಂಜೆ ವೇಳೆಯಲ್ಲಿ ಮಳೆಯಾಗಿದೆ.
ಇತ್ತ ಪಕ್ಕದ ಸುಳ್ಯ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿದ್ದು, ಜೊತೆಗೆ ಮಿಂಚು, ಸಿಡಿಲು ಶಬ್ದ ಕೇಳಿಸಿತಾದರೂ ಮಳೆ ನಿರೀಕ್ಷೆಗೆ ಸೀಮಿತವಾಯಿತು.

45 ಡಿಗ್ರಿ ಸೆಲ್ಸಿಯೆಸ್ ಅನುಭವ!
ಮಂಗಳೂರು ನಗರದಲ್ಲಿ ಭಾನುವಾರ ಬಿಸಿಲ ಧಗೆ ನಾಗರಿಕರನ್ನು ಅಕ್ಷರಶಃ ಹೈರಾಣಾಗಿಸಿತ್ತು. ಗರಿಷ್ಠ 37 ಡಿಗ್ರಿ ಸೆಲ್ಸಿಯೆಸ್ ಉಷ್ಣಾಂಶ ಇತ್ತಾದರೂ 45 ಡಿಗ್ರಿ ಸೆಲ್ಸಿಯೆಸ್ ಉಷ್ಣಾಂಶದ ಅನುಭವ ನೀಡುತ್ತಿತ್ತು. ಗ್ರಾಮೀಣ ಭಾಗಗಳಲ್ಲಿ ಈಗಾಗಲೇ ಜಲಮೂಲಗಳು ರಣಬಿಸಿಲಿಗೆ ಬತ್ತಲಾರಂಭಿಸಿ ಹೊಸ ಚಿಂತೆ ಮೂಡಿಸಿದೆ.


ಬಾ ಮಳೆಯೇ ಬಾ!

ತುಸು ನೆಮ್ಮದಿ ಮೂಡಿಸಿದೆ ಈಗ ಹವಾಮಾನ ಭವಿಷ್ಯ
ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕೆಲವು ಭಾಗದಲ್ಲಿ ಇಂದಿನಿಂದ ಮಾ. 19ರ ವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಭವಿಷ್ಯ ನುಡಿದಿದ್ದು, ನಾಗರಿಕರಲ್ಲಿ ತುಸು ನೆಮ್ಮದಿ ಮೂಡಿಸಿದೆ.

ವಾಣಿಜ್ಯ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯ | ಸಂಕಷ್ಟದಲ್ಲಿವೆ ಫುಡ್ ಸ್ಟಾಲ್‌ಗಳು

ಬೀಚ್ ಪ್ರವಾಸಿಗರಿಗೆ ಗ್ಯಾಸ್ ಟ್ರಬಲ್ ಚಿಂತೆ

ಪಣಂಬೂರು: ಬೀಚ್ ಪ್ರವಾಸಿಗರನ್ನೇ ನಂಬಿ ಫುಡ್ ಸ್ಟಾಲ್ ನಡೆಸುತ್ತಿರುವ ವ್ಯಾಪಾರಿಗಳಿಗೆ ಕೂಡಾ ಈಗ ವಾಣಿಜ್ಯ ಗ್ಯಾಸ್ ಪೂರೈಕೆ ಸಮಸ್ಯೆಯ ಬಿಸಿ ತಟ್ಟುವ ಆತಂಕ ಎದುರಾಗುತ್ತಿದೆ.

ಬಾಗಿಲೆಳೆಯಲಿದೆ ಫುಡ್‌ಸ್ಟಾಲ್
ಸರಕಾರ ವಾಣಿಜ್ಯ ಗ್ಯಾಸ್ ಸಿಲಿಂಡರ್ ವಿತರಣೆ ವಿಚಾರದಲ್ಲಿ ಪ್ರಮುಖ ಕ್ಷೇತ್ರ ಆಯ್ದುಕೊಂಡು ಸೂಚನೆ ನೀಡಿದ್ದು ಇದುವರೆಗೆ ಹೋಟೆಲ್ ಉದ್ಯಮ ಸೇರಿದಂತೆ ಅಗತ್ಯವಲ್ಲದ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡದೆ ಇರುವುದರಿಂದ ಕ್ಯಾಂಟೀನ್ ಫುಡ್‌ಸ್ಟಾಲ್, ಹೋಟೆಲ್ ಹೆಚ್ಚು ದಿನ ನಡೆಯುವುದು ಅನುಮಾನ. ಬೀಚ್ ಸೈಡ್‌ನಲ್ಲಿ ಹೆಚ್ಚಾಗಿ ಪ್ರವಾಸಿಗರು ಬರುವುದರಿಂದ ಸ್ಥಳೀಯ ಆಹಾರ ಮಳಿಗೆಗೆ ಇವರೇ ಆದಾಯದ ಮೂಲ. ಹೀಗಾಗಿ ಗ್ಯಾಸ್ ದೊರಕದೇ ಹೋದಲ್ಲಿ ಮಳಿಗೆ ಮುಚ್ಚುವ ಅನಿವಾರ್ಯತೆಗೆ ಸಿಲುಕಿದ್ದಾರೆ. ಪ್ರವಾಸಿಗರಿಗೆ ತಮ್ಮ ಇಷ್ಟದ ಆಹಾರ ಲಭಿಸದೆ ನಿರಾಶೆಯಾಗಲಿದೆ.



- ಸಂಕಷ್ಟದಲ್ಲಿವೆ ಪಣಂಬೂರು ಬೀಚ್ ಫುಡ್‌ಸ್ಟಾಲ್‌ಗಳು
- ಮುಂದೇನು ಎಂಬ ಚಿಂತೆ
- ಅತಂತ್ರ ಸ್ಥಿತಿಯಲ್ಲಿ ಈಗ ಗ್ಯಾಸ್ ಸಿಲಿಂಡರ್ ಪೂರೈಕೆ

ಕಟ್ಟಿಗೆಯ ಒಲೆಯತ್ತ ಗ್ರಾಮೀಣ ಹೊಟೇಲ್
ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆ ವ್ಯತ್ಯಯದಿದಾಗಿ ಗ್ರಾಮೀಣ ಭಾಗದ ಹೊಟೇಲ್‌ಗಳು ಕಟ್ಟಿಗೆ ಒಲೆಗಳತ್ತ ಮುಖ ಮಾಡುತ್ತಿದ್ದು, ಹೊರಗೆ ಅಡುಗೆ ಮಾಡಿಕೊಳ್ಳಲು ತಾತ್ಕಾಲಿಕ ಸೌದೆ ಒಲೆ ವ್ಯವಸ್ಥೆ ಮಾಡಿಕೊಂಡಿವೆ. ನಗರ ಪ್ರದೇಶ ದಲ್ಲಿ ಮಾತ್ರ ಹೊಟೇಲ್ ಮಾಲೀಕರು ಹಳೆ ಪದ್ಧತಿಗೆ ಮರಳಲೂ ಆಗದೆ ಹೊಸ ಪದ್ಧತಿಯಲ್ಲಿ ನಡೆಸಲೂ ಆಗದೆ ಚಿಂತಿತರಾಗಿದ್ದಾರೆ.

ನಿಯಂತ್ರಣ ತಪ್ಪಿ ಹೊಂಡಕ್ಕೆ ಬಿದ್ದ ಜೀಪು



ಉಪ್ಪಿನಂಗಡಿ ಸಮೀಪದ ಕೆಮ್ಮಾರ ಎಂಬಲ್ಲಿ ಭಾನುವಾರ ಮಧ್ಯಾಹ್ನ ಜೀಪೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ರಸ್ತೆ ಬದಿಯ ಹೊಂಡಕ್ಕೆ ಬಿದ್ದಿದ್ದು, ಸ್ಥಳೀಯ ಯುವಕರ ಸಮಯೋಜಿತ ಸಹಾಯದಿಂದ ಜೀಪ್ ಒಳಗಡೆ ಸಿಲುಕಿಕೊಂಡಿದ್ದ ವ್ಯಕ್ತಿಯನ್ನು ರಕ್ಷಿಸಲಾಗಿದೆ.

ಆಳ ಸಮುದ್ರಕ್ಕೆ ತೆರಳುವ ಕಡಲಮಕ್ಕಳಿಗೆ ಈಗ ಕಾಡುತ್ತಿದೆ ಎಲ್‌ಪಿಜಿ ಕೊರತೆ

ಮೀನುಗಾರಿಕೆಗೂ ಕೊಲ್ಲಿ ಯುದ್ಧದ ಬಿಸಿ!

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ನಂಬಿದ ಸಾವಿರಾರು ಮೀನುಗಾರರು ಈಗ ಹೊಸ ಸಂಕಷ್ಟದಲ್ಲಿದ್ದಾರೆ.
ಕೊಲ್ಲಿ ಯುದ್ಧದ ಬಿಸಿ ಇವರಿಗೂ ತಟ್ಟಿದ್ದು, ಆಳ ಸಮುದ್ರ ಮೀನುಗಾರಿಕೆಗಾಗಿ ತೆರಳುವ ಸಂದರ್ಭ ಬೋಟ್‌ಗಳಲ್ಲಿ ಅಡುಗೆ ಹಾಗೂ ಇತರ ಅವಶ್ಯಕತೆಗೆ ಬಳಸುವ ಎಲ್ಪಿಜಿ ಸಿಲಿಂಡರ್ ಕೊರತೆ ಇವರನ್ನು ತೀವ್ರವಾಗಿ ಕಾಡುತ್ತಿದೆ.

ಸಮುದ್ರದಲ್ಲಿ ಉಳಿಯುವಂತಿಲ್ಲ
ಎಲ್ಪಿಜಿ ಪೂರೈಕೆ ವ್ಯತ್ಯಯದಿಂದ ಸಿಲಿಂಡರ್ ಇಲ್ಲದೆ ಮೀನುಗಾರರು ಈಗ ದೀರ್ಘಕಾಲ ಸಮುದ್ರದಲ್ಲಿ ಉಳಿದು ಮೀನುಗಾರಿಕೆಯನ್ನು ನಡೆಸುವ ಪರಿಸ್ಥಿತಿ ಇಲ್ಲ. ಹೀಗಾಗಿ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಪ್ರದೇಶಗಳಲ್ಲಿ ಮೀನುಗಾರಿಕೆ ಚಟುವಟಿಕೆಗಳು ನಿಧಾನವಾಗಿ ಕುಂಠಿತಗೊಂಡಿವೆ. ಬೋಟ್‌ಗಳಲ್ಲಿ ಆಹಾರ ತಯಾರಿಸಲು ಸಾಧ್ಯವಾಗದ ಕಾರಣ ಹಲವು ಮೀನುಗಾರರು ಈಗ ಮೀನುಗಾರಿಕೆಗೆ ತೆರಳುವುದನ್ನೇ ಸ್ಥಗಿತಗೊಳಿಸುತ್ತಿದ್ದಾರೆ.



- ಮೀನುಗಾರರಿಗೆ ಕಾಡಿದೆ ಎಲ್ಪಿಜಿ ಸಿಲಿಂಡರ್ ಕೊರತೆ
- ಸಂಕಷ್ಟಸ್ಥಿತಿಯಲ್ಲಿದ್ದಾರೆ ಆಳ ಸಮುದ್ರ ಮೀನುಗಾರರು
- ಮತ್ತೊಮ್ಮೆ ಉದ್ಯಮಕ್ಕೂ ತಟ್ಟುತ್ತಿದೆ ಪಶ್ಚಿಮ ಏಷ್ಯಾ ಪ್ರದೇಶದ ಕೊಲ್ಲಿ ಯುದ್ಧ

ಎಲ್‌ಪಿಜಿ ಪೂರೈಸಲು ಮನವಿ
ಸ್ಥಳೀಯ ಮೀನುಗಾರರ ಸಂಘಟನೆಗಳು ಈ ಸಮಸ್ಯೆ ಸರ್ಕಾರದ ಗಮನಕ್ಕೆ ತಂದಿವೆ. ತಕ್ಷಣ ವಿಶೇಷ ಕೋಟಾದಡಿ ಎಲ್ಪಿಜಿ ಪೂರೈಕೆಯನ್ನು ಮಾಡುವಂತೆ ಅವರು ಒತ್ತಾಯಿಸಿದ್ದಾರೆ.

ದಾರಿ ಮಧ್ಯದಲ್ಲೇ ಮರಳಬೇಕಾದ ಪರಿಸ್ಥಿತಿ
ಆಳ ಸಮುದ್ರ ಮೀನುಗಾರಿಕೆಗೆ ತೆರಳು ಮೀನುಗಾರರು ವಾರಗಟ್ಟಲೆ ಸಮುದ್ರದಲ್ಲಿ ಉಳಿದು ಮೀನುಗಾರಿಕೆ ನಡೆಸುತ್ತಾರೆ. ಈ ಅವಧಿಯಲ್ಲಿ ಅಡುಗೆ ಮಾಡಲು ಎಲ್‌ಪಿಜಿ ಅನಿವಾರ್ಯ. ಆದರೆ ಇತ್ತೀಚೆಗೆ ಸಿಲಿಂಡರ್‌ಗಳ ಪೂರೈಕೆ ಕಡಿಮೆಯಾದ ಹಿನ್ನೆಲೆಯಲ್ಲಿ ಬೋಟ್‌ಗಳಲ್ಲಿ ಅಗತ್ಯ ಪ್ರಮಾಣದ ಎಲ್‌ಪಿಜಿ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ, ಇದರಿಂದಾಗಿ ಕೆಲವರು ಮಧ್ಯದಲ್ಲೇ ಮರಳಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಇಂಡಕ್ಷನ್ ಕುಕ್‌ಟಾಪ್‌ಗಳಿಗೆ ಎಲ್ಲೆಡೆ ರಾಜಯೋಗ: ಸ್ಟಾಕ್ ಕ್ಷಣದಲ್ಲಿ ಖಾಲಿ!

ಗ್ಯಾಸ್ ಸಮಸ್ಯೆ ಪರಿಹಾರಕ್ಕೆ ಪರ್ಯಾಯ ಹಾದಿ ಶೋಧ

ಮಂಗಳೂರು: ಎಲ್ಲೆಡೆ ತೀವ್ರಗೊಂಡಿರುವ ಎಲ್‌ಪಿಜಿ ಪೂರೈಕೆ ವ್ಯತ್ಯಯ ಪರಿಹಾರಕ್ಕಾಗಿ ನಾಗರಿಕರು ಈಗ ಪರ್ಯಾಯ ದಾರಿಯ ಹುಡುಕಾಟ ಆರಂಭಿಸಿದ್ದಾರೆ.

ಬಿಸಿ ದೋಸೆಯಂತೆ ಮಾರಾಟ
ಗ್ರಾಮೀಣ ಭಾಗದ ಜನತೆ ಕಟ್ಟಿಗೆ ಮೊರೆ ಹೋಗುತ್ತಿದ್ದರೆ ಇತ್ತ ನಗರವಾಸಿಗಳು ಈಗ ವಿದ್ಯುತ್ ಚಾಲಿತ ಇಂಡಕ್ಷನ್ ಕುಕ್‌ಟಾಪ್ ಖರೀದಿಗೆ ಮುಗಿಬೀಳುತ್ತಿದ್ದಾರೆ. ಇಂಡಕ್ಷನ್‌ಗಳಿಗೆ ಈಗ ಏಕಾಏಕಿ ಬೇಡಿಕೆ ಹೆಚ್ಚುತ್ತಿದ್ದು, ಮಂಗಳೂರು ನಗರದ ಹಲವು ಮಳಿಗೆಗಳಲ್ಲಿ ಸ್ಟಾಕ್ ಖಾಲಿಯಾಗಿದೆ. ಸ್ಟಾಕ್ ಬಂದ ತಕ್ಷಣ ಬಿಸಿ ದೋಸೆಯಂತೆ ಮಾರಾಟವಾಗುತ್ತಿದೆ. ಕಳೆದ ನಾಲ್ಕಾರು ದಿನಗಳಿಂದ ಈ ಬೆಳವಣಿಗೆ ಕಾಣಿಸಿಕೊಂಡಿದೆ ಎಂದು ಮಳಿಗೆಯೊಂದರ ಮಾಲಕರು ಮಾಹಿತಿ ನೀಡಿದ್ದಾರೆ.



ಒಲವು ತೋರಿಸದ ಕ್ಯಾಂಟೀನ್‌ಗಳು
ವಾಣಿಜ್ಯ ಎಲ್‌ಪಿಜಿ ಕೊರತೆ ಎದುರಿಸುತ್ತಿದ್ದರೂ ನಗರದ ಸಣ್ಣಪುಟ್ಟ ಕ್ಯಾಂಟೀನ್‌ಗಳು ಮಾತ್ರ ಇಂಡಕ್ಷನ್ ಕುಕ್‌ಟಾಪ್ ಬಳಕೆ ಕಡೆಗೆ ಒಲವು ತೋರಿಸಿಲ್ಲ. ವ್ಯಾಪಾರದಲ್ಲಿ ಬಂದ ಲಾಭಾಂಶವೆಲ್ಲ ವಿದ್ಯುತ್ ಬಿಲ್ ಕಟ್ಟಲು ತೆರಬೇಕಾದೀತು ಎಂಬ ಆತಂಕ ಅವರದ್ದಾಗಿದೆ.

ಸಮುದಾಯಕ್ಕಿದೆ ಪರಂಪರೆ ರಕ್ಷಣೆಯ ಹೊಣೆ: ಡಾ.ಮೋಹನ ಆಳ್ವ 2
ದಾನಿಗಳು, ಸಮಿತಿ ಸದಸ್ಯರು, ಕಾರ್ಯಕರ್ತರ ಕೊಡುಗೆ ಅನನ್ಯ 3
ಉತ್ತಮ ಸಮಾಜ ನಿರ್ಮಾಣಕ್ಕೆ ಜಾತಿ, ಧರ್ಮ ಮೀರಿ ಕೈ ಜೋಡಿಸೋಣ 4
ಉಡುಪಿ ವಿಶಕರ್ಮ ಬ್ಯಾಂಕಿನ ಶಾಖೆಯಿಂದ 'ಸ್ವಚ್ಛತಾ ಹೀ ಸೇವಾ' 6

ಸುತ್ತಮುತ್ತ

ಪತ್ರಕರ್ತೆ ಉಮಾ ಅನಂತ್ ಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ

ಬೆಳ್ತಂಗಡಿ: ತಾಲೂಕಿನ ವೇಣೂರು ಮೂಲದ, ಉಜಿರೆ ಎಸ್.ಡಿ.ಎಂ. ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಉಮಾ ಅನಂತ ಅವರು ಕರ್ನಾಟಕ ಮಾಧ್ಯಮ ಅಕಾಡೆಮಿ ಕೊಡಮಾಡುವ 2025 ರ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಿದ್ದಾಪುರ ತಾಲ್ಲೂಕು ಹೆಗ್ಗಾರದ ಹಿಂದೂಸ್ತಾನಿ ಗಾಯಕ ಪಂ. ಹೆಗ್ಗಾರ ಅನಂತ ಹೆಗಡೆ ಅವರ ಪತ್ನಿ, ಪ್ರಜಾವಾಣಿ ಮುಖ್ಯ ಉಪಸಂಪಾದಕಿ ಯಾಗಿರುವ ಇವರಿಗೆ ಪ್ರಶಸ್ತಿಯನ್ನು ಮುಖ್ಯಮಂತ್ರಿ ಎಸ್. ಸಿದ್ದರಾಮಯ್ಯ ಅವರು ಶುಕ್ರವಾರ (ಮಾ. 13) ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರದಾನ ಮಾಡಿದರು.

ರಮ್ಜಾನ್ ಪ್ರಯುಕ್ತ ಶಾಂತಿ ಸಭೆ

ಬೆಳ್ತಂಗಡಿ: ರಮ್ಜಾನ್ ಹಬ್ಬದ ಪ್ರಯುಕ್ತ ಶಾಂತಿ ಸಭೆಯನ್ನು ವೇಣೂರು ಆರಕ್ಷಕ ಠಾಣ ಉಪನಿರೀಕ್ಷಕ ಶ್‌ರೀ ಅಕ್ಷಯ ಡವಗಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ವೇಣೂರು ಠಾಣಾ ವ್ಯಾಪ್ತಿಯ ಮಸೀದಿ ಆಡಳಿತ ಸಮಿತಿ ಮತ್ತು ಸಂಘ ಸಂಸ್ಥೆಗಳ ಪದಾಧಿಕಾರಿಗನ್ನುದ್ದೇಶಿಸಿ ಮಾತಾಡಿದ ಠಾಣಾಧಿ ಕಾರಿ ಅವರು ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸಿ ಶಾಂತಿ ಸೌಹಾರ್ದತೆಯಿಂದ ಹಬ್ಬವನ್ನು ಆಚರಿಸುವಂತೆ ವಿನಂತಿಸಿದರು.ನಮ್ಮ ಠಾಣಾ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಅತ್ಯಂತ ಶಾಂತಿಯಿಂದ ಹಬ್ಬ ಹರಿದಿನಗಳ ಆಚರಣೆಯ ಇತಿಹಾಸವಿದ್ದರೂ ಮುಂಜಾಗ್ರತಾ ಕ್ರಮವಾಗಿ ಈ ಸಭೆಯನ್ನು ಕರೆಯಲಾಗಿದೆ ಎಂದು ಹಬ್ಬಕ್ಕೆ ಶುಭ ಹಾರೈಸಿದರು. ಎಎಸ್‌ಐ ವೆಂಕಟೇಶ್ ಮತ್ತು ಸಿಬಂದಿ ವರ್ಗ, ಎಚ್ ಮಹಮ್ಮದ್ ವೇಣೂರು, ಪಡ್ಡಂದಡ್ಕ ಮಸೀದಿ ಆಡಳಿತ ಸಮಿತಿ ಅಧ್ಯಕ್ಷ ಇಸ್ಮಾಯಿಲ್ ಕೆ ಪೆರಿಂಜೆ, ಪೆರಿಂಜೆ ಮದರಸ ಸಮಿತಿ ಅಧ್ಯಕ್ಷ ಅಶ್ರಫ್ ಗಾಂಧಿ ನಗರ, ಪುಲಾಬೆ ಮಸೀದಿ ಆಡಳಿತ ಸಮಿತಿ ಅಧ್ಯಕ್ಷ ಅಲಿಯಬ್ಬಕರಿಮಣೇಲು ಶಾಂತಿ ನಗರ ಮದರಸ ಸಮಿತಿ ಅಧ್ಯಕ್ಷ ಪಿ.ಎಚ್ ಅಶ್ರಫ್ ,ಇಸ್ಮಾಯಿಲ್ ಉಳ್ಳೂರು ಕೆಪಿ ಬಸೀರ್ , ಪುತ್ತುಮೋನು ಕಾಶಿಪಟ್ಣ ಉಪಸ್ಥಿತರಿದ್ದರು.

ಶಾಂತಿನಗರ ಮುತ್ತಪ್ಪ ತಿರುವಪ್ಪ ಕಾಲಾವಧಿ ನೇಮ



ಸುಳ್ಯ: ಶಾಂತಿನಗರ ಶ್ರೀ ಮುತ್ತಪ್ಪ-ತಿರುವಪ್ಪ ದೈವಗಳ ದೈವಸ್ಥಾನದಲ್ಲಿ ಕಾಲಾವ ನೇಮ ಶನಿವಾರ ರಾತ್ರಿ ಹಾಗೂ ಭಾನುವಾರ ಮುಂಜಾನೆ ನಡೆಯಿತು. ಸಂಜೆ ವೈಂಗುತ್ತಿ ಹಾಗೂ ಶ್ರೀ ಮುತ್ತಪ್ಪ ದೈವದ ಮಲೆಯರ್ಕಲ್ ಬಳಿಕ ಸ್ಥಳೀಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನವಾಯಿತು. ರಾತ್ರಿ ಶ್ರೀ ಮುತ್ತಪ್ಪ ದೈವದ, ಕಳಿಕಪಾಟ್, ಕಳಸ ಶೃಂಗಾರ ರುಮಾಲು ಕಟ್ಟುವ ಕಾರ್ಯಕ್ರಮ, ಭಾನುವಾರ ಪ್ರಾತ:ಕಾಲದಲ್ಲಿ ಮುತ್ತಪ್ಪ - ತಿರುವಪ್ಪ ದೈವಗಳ ನೇಮ ನಡೆಯಿತು.

ಕೋಟೆಬಾಗಿಲಿನಲ್ಲಿ ಶನೈಶ್ಚರ ಪೂಜೆ

ಮೂಡುಬಿದಿರೆ: ಕೋಟೆಬಾಗಿಲು ಶ್ರೀ ವೀರಮಾರುತಿ ದೇವಸ್ಥಾನದಲ್ಲಿ ಕೊರಗಟ್ಟೆ ಶಂಕರಾಚಾರ್ಯರ ಪೌರೋಹಿತ್ಯದಲ್ಲಿ ಸಾರ್ವಜನಿಕ ಶ್ರೀ ಶನೈಶ್ಚರ ಪೂಜೆಯು ಇತ್ತೀಚೆಗೆ ಜರಗಿತು. ಮಹಿಳೆಯರಿಂದ ಭಜನಾ ಕಾರ್ಯಕ್ರಮ ಬಳಿಕ ಸಂಜೆ ಕ್ಷೇತ್ರದಲ್ಲಿ ರಂಗಪೂಜೆ ಜರಗಿತು. ದೇವಸ್ಥಾನದ ಪ್ರಧಾನ ಅರ್ಚಕ ಶಿವಪ್ರಸಾದ್ ಭಟ್ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ದೇವಸ್ಥಾನದ ಆಡಳಿತ ಮೊಕ್ತೇಸರ ಶ್ಯಾಮ ಹೆಗ್ಡೆ, ಕಾರ್ಯದರ್ಶಿ ಅನಿಲ್ ಹೆಗ್ಡೆ, ಜಿಲ್ಲಾ ಹೆಗ್ಗಡೆ ಸಮಾಜ ಸಂಘದ ಅಧ್ಯಕ್ಷ ಪ್ರಭಾಕರ ಹೆಗ್ಡೆ, ಕಾರ್ಯದರ್ಶಿ ಶುಭರಾಜ ಹೆಗ್ಡೆ, ಜಿಲ್ಲಾ ಹೆಗ್ಗಡೆ ಮಹಿಳಾ ಘಟಕದ ಅಧ್ಯಕ್ಷೆ ಶೈಲಜಾ ಹೆಗ್ಡೆ, ಕಾರ್ಯದರ್ಶಿ ಲತಾ ಯು. ಹೆಗ್ಡೆ ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.

ಪುತ್ತೂರು ನ್ಯಾಯಾಲಯದಲ್ಲಿ ಲೋಕ ಅದಾಲತ್ | 6,990 ಪ್ರಕರಣಗಳಲ್ಲಿ 539 ರಾಜಿಯಲ್ಲಿ ಇತ್ಯರ್ಥ

2.11 ಕೋಟಿ ರೂಪಾಯಿ ಪರಿಹಾರ ಮೊತ್ತ ನೀಡಲು ಆದೇಶ

ಪುತ್ತೂರು: ಪುತ್ತೂರು ನ್ಯಾಯಾಲಯದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಒಟ್ಟು 6,990 ಪ್ರಕರಣಗಳಲ್ಲಿ 1,273 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಪ್ರಯತ್ನಿಸಲಾಗಿದ್ದು, ಈ ಪೈಕಿ 539 ಪ್ರಕರಣಗಳನ್ನು ರಾಜಿಯಲ್ಲಿ ಇತ್ಯರ್ಥಗೊಳಿಸಿ ಫಲಾನುಭವಿಗಳಿಗೆ ರೂ. 2,11,15,554 ಪರಿಹಾರ ಮೊತ್ತವನ್ನು ನೀಡಲು ಆದೇಶಿಸಲಾಗಿದೆ.

ಬನ್ನೂರು ಆನೆಮಜಲಿನಲ್ಲಿರುವ ನೂತನ ನ್ಯಾಯಾಲಯದಲ್ಲಿ ನಡೆದ ಪ್ರಥಮ ಲೋಕ ಅದಾಲತ್‌ನಲ್ಲಿ ವ್ಯಾಜ್ಯ ಪೂರ್ವ ಮತ್ತು ನ್ಯಾಯಾಲಯದಲ್ಲಿ ಬಾಕಿ ಇರುವ ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸುವ, ಜನನ ಮರಣ ನೋಂದಾವಣೆ, ಚೆಕ್ ಬೌನ್ಸ್, ವಿಮಾ ಹಣದ ಪ್ರಕರಣ, ಬ್ಯಾಂಕ್ ಹಾಗೂ ಇತರ ಕಂಪನಿಗಳೊಂದಿಗೆ ಇರುವ ವ್ಯಾಜ್ಯಗಳಲ್ಲಿ ಕಕ್ಷಿದಾರರು ಒಪ್ಪುವ ರೀತಿಯಲ್ಲಿ ಇತ್ಯರ್ಥ ಮಾಡುವ ಪ್ರಯತ್ನ ನಡೆಯಿತು.



ಪುತ್ತೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧಿಶೆ ಸರಿತಾ ಡಿ. ಅವರ ನ್ಯಾಯಾಲಯದಲ್ಲಿ 28 ಪ್ರಕರಣಗಳಲ್ಲಿ 14 ಇತ್ಯರ್ಥಗೊಂಡಿದ್ದು ರೂ.41,14,450 ಪರಿಹಾರ ವಿತರಣೆಗೆ ಆದೇಶ ಆಗಿದೆ.

ಪುತ್ತೂರು ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶೆ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಪ್ರಕೃತಿ ಕಲ್ಯಾಣಪುರ್ ಅವರ ನ್ಯಾಯಾಲಯದಲ್ಲಿ 230 ಪ್ರಕರಣಗಳಲ್ಲಿ 170 ಇತ್ಯರ್ಥಗೊಂಡಿದ್ದು, ರೂ.43,27,350 ಪರಿಹಾರ ವಿತರಣೆಗೆ ಆದೇಶ ಆಗಿದೆ. ಅವರ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧಿಶ ಮತ್ತು ಜೆಎಂಎಫ್ ಸಿಯೂ ಆಗಿರುವ ದೇವರಾಜ್ ವೈ.ಎಚ್. ಅವರ ನ್ಯಾಯಾಲಯದಲ್ಲಿ 124 ಪ್ರಕರಣಗಳಲ್ಲಿ 99 ಪ್ರಕರಣ ಇತ್ಯರ್ಥಗೊಂಡಿದ್ದು, ರೂ. 21,98,650 ವಿತರಣೆಗೆ ಆದೇಶವಾಗಿದೆ. ಪ್ರಧಾನ ಸಿವಿಲ್ ನ್ಯಾಯಾಲಯ, ಜೆಎಂಎಫ್‌ಸಿ ನ್ಯಾಯಾಧಿಶ ಶಿವಣ್ಣ ಎಚ್.ಆರ್. ಅವರ ನ್ಯಾಯಾಲಯದಲ್ಲಿ 509 ಪ್ರಕರಣಗಳಲ್ಲಿ 79 ಪ್ರಕರಣಗಳು ಇತ್ಯರ್ಥಗೊಂಡಿದ್ದು ರೂ.1,03,60,789 ವಿತರಣೆಗೆ ಆದೇಶವಾಗಿದೆ. ಹೆಚ್ಚುವರಿ ಸಿವಿಲ್ ನ್ಯಾಯಾಂಶ ಮತ್ತು ಜೆಎಂಎಫ್‌ಸಿ ಪ್ರಭಾರ ನ್ಯಾಯಾಶ ಶಿವಣ್ಣ ಎಚ್.ಆರ್. ಅವರು ನಡೆಸಿದ ಅದಾಲತ್‌ನಲ್ಲಿ 236 ಪ್ರಕರಣಗಳಲ್ಲಿ 47 ಇತ್ಯರ್ಥಗೊಂಡಿದ್ದು ರೂ.1,07,265 ವಿತರಣೆಗೆ ಆದೇಶವಾಗಿದೆ. 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಶ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಚಾರ್ಜ್ ಕೂಡಾ ಹೊಂದಿರುವ ಶಿವಣ್ಣ ಎಚ್.ಆರ್ 140 ಪ್ರಕರಣದಲ್ಲಿ 130 ಇತ್ಯರ್ಥಗೊಳಿಸಿ 7,050 ರೂಪಾಯಿ ಪರಿಹಾರ ವಿತರಿಸಲಾಗಿದೆ.

- ಬನ್ನೂರು ಆನೆಮಜಲಿನಲ್ಲಿರುವ ನೂತನ ನ್ಯಾಯಾಲಯದಲ್ಲಿ ನಡೆದ ಪ್ರಥಮ ಲೋಕ ಅದಾಲತ್
- ಒಟ್ಟು 6,990 ಪ್ರಕರಣಗಳಲ್ಲಿ 1,273 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಪ್ರಯತ್ನ
- 539 ಪ್ರಕರಣ ರಾಜಿಯಲ್ಲಿ ಇತ್ಯರ್ಥಗೊಳಿಸಿ ಫಲಾನುಭವಿಗಳಿಗೆ ರೂ. 2,11,15,554 ಪರಿಹಾರ
- ರಾಜಿ ಸಂಧಾನದ ಮೂಲಕ ಇತ್ಯರ್ಥ
- ಜನನ ಮರಣ ನೋಂದಣಿ, ಚೆಕ್ ಬೌನ್ಸ್ ವಿಮಾ ಹಣದ ಪ್ರಕರಣ, ಬ್ಯಾಂಕ್ ಹಾಗೂ ಇತರ ಕಂಪನಿ ವ್ಯಾಜ್ಯಗಳಲ್ಲಿ ಕಕ್ಷಿದಾರರು ಒಪ್ಪುವ ರೀತಿಯಲ್ಲಿ ಇತ್ಯರ್ಥಕ್ಕೆಪ್ರಯತ್ನ

ನ್ಯಾಯವಾದಿಗಳ ಸಹಕಾರ

ಪ್ರಕರಣಗಳ ಇತ್ಯರ್ಥಕ್ಕೆ ಸಂಧಾನಕಾರರಾಗಿ ನ್ಯಾಯವಾದಿಗಳಾದ ರಶ್ಮಿ, ರಮ್ಲತ್ ಬಿ.ವಿ., ಜೀವಿತ್, ರಾಜನಾರಾಯಣ ಮಳಿ ಅವರು ಸಹಕರಿಸಿದರು. ವ್ಯಾಜ್ಯಗಳಲ್ಲಿ ಸಂಧಾನಕಾರ ವಕೀಲರನ್ನು ವಕೀಲರ ಸಂಘದ ಅಧ್ಯಕ್ಷ ಜಿ.ಜಗನ್ನಾಥ ರೈ ನೇಮಕ ಮಾಡಿದ್ದರು.

ಬಂಟರ ಸಂಘ-ಮಹಿಳಾ ಘಟಕದ ಪದಗ್ರಹಣ ಸಮಾರಂಭ | ಡಾ.ಆಳ್ವ ಆಶಯ

ಸಮುದಾಯಕ್ಕಿದೆ ಪರಂಪರೆ ರಕ್ಷಣೆಯ ಹೊಣೆ

ಡಾ.ಎಂ ಮೋಹನ ಆಳ್ವ ಆಶಯ

ಮೂಡುಬಿದಿರೆ: ಸಮುದಾಯದ ಇತಿಹಾಸವನ್ನು ಅರಿತುಕೊಳ್ಳುವುದರ ಜೊತೆಗೆ ಸಾಮೂಹಿಕ ಜವಾಬ್ದಾರಿಯನ್ನು ಮೈಗೂಡಿಸಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ. ಬಂಟ ಸಮುದಾಯಕ್ಕೆ ಸುದೀರ್ಘ, ಭವ್ಯ ಪರಂಪರೆ ಇದೆ. ನಮ್ಮ ಪೂರ್ವಜರು ಶಿಸ್ತುಬದ್ಧ ಜೀವನ ಪದ್ಧತಿಯನ್ನು ರೂಪಿಸಿ ಸಮುದಾಯಕ್ಕೆ ವಿಶಿಷ್ಟ ಶಕ್ತಿಯನ್ನು ನೀಡಿದ್ದು, ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಇಂದಿನ ಪೀಳಿಗೆಯದಾಗಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಹೇಳಿದರು.



ಬಂಟರ ಸಂಘ ಮೂಡುಬಿದಿರೆ ಇದರ ಮಹಿಳಾ ಘಟಕದ ನೂತನ ಪದಾಧಿ ಕಾರಿಗಳ ಪದಗ್ರಹಣ ಸಮಾರಂಭವನ್ನು ಭಾನುವಾರ ಹೋಟೆಲ್ ಪಂಚರತ್ನ ಇಂಟರ್‌ನ್ಯಾಷನಲ್ ಸಭಾಂಗಣದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಬಂಟರ ಸಂಘ ಮೂಡುಬಿದಿರೆ ಅಧ್ಯಕ್ಷ ತಿಮ್ಮಯ್ಯ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಬಂಟರ ಸಂಘದ ಉಪಾಧ್ಯಕ್ಷೆ ಕಾಂತಿ ಶೆಟ್ಟಿ ಪದಗ್ರಹಣಾಧಿಕಾರಿಯಾಗಿ ನೂತನ ಪದಾಧಿಕಾರಿಗಳಿಗೆ ಪದಗ್ರಹಣ ನೆರವೇರಿಸಿದರು. ಮಹಿಳಾ ಘಟಕದ ನೂತನ ಅಧ್ಯಕ್ಷರಾಗಿ ಶೋಭಾ ಎಸ್. ಹೆಗ್ಡೆ ಕಾರ್ಯದರ್ಶಿಯಾಗಿ ಸಂಗೀತಾ ಶೆಟ್ಟಿ ಕೋಶಾಧಿಕಾರಿಯಾಗಿ ಗೀತಾ ಪಿ. ಶೆಟ್ಟಿ ಹಾಗೂ ಇತರ ಪದಾಧಿಕಾರಿಗಳು ಜವಾಬ್ದಾರಿ ಸ್ವೀಕರಿಸಿದರು.

ಬಂಟರ ಮಾತೃಸಂಘದ ಪ್ರತಿನಿಧಿ ವಸಂತ್ ಶೆಟ್ಟಿ ಮಹಿಳಾ ಘಟಕದ ಗೌರವಾಧ್ಯಕ್ಷೆ ಜಯಶ್ರೀ ಅಮರನಾಥ ಶೆಟ್ಟಿ ಗೌರವ ಸಲಹೆಗಾರ್ತಿ ಕಾಂತಿಲತಾ ಶೆಟ್ಟಿ ದಕ್ಷಿಣ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ನಿರ್ದೇಶಕ ಸುಚರಿತ ಶೆಟ್ಟಿ ಯುವ ಬಂಟರ ಸಂಘ ಮೂಡುಬಿದಿರೆ ಅಧ್ಯಕ್ಷ ಜಯಕುಮಾರ್ ಶೆಟ್ಟಿ ಬಂಟರ ಸಂಘದ ಕೋಶಾಧಿಕಾರಿ ಎಂ. ಪುರುಷೋತ್ತಮ ಶೆಟ್ಟಿ ಉಪಸ್ಥಿತರಿದ್ದರು.

ಸನ್ಮಾನ

ರಾಷ್ಟ್ರಮಟ್ಟದ ಬಂಟರ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮೂಡುಬಿದಿರೆ ಬಂಟರ ಸಂಘಕ್ಕೆ ಪ್ರಥಮ ಸ್ಥಾನ ಲಭಿಸಿದ್ದು ನಿರ್ದೇಶನ ಮತ್ತು ಮಾರ್ಗದರ್ಶನ ನೀಡಿದ ಅನೀಶ್ ಪೂಜಾರಿ ಹಾಗೂ ಸ್ಮಿತೇಶ್ ಬಾರ್ಯ, ನಾಟಿ ವೈದ್ಯೆ, ಘಟಕದ ಹಿರಿಯ ಸದಸ್ಯೆ ನೀರಜಾಕ್ಷಿ ಎಸ್. ಶೆಟ್ಟಿ ಕಡಂದಲೆ, ಕ್ರೀಡಾ ಸಾಧಕಿ ವಿಸ್ಮಿತಾ ವಿ. ಶೆಟ್ಟಿ ಪಡುಮಾರ್ನಾಡು ಅವರನ್ನು ಸನ್ಮಾನಿಸಲಾಯಿತು. ಅನಾರೋಗ್ಯದಿಂದ ಬಳಲುತ್ತಿರುವ ಅಲಂಗಾರಿನ ಶಾರದಾ ಶೆಟ್ಟಿ ಅವರಿಗೆ ಘಟಕದಿಂದ 15 ಸಾವಿರ ರೂ. ಧನಸಹಾಯ ನೀಡಲಾಯಿತು.

ಘಟಕದ ಉಪಾಧ್ಯಕ್ಷೆ ಪ್ರಫುಲ್ಲ ಶೆಟ್ಟಿ ಸ್ವಾಗತಿಸಿದರು. ರೋಹಿಣಿ ಶೆಟ್ಟಿ ಪದಗ್ರಹಣಾಧಿಕಾರಿಯನ್ನು ಪರಿಚಯಿಸಿದರು. ಅಮೃತಾ ಪಿ. ಹೆಗ್ಡೆ ಸುರೇಖಾ ಶೆಟ್ಟಿ ನಿಶಾ ಶೆಟ್ಟಿ ಹಾಗೂ ವೀಣಾ ಶೆಟ್ಟಿ ಸನ್ಮಾನ ಪತ್ರ ವಾಚಿಸಿದರು. ರಂಜಿತಾ ಶೆಟ್ಟಿ ಮಂಜೂಷಾ ಶೆಟ್ಟಿ ಮತ್ತು ಶಿವಪ್ರಸಾದ್ ಹೆಗ್ಡೆ ಕಾರ್ಯಕ್ರಮ ನಿರೂಪಿಸಿದರು. ಸಂಗೀತಾ ಶೆಟ್ಟಿ ವಂದಿಸಿದರು.

ಯುವವಾಹಿನಿ ಮೂಡುಬಿದಿರೆ ಘಟಕ ಪದಗ್ರಹಣ ಸಮಾರಂಭ | ಪ್ರಮಲ್ ಆಶಯ

ಏಕತೆಯಿಂದ ಬಿಲ್ಲವ ಸಮಾಜ ಸಮಗ್ರ ಅಭಿವೃದ್ಧಿ

ಮೂಡುಬಿದಿರೆ: ಬಿಲ್ಲವ ಸಮಾಜವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಸಬಲವಾಗಬೇಕಾದರೆ ಸಮಾಜದ ನಾಯಕರು ಮತ್ತು ಯುವಶಕ್ತಿ ಒಂದೇ ಆದರ್ಶದ ಅಡಿಯಲ್ಲಿ ಸಂಘಟಿತರಾಗುವುದು ಅತ್ಯಗತ್ಯ. ಸಮಾಜದ ಪ್ರತಿಯೊಂದು ವರ್ಗವೂ ಒಂದಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಕಾರ್ಕಳ ಬಿಲ್ಲವ ಸಂಘದ ಅಧ್ಯಕ್ಷ ಪ್ರಮಲ್ ಕುಮಾರ್ ಹೇಳಿದರು.



ಯುವವಾಹಿನಿ ಮೂಡುಬಿದಿರೆ ಘಟಕದ 2026-27ನೇ ಸಾಲಿನ ಪದಾಧಿ ಕಾರಿಗಳ ಪದಗ್ರಹಣ ಸಮಾರಂಭವನ್ನು ಭಾನುವಾರ ಮೂಡುಬಿದಿರೆ ಬಿಲ್ಲವ ಸಂಘದ ಅಮೃತ ಸಭಾಭವನದಲ್ಲಿ ಉದ್ಘಾಟಿಸಿ ಮಾತನಾಡಿದರು. ಸಮಾಜದ ಹಿತದೃಷ್ಟಿಯಿಂದ ನಾಯಕತ್ವವು ಒಂದೇ ನಿರ್ಧಾರದಡಿ ಕೆಲಸ ಮಾಡಬೇಕು. ಸಮರ್ಥ ನಾಯಕತ್ವದ ಸೃಷ್ಟಿಯೇ ಸಮಾಜದ ಬೆಳವಣಿಗೆಗೆ ಮುಖ್ಯ ಆಧಾರವಾಗಿದೆ. ಯುವವಾಹಿನಿ ಸಂಸ್ಥೆ ಸಮಾಜದ ಚಿತ್ರಣವನ್ನೇ ಬದಲಿಸುವ ಶಕ್ತಿ ಹೊಂದಿದೆ ಎಂದರು.

ಯುವವಾಹಿನಿ ಮೂಡುಬಿದಿರೆ ಘಟಕ ಅಧ್ಯಕ್ಷ ಮುರಳೀಧರ ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಯುವವಾಹಿನಿ ಕೇಂದ್ರ ಸಮಿತಿ, ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು, ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಮುಖಂಡ ಸತ್ಯಜಿತ್ ಸುರತ್ಕಲ್, ಪುರಸಭೆ ಮಾಜಿ ಸದಸ್ಯ ಸುರೇಶ್ ಕೋಟ್ಯಾನ್, ಯೋಜನಾ ಪ್ರಾಧಿಕಾರದ ಸದಸ್ಯ ಶೇಖರ್ ಪೂಜಾರಿ ಬೊಳ್ಳಿ, ಬ್ರಹ್ಮಶ್ರೀ ಗುರು ನಾರಾಯಣಸ್ವಾಮಿ ಸೇವಾ ಸಂಘ ಮೂಡುಬಿದಿರೆ ಅಧ್ಯಕ್ಷ ಸುರೇಶ್ ಕೆ. ಪೂಜಾರಿ, ಯುವವಾಹಿನಿ ಕೇಂದ್ರ ಸಮಿತಿ ಮಂಗಳೂರು ಸಂಘಟನಾ ಕಾರ್ಯದರ್ಶಿ ಶುಭಕರ ಕೋಟ್ಯಾನ್ ಮುಖ್ಯ ಅತಿಥಿಗಳಾಗಿದ್ದರು. ನೂತನ ಅಧ್ಯಕ್ಷ ಗಿರೀಶ್ ಕೋಟ್ಯಾನ್, ಕಾರ್ಯದರ್ಶಿ ಅಶ್ವಿನ್ ಬಿರ್ವ ಹಾಗೂ ಪದಾಧಿಕಾರಿಗಳಿಗೆ ಪದಗ್ರಹಣ ನೆರವೇರಿಸಲಾಯಿತು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಮಾಜಸೇವಕ ರುಕ್ಕಯ್ಯ ಪೂಜಾರಿ ಅಳಿಯೂರು, ದೈವಾರಾಧಕ ಗೋಪಾಲ್ ಎ. ಕೋಟ್ಯಾನ್ ಹಾಗೂ ಹಿರಿಯ ನಾಟಿ ವೈದ್ಯ ಗಿರಿಜಾ ಕೋಟ್ಯಾನ್ ಅವರನ್ನು ಗೌರವಿಸಲಾಯಿತು.

ಕೋಶಾಧಿಕಾರಿ ಅಕ್ಷತಾ ಆರ್. ಮಾರೂರು, ನಿಯೋಜಿತ ಕೋಶಾಧಿಕಾರಿ ಜಯಶೀಲ ಪೂಜಾರಿ ಸೇರಿದಂತೆ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

ನೂತನ ಸದಸ್ಯರನ್ನು ಸ್ವಾಗತಿಸಿ, ಅಭಿನಂದಿಸಲಾಯಿತು.

ಜಗದೀಶ್ಚಂದ್ರ ಡಿ.ಕೆ ಸ್ವಾಗತಿಸಿದರು. ಕಾರ್ಯದರ್ಶಿ ವಿನೀತ್ ಸುವರ್ಣ ವರದಿ ವಾಚಿಸಿದರು. ನವಾನಂದ್ ಅವರು ಯುವ ಸ್ಪಂದನೆ ಕುರಿತು ವಾಚಿಸಿದರು. ಚುನಾವಣಾಧಿಕಾರಿ ಶಂಕರ್ ಕೋಟ್ಯಾನ್ ನೂತನ ಪದಾಧಿಕಾರಿಗಳನ್ನು ಪರಿಚಯಿಸಿದರು. ಸುಶಾಂತ್ ಕರ್ಕೇರ, ಪ್ರಭಾಕರ್ ಚಾಮುಂಡಿಬೆಟ್ಟು ಶೋಭಾ ಸುರೇಶ್ ಸನ್ಮಾನಿತರನ್ನು ಪರಿಚಯಿಸಿದರು. ಸೌಮ್ಯ ಕೋಟ್ಯಾನ್ ನಿರೂಪಿಸಿದರು.

ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಲಯ: 10ನೇ ವಿದ್ಯಾರ್ಥಿಗಳಿಗೆ ದೀಪ ಪ್ರದಾನ



ಉಪ್ಪಿನಂಗಡಿ: ಇಲ್ಲಿನ ಇಂದ್ರಪ್ರಸ್ಥ ವಿದ್ಯಾಲಯದಲ್ಲಿ 2025-26ನೇ ಶೈಕ್ಷಣಿಕ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಂದ ದೀಪ ಪ್ರದಾನ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದ ಸಿಇಒ ಕೆ. ಕೃಷ್ಣಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳು ಎಷ್ಟೇ ಎತ್ತರದ ಸ್ಥಾನಕ್ಕೆ ಏರಿದರೂ ಕಲಿತ ಸಂಸ್ಥೆಯನ್ನು ಕಲಿಸಿದ ಗುರುಗಳನ್ನು ಎಂದಿಗೂ ಮರೆಯಬಾರದು. ಜೀವನದಲ್ಲಿ ದೊರೆತ ಅವಕಾಶಗಳನ್ನು ಬಳಸಿಕೊಂಡು ಯಶಸ್ಸನ್ನು ಸಾಧಿಸಬೇಕು ಎಂದರು.

ಇಂದ್ರಪ್ರಸ್ಥ ಸಂಸ್ಥೆಗಳ ಸಂಚಾಲಕ ಸುಬ್ರಹ್ಮಣ್ಯ ಭಟ್, ಮುಖ್ಯ ಶಿಕ್ಷಕಿ ವೀಣಾ ಆರ್. ಪ್ರಸಾದ್, ಸಹ ಶಿಕ್ಷಕರಾದ ಶಶಿಕಲಾ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನಕ್ಕೆ ಶುಭ ಹಾರೈಸಿದರು.

10ನೇ ತರಗತಿಯ ವಿದ್ಯಾರ್ಥಿಗಳು ಸಂಸ್ಥೆಯಲ್ಲಿ ತಾವು ಕಳೆದ ಸವಿನೆನಪನ್ನು ಮೆಲುಕು ಹಾಕಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಶಿಕ್ಷಕ- ಶಿಕ್ಷಕೇತರ ವೃಂದದವರು ಉಪಸ್ಥಿತರಿದ್ದರು. 9ನೇ ತರಗತಿಯ ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಘನತೆ ಗೌರವ ಹೆಚ್ಚಿಸುವ ಜವಾಬ್ದಾರಿ

10 ನೇ ತರಗತಿಯ ವಿದ್ಯಾರ್ಥಿಗಳು ಜ್ಞಾನದ ಸಂಕೇತವಾದ ದೀಪವನ್ನು ಕಿರಿಯ ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಸಂಸ್ಥೆಯ ಘನತೆ ಗೌರವವನ್ನು ಹೆಚ್ಚಿಸುವ ಜವಾಬ್ದಾರಿ ಹಸ್ತಾಂತರಿಸಿದರು. ಜೊತೆಗೆ ತಮ್ಮ ಸವಿನೆನಪಿಗಾಗಿ ಕೊಡುಗೆಗಳನ್ನು ಸಂಸ್ಥೆಗೆ ನೀಡಿದರು.

ಮೇರಿಹಿಲ್: ಮೆಟ್ರಿಕ್ ನಂತರದ ಬಾಲಕಿರ ನಿಲಯದ ರಜತ ಸಂಭ್ರಮ



ಮಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನಗರದ ಮೇರಿಹಿಲ್‌ನಲ್ಲಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ನಿಲಯದ ರಜತ ಸಂಭ್ರಮದ ಹಾಸ್ಟೆಲ್ ಡೇ 'ಆಗಮ್ಯ' ನಡೆಯಿತು.

ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ವಿಶ್ವದಾಖಲೆ ಬರೆದ ಮಂಗಳೂರಿನ ಪ್ರತಿಭಾವಂತ ಭರತನಾಟ್ಯ ಪಟು ರೆಮೋನಾ ಎವೆಟ್ ಪಿರೇರಾ ಉದ್ಘಾಟಿಸಿದರು. ನಂದಿಕೂರು ಎಜುಕೇಷನ್ ಟ್ರಸ್ಟ್ ಆಡಳಿತಾಧಿಕಾರಿ ಸಾಯಿನಾಥ್ ಶೆಟ್ಟಿ ಮುಖ್ಯ ಅತಿಥಿಯಾಗಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಬಿಂದಿಯಾ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ರಜತ ಸಂಭ್ರಮದ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ನಿಲಯದ ಅಡುಗೆ ಸಿಬ್ಬಂದಿಗಳನ್ನು ಗೌರವಿಸಲಾಯಿತು. ನಿಲಯ ಪಾಲಕಿ ಭವಾನಿ ಅವರನ್ನು ವಿದ್ಯಾರ್ಥಿಗಳ ವತಿಯಿಂದ ಸನ್ಮಾನಿಸಲಾಯಿತು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಂಗಳೂರು ತಾಲೂಕು ವಿಸ್ತರಣಾಧಿಕಾರಿ ಸಂಗಮೇಶ್, ರಾಯಿ ಶಾಲೆ ಶಿಕ್ಷಕ ಬಿದ್ದಪ್ಪ ದೊಡ್ಡ ಕರಿಯಪ್ಪ, ಮಂಗಳೂರು ಹಾಪ್ ಕಾಮ್ಸ್ ನಿರ್ದೇಶಕ ರವಿ ಕುಮಾರ್ ಶೆಟ್ಟಿ, ಪಾಣೆಮಂಗಳೂರು ಬಾಲಕಿಯರ ನಿಲಯ ಪಾಲಕಿ ಪುಷ್ಪಲತಾ, ವಿವಿಧ ನಿಲಯಗಳ ನಿಲಯ ಮೇಲ್ವಿಚಾರಕರಾದ ಶಶಿಕಲಾ ಶೆಟ್ಟಿ, ವಿಜಯಲಕ್ಷ್ಮೀ, ಗಾಯತ್ರಿ ಇದ್ದರು. ಮೇರಿಹಿಲ್ ವಿದ್ಯಾರ್ಥಿ ನಿಲಯ ಪಾಲಕಿ ಭವಾನಿ ಸ್ವಾಗತಿಸಿದರು. ಇಂಚರ ವಂದಿಸಿದರು. ಲವೀಶಾ ನಿರೂಪಿಸಿದರು.



ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಭಾನುವಾರ ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಆದೇಶದ ಅನುಸಾರ ದೇವಳದ ಸಮಗ್ರ ಜೀರ್ಣೋದ್ಧಾರದ ಪ್ರಾಯಶ್ಚಿತ್ತ ಮತ್ತು ಪರಿಹಾರ ಪ್ರಯುಕ್ತ ಶ್ರೀ ದೇವರ ಸನ್ನಿಧಿಯಲ್ಲಿ ಬೆಳಿಗ್ಗೆ 6.30ಕ್ಕೆ ದೀಪ ಪ್ರಜ್ವಲನೆಯ ಮೂಲಕ ಆರಂಭಗೊಂಡು ಸಂಜೆ 6.30ರ ವರೆಗೆ ಭಜನೆ ನಡೆಯಿತು ಸಂಜೆ 6.30ರ ನಂತರ ದೇವಳದ ಪ್ರಾಕಾರದಲ್ಲಿ ಭಜನಾ ಸಂಕೀರ್ತನೆ ಸಹಿತ 12 ಪ್ರದಕ್ಷಿಣೆಯನ್ನು ಕೈಗೊಂಡು ಭಜನೆಯ ಮಂಗಲಾಚರಣೆ ನಡೆಯಿತು.



ಇತ್ತೀಚೆಗೆ ಐರ್ಲೆಂಡಿನಲ್ಲಿ ಸಾವೀಗೀಡಾಗಿರುವ ಕಡಬದ ಕುಟ್ರುಪ್ಪಾಡಿ ನಿವಾಸಿ ಸಾಂಜೋ ಸುನೀಲ್ ಅವರ ಸಾವಿನ ಕುರಿತು ಅನೇಕ ಸಂದೇಹಗಳಿದ್ದು, ಅದರ ಸಮಗ್ರ ತನಿಖೆ ನಡಸಬೇಕೆಂದು ಅಗ್ರಹಿಸಿ ಕಡಬದ ಕ್ರಿಶ್ಚಿಯನ್ ಲೈಟ್ನಿಂಗ್ ಕ್ಲಬ್ ಮತ್ತು ಮಲಯಾಳಿ ಫ್ರೆಂಡ್ಸ್ ಸಂಘಟನೆಯ ನೇತೃತ್ವದಲ್ಲಿ ಭಾನುವಾರ ಸಂಜೆ ಕಡಬದಲ್ಲಿ ಅನುಗ್ರಹ ಸಭಾಭವನದಿಂದ ಸೈಂಟ್ ಜೋಕಿಮ್ಸ್ ವಾಣಿಜ್ಯ ಕಟ್ಟಡದ ಮುಂಭಾಗದವರೆಗೆ ಮುಖ್ಯರಸ್ತೆಯಲ್ಲಿ ಮೇಣದ ಬತ್ತಿ ಉರಿಸಿಕೊಂಡು ಮೌನ ಮೆರವಣಿಗೆ ನಡೆಯಿತು.

ಅರ್ಚಕ ಅನಂತ ಪದ್ಮನಾಭ ಆಸ್ರಣ್ಣ ಸಹಿತ ಐವತ್ತೈದು ಮಂದಿ ರಕ್ತದಾನ

ಕಟೀಲು ದೇಗುಲದಿಂದ ರಕ್ತದಾನ ಶಿಬಿರ

ಕಟೀಲು: ಶ್ರೀ ದುರ್ಗಾಪರಮೇಶ್ವರೀ ದೇಗುಲದ ವತಿಯಿಂದ ಮಂಗಳೂರು ಕೆ.ಎಂ.ಆಸ್ಪತ್ರೆಯ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಐವತ್ತೈದು ಮಂದಿ ರಕ್ತದಾನ ಮಾಡಿದರು.

ಅರ್ಚಕ ಅನಂತ ಪದ್ಮನಾಭ ಆಸ್ರಣ್ಣ ರಕ್ತದಾನ ಮಾಡುವ ಮೂಲಕ ಚಾಲನೆ ನೀಡಿದರು. ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಸದಸ್ಯರಾದ ದಾಮೋದರ ಶೆಟ್ಟಿ, ಧನುಷ್ ಶೆಟ್ಟಿಗಾರ್, ಪ್ರಕಾಶ್ ಆಚಾರ್, ಪ್ರಣೀಕ್ ಕೋಟ್ಯಾನ್, ಬಿಜೆಪಿ ಮುಖಂಡ ಅಭಿಲಾಷ್ ಶೆಟ್ಟಿ, ಶಿವಳ್ಳಿ ಸಭಾದ ಅನಂತಪದ್ಮನಾಭ ಆಚಾರ್ಯ, ರಾಮಚಂದ್ರ ಉಡುಪ, ಸ್ಟ್ಯಾನಿ ಪಿಂಟೋ ದೇವದಾಸ ಮಲ್ಯ, ಅಶೋಕ್ ಕೊಂಡೇಲ, ಜಿತೇಂದ್ರ ಶೆಟ್ಟಿ, ಕೆಎಂಸಿ ರಕ್ತದಾನ ಘಟಕದ ಮುಖ್ಯಸ್ಥೆ ಶೆಲಿನ್ ಡಿಸೋಜ, ದಿನೇಶ್ ಕಟೀಲು ಮುಂತಾದವರಿದ್ದರು.



20 ವರ್ಷಗಳಿಂದ ಸಹಭಾಗಿತ್ವ

ಸುಮಾರು ಇಪ್ಪತ್ತು ವರುಷಗಳಿಂದ ಕಟೀಲು ದೇಗುಲದ ಸಹಭಾಗಿತ್ವದಲ್ಲಿ ರಕ್ತದಾನ ಶಿಬಿರ ನಡೆಯುತ್ತಿದೆ.

ಬಂಟ್ವಾಳ ಬಸದಿಯಲ್ಲಿ ಜೈನ್ ಮಿಲನ್‌ನಿಂದ ಧಾರ್ಮಿಕ ಸಭೆ | ಡಾ. ಜಯಕೀರ್ತಿ ಸಲಹೆ

ಜೈನ ಸಮಾಜಕ್ಕೆ ಸರ್ಕಾರಿ ಸೌಲಭ್ಯಗಳ ಮಾಹಿತಿ ಸಿಗಲಿ

ಬಂಟ್ವಾಳ: ಜೈನ ಸಮುದಾಯವು ಅಲ್ಪಸಂಖ್ಯಾತರಿಗೆ ಸಿಗುವ ಹಲವಾರು ಸರಕಾರಿ ಸೌಲಭ್ಯಗಳಿಂದ ವಂಚಿತವಾಗುತ್ತಿದೆ. ವಿವಿಧ ಸವಲತ್ತುಗಳ ಮಾಹಿತಿಯನ್ನು ಜೈನ್ ಮಿಲನ್‌ಗಳು ಸಮಾಜಕ್ಕೆ ನೀಡಿ ಸಹಕರಿಸಬೇಕೆಂದು ವಿಶ್ರಾಂತ ಪಶುವೈದ್ಯಾಧಿ ಕಾರಿ ಹಾಗೂ ಧಾರ್ಮಿಕ ಸಂಘಟಕ ಡಾ. ಜಯಕೀರ್ತಿ ಜೈನ್ ಬೆಳ್ತಂಗಡಿ ಹೇಳಿದರು.

ಬಂಟ್ವಾಳ ಬಸದಿಯಲ್ಲಿ, ಭಾರತೀಯ ಜೈನ್ ಮಿಲನ್ ಏರ್ಪಡಿಸಿದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು. ಬಂಟ್ವಾಳ ಜೈನ್ ಮಿಲನ್ ಅಧ್ಯಕ್ಷ ರಾಜೇಂದ್ರ ಜೈನ್ ಪೆರ್ಲ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಭ.1008 ಶ್ರೀ ಆದಿನಾಥ ಜಿನ ಚೈತ್ಯಾಲಯದ ಜಿನಬಿಂಬ ಪ್ರತಿಷ್ಠಾ ಮಹೋತ್ಸವದ 57ನೇ ವರ್ಧಂತ್ಯುತ್ಸವ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ ತೋರಣ ಮುಹೂರ್ತ, ಬಸದಿಯ ವಿಮಾನ ಶುದ್ಧಿ ಮತ್ತು 24 ತೀರ್ಥಂಕರರ ಆರಾಧನೆ , ದ್ರವ್ಯಾಭಿಷೇಕವು ಶ್ರೀ ಆದಿನಾಥಸ್ವಾಮಿ ಜಿನ ಚೈತ್ಯಾಲಯ ಬಂಟ್ವಾಳದಲ್ಲಿ ಭಾನುವಾರ ಜರಗಿತು.



ಪರಮ ಪೂಜ್ಯ 108 ಮುನಿಶ್ರೀ ಆದಿತ್ಯಸಾಗರ ಮಹಾರಾಜರ ಆಶೀರ್ವಾದದೊಂದಿಗೆ ನೀಡಿರುವ ಪ್ರತಿಷ್ಠೆಗೊಂಡ 24 ತೀರ್ಥಂಕರರ ರತ್ನ ಬಿಂಬಗಳಿಗೆ ಶ್ರಾವಕರಿಂದ ವಿಶೇಷ ದ್ರವ್ಯಗಳ ಅಭಿಷೇಕವು ಪುರೋಹಿತರಾದ ಪುಷ್ಪರಾಜ ಇಂದ್ರರ ನೇತೃತದಲ್ಲಿ ನೆರವೇರಿತು. 54 ಕಲಶ ಅಭಿಷೇಕ, ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರಿಗೆ ಅಲಂಕಾರ ಪೂಜೆ, ಕ್ಷೇತ್ರಪಾಲ ಪೂಜೆ ವಿವಿಧ ಧಾರ್ಮಿಕ ವಿಧಿವಿಧಾನದೊಂದಿಗೆ ಸಂಪನ್ನ ಗೊಂಡಿತು.

ಭಗವಾನ್ ದಾಸ್ ಮತ್ತು ಮಕ್ಕಳಿಂದ ಬಸದಿಗೆ ಅಷ್ಟಮಂಗಳಗಳ ಸಮರ್ಪಣೆ ನಡೆಯಿತು. ಬ್ರಾಹ್ಮಿಲಾ ಜೈನ್ ಅವರನ್ನು ಸನ್ಮಾನಿಸಲಾಯಿತು. ಜೈನ್ ಮಿಲನ್ ರಾಷ್ಟ್ರೀಯ ಉಪಾಧ್ಯಕ್ಷ ಸುದರ್ಶನ್ ಜೈನ್ ಮಾತನಾಡಿದರು. ಜೈನ್ ಮಿಲನ್ ಕಾರ್ಯ ದರ್ಶಿ ಜಯಕೀರ್ತಿ ಇಂದ್ರ, ಭಗವಾನ್ ದಾಸ್, ಸುರೇಂದ್ರ ಧರ್ಮಸ್ಥಳ, ನಿವೃತ್ತ ಶಿಕ್ಷಕ ಜಯಾನಂದ ಪೆರಾಜೆ ವೇದಿಕೆಯಲ್ಲಿದ್ದರು. ಸುಭಾಶ್ಚಂದ್ರ ಜೈನ್ ಪ್ರಸ್ತಾವನೆಗೈದರು. ಜಯಕೀರ್ತಿ ಸ್ವಾಗತಿಸಿದರು. ಹರ್ಷರಾಜ ಬಳ್ಳಾಲ್ ವಂದಿಸಿದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಸೋಮವಾರ 16, ಮಾರ್ಚ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತಮುತ್ತ

ಪಣೋಲಿಬೈಲಿನಲ್ಲಿ ಅಗೇಲು ಸೇವೆ ಇಲ್ಲ

ಬಂಟ್ವಾಳ: ಜಿಲ್ಲೆಯ ಕಾರಣಿಕ ದೈವಸ್ಥಾನ ತಾಲೂಕಿನ ಸಜೀಪಮೂಡ ಗ್ರಾಮದ ಪಣೋಲಿಬೈಲು ಶ್ರೀ ಕಲ್ಲುರ್ಟಿ ದೈವಸ್ಥಾನದಲ್ಲಿ ಮಾರ್ಚ್ 17,20, 22, 24 ರಂದು ಅಗೇಲು ಸೇವೆ ಇರುವುದಿಲ್ಲ. ಮಾ. 27, 29, 31 ಅಗೇಲು ಸೇವೆ ನಡೆಯುತ್ತದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಇಂದು ಬಿಜೆಪಿ ಚುನಾವಣಾ ಕಾರ್ಯಾಲಯ ಉದ್ಘಾಟನೆ

ಮಂಜೇಶ್ವರ: ಬಿಜೆಪಿ ಮಂಜೇಶ್ವರ ಪಂಚಾಯತ್ ಕುಂಜತ್ತೂರು ವಲಯ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯವನ್ನು ಮಾ.16ರಂದು ಸಂಜೆ 6.30ಕ್ಕೆ ತೂಮಿನಾಡಿನಲ್ಲಿ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಉದ್ಘಾಟಿಸುವರು. ಮಂಗಳೂರು ಉತ್ತರ ಶಾಸಕ ಡಾ.ವೈ.ಭರತ್ ಶೆಟ್ಟಿ ಉಪಸ್ಥಿತರಿರುವರು.

ನಾಳೆ ಕೇರಳದ ಶ್ರೀ ರಾಮ ನವಮಿ ರಥ ಮೂಡುಬಿದಿರೆಗೆ ಆಗಮನ

ಮೂಡುಬಿದಿರೆ: ಕೇರಳ ಮಲಪ್ಪುರಂನ ಆಂಜನೇಯಾಶ್ರಮದ ವಾರ್ಷಿಕೋತ್ಸವದ ಅಂಗವಾಗಿ 6ನೇ ರಥಯಾತ್ರೆ ಮೂಡುಬಿದಿರೆಗೆ ಜ. 17ರಂದು ಆಗಮಿಸಲಿದೆ. ಸಂಜೆ 4ರ ಸಮಯ ಇಲ್ಲಿನ ಅಲಂಗಾರು ಸತ್ಯನಾರಾಯಣ ಕಟ್ಟೆಯ ಬಳಿ ಈ ರಥಯಾತ್ರೆಯನ್ನು ಜೈನ ಮಠದ ಸ್ವಸ್ತಿ ಶ್ರೀ ಡಾ.ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಸ್ವಾಮಿಗಳ ನೇತೃತ್ವದಲ್ಲಿ ಹಾಗೂ ಆಂಜನೇಯ ಆಶ್ರಮದ ಆಚಾರ್ಯ ಸ್ವಾಮಿ ಹನುಮದ್ ಪಾದಾನಂದ ಸರಸ್ವತಿ ಸ್ವಾಮಿಗಳ ಹಾಗೂ ಇತರ ಸಂತರುಗಳ ದಿವ್ಯ ಉಪಸ್ಥಿತಿಯಲ್ಲಿ ಸಾರ್ವಜನಿಕವಾಗಿ ಸ್ವಾಗತಿಸಲಾಗುವುದು. ನಂತರ ಜೈನ ಮಠದವರೆಗೆ ಭವ್ಯ ಶೋಭಾಯಾತ್ರೆ ನಡೆಯಲಿರುವುದಾಗಿ ಶ್ರೀ ರಾಮ ರಥ ಯಾತ್ರೆ ಮೂಡುಬಿದಿರೆ ಸಂಚಾಲಕ ಎಂ. ದಯಾನಂದ ಪೈ ಅಲಂಗಾರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಗ್ರೋಡಿ ಶಿವಶಕ್ತಿ ಫ್ರೆಂಡ್ಸ್: ಅಧ್ಯಕ್ಷರಾಗಿ ದಯಾನಂದ ಕುಲಾಲ್ ಆಯ್ಕೆ

ಮಂಗಳೂರು: ಸಂಜಯನಗರ ಮುಗ್ರೋಡಿಯ ಶಿವಶಕ್ತಿ ಫ್ರೆಂಡ್ಸ್ ಸರ್ಕಲ್‌ನ ಅಧ್ಯಕ್ಷರಾಗಿ ದಯಾನಂದ



ಕುಲಾಲ್ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ವಿಮಲೇಶ್, ಗೌರವ ಅಧ್ಯಕ್ಷರಾಗಿ ಪವನ್, ಕಾರ್ಯದರ್ಶಿಯಾಗಿ ರಂಜಿತ್, ಉಪ ಕಾರ್ಯದರ್ಶಿಯಾಗಿ ಪ್ರಸಾದ್, ಕೋಶಾಧಿಕಾರಿಯಾಗಿ ರಂಜಿತ್ ಎಸ್., ಉಪ ಕೋಶಾಧಿಕಾರಿಯಾಗಿ ಮೋಹನ್, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ನಾಗೇಶ್, ಕ್ರೀಡಾ ಕಾರ್ಯದರ್ಶಿಯಾಗಿ ಯೋಗೀಶ್, ಉಪ ಕ್ರೀಡಾ ಕಾರ್ಯದರ್ಶಿಯಾಗಿ ಸಂದೀಪ್, ಗೌರವ ಕ್ರೀಡಾ ಸಲಹೆಗಾರರು ಸುರೇಶ್, ನೀಲಯ್ಯ, ಭರತ್, ಸಲಹೆಗಾರರು ಕಿಶೋರ್, ಪ್ರಶಾಂತ್, ಸುಜೀತ್ ಆಯ್ಕೆಯಾದರು.

ಆಮಂತ್ರಣ ಪತ್ರಿಕೆ ಬಿಡುಗಡೆ

ಪೆರ್ಲ: ಗೋಳಿತ್ತಾರು ಶ್ರೀ ಸಿದ್ಧಿವಿನಾಯಕ ಭಜನಾ ಮಂದಿರದಲ್ಲಿ 16ನೇ ವಾರ್ಷಿಕೋತ್ಸವವು ಮಾ.25 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಇದರ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭವು ಮಂದಿರದಲ್ಲಿ ಜರಗಿತು. ಸಮಿತಿಯ ಗೌರವಾಧ್ಯಕ್ಷ ಶ್ರೀರಾಮ ಭಟ್ ಗುಂಡಿತ್ತಾರು, ಅಧ್ಯಕ್ಷ ಕಮಲಾಕ್ಷ ಪೂಜಾರಿ ಕಾನ, ಸಂತೋಷ್ ಗೋಳಿತ್ತಾರು, ಜನಾರ್ದನ ರೈ ಸೇರಾಜೆ, ನವೀನ್ ನಾಯಕ್ ಇಡ್ಯಾಳ, ಗಿರಿಯಪ್ಪ ಪೂಜಾರಿ ಗುಂಡಿತ್ತಾರು, ಸುಂದರ ಪೂಜಾರಿ ಪೆರಿಯಡ್ಕ ಮೊದಲಾದವರು ಉಪಸ್ಥಿತರಿದ್ದರು.

ಕಡಿಮೆ ದರದಲ್ಲಿ ಸೀಮೆ ಎಣ್ಣೆ ನೀಡಲು ಸರಕಾರಕ್ಕೆ ಸಾಧ್ಯವಾಗಿಲ್ಲ: ಆರೋಪ

ಕಾಸರಗೋಡು: ಮೀನುಗಾರಿಕೆಗಾಗಿ ಬೆಸ್ತರಿಗೆ ಲೀಟರೊಂದಕ್ಕೆ ತಲಾ 25 ರೂ. ದರದಲ್ಲಿ ಸೀಮೆ ಎಣ್ಣೆ ನೀಡಲಾಗವುದು ಎಂದು ಎಡರಂಗ ಸರಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದರೂ ಕನಿಷ್ಠ ಒಂದು ಹನಿ ಸೀಮೆ ಎಣ್ಣೆಯನ್ನಾದರೂ ವಿತರಿಸಲು ಸರಕಾರಕ್ಕೆ ಸಾಧ್ಯವಾಗಿಲ್ಲ ಎಂದು ಧೀವರ ಸಭಾದ 50ನೇ ವಾರ್ಷಿಕ ಸಭೆ ಆರೋಪಿಸಿದೆ.
ಬೆಸ್ತರಿಗೆ ಲಭಿಸುತ್ತಿದ್ದ ಸವಲತ್ತುಗಳನ್ನು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ನಿಲುಗಡೆಗೊಳಿಸಲು ಎಡರಂಗ ಸರಕಾರ ಯತ್ನಿಸಿದೆ. ಎಂಎಸ್‌ಎಂಡಿ ಕೋರ್ಸ್ ಗಾಗಿರುವ ಪ್ರವೇಶದಲ್ಲಿ ಧೀವರ ಸಮುದಾಯಕ್ಕಾಗಿ ಏರ್ಪಡಿಸಲಾಗಿದ್ದ ಶೇ.2ರಷ್ಟು ಮೀಸಲಾತಿಯನ್ನು ಈಗ ರದ್ದುಪಡಿಸಲಾಗಿದೆ.
ಆ ಮೀಸಲಾತಿಯನ್ನು ಪುನರ್ ಸ್ಥಾಪಿಸಬೇಕೆಂದು ಆಗ್ರಹಿಸಿ ಧೀವರ ಸಭಾ ಸೆಕ್ರೆಟರಿಯೇಟ್ ಮುಂದೆ ಧರಣಿ ಮುಷ್ಕರ ಹೂಡಿದ್ದರೂ ಸರಕಾರ ಅದಕ್ಕೆ ಕಿವಿಗೊಡಲಿಲ್ಲ. ಧೀವರ ಸಭಾದ ಬೇಡಿಕೆಗಳನ್ನು ಮುಂದಿರಿಸಿಕೊಂಡು ಮುಖ್ಯಮಂತ್ರಿಗೆ ಹಲವು ಮನವಿಗಳನ್ನು ಸಲ್ಲಿಸಿದ್ದರೂ ಆ ಬಗ್ಗೆ ಕಳೆದ ವರ್ಷದಲ್ಲಿ ಸರಕಾರ ಯಾವುದೇ ಚರ್ಚೆಗೂ ಮುಂದಾಗಿಲ್ಲವೆಂದೂ ಸಭೆ ತಿಳಿಸಿತು. ಧೀವರ ಸಭಾದ ಮಾಜಿ ರಾಜ್ಯಾಧ್ಯಕ್ಷ ಯು.ಎಸ್.ಬಾಲನ್ ಧೀವರ್ ಸಭಾದ 50ನೇ ವರ್ಷದ ಸಭೆಯನ್ನು ಉದ್ಘಾಟಿಸಿದರು. ಸಭಾದ ಜಿಲ್ಲಾ ಕಾರ್ಯದರ್ಶಿ ರವೀಂದ್ರನ್, ಬಾಲದಾಸನ್, ಜಿ.ರಾಜೇಶ್, ಹೊಸದುರ್ಗ ತಾಲೂಕು ಅಧ್ಯಕ್ಷ ತಾಯತ್ ಕೃಷ್ಣನ್, ಕಾರ್ಯದರ್ಶಿ ಪಿ.ಪಿ.ಕೃಷ್ಣನ್, ದಾಮೋದರನ್ ಮುಟ್ಟತ್ತ್, ಎಸ್.ಶಶಿಕಾಂತ್ ಉಪ್ಪಳ, ರಾಜು ಕಟ್ಟಕಡವ್, ಕೆ.ಶಂಬು ಬೇಕಲ್, ಪಿ.ಮುರಳೀಧರನ್ ಮುಟ್ಟತ್ ಮಾತನಾಡಿದರು.

ಶ್ರೀ ಭಗವತೀ ದೇವಸ್ಥಾನದಲ್ಲಿ ಯಶಸ್ವಿ ಬ್ರಹ್ಮಕಲಶೋತ್ಸವದ ಧನ್ಯೋತ್ಸವ ಕಾರ್ಯಕ್ರಮ

ದಾನಿಗಳು, ಸಮಿತಿ ಸದಸ್ಯರು, ಕಾರ್ಯಕರ್ತರ ಕೊಡುಗೆ ಅನನ್ಯ

ಮುಲ್ಕಿ: ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಮಾರ್ಚ್ 4 ರಿಂದ 8 ರವರೆಗೆ ಯಶಸ್ವಿಯಾಗಿ ನಡೆದ ಶ್ರೀ ಭಗವತೀ ದೇವಿಯ ಬ್ರಹ್ಮಕಲಶೋತ್ಸವ ಪ್ರಯುಕ್ತ ಧನ್ಯೋತ್ಸವ ಕಾರ್ಯಕ್ರಮ ಕ್ಷೇತ್ರದ ಆವರಣದ ಬೃಹತ್ ವೇದಿಕೆಯಲ್ಲಿ ನಡೆಯಿತು.
ಸಭೆಯಲ್ಲಿ ಕ್ಷೇತ್ರದ ಆನುವಂಶಿಕ ಮೊಕ್ತೇಸರ ಹಾಗೂ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ ಮಾತನಾಡಿ, ಕಳೆದ ಮಾರ್ಚ್ 4 ರಿಂದ 8 ರವರೆಗೆ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ಯಶಸ್ವಿಯಾಗಿ ನಡೆದಿದ್ದು, ಇದಕ್ಕೆ ಪ್ರಮುಖವಾಗಿ ಊರಿನ ಹಾಗೂ ಮುಂಬೈ ಹಾಗೂ ದೇಶ ವಿದೇಶದ ದಾನಿಗಳು, ಸ್ವಯಂಸೇವಕರು, ಕ್ಷೇತ್ರದ ಆಡಳಿತ ಮಂಡಳಿ ಹಾಗೂ ಭಕ್ತರು ಕಾರಣಕರ್ತರಾಗಿದ್ದಾರೆ ಎಂದರು.
ಭಕ್ತಿ ಹಾಗೂ ಶ್ರದ್ಧೆಯಿಂದ ಹಗಲು ರಾತ್ರಿ ಎನ್ನದೆ ಹಲವಾರು ಸ್ವಯಂಸೇವಕರು ನಿಷ್ಠೆಯಿಂದ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಅವರಿಗೆ ಹೃದಯ ಅಂತರಾಳದ ಧನ್ಯವಾದಗಳು ಎಂದರು.
ಕ್ಷೇತ್ರದ ಆಡಳಿತ ಮೊಕ್ತೇಸರ ಚಂದ್ರಶೇಖರ ಬೆಲ್ಚಡ ಮಾತನಾಡಿ, ಕ್ಷೇತ್ರದ ಜೀರ್ಣೋದ್ಧಾರ , ಬ್ರಹ್ಮಕಲಶ



ಸಾಕಾರಗೊಳ್ಳಲು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಹತ್ವದ ಪಾತ್ರ ವಹಿಸಿದ್ದಾರೆ. ಎಲ್ಲಾ ಸಮಿತಿಗಳ ಮುಂದಾಳತ್ವ ವಹಿಸಿ ಯುವಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮ ಯಶಸ್ವಿಯಾಗಿದೆ. ಬ್ರಹ್ಮಕಲಶೋತ್ಸವಕ್ಕೆ ದಾನಿಗಳ ಕೊಡುಗೆ ಮಹತ್ತರವಾಗಿದ್ದು ಎಲ್ಲಾ ಸಮಿತಿಯ ಸದಸ್ಯರು ಹಾಗೂ ಆಡಳಿತ ಮಂಡಳಿಯ ಸಹಕಾರ ಹಾಗೂ ಕೊಡುಗೆ ಅನನ್ಯ ಎಂದರು

ಬ್ರಹ್ಮಕಲಶ ಯಶಸ್ವಿಯಾಗಿ ನಡೆದಿದೆ

ವೇದಿಕೆಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ,

> **ಗೌರವ**
> ಕ್ಷೇತ್ರದ ಬ್ರಹ್ಮ ಕಲಶೋತ್ಸವ ಯಶಸ್ವಿಗೊಳಿಸಲು ಸಹಕರಿಸಿದ ದಾನಿಗಳನ್ನು, ಅಹರ್ನಿಶಿಯಾಗಿ ದುಡಿದ ವಿವಿಧ ಸಮಿತಿ ಪ್ರಮುಖರನ್ನು, ಕಾರ್ಯಕರ್ತರನ್ನು ಗೌರವಿಸಿ ಸನ್ಮಾನಿಸಲಾಯಿತು.

ಮಾರ್ಚ್ 4ರಿಂದ 8ರವರೆಗೆ ಕ್ಷೇತ್ರದಲ್ಲಿ ಬ್ರಹ್ಮಕಲಶ ಯಶಸ್ವಿಯಾಗಿ ನಡೆದಿದೆ. ಅದರಲ್ಲೂ ಕೊನೆಯ ದಿನ ಗಂಗಾರತಿ ಕಾರ್ಯಕ್ರಮ ಅತ್ಯದ್ಭುತವಾಗಿ ನಡೆದಿದೆ.

> **ಏ.10ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ**
> ಏ.10 ರಿಂದ 20 ರವರೆಗೆ ದೇವಸ್ಥಾನದಲ್ಲಿ ವಿವಿಧ ದಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಎಪ್ರಿಲ್ 10ರಂದು ನಡಾವಳಿ ಉತ್ಸವ, ಏ.11 ರಿಂದ 16 ರವರೆಗೆ ಭರಣಿ ಮಹೋತ್ಸವ, ಏ.19ರಂದು ಓಂ ನಮೋ ಭಗವತೇ ವಾಸುದೇವಾಯ(ದ್ವಾದಶಾಕ್ಷರೀ ಮಂತ್ರೋಚ್ಚಾರ) ನಡೆಯಲಿದೆ. ದಾನಿಗಳು, ಭಕ್ತಾದಿಗಳು ಗ್ರಾಮಸ್ಥರು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕು.
> ● ವಾಮನ್ ಇಡ್ಯಾ

ಇದಕ್ಕೆ ಸಹಕಾರ ನೀಡಿದ ಎಲ್ಲಾ ಬಂಧುಗಳಿಗೂ ಕೃತಜ್ಞತೆ ಸಲ್ಲಿಸುತ್ತಿದ್ದೇನೆ ಎಂದು ಹೇಳಿದರು.
ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ವಾಮನ ಇಡ್ಯಾ ಪ್ರಾಸ್ತಾವಿಕವಾಗಿ ಮಾತನಾಡಿದರು.
ಮುಖ್ಯ ಅತಿಥಿಗಳಾಗಿ ಕ್ಷೇತ್ರದ ಆಡಳಿತ ಸಮಿತಿ ಉಪಾಧ್ಯಕ್ಷ ವಿಶ್ವನಾಥ ಬೆಲ್ಚಡ, ಬ್ರಹ್ಮಕಲಶೋತ್ಸವ ಸಮಿತಿಯ ಗೌರವಾಧ್ಯಕ್ಷೆ ಗೀತಾ ಪಿ. ಕುಮಾರ್, ಕೋಶಾಧಿಕಾರಿ ಸುರೇಶ್ ಬಂಗೇರ, ಸಮಿತಿಯ ಉಪಾಧ್ಯಕ್ಷ ಮುರ ಸದಾಶಿವ ಶೆಟ್ಟಿ, ಕ್ಷೇತ್ರದ ಅಭಿವೃದ್ಧಿ ಸಮಿತಿ ಅಧ್ಯಕ್ಷಪ್ರಭಾಕರ ಪೂಜಾರಿ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ, ಮಾತೃ ಮಂಡಳಿ ಅಧ್ಯಕ್ಷೆ ಕಸ್ತೂರಿ ಪಂಜ, ಅಭಿವೃದ್ಧಿ ಸಮಿತಿ ಸದಸ್ಯರಾದ ಶ್ರೀಕಾಂತ ರಾವ್, ಮೋಹನ್ ಶೆಟ್ಟಿಗಾರ್, ಭೋಜಗುರಿಕಾರ, ಗಣೇಶ್ ಹೊಸಬೆಟ್ಟು, ಪ್ರೇಮನಾಥ ಸುವರ್ಣ, ಗಿರೀಶ್ ಶ್ರೀಯಾನ್, ಜಗನ್ನಾಥ ಕೋಟ್ಯಾನ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ ಕರಿತೋಟ ಸ್ವಾಗತಿಸಿ, ಆಡಳಿತ ಸಮಿತಿ ಜೊತೆ ಕಾರ್ಯದರ್ಶಿ ರಾಜೇಂದ್ರ ಪ್ರಸಾದ್ ಎಕ್ಕಾರು ನಿರೂಪಿಸಿದರು.

ಸುಂಟಿಕೊಪ್ಪದಲ್ಲಿ ಕೊಡಗು ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನ: ಪೂರ್ವಭಾವಿ ಸಭೆ



ಸುಂಟಿಕೊಪ್ಪ: ಸುಂಟಿಕೊಪ್ಪದಲ್ಲಿ ನಡೆಸಲು ಉದ್ದೇಶಲಾಗಿರುವ ಕೊಡಗು ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನ ಕುರಿತಾದ ಪೂರ್ವಭಾವಿ ಸಭೆಯನ್ನು ಖಾಸಗಿ ಹೋಟೆಲ್‌ವೊಂದರ ಸಭಾಂಗಣದಲ್ಲಿ ನಡೆಸಲಾಯಿತು.
ಸುಂಟಿಕೊಪ್ಪ ಹೋಬಳಿ ಕಸಾಪ ಅಧ್ಯಕ್ಷ ಪಿ.ಎಫ್.ಸಬಾಸ್ಟಿನ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ.ಕೇಶವಕಾಮತ್ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬಿ.ಎಂ.ಕೆ.ವಾಸು ರೈ, ಕುಶಾಲನಗರ ತಾಲೂಕು ಕಸಾಪದ ಸಂಘಟನಾ ಕಾರ್ಯದರ್ಶಿ ಗುಡ್ಡೆಮನೆ ಹರೀಶ್, ನಿರ್ದೇಶಕ ಬಿ.ಸಿ. ದಿನೇಶ್ ಕಸಾಪದ ಹಿರಿಯ ಸದಸ್ಯರಾದ ಲೀಲಾ ಮೇದಪ್ಪ ಕೆ.ಪಿ.ಜಗನ್ನಾಥ್, ಸುಂಟಿಕೊಪ್ಪ ಹೋ.ಕಸಾಪ ನಿ.ಪೂ.ಅಧ್ಯಕ್ಷ ವಹೀದ್‌ಜಾನ್ ಮತ್ತಿತರರಿದ್ದರು.
ಸಭೆಯಲ್ಲಿ ಸಮ್ಮೇಳನ ನಡೆಸುವ ಕುರಿತು ವಿಸ್ತೃತವಾದ ಚರ್ಚೆ ವಿವಿಧ ಉಪಸಮಿತಿಗಳ ರಚನೆ, ಇನ್ನಿತರ ವಿಷಯ ಬಗ್ಗೆ ಚರ್ಚಿಸಲು ಮಾ.24ರಂದು ಪೂರ್ವಭಾವಿ ಸಭೆ ಸುಂಟಿಕೊಪ್ಪ ಕೊಡವ ಸಮಾಜ ಸಭಾಂಗಣದಲ್ಲಿ ನಡೆಸಲು ತಿರ್ಮಾನಿಸಲಾಯಿತು.

> **ಅಭಿನಂದನೆ**
> ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಕಸಾಪದ ಹಿರಿಯ ಸದಸ್ಯ ಬಿ.ಸಿ.ದಿನೇಶ್ ಅವರನ್ನು ಕೊಡಗು ಜಿಲ್ಲಾ ಕಸಾಪ ವತಿಯಿಂದ ಅಭಿನಂದಿಸಲಾಯಿತು.

ಸುಂಟಿಕೊಪ್ಪ ಹೋ.ಕಸಾಪ ಕಾರ್ಯದರ್ಶಿ ಕೆ.ಎಸ್.ಅನಿಲ್ ಕುಮಾರ್ ಸ್ವಾಗತಿಸಿ, ಕೊಡಗು ಕಸಾಪದ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್ ಪ್ರಸ್ತಾವನೆಗೈದರು. ಕೊಡಗು ಕಸಾಪ ಅಧ್ಯಕ್ಷ ಎಂ.ಪಿ.ಕೇಶವಕಾಮತ್ ಜಿಲ್ಲಾ ಸಾಹಿತ್ಯ ಸಮ್ಮೇಳನದ ರೂಪುರೇಷಗಳ ಮಾಹಿತಿ ನೀಡಿದರು. ಪಿ.ಎಫ್.ಸಬಾಸ್ಟಿನ್ ವಂದಿಸಿದರು.

ಆಧಾರ್ ನೋಂದಣಿ, ತಿದ್ದುಪಡಿ ಅಭಿಯಾನ, ಅಂಚೆ ಇಲಾಖೆ ಸೇವೆಗಳ ಮಾಹಿತಿ ಶಿಬಿರ



ಕೋಟ: ಗೀತಾನಂದ ಫೌಂಡೇಶನ್ ಮಣೂರು ಮತ್ತು ಭಾರತೀಯ ಅಂಚೆ ಇಲಾಖೆ ಇವರ ಸಹಯೋಗದಲ್ಲಿ ಜನತಾ ಫಿಶ್‌ಮೀಲ್ ಸಹಕಾರದೊಂದಿಗೆ ಸಾರ್ವಜನಿಕರ ಸೌಲಭ್ಯಕ್ಕಾಗಿ ಆಯೋಜಿಸಲಾದ ಆಧಾರ್ ನೋಂದಣಿ , ತಿದ್ದುಪಡಿ ಅಭಿಯಾನ, ಅಂಚೆ ಇಲಾಖೆ ವಿವಿಧ ಸೇವೆಗಳ ಮಾಹಿತಿ ಶಿಬಿರ ಕಾರ್ಯಕ್ರಮ ಬುಧವಾರ ಜನತಾ ಫಿಶ್ ಮೀಲ್ ಆವರಣದಲ್ಲಿ ನಡೆಯಿತು.
ಕಾರ್ಯಕ್ರಮವನ್ನು ಗೀತಾನಂದ ಸಂಸ್ಥೆಯ ಪ್ರವರ್ತಕ ಆನಂದ ಸಿ. ಕುಂದರ್ ಉದ್ಘಾಟಿಸಿ ಮಾತನಾಡಿ, ಸಾರ್ವಜನಿಕರು ಸರ್ಕಾರದ ಪ್ರಮುಖ ಗುರುತು ದಾಖಲೆಗಳಾದ ಆಧಾರ್ ಸೇವೆಗಳನ್ನು ಸುಲಭವಾಗಿ ಪಡೆಯುವಂತೆ ಇಂತಹ ಶಿಬಿರಗಳು ಸಹಾಯಕ ಎಂದರು.
ಅಂಚೆ ಇಲಾಖೆಯ ಉಡುಪಿ ವೃತ್ತದ ಅಂಚೆ ಅಧೀಕ್ಷಕ ರಮೇಶ್ ಪ್ರಭು, ಕುಂದಾಪುರ ದಕ್ಷಿಣ ಉಪ ವಲಯದ ಅಂಚೆ ನಿರೀಕ್ಷಕ ಪೋಲ ನಾಗಜನೆಯಲು ಮತ್ತು ಜನತಾ ಸಂಸ್ಥೆಯ ಎ.ಜಿ.ಎಂ.ಶ್ರೀನಿವಾಸ ಅತಿಥಿಗಳಾಗಿದ್ದರು.

> **ಅಗತ್ಯ ಸೇವೆಗಳು ಲಭ್ಯ**
> ಗ್ರಾಮೀಣ ಹಾಗೂ ನಗರ ಪ್ರದೇಶದ ಜನರಿಗೆ ಆಧಾರ್ ನವೀಕರಣ, ಮೊಬೈಲ್ ಸಂಖ್ಯೆ ತಿದ್ದುಪಡಿ, ವಿಳಾಸ ಬದಲಾವಣೆ, ಬಯೋಮೆಟ್ರಿಕ್ ಅಪ್ಡೇಟ್ ಸೇರಿದಂತೆ ಅಗತ್ಯ ಸೇವೆಗಳು ಇಂತಹ ಶಿಬಿರದ ಮೂಲಕ ಲಭ್ಯವಾಗುವುದು.
> ● ಆನಂದ ಸಿ. ಕುಂದರ್

ಅಂಚೆ ಇಲಾಖೆಯ ಮಾಹಿತಿ

ಕೋಟ ಅಂಚೆ ಕಚೇರಿಯ ಸೌಮ್ಯಶ್ರೀ ಅಂಚೆ ಇಲಾಖೆ ವಿವಿಧ ಸೇವೆಗಳು , ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಗೀತಾನಂದ ಸಂಯೋಜಕ ರವಿಕಿರಣ್ ಕೋಟ ನಿರೂಪಿಸಿ, ಜನತಾ ಸಂಸ್ಥೆಯ ವ್ಯವಸ್ಥಾಪಕ ಮಿಥುನ್ ಕುಮಾರ್ , ದೀಕ್ಷಿತಾ ಸಹಕರಿಸಿದರು

ಸರಪಾಡಿ ಸರಕಾರಿ ಶಾಲೆ: ಟ್ಯೂಷನ್ ಕ್ಲಾಸ್ ತರಬೇತಿಯ ಸಮಾರೋಪ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಬಂಟ್ವಾಳ ತಾಲೂಕಿನ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಸರಪಾಡಿ ಸರಕಾರಿ ಪ್ರೌಢ ಶಾಲೆಯಲ್ಲಿ ನಡೆದ ಮೂರು ತಿಂಗಳ ಉಚಿತ ಟ್ಯೂಷನ್ ಕ್ಲಾಸ್ ತರಬೇತಿಯ ಸಮಾರೋಪ ಸಮಾರಂಭ ನಡೆಯಿತು.
ಸರಪಾಡಿ ಒಕ್ಕೂಟದ ಅಧ್ಯಕ್ಷ ಗಿರೀಶ್ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯ ಶಿಕ್ಷಕಿ ವಿನೋದಾ ಮಾತನಾಡಿ, ಹಳ್ಳಿಯ ಪ್ರದೇಶದ ಸರಕಾರಿ ಶಾಲೆಗಳಲ್ಲಿ ಉಚಿತ ಟ್ಯೂಷನ್ ಕ್ಲಾಸನ್ನು ಹಮ್ಮಿಕೊಂಡಿರುವುದರಿಂದ ಗ್ರಾಮೀಣ ಪ್ರದೇಶದ ಮಕ್ಕಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಸಹಕಾರಿಯಾಗಿದೆ ಎಂದರು.
ವಲಯದ ಮೇಲ್ವಿಚಾರಕ ಭಾಸ್ಕರ್, ಜನಜಾಗೃತಿ ಅಧ್ಯಕ್ಷ ಪುರುಷೋತ್ತಮ್, ತಾಲೂಕಿನ ಜ್ಞಾನವಿಕಾಸ ಸಮನ್ವಧಿಕಾರಿ ಸವಿತಾ, ಟ್ಯೂಷನ್ ಶಿಕ್ಷಕಿ ಹರ್ಷಿತ, ಜ್ಞಾನವಿಕಾಸ ಕೇಂದ್ರದ ಸದಸ್ಯರು, ಹಾಗೂ ಶಾಲೆಯ ಶಿಕ್ಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಶ್ವಾಸ್ ಪದ್ಯಾಣ ಪ್ರಥಮ ಸ್ಥಾನ

ಬದಿಯಡ್ಕ: ಕಾಞಂಗಾಡು ನೆಹರೂ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ



ವಿಶ್ವವಿದ್ಯಾನಿಲಯ ಮಟ್ಟದ ಕಲೋತ್ಸವದ ಮೃದಂಗ ಸ್ಪರ್ಧೆಯಲ್ಲಿ ಎ ಗ್ರೇಡ್‌ನೊಂದಿಗೆ ವಿಶ್ವಾಸ್ ಪದ್ಯಾಣ ಪ್ರಥಮ ಸ್ಥಾನ ಪಡೆದಿದ್ದಾರೆ. ನೀರ್ಚಾಲು ನಿವಾಸಿಗಳಾದ ಅಧ್ಯಾಪಕ ದಂಪತಿ ಪದ್ಯಾಣ ಚಂದ್ರಶೇಖರ ಭಟ್ ಮತ್ತು ಸುಶೀಲಾ ಪದ್ಯಾಣ ಅವರ ಪುತ್ರನಾದ ವಿಶ್ವಾಸ್ ಅವರು, ಪ್ರಸ್ತುತ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ದ್ವಿತೀಯ ಬಿಎಸ್‌ಸಿ (ಭೌತಶಾಸ) ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲದೆ ವಿದ್ವಾನ್ ಯೋಗೀಶ ಶರ್ಮಾ ಬಳ್ಳಪದವು ಶಿಷ್ಯರಾಗಿದ್ದಾರೆ.

ತೋಕೂರು ಸ್ಪೋರ್ಟ್ಸ್ ಕ್ಲಬ್‌ನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ



ಮುಲ್ಕಿ: ತೋಕೂರು ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ , ಹಳೆಯಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ತೋಕೂರು ಸ್ಪೋರ್ಟ್ಸ್ ಕ್ಲಬ್ ಸಭಾಂಗಣದಲ್ಲಿ ನಡೆಯಿತು

ಪ್ರತಿ ವಸ್ತು ವಿಜ್ಞಾನದ ಆವಿಷ್ಕಾರ

ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಶರತ್ ಕುಮಾರ್ ಹಾರಾಡಿ ದೀಪ ಪ್ರಜ್ವಲಿಸಿ ಮಾತನಾಡಿ, ವಿಜ್ಞಾನ ದಿನಾಚರಣೆ ವಿದ್ಯಾರ್ಥಿಗಳಲ್ಲಿ ಕುತೂಹಲವನ್ನು ಬೆಳೆಸಲು ಹಾಗೂ ಹೊಸ ವಿಚಾರಗಳ ಹುಡುಕುವ ಮನೋಭಾವ ಉತ್ತೇಜಿಸುತ್ತದೆ. ವಿಜ್ಞಾನವು ಜೀವನದ ಪ್ರತಿಯೊಂದು ಹಂತದಲ್ಲಿಯೂ ಮಹತ್ವದ ಪಾತ್ರ ವಹಿಸುತ್ತದೆ. ಬೆಳಿಗ್ಗೆ ಎದ್ದ ಕ್ಷಣದಿಂದ ರಾತ್ರಿ ಮಲಗುವ ತನಕ ನಾವು ಬಳಸುವ ಪ್ರತಿ ಒಂದು ವಸ್ತು ವಿಜ್ಞಾನದ ಆವಿಷ್ಕಾರ ಆಗಿದೆ ಎಂದರು.
ಸಂಪನ್ಮೂಲ ವ್ಯಕ್ತಿಯಾಗಿದ್ದ ಸುರತ್ಕಲ್ ವಿದ್ಯಾದಾಯಿನೀ ಶಾಲೆ ಸಹಾಯಕ ಶಿಕ್ಷಕಿ ಜೆ.ಸಿ.ಅಶ್ವಿನಿ ಐತಾಳ್ ಮಾತನಾಡಿ, ವಿಜ್ಞಾನ ಕುತೂಹಲಗಳ , ಆವಿಷ್ಕಾರ ಗಳ ಬಗ್ಗೆ ಸಮಗ್ರ ಮಾಹಿತಿ ನೀಡಿ ಆಧುನಿಕ ತಂತ್ರಜ್ಞಾನಗಳ ದುರುಪಯೋಗ ಮಾಡಿಕೊಳ್ಳದೆ, ಸಮರ್ಪಕ ಬಳಕೆ ಮಾಡಬೇಕು ಎಂದರು.

ವಿಜೇತರಿಗೆ ಬಹುಮಾನ

ಬಳಿಕ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ರಸಪ್ರಶ್ನೆ ನಡೆದು ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಎಸ್.ಎಸ್. ಎಂ. ಜಿ. ಸ್ಪೋರ್ಟ್ಸ್ ಕ್ಲಬ್ ಗೌರವಾಧ್ಯಕ್ಷ ಯೋಗೀಶ್ ಕೋಟ್ಯಾನ್, ಶೈಲಾ ಶೆಟ್ಟಿಗಾರ್ ಉಪಸ್ಥಿತರಿದ್ದರು.
ಸಂಸ್ಥೆ ಅಧ್ಯಕ್ಷ ಸುರೇಶ್ ಶೆಟ್ಟಿ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಸಂತೋಷ್ ದೇವಾಡಿಗ, ಸಚಿನ್ ಆಚಾರ್ಯ, ಸುಷ್ಮಾ ಆಚಾರ್ಯ, ಪವಿತ್ರಾ ಆಚಾರ್ಯ ಸಹಕರಿಸಿದರು. ಜಗದೀಶ್ ಕುಲಾಲ್ ವಂದಿಸಿ, ನೀಮಾ ಸನಿಲ್ ನಿರೂಪಿಸಿದರು.

ಬಂಗಾಡಿ ಕೊಲ್ಲಿ ಸೂರ್ಯಚಂದ್ರ ಜೋಡುಕರೆ ಕಂಬಳ ಕೂಟಕ್ಕೆ ಚಾಲನೆ




ಬೆಳ್ತಂಗಡಿ: ಕಂಬಳ ತುಳುನಾಡಿನ ಜಾನಪದ ಕ್ರೀಡೆಯಾಗಿದ್ದರೂ ನೆಲದ ಸಂಸ್ಕೃತಿ, ಆಚಾರ, ವಿಚಾರ, ಸೌಹಾರ್ದತೆಯೊಂದಿಗೆ ಅದನ್ನು ಯುವಜನತೆಗೆ, ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಮುಂದೆ ಹುಟ್ಟುವ ಪೀಳಿಗೆಗೆ ವರ್ಗಾಯಿಸುವ ಕೆಲಸ ಮಾಡುತ್ತದೆ ಎಂದು ವಿಧಾನ ಸಭೆ ಸಭಾಪತಿ ಯು.ಟಿ ಖಾದರ್ ಹೇಳಿದರು.
ಬಂಗಾಡಿ ಕೊಲ್ಲಿ ಸೂರ್ಯಚಂದ್ರ ಜೋಡುಕರೆ ಕಂಬಳ ಸಮಿತಿಯಿಂದ ನಡೆದ ಕಂಬಳ ಕೂಟದಲ್ಲಿ ಭಾಗವಹಿಸಿದರು. ಪಾಶ್ಚಾತ್ಯ ನಾಗರಿಕತೆ ಪ್ರಭಾವವಿದ್ದರೂ ಈ ರೀತಿ ಕ್ರೀಡೆಯಿಂದ ನಮ್ಮ ತುಳುನಾಡ ಸಂಸ್ಕೃತಿ ಮೆಟ್ಟಿನಿಲ್ಲಲು ಸಾಧ್ಯವಾಗಿಲ್ಲ ಎಂದರು.
ವರ್ಷದಲ್ಲಿ ಕಂಬಳ ನಡೆಯುವ ದಿವಸಗಳು 25 ರಿಂದ 26. ಆ ಸಮಯದಲ್ಲಿ ಕೋಣಗಳನ್ನು ಪರಿಪಾಲಿಸಲು ಯಜಮಾನರು, ಪರಿಚಾರಕರು ಪ್ರೀತಿಯಿಂದ ಸ್ವಲ್ಪ ಆದಕ್ಕೆ ಹೊಡೆತ ನೀಡಿದರೂ ವರ್ಷದ ಬಾಕಿ 340 ದಿನಗಳಲ್ಲಿ ಯಜಮಾನನಲ್ಲಿ ಹಿರಿಯ ಮಗ ಯಾರೆಂದು ಕೇಳಿದರೆ ಆತ ಪ್ರೀತಿಯಿಂದ ಸಾಕುವ ಕೋಣಗಳೇ ಎಂದು ಹೇಳುತ್ತಾನೆ.. ಆ ರೀತಿ ಅದನ್ನು ಸಾಕಿರುತ್ತಾರೆ ಎಂಬುದನ್ನು ನಾವು ಮನವರಿಕೆ ಮಾಡಬೇಕಾದುದು ನಮ್ಮ ಜವಾಬ್ದಾರಿ ಎಂದು ಅವರು ತಿಳಿಸಿದರು
ಯುವ ಕಾಂಗ್ರೆಸ್ ಜಿಲ್ಲಾ ಮುಖಂಡರಾದ ಅಭಿನಂದನ್ ಹರೀಶ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಗ್ರಾಮೀಣ ಅಧ್ಯಕ್ಷ ನಾಗೇಶ್ ಕುಮಾರ್ ಗೌಡ ಮತ್ತಿತರರಿದ್ದರು. ಕಂಬಳ ಸಮಿತಿ ಅಧ್ಯಕ್ಷ ರಂಜನ್ ಜಿ. ಗೌಡ ಸ್ವಾಗತಿಸಿದರು.
ಕಾರ್ಯಾಧ್ಯಕ್ಷ ಪುಷ್ಪರಾಜ ಶೆಟ್ಟಿ ಸಹಿತ ಎಲ್ಲಾ ಪದಾಧಿಕಾರಿಗಳು ಸಭಾಪತಿಗಳನ್ನು ಗೌರವಿಸಿದರು. ಉದ್ಘಾಟನೆಗೂ ಮುನ್ನ ಕೊಲ್ಲಿ ದುರ್ಗಾದೇವಿ ಸನ್ನಿಧಾನದಿಂದ ಕೋಣಗಳು ಹಾಗೂ ಅತಿಥಿಗಳ ಒಡಗೂಡಿ ಮೆರವಣಿಗೆ ನಡೆಯಿತು.

ಸವಣೂರು, ಸಜಂಕಾಡಿ ಸರಕಾರಿ ಶಾಲೆ: ಗ್ರಾಹಕ ಜಾಗೃತಿ, ಅರಿವು ಕಾರ್ಯಕ್ರಮ

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ (ಸ್ವಾಯತ್ತ) ಗ್ರಾಹಕ ವೇದಿಕೆ ವತಿಯಿಂದ ವಿಸ್ತರಣಾ ಚಟುವಟಿಕೆ ಭಾಗವಾಗಿ ಸವಣೂರಿನ ದ.ಕ. ಜಿ.ಪಂ. ಸರ್ಕಾರಿ ಉನ್ನತ ಹಿ.ಪ್ರಾ. ಶಾಲೆ, ಸಜಂಕಾಡಿಯ ಸ.ಹಿ.ಪ್ರಾ. ಶಾಲೆಯಲ್ಲಿ ಗ್ರಾಹಕ ಜಾಗೃತಿ ಕಾರ್ಯಾಗಾರ, ಅರಿವು ಕಾರ್ಯಕ್ರಮ ಆಯೋಜಿಸಲಾಯಿತು.
ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಶಾಲಾ ಮಕ್ಕಳಿಗೆ ಗ್ರಾಹಕರ ಮೂಲಭೂತ ಹಕ್ಕುಗಳು, ಜವಾಬ್ದಾರಿಯುತ ಖರೀದಿ ಪದ್ಧತಿ ಹಾಗೂ ವಸ್ತುಗಳನ್ನು ಖರೀದಿಸುವಾಗ ಜಾಗರೂಕರಾಗಿರಬೇಕಾದ ಅಗತ್ಯದ ಬಗ್ಗೆ ಅರಿವು ಮೂಡಿಸುವುದಾಗಿತ್ತು.
ಈ ಸಂದರ್ಭ ಗ್ರಾಹಕ ವೇದಿಕೆಯ ಸದಸ್ಯರಾದ ಕಾಲೇಜ್ ವಿದ್ಯಾರ್ಥಿಗಳು ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿ ವಿವಿಧ ಜಾಗೃತಿ ಚಟುವಟಿಕೆಗಳನ್ನು ನಡೆಸಿ, ಗ್ರಾಹಕ ಜಾಗೃತಿಗೆ ಸಂಬಂಧಿಸಿದ ಸರಳ ವಿಷಯಗಳನ್ನು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ವಿವರಿಸಿ, ಜೊತೆಗೆ ವಿವಿಧ ಉತ್ಪನ್ನಗಳನ್ನು ಪ್ರದರ್ಶಿಸಿ, ವಸ್ತುಗಳನ್ನು ಖರೀದಿಸುವಾಗ ಅದರ ಬೆಲೆ, ಉತ್ಪಾದನಾ ದಿನಾಂಕ, ಅವಧಿ ಮುಗಿಯುವ ದಿನಾಂಕ, ಗುಣಮಟ್ಟದ ಗುರುತು , ಸರಿಯಾದ ಲೇಬಲ್ ಮಾಹಿತಿ ಹೇಗೆ ಪರಿಶೀಲಿಸಬೇಕು ಎಂಬುದನ್ನು ತಿಳಿಸಿದರು.
ಕಾರ್ಯಕ್ರಮವನ್ನು ಹೆಚ್ಚು ಆಸಕ್ತಿದಾಯಕವಾಗಿಸಲು ವಿದ್ಯಾರ್ಥಿಗಳು ಸ್ಕಿಟ್‌ಗಳು, ಉತ್ಪನ್ನ ಪ್ರದರ್ಶನಗಳು ಹಾಗೂ ಸಂವಾದಾತ್ಮಕ ಚಟುವಟಿಕೆಗಳನ್ನು ನಡೆಸಿ ಸಾಮಾನ್ಯ ಗ್ರಾಹಕ ಸಮಸ್ಯೆಗಳು, ತಿಳಿದ ಗ್ರಾಹಕರಾಗಿರುವ ಮಹತ್ವವನ್ನು ವಿವರಿಸಿದರು. ಇದರಿಂದ ಶಾಲಾ ಮಕ್ಕಳು ತಮ್ಮ ದೈನಂದಿನ ಜೀವನದಲ್ಲಿ ಗ್ರಾಹಕ ಜಾಗೃತಿ ಅಗತ್ಯ ತಿಳಿದುಕೊಳ್ಳಲು ಸಹಾಯವಾಯಿತು. ಕಾಲೇಜಿನ ಗ್ರಾಹಕ ವೇದಿಕೆ ಸಂಯೋಜಕ ಪ್ರವೀಣ್ ಡಿ., ಸ್ವಾತಿ ಶೆಟ್ಟಿ ಕಾರ್ಯಕ್ರಮ ಸಂಯೋಜಿಸಿದ್ದರು.

ಮಕ್ಕಳ ಮಾನಸಿಕ ದೃಢತೆ, ದೈಹಿಕ ಸಾಮರ್ಥ್ಯಕ್ಕೆ ಅಂಗನವಾಡಿಗಳು ಪೂರಕ: ಶಾಸಕ ನ್ಯಾಕ್

ಬಂಟ್ವಾಳ: ಪುಟಾಣಿ ಮಕ್ಕಳಿಗೆ ಶಾಲಾ ಪೂರ್ವಶಿಕ್ಷಣ ಒದಗಿಸುವ ಅಂಗನವಾಡಿ ಕೇಂದ್ರಗಳಲ್ಲಿ ನೀಡುವ ಪೌಷ್ಟಿಕ ಆಹಾರ, ಕಲಿಕೆಗಳು, ನಿಶ್ಚಿಂತೆಯ ವಾತಾವರಣ ಮಕ್ಕಳಲ್ಲಿರುವ ಮಾನಸಿಕ ಹಾಗೂ ದೈಹಿಕ ಸಮಸ್ಯೆಗಳನ್ನು ಹೋಗಲಾಡಿಸಲು ಪೂರಕವಾದ ಕೇಂದ್ರವಾಗಿದ್ದು, ಈ ನಿಟ್ಟಿನಲ್ಲಿ ಬಂಟ್ವಾಳದಲ್ಲಿರುವ ಎಲ್ಲಾ ಅಂಗನವಾಡಿ ಕೇಂದ್ರಗಳನ್ನು ವಿಶಿಷ್ಟ ರೀತಿಯಲ್ಲಿ ಮಾದರಿ ಅಂಗನವಾಡಿ ಕೇಂದ್ರಗಳನ್ನಾಗಿಸಲು ಯೋಜನೆ ರೂಪಿಸಲಾಗಿದೆ ಎಂದು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಹೇಳಿದ್ದಾರೆ.
ಬಂಟ್ವಾಳ ತಾಲೂಕು ಸಂಗಬೆಟ್ಟು ಗ್ರಾಮದ ಸಂಗಬೆಟ್ಟು ಬಾಕಿಮಾರ್ ಅಂಗನವಾಡಿ ಕೇಂದ್ರದ ನೂತನ ಕಟ್ಟಡವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.
ಅತಿಥಿಯಾಗಿದ್ದ ಬಂಟ್ವಾಳ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮುಮ್ತಾಜ್ ಎಚ್ .ಟಿ. ಮಾತನಾಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಐಸಿಡಿಎಸ್



ಕಾರ್ಯಕ್ರಮಗಳ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಇಲಾಖೆ ಅಂಗನವಾಡಿ ಕೇಂದ್ರಗಳ ಮೂಲಕ ಮಹಿಳೆಯರಿಗೆ ಸಬಲೀಕರಣಕ್ಕೆ ಅತ್ಯಂತ ಹೆಚ್ಚು ಮಹತ್ವ ನೀಡಲಾಗುತ್ತಿದ್ದೂ ಭಾಗ್ಯಲಕ್ಷ್ಮಿ ಯೋಜನೆಯಿಂದ ಮಕ್ಕಳ ಉನ್ನತ ವ್ಯಾಸಂಗಕ್ಕೆ ತುಂಬಾ ಅನುಕೂಲವಾಗಿದೆ. ಗೃಹಲಕ್ಷ್ಮೀ ಯೋಜನೆ ಮೂಲಕ ಮನೆಯ ಗ್ರಹಿಣಿಗೆ ಶಕ್ತಿ ನೀಡಲಾಗಿದೆ. ಅದರಂತೆ ಮಾತೃವಂದನಾ, ಸುಕನ್ಯಾ ಸಮೃದ್ಧಿ ಯೋಜನೆ , ಗರ್ಭಿಣಿಯರು, ಬಾಣಂತಿಯಾರಿಗೆ ಉಚಿತ ಪೌಷ್ಟಿಕ ಆಹಾರ ನೀಡುವ ಮೂಲಕ ಮಹಿಳೆಯರ ಸಂಘಟನೆ ಮತ್ತು ಒಗ್ಗಟ್ಟಿಗೆ ಅಂಗನವಾಡಿ ಕೇಂದ್ರ ಬಿಂದುವಾಗಿ ಸೇವೆ ಸಲ್ಲಿಸುತ್ತಿದೆ ಎಂದರು.

ಸಮಾಜದಲ್ಲಿ ಗೌರವಕ್ಕೆ ಅರ್ಹರು

ಸಿದ್ದಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತರು, ಶಾಲೆಯ ಬಿಸಿ ಊಟ ತಯಾರಕರು ಸರಕಾರ ನೀಡುವ ಸಣ್ಣ ಮಟ್ಟದ ಗೌರವಧನಕ್ಕೆ ಗರಿಷ್ಠ ಮಟ್ಟದ ಸೇವೆ ನೀಡುವ ಮೂಲಕ ಸಮಾಜದಲ್ಲಿ ಗೌರವಕ್ಕೆ ಅರ್ಹರಾಗಿದ್ದಾರೆ ಎಂದರು.
ಬಾಲ ವಿಕಾಸ ಸಮಿತಿಯ ಅಧ್ಯಕ್ಷರಾದ ಭವ್ಯಶ್ರೀ ' ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಿದ್ದಕಟ್ಟೆ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ರತ್ನಕುಮಾರ್ ಚೌಟ, ಬಾಲ ವಿಕಾಸ ಸಮಿತಿಯ ಸದಸ್ಯರು, ನಿವೃತ್ತ ಶಿಕ್ಷಕರಾದ ದಾಮೋದರ ರಾವ್, ಸಂಗಬೆಟ್ಟು ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ಉಮೇಶ್ ಕಿರಣ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪದ್ಮಾ ನಾಯ್ಕ್,

> **ಸನ್ಮಾನಿತರು**
> ಅಂಗನವಾಡಿ ಕೇಂದ್ರದಲ್ಲಿ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿ ನಿವೃತ್ತಿಗೊಂಡಿರುವ ಮೇರಿ ಎಲ್ವಿರಾ ಫಲೇರಾ, ಜೇನಿತಾ ಹಾಗೂ ಸಹಾಯಕಿರಾಗಿ ಸೇವೆ ಸಲ್ಲಿಸಿ ನಿವೃತ್ತಿಗೊಂಡ ಸರಸ್ವತಿ, ಲಲಿತ, ಪದ್ಮಾವತಿ ಅವರನ್ನು ಸನ್ಮಾನಿಸಲಾಯಿತು.

ನಾರಾಯಣ ಪೂಜಾರಿ ಉಪಸ್ಥಿತರಿದ್ದರು.
ಸಂಗಬೆಟ್ಟು ಗ್ರಾ.ಪಂ.ಮಾಜಿ ಅಧ್ಯಕ್ಷ ಸತೀಶ್ ಪೂಜಾರಿ ಅಲಕ್ಕೆ, ಉಪಾಧ್ಯಕ್ಷರಾದ ಸುರೇಶ್ ಕುಲಾಲ್, ವಿಮಲಾ ಮೋಹನ್, ಜಲಜ ಹರೀಶ್ ಕುಂದರ್, ಗ್ರಾ.ಪಂ. ಮಾಜಿ ಸದಸ್ಯರಾದ ಸುನೀಲ್ ಶೆಟ್ಟಿಗಾರ್, ಸಂದೇಶ ಶೆಟ್ಟಿ, ದಾಮೋದರ ಪೂಜಾರಿ, ಮಾದವ ಶೆಟ್ಟಿಗಾರ್, ಉದಯ ಪೂಜಾರಿ, ಭೋಜ ಶೆಟ್ಟಿಗಾರ್ ರೋಹಿತ್,ಲೋಕೇಶ್ ಪೂಜಾರಿ ಯಶೋದಾರ್ ಶೆಟ್ಟಿಗಾರ್,ಪ್ರೇಮಾ, ಪ್ರಮುಖರಾದ ಚಂದ್ರಹಾಸ್ ಶೆಟ್ಟಿಗಾರ್, ವಿಶ್ವನಾಥ್ ಶೆಟ್ಟಿಗಾರ್, ನವೀನ ಹೆಗ್ಡೆ,ದೀಪಕ್ ಶೆಟ್ಟಿಗಾರ್,ಉದಯ ಶೆಟ್ಟಿಗಾರ್ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ನೀತಾ, ಕಟ್ಟಡ ಗುತ್ತಿಗೆದಾರ ಉಮೇಶ್ ಗೌಡ ಅಂಗನವಾಡಿ ಸಹಾಯಕಿ ಸವಿತಾ ಉಪಸ್ಥಿತರಿದ್ದರು. ಅಂಗನವಾಡಿ ಕಾರ್ಯಕರ್ತೆ ಶಾರದಾ ಪ್ರಸ್ತಾವನೆಗೈದರು. ರೋಹಿಣಿ ಶೆಟ್ಟಿ ಸ್ವಾತಿಸಿದರು, ಪ್ರಜ್ವಲ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಸುತ್ತಮುತ್ತ

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ವಸತಿ ಶಾಲೆಗಳ ಪ್ರಾರಂಭ

ಉಪ್ಪುಂದ: ಬೆಂಗಳೂರಿನಲ್ಲಿ ನಡೆಯುತ್ತಿರುವ ಬಜೆಟ್ ಅಧಿವೇಶನದಲ್ಲಿ ರಾಜ್ಯದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಅಧೀನದಲ್ಲಿ ಇರುವ ವಸತಿ ಶಾಲೆಗಳ ಮೇಲೆ ಕ್ರಮಬದ್ಧವಾದ ನಿಯಂತ್ರಣ ಹಾಗೂ ವಸತಿ ಶಾಲೆಗಳಿಗೆ ಮೂಲ ಸೌಕರ್ಯ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಸುಧಾರಿಸುವ ಬಗ್ಗೆ ಶಾಸಕ ಗುರುರಾಜ ಗಂಟಿಹೊಳೆ ಕೇಳಿದ ಚುಕ್ಕೆ ರಹಿತ ಪ್ರಶ್ನೆಗೆ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ ಮಹಾದೇವಪ್ಪ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಹಾಗೂ ವಸತಿ ಶಾಲೆಗಳ ಶಿಕ್ಷಣ ಗುಣಮಟ್ಟ ಸುಧಾರಣೆಗಾಗಿ ಭಾಷೆ ಮತ್ತು ಗಣಿತ ವಿಷಯಗಳ ಮೂಲ ಸಾಮರ್ಥ್ಯಗಳ ಕಲಿಕೆ, ವಸತಿ ಶಾಲೆ, ಕಾಲೇಜುಗಳ ಗ್ರಂಥಾಲಯ ಪುನಶ್ಚೇತನ, ನಿರ್ವಹಣೆ ಹಾಗೂ ಅನುಪಾಲನೆ ಕಾರ್ಯಕ್ರಮಗಳು, ಮಾಹಿತಿ ತಂತ್ರಜ್ಞಾನ ಪಠ್ಯಕ್ರಮಗಳ ಅನುಸರಣೆ, ವೃತ್ತಿಕೌಶಲ, ವೃತ್ತಿ ಯೋಜನೆಗಳ ಕುರಿತು ತರಬೇತಿ, ಸಂಗೀತ ಶಿಕ್ಷಕರ ಮಾರ್ಗದರ್ಶಿ, ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆಯ ಬಳಕೆ, ಎಸ್‌ಎಸ್ ಎಲ್‌ಸಿ ಪರೀಕ್ಷಾ ಸುಧಾರಣೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಸೇರಿದಂತೆ ಇನ್ನಿತರ ಪೂರಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಾಸಕರ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಎನ್‌ಸಿಸಿ ಅಧಿಕಾರಿ ಭೇಟಿ

ಉಪ್ಪುಂದ: ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಸಿಸಿ ಘಟಕ ವೀಕ್ಷಣೆಗೆ ಎನ್‌ಸಿಸಿ ಕಾರ್ಯನಿರ್ವಹಣಾಧಿಕಾರಿ ಯಾಸೀನ್ ಮಲ್ತಾನಿ ಹಾಗೂ ಕಾರ್ಯಕ್ರಮ ಅಧಿಕಾರಿ ಜುಗ್ನು ಸಿಂಗ್ ಇತ್ತೀಚಿಗೆ ಅಧೀಕೃತ ಭೇಟಿ ನೀಡಿದರು. ಎನ್ ಸಿಸಿ ಕ್ಯಾಡೆಟ್‌ಗಳು ಗೌರವ ಸೂಚಕವಾಗಿ ಗಾರ್ಡ್ ಆಫ್ ಹಾನರ್ ಪ್ರದರ್ಶಿಸಿದರು. ನಂತರ ಕ್ಯಾಡೆಟ್ ಕ್ಯಾಪ್ಟನ್ ಕಾಲೇಜಿನ ಘಟಕದ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿಯನ್ನು ಮಂಡಿಸಿದರು. ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಶಿಸ್ತು, ನಾಯಕತ್ವ ಹಾಗೂ ದೇಶಭಕ್ತಿಯ ಮಹತ್ವವನ್ನು ವಿವರಿಸಿದರು. ಪ್ರಾಂಶುಪಾಲ ನಾಗರಾಜ ಶೆಟ್ಟಿ, ಎನ್‌ಸಿಸಿ ಕೇರ್‌ಟೇಕರ್ ಗೀತಾ ಸಂದಿಗೋಡಮಠ ಇದ್ದರು.

ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತ್ಯೋತ್ಸವ



ಉಪ್ಪುಂದ: ಉಪ್ಪುಂದ ಜಿಎಸ್‌ಬಿ ಸಮಾಜದ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದಲ್ಲಿ ಗುರುವಾರ ಪ್ರತಿಷ್ಠಾ ವರ್ಧಂತ್ಯೋತ್ಸವ ವೈಭವದಿಂದ ಜರುಗಿತು. ಬೆಳಿಗ್ಗೆ ದೇವಳದ ಪರ್ಯಾಯ ಅರ್ಚಕ ಯು. ಹರೀಶ ಭಟ್ ನೇತೃತ್ವದಲ್ಲಿ ದೇವತಾ ಪ್ರಾರ್ಥನೆ, ಶತಕಲಶಾಭಿಷೇಕ, ಮಧ್ಯಾಹ್ನ ವಿಶೇಷ ಅಲಂಕಾರ ಪೂಜೆ ನಂತರ ಸಂತರ್ಪಣೆ ನಡೆಯಿತು. ಪೂರ್ವಾಹ್ನ ಉಪ್ಪುಂದ ಶ್ರೀ ಲಕ್ಷ್ಮೀವೆಂಕಟರಮಣ ಭಜನಾ ಮಂಡಳಿಯವರಿಂದ ಭಕ್ತಿ ಗಾನಾಭಿಷೇಕ ನಡೆಯಿತು. ದೇವಳದ ವತಿಯಿಂದ ಮಂಡಳಿಯ ಸದಸ್ಯರನ್ನು ಗೌರವಿಸಲಾಯಿತು. ಸಂಜೆ ಬೆಳ್ಳಿಪಲ್ಲಕ್ಕಿ ಉತ್ಸವ, ಪುರ ಮೆರವಣಿಗೆ, ಅಷ್ಟಾವಧಾನ ಸೇವೆ ಹಾಗೂ ವಸಂತ ಪೂಜೆ ನಡೆಯಿತು. ದಿನದ ಸೇವಾದಾರರಾದ ಓಂಗಣೇಶ್ ನಾರಾಯಣ ಕಾಮತ್, ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಯು. ರಾಜೇಶ ಪೈ ಹಾಗೂ ಸರ್ವ ಸದಸ್ಯರು, ಸಮಾಜ ಬಾಂಧವರು ಇದ್ದರು.

ಎನ್ನೆಸ್ಸೆಸ್ ಸದಸ್ಯರಿಂದ ಸಾವಯವ ತೋಟಕ್ಕೆ ಭೇಟಿ


ಕುಂದಾಪುರ: ನಡೂರಿನ ಶ್ರೀವಾಣಿ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ಕುಂದಾಪುರ ಕೋಟೇಶ್ವರದ ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಅಂಗವಾಗಿ ಶಿಬಿರಾರ್ಥಿಗಳು ಮಂದಾರ್ತಿ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ ಸಾವಯವ ಕೃಷಿಯನ್ನು ಸುಮಾರು 40 ವರ್ಷಗಳಿಂದ ಮಾಡುತ್ತಿರುವ ಪ್ರಗತಿಪರ ಕೃಷಿಕ ಶಂಬು ಶಂಕರ್ ರಾವ್ ಅವರ ಕೃಷಿ ಭೂಮಿಗೆ ಕ್ಷೇತ್ರ ಭೇಟಿ ಮಾಡಿದರು. ಕೃಷಿಯನ್ನು ಲಾಭದಾಯಕವಾಗಿ ಮಾಡುವ ಸಾಧ್ಯತೆಗಳ ಕುರಿತು ಶಿಬಿರಾರ್ಥಿಗಳು ತಿಳಿದುಕೊಂಡರು. ಎನ್.ಎಸ್. ಎಸ್. ಕಾರ್ಯಕ್ರಮಾಧಿಕಾರಿಗಳಾದ ನಿರಂಜನ ಶರ್ಮ, ಶ್ರುತಿ ಆಚಾರ್ಯ ಎನ್. ಹಾಗೂ ರಂಜಿತ್ ಉಪಸ್ಥಿತರಿದ್ದರು.

ಎಚ್ಚೆತ್ತುಕೊಂಡ ಇಲಾಖೆ | ಕಾಮಗಾರಿಯಲ್ಲಿ ಆಗಿರುವ ಲೋಪ ಸರಿಪಡಿಸಿ ರಬ್ಬರ್ ಬೀಡಿಂಗ್ ಅಳವಡಿಕೆ

ಹತೋಟಿಗೆ ಬಂತು ಆತ್ರಾಡಿ ಕಿಂಡಿ ಅಣೆಕಟ್ಟೆ ನೀರು ಸೋರಿಕೆ

ಕುಂದಾಪುರ: ವಂಡ್ಸೆ ಗ್ರಾಮದ ಬಾಳಿಕೆರೆ ಸಮೀಪದ ಆತ್ರಾಡಿ ಬಳಿ ಚಕ್ರಾ ನದಿಗೆ ನಿರ್ಮಿಸಿರುವ ಕಿಂಡಿ ಅಣೆಕಟ್ಟಿನಲ್ಲಿ ದುರಸ್ತಿ ಬಳಿಕವೂ ಉಂಟಾಗಿದ್ದ ನೀರು ಸೋರಿಕೆ ಸಮಸ್ಯೆಯನ್ನು ಪರಿಹರಿಸಲಾಗಿದ್ದು, ಕಾಮಗಾರಿಯಲ್ಲಿ ಆಗಿರುವ ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಿ ದಪ್ಪನೆಯ ರಬ್ಬರ್ ಬೀಡಿಂಗ್ ಅಳವಡಿಸಿ ನೀರು ಸೋರಿಕೆಯನ್ನು ಸಂಪೂರ್ಣವಾಗಿ ಹತೋಟಿಗೆ ತರಲಾಗಿದೆ.

ಈ ಅಣೆಕಟ್ಟು ನಿರ್ಮಾಣಗೊಂಡು ಸುಮಾರು 2 ವರ್ಷ ಕಳೆದರೂ ರೈತರಿಗೆ ಮಾತ್ರ ಇನ್ನೂ ಇದರ ಪೂರ್ಣ ಪ್ರಮಾಣದ ಪ್ರಯೋಜನ ಸಿಕ್ಕಿರಲಿಲ್ಲ. ಡ್ಯಾಂ ನಿರ್ಮಿಸಿದ ವರ್ಷದೊಳಗೆ ನೀರು ಸೋರಿಕೆಯಾಗುತ್ತಿದ್ದರಿಂದ ರೈತರಿಂದ ಆಕ್ರೋಶ ವ್ಯಕ್ತವಾಗಿತ್ತು. ಅದಕ್ಕೆ ಮತ್ತೆ ದುರಸ್ತಿಗಾಗಿ ಅನುದಾನಕ್ಕಾಗಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅದಕ್ಕೆ 2 ಕೋಟಿ ರೂಪಾಯಿ ಹೆಚ್ಚುವರಿಯಾಗಿ ಮಂಜೂರಾಗಿ ಡ್ಯಾಮ್ ದುರಸ್ತಿ ಮಾಡಿದರೂ, ಅಣೆಕಟ್ಟಿನಲ್ಲಿ ನೀರು ಸೋರಿಕೆಯನ್ನು ಮಾತ್ರ



ತಡೆಗಟ್ಟಲು ಆಗಿರಲಿಲ್ಲ. ಅಣೆಕಟ್ಟಿನಲ್ಲಿ ನಿರಂತರ ನೀರು ಸೋರಿಕೆಯಾಗುತ್ತಿರುವುದರಿಂದ ಈವರೆಗೆ ಸಂಗ್ರಹಿಸಿದ ನೀರನ್ನೂ ಸಹ ಉಳಿಸಿಕೊಳ್ಳಲು ಹೆಣಗಾಡುವಂತಾಗಿತ್ತು.

ಇದರಿಂದ ಎಚ್ಚೆತ್ತುಕೊಂಡ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಅಣೆಕಟ್ಟಿನಿಂದ ನೀರು ಸೋರಿಕೆ ಆಗುವುದನ್ನು ಸರಿಪಡಿಸಿದ್ದಾರೆ. ಇದೀಗ ನೀರು ಸೋರಿಕೆ ಸಂಪೂರ್ಣವಾಗಿ ನಿಂತಿದ್ದು, ಅಣೆಕಟ್ಟಿನಲ್ಲಿ ನೀರಿನ ಶೇಖರಣೆ ಹೆಚ್ಚಾಗುತ್ತಿದೆ. ಮೇ ತನಕ ಈ ಅಣೆಕಟ್ಟಿನ ಮೂಲಕ ಕೃಷಿ ಚಟುವಟಿಕೆ ಮೊದಲಾದ ಕಾರ್ಯಗಳಿಗೆ ಬಳಸಿಕೊಳ್ಳುವಷ್ಟು ನೀರು ಸಂಗ್ರಹವಾಗುತ್ತಿದೆ. ನೂರಾರು ಎಕರೆ ಕೃಷಿ ಭೂಮಿಗೆ ನೀರುಣಿಸುವ, ವಂಡ್ಸೆ, ಕಟ್‌ಬೇಲ್ತೂರು, ದೇವಲ್ಕುಂದ ಗ್ರಾಮಗಳ ಪ್ರದೇಶದಲ್ಲಿ ಅಂತರ್ಜಲ ಮಟ್ಟ ವೃದ್ಧಿಸುವ ಮಹತ್ವಾಕಾಂಕ್ಷೆಯ ಉದ್ದೇಶದಿಂದ ಆತ್ರಾಡಿ ಬಳಿ ಸೇತುವೆ ಸಹಿತ ಕಿಂಡಿ ಅಣೆಕಟ್ಟನ್ನು ಸಣ್ಣ ನೀರಾವರಿ ಇಲಾಖೆಯಿಂದ 7.50 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿತ್ತು.

> **ದುರಸ್ತಿ ಕಾರ್ಯ**
>
> ಬಾಳಿಕೆರೆ ಸಮೀಪ ಆತ್ರಾಡಿ ಡ್ಯಾಮ್‌ನಲ್ಲಿ ನೀರು ಸೋರಿಕೆ ತಡೆಗಟ್ಟಲು ದುರಸ್ತಿ ಕಾರ್ಯ ಸಮರ್ಪಕವಾಗಿ ನಡೆದಿದೆ. ನೀರು ಸಂಗ್ರಹ ಸಾಮರ್ಥ್ಯ ಉದ್ದೇಶದಿಂದ ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ಡ್ಯಾಮ್ ಎತ್ತರವನ್ನು ಮೂರು ಅಡಿ ಹೆಚ್ಚಿಸಲಾಗಿದೆ. ಕಾಮಗಾರಿಯಲ್ಲಿ ಆಗಿರುವ ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಿ ನೀರು ಸೋರಿಕೆಯನ್ನು ಸಂಪೂರ್ಣವಾಗಿ ಹತೋಟಿಗೆ ತರಲಾಗಿದೆ. ಇದರಿಂದ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ.
>
> ● ಎ.ಬಿ.ಶೆಟ್ಟಿ, ಸಿವಿಲ್ ಇಂಜಿನಿಯರ್, ಆತ್ರಾಡಿ

> **ನೀರಿನ ಸಮಸ್ಯೆಗೆ ಸಿಗಲಿದೆ ಪರಿಹಾರ**
>
> ಭತ್ತದ ಬೆಳೆ, ಅಡಿಕೆ ಬೆಳೆಗಳಿಗೆ ನೀರು ಒದಗಿಸುವುದಲ್ಲದೇ, ಬೇಸಿಗೆಯಲ್ಲಿ ಈ ಭಾಗದ ಬಾವಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಈ ಡ್ಯಾಮ್ ಪ್ರಯೋಜನ ಆಗುವ ಸಾಧ್ಯತೆ ಇದೆ. ಆತ್ರಾಡಿ ಕಿಂಡಿ ಅಣೆಕಟ್ಟಿಗೆ ಉಪ್ಪು ನೀರಿನ ಸಮಸ್ಯೆ ಅಷ್ಟೊಂದು ಇಲ್ಲ, ಹಾಗಾಗಿ ಭರಪೂರ ಸಿಹಿ ನೀರು ಹಿಡಿದಿಡುವ ಸಾಮರ್ಥ್ಯ ಈ ಆತ್ರಾಡಿ ಅಣೆಕಟ್ಟಿಗೆ ಇದೆ. ಇದರಿಂದ ವಂಡ್ಸೆ ಹೋಬಳಿಗೆ ನೀರಿನ ಪೂರೈಕೆ, ಬಹುಮುಖ್ಯವಾಗಿ ವಂಡ್ಸೆ ಗ್ರಾಮದ ಕುಡಿಯುವ ನೀರಿನ ಸಮಸ್ಯೆಗೂ ಪರಿಹಾರ ಸಿಕ್ಕಂತಾಗಲಿದೆ. ಡ್ಯಾಮ್‌ನ ಮೂರು ಕಡೆಗಳಲ್ಲಿ ಹೊಳೆಯ ದಂಡೆ ತಗ್ಗಾಗಿದ್ದು, ನೀರು ಒಳಗ ನುಗ್ಗದಂತೆ ಕಿಂಡಿ ಅಣೆಕಟ್ಟಿನ ಅಗತ್ಯತೆ ಇದೆ. ಹೊಳೆಯ ದಂಡೆ ತಗ್ಗು ಇರುವ ಕಡೆ ನದಿ ದಂಡೆ ಸಂರಕ್ಷಣಾ ಕಾಮಗಾರಿ ಕೂಡ ನಡೆಯಬೇಕು ಎಂದು ಈ ಭಾಗದ ರೈತರು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ.

ಕಿನ್ನಿಗೋಳಿ ಕಾಳಿಕಾಂಬಾ ಮಹಿಳಾ ವೃಂದದಿಂದ ಮಹಿಳಾ ದಿನಾಚರಣೆ



ಕಿನ್ನಿಗೋಳಿ: ಮಹಿಳೆಯರು ತನ್ನ ಹೆಚ್ಚಿನ ಸಮಯವನ್ನು ತಮ್ಮಕುಟುಂಬದ ಜೊತೆ ಕಳೆಯುವವರಾಗಿದ್ದಾರೆ, ಒತ್ತಡ ಜೀವನದಲ್ಲೂ ಮಹಿಳಾ ಮಂಡಳಿ ಮೂಲಕ ಸಮಾಜ ಮುಖಿ ಕಾರ್ಯದಲ್ಲಿ ತೊಡಗಿಸಿಕೊಂಡು ವಿವಿಧ ಚಟುವಟಿಕೆಗಳನ್ನು ನಡೆಸುವುದರ ಮೂಲಕ ಕ್ರಿಯಾಶೀಲರಾಗಿರುವುದು ಅಭಿನಂದನೀಯ ಎಂದು ಕಟೀಲು ಪದವಿ ಕಾಲೇಜಿನ ಉಪನ್ಯಾಸಕಿ ಡಾ. ವನಿತಾ ಶೆಟ್ಟಿ ಹೇಳಿದರು.

ಅವರು ಕಿನ್ನಿಗೋಳಿ ರಾಜರತ್ನಪುರ ಸರಾಫ್ ಅಣ್ಣಯ್ಯಾ ಆಚಾರ್ ಸಭಾಭವನದಲ್ಲಿ ಕಿನ್ನಿಗೋಳಿ ಕಾಳಿಕಾಂಬಾ ಮಹಿಳಾ ವೃಂದಾ ಇವರ ವತಿಯಿಂದ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಆಶಾ ಕಾರ್ಯಕರ್ತೆ ವಿಶಾಲಾಕ್ಷಿ ಗಂಗಾಧರ ಆಚಾರ್ಯ ಅವರನ್ನು ಸಮ್ಮಾನಿಲಾಯಿತು.

ವಿಶ್ವಬ್ರಾಹ್ಮಣ ಸೇವಾ ಸಮಾಜದ ಅಧ್ಯಕ್ಷ ಜಗದೀಶ್ ಆಚಾರ್ಯ ಸುರಗಿರಿ, ಕಟ್ಟಡ ಸಮಿತಿಯ ಶಿಲ್ಪಿ ಶ?ವ್ರಸಾದ್ ಆಚಾರ್ಯ, ಸಂಸ್ಥೆಯ ಅಧ್ಯಕ್ಷೆ ಶಶಿಕಲಾ ಯೋಗೀಶ್ ಆಚಾರ್ಯ ಉಪಸ್ಥಿತರಿದ್ದರು. ಶಶಿಕಲಾ ಯೋಗೀಶ್ ಸ್ವಾಗತಿಸಿ, ರೂಪ ದೇವರಾಜ್ ಧನ್ಯವಾದ ಸಮರ್ಪಿಸಿದರು. ಪ್ರತಿಮಾ ಪ್ರಕಾಶ್ ನಿರೂಪಿಸಿದರು

ನಾಪೋಕ್ಲು: ಮೊಮ್ಮಕ್ಕಡ ಪರಿಷತ್‌ನಿಂದ ಪೊಮ್ಮಕ್ಕಳ ನಾಳ್



ನಾಪೋಕ್ಲು: ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾದದು ಎಂದು ಮೈಸೂರಿನ ಪ್ರಾದೇಶಿಕ ಭವಿಷ್ಯ ನಿಧಿ ಕಾರ್ಯಾಲಯದ ಮುಂಡಂಡ ಮೈನಾ ಮುತ್ತಮ್ಮ ಹೇಳಿದರು.

ಕೊಡವ ಸಮಾಜದ ಮೊಮ್ಮಕ್ಕಡ ಪರಿಷತ್ ವತಿಯಿಂದ ಭಾನುವಾರ ಕೊಡವ ಸಮಾಜದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪೊಮ್ಮಕ್ಕಳ ನಾಳ್ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಷ್ಟ್ರ ಪ್ರಶಸ್ತಿ ವಿಜೇತೆ ಕೊಟ್ಟುಕತ್ತಿರ ಯಶೋಧ ಪ್ರಕಾಶ್, ಬ್ಯಾಂಕಿನ ನಿವೃತ್ತ ಉದ್ಯೋಗಿ ಮೂವೇರ ಮೀನ ಕಾರ್ಯಪ ಮಾತನಾಡಿದರು. ನಾಪೋಕ್ಲು ಕೊಡವ ಸಮಾಜ ಪೊಮ್ಮಕಡ ಪರಿಷತ್ ಅಧ್ಯಕ್ಷೆ ಬಾಳೆಯಡ ನಿಶಾ ಮೇದಪ್ಪಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ಕೊಟ್ಟುಕತ್ತಿರ ಯಶೋಧ ಪ್ರಕಾಶ್ ನಿವೃತ್ತ ಲೆಫ್ಟಿನೆಂಟ್ ಕರ್ನಲ್ ತೊತ್ಯಂಡ ಸಬಿತರನ್ನು ಮೊಮ್ಮಕ್ಕಡ ಪರಿಷತ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಅರೆಯಡ ಸರಸು ಪೆಮ್ಮಯ್ಯ ಪ್ರಾರ್ಥಿಸಿ ಕೋಟೆರ ಝಾನ್ಸಿ ವೇದಪ್ಪ ಸ್ವಾಗತಿಸಿದರು ಅತಿಥಿಗಳ ಪರಿಚಯ ನಾಯಕಡ ಜುಬಿ ತಿಮ್ಮಯ್ಯ. ಪೆಮ್ಮಂಡ ಕೌಶಿ ದಿನೇಶ್, ಕಾಂಡಂಡ ಪ್ರತಿಜಾ ಅಚ್ಚಪ್ಪ, ಮುಕ್ಕಾಟಿರ ರೇಷ್ಮಾ ಮೋಹನ್. ಮಾಡಿದರು. ಬಿದ್ದಾಟಂಡ ಮಮತಾ ಚಿಣ್ಣಪ್ಪ, ಕದ್ದನಿಯಂಡ ವಂದನಾ ಚಿನ್ನಪ್ಪ ಕಾರ್ಯಕ್ರಮ ನಿರೂಪಿಸಿದರು. ಕಲಿಯಂಡ ಗೀತಾ ಗಿರೀಶ್ ವಂದಿಸಿದರು.

ಒಂಭತ್ತುದಂಡಿಗೆ ಪಡುಕೇರಿ ಯುವ ಮಿತ್ರ ವೃಂದದಿಂದ ವಾರ್ಷಿಕ ಸಂಭ್ರಮ



ಕುಂದಾಪುರ: ಯುವ ಮಿತ್ರ ವೃಂದ ಪಡುಕೇರಿ ಇದರ 31ನೇ ವರ್ಷದ ವಾರ್ಷಿಕ ಸಂಭ್ರಮವು ಒಂಭತ್ತುದಂಡಿಗೆ ಪಡುಕೇರಿಯ ಶ್ರೀ ಚಿಕ್ಕಮ್ಮ ದೇವಿ ದೇವಸ್ಥಾನ ವಸುಪ್ರದಾಯಿನಿ ರಂಗ ಮಂಟಪದಲ್ಲಿ ಶನಿವಾರ ಜರುಗಿತು.

ದೇವಳದ ಆಡಳಿತ ಮಂಡಳಿಯ ಅಧ್ಯಕ್ಷ ನಾಗರಾಜ್ ಕಾಮಧೇನು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿ ಕುಂದಾಪುರ ಬಾರ್ ಅಸೋಸಿಯೇಶನ್ ಅಧ್ಯಕ್ಷ ಗೋಪಾಲಕೃಷ್ಣ ಶೆಟ್ಟಿ ಶಿರಿಯಾರ ಶುಭಾಶಂಸನೆಗೈದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ವಾಸುದೇವ ಹಂದೆ ಮತ್ತು ರಾಷ್ಟ್ರಮಟ್ಟದ ಪವರ್ ಲಿಫ್ಟರ್ ಲಕ್ಷ್ಮೀಶ ಗಾಣಿಗ ಅವರನ್ನು ಸನ್ಮಾನಿಸಲಾಯಿತು. ರಾಜೇಶ್ ರಾವ್ ಪಡುಕೇರಿ ಬಹುಮಾನ ವಿತರಿಸಿದರು. ಮಹಿಳಾ ಮಂಡಳಿಯ ಅಧ್ಯಕ್ಷೆ ರಾಜೀವ್ ಪ್ರಭಾಕರ್ ಉಪಸ್ಥಿತರಿದ್ದರು.

ಯುವ ಮಿತ್ರವಂದದ ಅಧ್ಯಕ್ಷ ಶ್ರೀನಿವಾಸ ಬೀರಿ ಸ್ವಾಗತಿಸಿದರು. ಗೌರವ ಅಧ್ಯಕ್ಷ ಅಮರ್ ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯದರ್ಶಿ ಮಹೇಶ್ ನಾಯಕ್ ವಂದಿಸಿದರು. ಭಂಡಾರ್ಕಾರ್ಸ್ ಕಾಲೇಜಿನ ಪ್ರಾಧ್ಯಾಪಕಿ ರೇಣುಕಾ ಪ್ರಸಾದ್ ನಿರ್ವಹಿಸಿದರು.

ಎಲ್ಲರೂ ಅನ್ಯೋನ್ಯತೆಯಿಂದ ಬದುಕಿದಾಗ ಸುಂದರ ಸಮಾಜ ನಿರ್ಮಾಣ: ರಮಾನಾಥ ರೈ



ಬಂಟ್ವಾಳ : ಮಾಜಿ ಸಚಿವ ಬಿ. ರಮಾನಾಥ ರೈ ನೇತೃತ್ವದಲ್ಲಿ ಸೌಹಾರ್ದ ಇಫ್ತಾರ್ ಕೂಟ ಶನಿವಾರ ಪಾಣೆಮಂಗಳೂರು ಸಾಗರ್ ಆಡಿಟೋರಿಯಂನಲ್ಲಿ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಬಿ, ರಮಾನಾಥ ರೈ ಮಾತನಾಡಿ, ಸರ್ವ ಧರ್ಮೀಯರು ಪರಸ್ಪರ ಅನ್ಯೋನ್ಯತೆಯಿಂದ ಬಾಳಿ ಬದುಕಿದಾಗ ಸುಂದರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಮಾತನಾಡಿ, ಐಕ್ಯತೆ, ಭಾವೈಕ್ಯತೆ, ಮಾನವೀಯತೆಯೊಂದಿಗೆ ಜಗತ್ತನ್ನು ಪ್ರೀತಿಸುವ ಜತೆಗೆ ಭಗವಂತನನ್ನು ಹತ್ತಿರಗೊಳಿಸುವ ಕಾರ್ಯವೇ ಹಬ್ಬಗಳ ಉದ್ದೇಶವಾಗಿದೆ ಎಂದರು.

ಮೊಡಂಕಾಪು ಇನ್ಫೆಂಟ್ ಜೀಸಸ್ ಚರ್ಚಿನ ಪ್ರಧಾನ ಧರ್ಮಗುರು ರೆ.ಫಾ.ವಿಕ್ಟರ್ ಡಿಸೋಜಾ ಮಾತನಾಡಿ, ನಮ್ಮ ಜೀವನವೇ ಧರ್ಮಗ್ರಂಥಗಳಾಗಿದ್ದು, ಅದಕ್ಕೆ ಬದ್ಧರಾಗಿ ನಾವು ಬದುಕಿದಾಗ ಸಮಾಜದಲ್ಲಿ ಸೌಹಾರ್ದ ಮೂಡಲು ಸಾಧ್ಯವಿದೆ ಎಂದರು.

ಮಂಗಳೂರು ಶಾಂತಿ ಪ್ರಕಾಶನದ ಅಧ್ಯಕ್ಷ ಮುಹಮ್ಮದ್ ಕುಂಞಿ ಮಾತನಾಡಿ, ಜಾತಿ, ಧರ್ಮಗಳನ್ನು ಮೀರಿ ನಾವು ಒಟ್ಟು ಸೇರಿದಾಗ ಶಾಂತಿ–ಸಾಮರಸ್ಯದ ಸಮಾಜ ನಿರ್ಮಾಣ ಸಾಧ್ಯ ಎಂದರು.

ನೆಹರೂನಗರ ಮಸೀದಿ ಖತೀಬ್ ದಾವೂದ್ ಇಸ್ಮಾಯಿಲ್ ಫೈಝಿ ಪ್ರಾರ್ಥನೆ ನೇತೃತ್ವ ವಹಿಸಿದ್ದರು. ವಿವಿಧ ಕ್ಷೇತ್ರದ ಗಣ್ಯರಾದ ಡಾ.ಯು. ಟಿ.ಇಫ್ತಿಕಾರ್, ಪದ್ಮರಾಜ್ ಆರ್. ಪೂಜಾರಿ, ಹರೀಶ್ ಇಂಜಾಡಿ, ಪಿಯೂಸ್ ಎಲ್. ರಾಡ್ರಿಗಸ್, ಚಂದ್ರಪ್ರಕಾಶ್ ಶೆಟ್ಟಿ ತುಂಬೆ, ಬಿ.ಎಂ.ಅಬ್ಬಾಸ್ ಅಲಿ, ಚಂದ್ರಶೇಖರ ಭಂಡಾರಿ, ಬಾಲಕೃಷ್ಣ ಅಂಚನ್, ಇಬ್ರಾಹಿಂ ನವಾಝ್ ಬಡಕಬೈಲ್, ಸುದೀಪ್ ಕುಮಾರ್ ಶೆಟ್ಟಿ ಬೇಬಿ ಕುಂದರ್, ಪದ್ಮಶೇಖರ್ ಜೈನ್, ಅಶ್ವನಿಕುಮಾರ್ ರೈ, ಹಾಜಿ ಪಿ.ಎಸ್. ಅಬ್ದುಲ್ ಹಮೀದ್, ಡಾ.ರಾಜಾರಾಮ್ ಕೆ.ಬಿ, ಕಾವು ಹೇಮನಾಥ ಶೆಟ್ಟಿ ಮುಸ್ತಫಾ ಸುಳ್ಯ, ಮುಹಮ್ಮದ್ ಅಲಿ ಪುತ್ತೂರು, ವೆಂಕಪ್ಪ ಗೌಡ ಸುಳ್ಯ, ಪ್ರಶಾಂತ್ ಕಾಜವ, ಎಂ.ಶಶಿಧರ್ ಹೆಗ್ಡೆ ವಕೀಲರಾದ ಎಂ.ಚಂದ್ರಶೇಖರ್ ಪೂಜಾರಿ, ಸುರೇಶ್ ಪೂಜಾರಿ, ಸುರೇಶ್ ನಾವೂರು, ಕೆ.ಪದ್ಮನಾಭ ರೈ, ಹೈಡಾ ಸುರೇಶ್, ಮಮತಾ ಗಟ್ಟಿ ಎ.ಬಿ.ಅಬ್ದುಲ್ಲಾ, ನಿರಂಜನ್ ರೈ, ಸತೀಶ್ ಪೂಜಾರಿ ಕೊಪ್ಪರಿಗೆ, ಸಚಿನ್ ಬೆಳ್ಳಾರೆ, ಮುಹಮ್ಮದ್ ನಂದಾವರ, ಸಿರಾಜ್ ಮದಕ, ಅಲ್ತಾಫ್ ಕುಲಾಯಿ, ರಿಯಾಝ್ ನೆಹರು ನಗರ, ಮತ್ತಿತರರಿದ್ದರು. ಪತ್ರಕರ್ತ ಲತೀಫ್ ನೇರಳಕಟ್ಟೆ ನಿರೂಪಿಸಿದರು.

ಬಂಟ್ವಾಳ: ಯುವವಾಹಿನಿಯಿಂದ ಡೆನ್ನಾನ ಡೆನ್ನನ ಲೋಗೋ ಅನಾವರಣ



ಬಂಟ್ವಾಳ: ಯುವವಾಹಿನಿ ಕೇಂದ್ರ ಸಮಿತಿಯ ಆಶ್ರಯದಲ್ಲಿ ಬಂಟ್ವಾಳ ಘಟಕದ ಆತಿಥ್ಯದಲ್ಲಿ ಏ. 19 ರಂದು ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯುವ ಯುವವಾಹಿನಿ ಅಂತರ್ ಘಟಕ ಸಾಂಸ್ಕೃತಿಕ ಸ್ಪರ್ಧೆ ಡೆನ್ನಾನ ಡೆನ್ನನ ಲೋಗೋವನ್ನು ಕಿಯೋನಿಕ್ಸ್ ನಿಗಮದ ಮಾಜಿ ಅಧ್ಯಕ್ಷರಾದ ಹರಿಕೃಷ್ಣ ಬಂಟ್ವಾಳ್ ಹಾಗೂ ಬಂಟ್ವಾಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್ ಅನಾವರಣಗೊಳಿಸಿದರು

ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷರಾದ ಅಶೋಕ್ ಕುಮಾರ್ ಪಡ್ಪು ಆಮಂತ್ರಣ ಪತ್ರ ಬಿಡುಗಡೆಗೊಳಿಸಿದರು

ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಡೆನ್ನನ ಪ್ರಧಾನ ಸಂಚಾಲಕರು ಶ್ರೀನಿವಾಸ ಪೂಜಾರಿ ಮೆಲ್ಕಾರ್, ಜೊತೆ ಕಾರ್ಯದರ್ಶಿ ಆನಂದ ಶಂಬೂರು, ಯುವವಾಹಿನಿ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ರೇಖಾ ಗೋಪಾಲ್, ಪ್ರಥಮ ಉಪಾಧ್ಯಕ್ಷರಾದ ವಿದ್ಯಾ ರಾಕೇಶ್, ದ್ವಿತೀಯ ಉಪಾಧ್ಯಕ್ಷರಾದ ಸುರೇಶ್ ಪೂಜಾರಿ, ಕೋಶಾಧಿಕಾರಿ ಸತೀಶ್ ಕಿಲ್ಪಾಡಿ, ಸಮಾವೇಶ ನಿರ್ದೇಶಕರಾದ ಅಜಿತ್ ಪಾಲೇರಿ, ಪ್ರಚಾರ ನಿರ್ದೇಶಕರಾದ ಶಿವಪ್ರಸಾದ್ ನೂಚಿಲ, ಸಂಘಟನಾ ಕಾರ್ಯದರ್ಶಿ ನಾಗೇಶ್ ಪೂಜಾರಿ ಹಾಗೂ ಯುವವಾಹಿನಿ ಬಂಟ್ವಾಳ ಘಟಕದ ಕಾರ್ಯದರ್ಶಿ ಮಧುಸೂದನ್ ಮದ್ವ, ಕೋಶಾಧಿಕಾರಿ ನವೀನ್ ಪೂಜಾರಿ ಲೊರೆಟ್ಟೋ, ಉಪಾಧ್ಯಕ್ಷರಾದ ನಿಕೇಶ್ ಕೋಟ್ಯಾನ್, ಸಾಂಸ್ಕೃತಿಕ ನಿರ್ದೇಶಕರಾದ ಶೈಲೇಶ್ ಪೂಜಾರಿ ಕುಚ್ಚಿಗುಡ್ಡೆ, ಡೆನ್ನಾನ ಸಂಚಾಲಕರಾದ ಸಂಚಾಲಕರಾದ ಉದಯ ಪೂಜಾರಿ ಮೇನಾಡು, ಸತೀಶ್ ಪೂಜಾರಿ ಬಾಯಿಲ, ಸಲಹೆಗಾರರಾದ ರಾಮಚಂದ್ರ ಸುವರ್ಣ ತುಂಬೆ ಇದ್ದರು. ಯುವವಾಹಿನಿ ಬಂಟ್ವಾಳ ಘಟಕದ ಅಧ್ಯಕ್ಷರಾದ ನಾಗೇಶ್ ಪೂಜಾರಿ ನೈಬೇಲು ನಿರೂಪಿಸಿದರು

ಪುಲ್ಕೇರಿ ಶಾಲೆ ಅಮೃತ ಮಹೋತ್ಸವ ಸಂಭ್ರಮ: ಆಮಂತ್ರಣ ಪತ್ರಿಕೆ ಬಿಡುಗಡೆ



ಕಾರ್ಕಳ : ಶ್ರೀರಾಮಪ್ಪ ಎಜುಕೇಶನ್ ಟ್ರಸ್ಟ್, ವಿದ್ಯಾ ಭಾರತಿ ಸಂಯೋಜಿತ ಕಾರ್ಕಳ ಪುಲ್ಕೇರಿ ಶ್ರೀರಾಮಪ್ಪ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಹಳೆ ವಿದ್ಯಾರ್ಥಿ ಸಂಘ ಜಂಟಿ ಆಶ್ರಯದಲ್ಲಿ ಅಮೃತ ಮಹೋತ್ಸವ ಹಾಗೂ ನೂತನ ಕಟ್ಟಡ ಲೋಕಾರ್ಪಣೆಯ ಆಮಂತ್ರಣ ಪತ್ರಿಕೆಯ ಬಿಡುಗಡೆ ಸಮಾರಂಭವು ಕಾರ್ಕಳ ಆನೆಕೆರೆ ಶ್ರೀ ಕೃಷ್ಣ ಕ್ಷೇತ್ರದಲ್ಲಿ ನಡೆಯಿತು. ಹಳೆ ವಿದ್ಯಾರ್ಥಿ ಹಾಗೂ ಉದ್ಯಮಿ ಕೆ. ಉಮೇಶ್ ರಾವ್ ಬಿಡುಗಡೆಗೊಳಿಸಿದರು. ಶ್ರೀ ಕೃಷ್ಣ ಕ್ಷೇತ್ರದ ಪ್ರಧಾನ ಅರ್ಚಕ ಸದಾನಂದ ಶಾಂತಿ, ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಶ್ರೀಧರ್ ಎನ್. ಸುವರ್ಣ, ಕೋಶಾಧಿಕಾರಿ ಸಂತೋಷ್ ಹೆಗ್ಡೆ ಅಮೃತ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ಚಂದ್ರಶೇಖರ ಹೆಗ್ಡೆ ಅಧ್ಯಕ್ಷ ಡಾ. ಜ್ಞಾನೇಶ್ ಕಾಮತ್, ಕಾರ್ಯದರ್ಶಿ ಹರೀಶ್ ಅಂಚನ್, ಸಂಚಾಲಕ ಪ್ರಕಾಶ್ ರಾವ್, ನಿವೃತ್ ಅಧ್ಯಾಪಕ ಅಣ್ಣು ಮಾಸ್ಟ್ರು,ಅಧ್ಯಾಪಕ ಸುಧಾಕರ್, ಸಮಿತಿಯ ಸದಸ್ಯರಾದ ವಸಂತ್. ಎಂ,ಸಂತೋಷ್ ರಾವ್, ತಾರನಾಥ ಕೋಟ್ಯಾನ್ ಇದ್ದರು.



ಬಜಪೆಯಲ್ಲಿ ಇಂದಿರಾ ಕ್ಯಾಂಟೀನನ್ನು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಶನಿವಾರ ಉದ್ಘಾಟಿಸಿದರು. ಬಜಪೆ ಪಟ್ಟಣ ಪಂಚಾಯತ್ ಅಧ್ಯಕ್ಷ ಲೋಕೇಶ್ ಪೂಜಾರಿ, ಕೌನ್ಸಿಲರ್ ಗಳು, ಪಟ್ಟಣ ಪಂಚಾಯತ್ ಅಧಿಕಾರಿಗಳು, ಪ್ರಮುಖರು ಇದ್ದರು.

ಎಲ್ಲೂರು ವಿಶ್ವಕರ್ಮ ಸಮಾಜ ಸೇವಾ ಸಂಘದ ಶ್ರೀ ವಿಶ್ವಕರ್ಮ ಪೂಜೆ | ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಆಶಯ

ಉತ್ತಮ ಸಮಾಜ ನಿರ್ಮಾಣಕ್ಕೆ ಜಾತಿ, ಧರ್ಮ ಮೀರಿ ಎಲ್ಲರೂ ಕೈ ಜೋಡಿಸೋಣ

ಪಡುಬಿದ್ರಿ: ಉತ್ತಮ ಸಮಾಜ ನಿರ್ಮಾಣಕ್ಕೆ ಜಾತಿ ಧರ್ಮ ಪಂಥ ಮೀರಿ ಎಲ್ಲರೂ ಕೈ ಜೋಡಿಸಬೇಕಿದೆ. ಎಲ್ಲೂರು ವಿಶ್ವಕರ್ಮ ಸಮಾಜ ಸೇವಾ ಸಂಘವು ಜನಮಾನಸದ ಜೊತೆ ಬೆರೆತು ನಡೆಸುವ ಚಟುವಟಿಕೆಯೂ ಸಮಾಜಕ್ಕೆ ಮಾದರಿಯಾಗಿದ್ದು, ಸಭಾಭವನ ನಿರ್ಮಾಣಕ್ಕೆ ಅನುದಾನ ಒದಗಿಸಲು ಪ್ರಾಮಾಣಿಕ ಪ್ರಯತ್ನಿಸುವುದಾಗಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಭರವಸೆಯನ್ನು ನೀಡಿದರು.

ಭಾನುವಾರ ಎಲ್ಲೂರು ಕಂಚುಗರ ಕೇರಿಯ ಎಲ್ಲೂರು ವಿಶ್ವಕರ್ಮ ಸಮಾಜ ಸೇವಾ ಸಂಘದ ಶ್ರೀ ವಿಶ್ವಕರ್ಮ ಪೂಜೆ, ಮಹಾಸಭೆ, ಶ್ರೀ ಕಾಳಿಕಾ ಮಹಿಳಾ ಬಳಗದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಬೆಳಪು ಸಹಕಾರಿ ಸೇವಾ ಸಂಘದ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು



ಮಾತನಾಡಿ, ದೇಶಕ್ಕೆ ವಿಶ್ವಕರ್ಮ ಶಿಲ್ಪಿಗಳ ಕೊಡುಗೆ ಸ್ಮರಣೀಯ. ವಿಶ್ವಕರ್ಮ ಸಮಾಜಕ್ಕೆ ಸರ್ಕಾರ ದೊಡ್ಡ ಮಟ್ಟದ ಕೊಡುಗೆ ನೀಡಬೇಕಿದೆ ಎಂದರು.

ಅವಿಭಜಿತ ದ.ಕ.ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷ ಮಧು ಆಚಾರ್ಯ ಮುಲ್ಕಿ ಮಾತನಾಡಿ, ಭಾರತದ ಪ್ರವಾಸೋದ್ಯಮಕ್ಕೆ ವಿಶ್ವಕರ್ಮರ ಕೊಡುಗೆ ಅತ್ಯದ್ಭುತವಾಗಿದ್ದು ಭಾರತದ ಸಂಸ್ಕಾರ ಸಂಸ್ಕೃತಿಯ ಉನ್ನತಿಗೆ ಸಹಕಾರಿಯಾಗಿದೆ ಎಂದರು.

ಪಡುಕುತ್ಯಾರು ಆನೆಗುಂದಿ ಪೀಠದ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ಎಲ್ಲೂರು ವಿಶ್ವಕರ್ಮ ಸಮಾಜ ಸೇವಾ ಸಂಘದ ನೂತನ ಸಭಾಭವನದ ಕಟ್ಟಡವು ಶಿಲಾನ್ಯಾಸಗೊಂಡಿದ್ದು, ಶೀಘ್ರದಲ್ಲಿ ಪೂರ್ಣಗೊಳ್ಳಲಿ ಎಂದರು.

ಕಾಪು ಶ್ರೀ ಕಾಳಿಕಾಂಬಾ ಮಹಿಳಾ ಬಳಗದ ಮಾಜಿ ಅಧ್ಯಕ್ಷೆ ರೇಖಾ ಶ್ರೀಕಾಂತ್ ಶ್ರೀ ಕಾಳಿಕಾ ಮಹಿಳಾ ಬಳಗವನ್ನು ಉದ್ಘಾಟಿಸಿದದರು. ವಿದ್ಯಾರ್ಥಿ ವೇತನ, ಸಾಧಕ ವಿದ್ಯಾರ್ಥಿಗೆ ಸಮ್ಮಾನ, ಅತ್ಯುತ್ತಮ ನಟ ಪ್ರಶಸ್ತಿ ಪುರಸ್ಕೃತ ಕಲಾವಿದ ಮಂಜುನಾಥ ಆಚಾರ್ಯ ಕುಂಜೂರು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ವೈ. ಕಿಶೋರ್ ಆಚಾರ್ಯ ಎಲ್ಲೂರು ಅಧ್ಯಕ್ಷತೆ ವಹಿಸಿದ್ದರು. ಕಟಪಾಡಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರರ ಮುರಹರಿ ಕೆ. ಆಚಾರ್ಯ ಉಡುಪಿ, ವಿಶ್ವಬ್ರಾಹ್ಮಣ ಯುವಸಂಘಟನೆ ಕಾಪು ವಿಧಾನಸಭಾ ಕ್ಷೇತ್ರದ ಗೌರವ ಅಧ್ಯಕ್ಷ ಸದಾಶಿವ ಆಚಾರ್ಯ ಪಡುಕುತ್ಯಾರು, ಸಂಘದ ಗೌರವಾಧ್ಯಕ್ಷ ವೈ. ರಾಘವೇಂದ್ರ ಆಚಾರ್ಯ ಎಲ್ಲೂರು, ವೈ. ಎಂ. ದೇವದಾಸ್ ಆಚಾರ್ಯ ಎಲ್ಲೂರು, ವೈ.ಜಿ. ಸುದರ್ಶನ ಆಚಾರ್ಯ ಎಲ್ಲೂರು, ರವೀಂದ್ರ ಆಚಾರ್ಯ ಕಟಪಾಡಿ ಕನ್ಯಾನ, ಗಂಗಾಧರ ಆಚಾರ್ಯ ದಿಂಡಿಬೆಟ್ಟು, ಸುಧಾಕರ ಆಚಾರ್ಯ ಬಿಳಿಯಾರು, ಜಯರಾಮ ಆಚಾರ್ಯ ಕಾಪು, ಬಾಲಕೃಷ್ಣ ಆಚಾರ್ಯ ಬೆಳಪು, ಭುಜಂಗ ಆಚಾರ್ಯ ಪಣಿಯೂರು, ಮಂಜುನಾಥ ಆಚಾರ್ಯ ಕುಂಜೂರು, ವೈ. ಯಶವಂತ ಶೆಟ್ಟಿ ಇದ್ದರು. ಕಾರ್ಯದರ್ಶಿ ವೈ. ಪ್ರಶಾಂತ್ ಆಚಾರ್ಯ ಎಲ್ಲೂರು ವರದಿ ವಾಚಿಸಿದರು. ಉಪಾಧ್ಯಕ್ಷ ಎಚ್. ಗುರುಪ್ರಸಾದ್ ಆಚಾರ್ಯ ಪಣಿಯೂರು ಆಯವ್ಯಯ ಮಂಡಿಸಿದರು. ಕೋಶಾಧಿಕಾರಿ ಕೆ. ಗುರುಪ್ರಸಾದ್ ಆಚಾರ್ಯ ನಿರೂಪಿಸಿದರು.

ಜಿಲ್ಲೆಯಲ್ಲಿ ಮಂದಗತಿಯಲ್ಲಿ ಸಾಗುತ್ತಿದೆ ಜಲಜೀವನ್ ಯೋಜನೆ ಕಾಮಗಾರಿ

ಬೇಸಿಗೆಕಾಲದ ಆರಂಭದಲ್ಲೇ ಎದುರಾಗಿದೆ ನೀರಿನ ಸಮಸ್ಯೆ

ಕಾಸರಗೋಡು: ಬೇಸಿಗೆಕಾಲದ ಆರಂಭದಲ್ಲೇ ಕಾಸರಗೋಡು ಜಿಲ್ಲೆಯಲ್ಲಿ ನೀರಿನ ಸಮಸ್ಯೆ ತಲೆದೋರಿದೆ. ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ ಗ್ರಾಮೀಣ ಭಾಗಗಳಲ್ಲೂ ಕೆಲವೆಡೆ ಕುಡಿಯುವ ನೀರಿಗೂ ತತ್ವಾರ ಕಂಡುಬಂದಿದೆ. ಇದರೊಂದಿಗೆ ಜಿಲ್ಲೆಯಲ್ಲಿ ಮಹತ್ವಾಕಾಂಕ್ಷೆಯ ಜಲಜೀವನ್ ಯೋಜನೆ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದು ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಗೆ ನಿದರ್ಶನವಾಗಿದೆ.

ನೀರು ಪೂರೈಕೆಯಲ್ಲಿ ವ್ಯತ್ಯಯ

ಫೆಬ್ರವರಿ ತಿಂಗಳ ಅಂತ್ಯದಲ್ಲಿಯೇ ಹಲವಾರು ಗ್ರಾ.ಪಂ.ಗಳ ವ್ಯಾಪ್ತಿಯಲ್ಲಿ ನೀರಿನ ಲಭ್ಯತೆ ಇಳಿಮುಖವಾಗಿದ್ದು, ಮಾರ್ಚ್ ಅಂತ್ಯದ ವೇಳೆಗೆ ಈ ಸಮಸ್ಯೆ ಇನ್ನಷ್ಟು ತೀವ್ರವಾಗಲಿದೆ. ಕಾಸರಗೋಡು ಬ್ಲಾಕ್ ಪಂಚಾಯತ್ ವ್ಯಾಪ್ತಿಯಲ್ಲಿ ಅತೀ ಹೆಚ್ಚು ನೀರಿನ ತೊಂದರೆ ಅನುಭವಕ್ಕೆ ಬರುತ್ತಿದೆ. ಈ ಬ್ಲಾಕ್‌ನ ಕೆಲವೆಡೆ ಡ್ರೈ ಏರಿಯಾ ಎಂಬುದನ್ನು ಗುರುತಿಸಲಾಗಿದೆ. ಜಿಲ್ಲೆಯ ವಿವಿಧ ಜಲಮೂಲಗಳಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿರುವುದೇ ನೀರು ಪೂರೈಕೆಯಲ್ಲಿ ವ್ಯತ್ಯಯ ತಲೆದೋರಲು ಕಾರಣವಾಗಿದೆ.



ಕೆಲವು ಜಲಮೂಲಗಳಲ್ಲಿ ನೀರಿನ ಒಳಹರಿವು ಗಣನೀಯ ಕುಂಠಿತಗೊಂಡಿದೆ. ಬೋರ್‌ವೆಲ್‌ಗಳಲ್ಲೂ ನೀರಿನ ಪ್ರಮಾಣ ಕಡಿಮೆಯಾಗಿದೆ. ಮಂಜೇಶ್ವರ, ಕಾಸರಗೋಡು ತಾಲೂಕುಗಳಲ್ಲಿ ಪ್ರತೀ ವರ್ಷ ಸಾಮಾನ್ಯವಾಗಿ ನೀರಿನ ಸಮಸ್ಯೆ ಉಂಟಾಗುತ್ತದೆ. ಕಳೆದ ಬಾರಿ ಜಲಸಂರಕ್ಷಣಾ ಕ್ಷೇತ್ರದಲ್ಲಿ ಜಿಲ್ಲೆಯು ಅಪೂರ್ವ ಪ್ರಗತಿ ಸಾಧಿಸಿದೆ. ಆದರೂ ಮಾರ್ಚ್ ಮಧ್ಯಭಾಗದಲ್ಲೇ ನೀರಿನ ಬಿಕ್ಕಟ್ಟು ಗೋಚರಿಸಿದೆ. ಎಲ್ಲಾ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ನೀರಿನ ಬಜೆಟ್ ಅನುಷ್ಠಾನಗೊಂಡರೆ ಒಂದು ಹಂತದವರೆಗಾದರೂ ನೀರಿನ ಸಮಸ್ಯೆ ಪರಿಹರಿಸಲು ಸಾಧ್ಯವಿದೆ ಎಂಬುದು ಜಲತಜ್ಞರ ಅಭಿಪ್ರಾಯವಾಗಿದೆ.

ಸಮಸ್ಯೆ ಪರಿಹರಿಸಿ

ಜಿಲ್ಲೆಯಲ್ಲಿ ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಜಲಮೂಲಗಳಲ್ಲಿ ನೀರಿನ ಲಭ್ಯತೆ ಇಳಿಮುಖವಾಗಿದೆ. ಮುಂದಿನ ದಿನಗಳಲ್ಲಿ ಬೇಸಿಗೆ ಮಳೆ ಸುರಿಯದಿದ್ದರೆ ಜನಸಾಮಾನ್ಯರು ಮತ್ತಷ್ಟು ತೊಂದರೆ ಅನುಭವಿಸಬೇಕಾಗಲಿದೆ. ಈ ಹಿನ್ನೆಲೆ ಸಂಬಂಧ ಪಟ್ಟ ಇಲಾಖೆಗಳ ಅಧಿಕಾರಿಗಳು ಮುತುವರ್ಜಿ ವಹಿಸಬೇಕಾಗಿದೆ. ಪ್ರತಿಯೋರ್ವರಿಗೂ ಕುಡಿಯುವ ನೀರು, ಕೃಷಿ ಪ್ರದೇಶಗಳಿಗೆ ನೀರು ಒದಗಿಸಿ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಸಾರ್ವಜನಿಕ ಆಗ್ರಹವಾಗಿದೆ.

ಜಲಜೀವನ್ ಯೋಜನೆಗೆ ನಿರಾಸಕ್ತಿ

ಕಾಸರಗೋಡು ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಎಲ್ಲಾ ಕುಟುಂಬಗಳಿಗೆ ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರು ಒದಗಿಸುವ ಗುರಿ ಹೊಂದಿರುವ ಕೇಂದ್ರ ಸರಕಾರದ ಜಲಜೀವನ್ ಮಿಷನ್ ಯೋಜನೆ ಪ್ರಗತಿ ಸಾಧಿಸದಿರುವುದು ದುರಂತವಾಗಿದೆ. ಯೋಜನೆಯ ಭಾಗವಾಗಿ ಇದುವರೆಗೆ 47,038 ಹೊಸ ಗೃಹಬಳಕೆ ನೀರಿನ ಸಂಪರ್ಕ ಮಾತ್ರ ಒದಗಿಸಲು ಸಾಧ್ಯವಾಗಿದೆ. 2020ರಲ್ಲಿ ಈ ಯೋಜನೆಯು ಆರಂಭವಾಗುವ ಮೊದಲು ಜಿಲ್ಲೆಯಲ್ಲಿ 40,141 ಮನೆಗಳಿಗೆ ಸಂಪರ್ಕ ನೀಡಲಾಗಿತ್ತು. ಜಲಜೀವನ್ ಮಿಷನ್‌ನ ಪರಿಣಾಮಕಾರಿ ಅನುಷ್ಠಾನವಾಗಿದ್ದರೆ ಇನ್ನಷ್ಟು ಮನೆಗಳಿಗೆ ನೀರಿನ ಸಂಪರ್ಕ ನೀಡಬಹುದಾಗಿತ್ತು.

ಕುಡಿಯುವ ನೀರು ಲಭ್ಯವಾಗುತ್ತಿಲ್ಲ

ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಹೊಸ ಸಂಪರ್ಕಗಳನ್ನು ಒದಗಿಸುವ ಮೂಲಕ ಜಿಲ್ಲೆಯಲ್ಲೇ ಅತ್ಯುತ್ತಮ ಪ್ರಗತಿ ಸಾಧಿಸಿದ್ದರೂ ಇನ್ನೂ ಅನೇಕ ಕುಟುಂಬಗಳಿಗೆ ಕುಡಿಯುವ ನೀರು ಲಭ್ಯವಾಗುತ್ತಿಲ್ಲ. ಮಂಜೇಶ್ವರ ಮಂಡಲದಲ್ಲಿ 12,116 ಕುಟುಂಬಗಳು ಹೊಸದಾಗಿ ಶುದ್ಧ ಕುಡಿಯುವ ನೀರಿನ ಸಂಪರ್ಕವನ್ನು ಪಡೆದಿವೆ. ಕಾಞಂಗಾಡು ಕ್ಷೇತ್ರದಲ್ಲಿ 11,090, ತೃಕ್ಕರಿಪ್ಪುರದಲ್ಲಿ 8,952, ಉದುಮದಲ್ಲಿ 8,336 ಮತ್ತು ಕಾಸರಗೋಡಿನಲ್ಲಿ 6,544 ಸಂಪರ್ಕಗಳನ್ನು ಮಾತ್ರ ನೀಡಲಾಗಿದೆ.

ಮಂದಗತಿಯಲ್ಲಿ ಕಾಮಗಾರಿ ಸಾಗುತ್ತಿದೆ

ಕೆಲವು ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಜಲಜೀವನ್ ಯೋಜನೆಗೆ ಆಯಾ ಸ್ಥಳೀಯಾಡಳಿತ ಸಂಸ್ಥೆಗಳು ನಿರಾಸಕ್ತಿ ತೋರುತ್ತಿದ್ದು, ಇದರಿಂದಾಗಿ ಮಂದಗತಿಯಲ್ಲಿ ಕಾಮಗಾರಿ ಸಾಗುತ್ತಿದೆ. ಇನ್ನೂ ಕೆಲವು ಪಂಚಾಯತ್‌ಗಳಲ್ಲಿ ಈ ಯೋಜನೆಯಡಿ ಪೈಪ್‌ಲೈನ್ ಅಳವಡಿಕೆ ಕಾರ್ಯವೂ ಪೂರ್ತಿಯಾಗಿಲ್ಲ. ಜಿಲ್ಲೆಯ ಮಧೂರು ಮತ್ತು ಚೆಂಗಳ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಜಲಜೀವನ್ ಪೈಪ್‌ಲೈನ್ ಅಳವಡಿಕೆ ಪೂರ್ಣಗೊಂಡಿದೆ. ಆದರೆ ಉಳಿದ ಕೆಲವು ಗ್ರಾಮ ಪಂಚಾಯತ್‌ಗಳು ಈ ಯೋಜನೆ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವುದು ಕಂಡುಬರುತ್ತಿದೆ.

ಮಾ.25ರಂದು ಪೆರ್ಲದಲ್ಲಿ ಹಕ್ಕೊತ್ತಾಯ ಮೆರವಣಿಗೆ: ಯಶಸ್ಸಿಗೆ ಪೂರ್ವಭಾವಿ ಸಭೆ



ಪೆರ್ಲ: ಮಾ.28ರಂದು ಕಾಸರಗೋಡು ತಾಲೂಕು ಕಚೇರಿಯ ಮುಂಭಾಗದಲ್ಲಿ ನಡೆಯಲಿರುವ ಹಕ್ಕೊತ್ತಾಯ ಕಾರ್ಯಕ್ರಮ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಪೆರ್ಲದಲ್ಲಿ ಮಾ.25ರಂದು ಪ್ರಾದೇಶಿಕವಾಗಿ ಹಕ್ಕೊತ್ತಾಯ ಮೆರವಣಿಗೆ ನಡೆಯಲಿದೆ.

ಪೆರ್ಲ ವ್ಯಾಪಾರ ಭವನ ಪರಿಸರದಿಂದ ಹೊರಟು ಹಕ್ಕೊತ್ತಾಯ ಮೆರವಣಿಗೆ ಪೆರ್ಲ ಗಾಂಧಿ ಕಟ್ಟೆಯಲ್ಲಿ ಮುಕ್ತಾಯಗೊಳ್ಳಲಿದೆ. ಇದರ ಪೂರ್ವಭಾವಿಯಾಗಿ ಭಾನುವಾರ ಪೆರ್ಲ ವ್ಯಾಪಾರ ಭವನದಲ್ಲಿ ನಡೆದ ಸಭೆಯಲ್ಲಿ ಜಿ.ಪಂ. ಸದಸ್ಯ ಸೋಮಶೇಖರ್ ಜೆ.ಎಸ್. ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ಹಕ್ಕೊತ್ತಾಯ ಕಾರ್ಯಕ್ರಮದ ಯಶಸ್ಸಿಗಾಗಿ ತಾತ್ಕಾಲಿಕ ಸಮಿತಿ ರಚಿಸಲಾಯಿತು. ಎಣ್ಮಕಜೆ ಗ್ರಾಮ ಪಂಚಾಯತ್ ಸದಸ್ಯರಾದ ಆಯಿಷಾ ಎ.ಎ., ಶರಶ್ಚಂದ್ರ ಶೆಟ್ಟಿ, ನಿವೃತ್ತ ಪ್ರಾಂಶುಪಾಲ ಬೇ.ಸಿ.ಗೋಪಾಲಕೃಷ್ಣ ಭಟ್, ಬಿ.ಪಿ.ಶೇಣಿ, ಮಹಮ್ಮದ್ ಆಲಿ ಪೆರ್ಲ, ಉಮೇಶ್ ಕೆ. ಪೆರ್ಲ, ರಿಶಾದ್ ಪಿ.ಎಂ.ಎ., ವಿದ್ಯಾರತ್ನ ಪಿ.ಬಿ. ಮತ್ತಿತರರು ಉಪಸ್ಥಿತರಿದ್ದರು.

ಸಮಿತಿ ರಚನೆ

ಹಕ್ಕೋತ್ತಾಯದ ಯಶಸ್ಸಿಗೆ ತಾತ್ಕಾಲಿಕ ಸಮಿತಿ ರಚಿಸಲಾಗಿದ್ದು, ಅಧ್ಯಕ್ಷರಾಗಿ ಆಯಿಷಾ ಎ.ಎ., ಸಂಚಾಲಕರಾಗಿ ಸುಭಾಷ್ ಪೆರ್ಲ, ಸಹ ಸಂಚಾಲಕ ರಾಗಿ ಶರಶ್ಚಂದ್ರ ಶೆಟ್ಟಿ ಜಿ.. ಕೃಷ್ಣರಾಜ ಗೋಳಿತ್ತಡ್ಕ, ವೇಣುಗೋಪಾಲ ಎಸ್., ವಿಜಯ ಕುಮಾರ್, ಕಮಲಾಕ್ಷ ನಲ್ಕ, ಶರತ್ ಕುಮಾರ್ ಎಂ., ಪ್ರಚಾರ ಸಮಿತಿಗೆ ಬಿ.ಪಿ.ಶೇಣಿ, ಅಶ್ರಫ್ ಮರ್ತ್ಯ, ವನಜಾಕ್ಷಿ ಪಿ. ಚೆಂಬ್ರಕಾನ ಅವರನ್ನು ಆಯ್ಕೆ ಮಾಡಲಾಯಿತು.

ಅಂತರ ವಿವಿ ರಾಷ್ಟ್ರೀಯ ಯುವ ಉತ್ಸವ: ಕೇರಳ ಕೇಂದ್ರ ವಿವಿಯ ಉತ್ತಮ ಸಾಧನೆ



ಕಾಸರಗೋಡು: 39ನೇ ಅಂತರ ವಿಶ್ವವಿದ್ಯಾಲಯ ರಾಷ್ಟ್ರೀಯ ಯುವ ಉತ್ಸವದಲ್ಲಿ ಪೆರಿಯದಲ್ಲಿರುವ ಕೇರಳ ಕೇಂದ್ರ ವಿಶ್ವವಿದ್ಯಾಲಯ ಅದ್ಭುತ ಯಶಸ್ಸು ಸಾಧಿಸಿದೆ. ಈ ಮೂಲಕ ಪೆರಿಯ ವಿವಿ ಅತ್ಯುತ್ತಮ ಪ್ರದರ್ಶನದೊಂದಿಗೆ ಕೀರ್ತಿ ಗಳಿಸಿದೆ.

ಚೆನ್ನೈನ ಸತ್ಯಭಾಮ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ನಡೆದ ಉತ್ಸವದಲ್ಲಿ ವಿಶ್ವವಿದ್ಯಾನಿಲಯವು ಸ್ಕಿಟ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಮತ್ತು ಶಾಸ್ತ್ರೀಯ ನೃತ್ಯ (ದೇವಿಕಾ ಎಸ್.ನಾಯರ್ - ಎಂಎ ಅರ್ಥಶಾಸ್ತ್ರ) ಮತ್ತು ಇಂಗ್ಲಿಷ್ ಭಾಷಣ (ಗೌತಮ್ ಶಂಕರ್ - ಎಂಎ ಸಾರ್ವಜನಿಕ ಆಡಳಿತ ಮತ್ತು ನೀತಿ ಅಧ್ಯಯನ)ದಲ್ಲಿ ಮೂರನೇ ಸ್ಥಾನ ಗಳಿಸಿತು.

ಇಂಟಿಗ್ರೇಟೆಡ್ ಟೀಚರ್ ಎಜುಕೇಶನ್ ಪ್ರೋಗ್ರಾಂ (ಐಟಿಇಪಿ) ವಿದ್ಯಾರ್ಥಿಗಳಾದ ನಿಥಿನಾ ಸುಭಾಷ್, ಆನಂದು ಎಂ.ಕೆ., ಲಿಯಾ ಸಲೀಮ್, ಅನುಸ್ಮಯ ಸುರೇಶ್, ಗಾಯತ್ರಿ ಎಸ್., ಶಿವಾಲಯ ಪಿ.ಎಸ್. ಅವರು ಸ್ಕಿಟ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಪೆರಿಯ ವಿವಿಯನ್ನು 18 ಸದಸ್ಯರ ತಂಡವು ಪ್ರತಿನಿಧಿಸಿತ್ತು. ಸಾಂಸ್ಕೃತಿಕ ಸಂಯೋಜಕ ಡಾ.ಶ್ರವಣ ಕೆ., ಸಹಾಯಕ ಪ್ರಾಧ್ಯಾಪಕ ಡಾ.ಗುಜ್ಜೆಟ್ಟಿ ತಿರುಪತಿ ಅವರು ವಿದ್ಯಾರ್ಥಿಗಳೊಂದಿಗಿದ್ದು ಸಹಕರಿಸಿದರು. ಸಾಧನೆಗೈದ ವಿದ್ಯಾರ್ಥಿಗಳನ್ನು ಉಪಕುಲಪತಿ ಪ್ರೊ.ಸಿದ್ದು ಪಿ. ಅಲ್ಗೂರ್ ಅಭಿನಂದಿಸಿದ್ದಾರೆ.

ಜಿಲ್ಲೆಗೇ ಹೆಮ್ಮೆ

ದೇಶದ 150 ವಿಶ್ವವಿದ್ಯಾಲಯಗಳ ಸ್ಪರ್ಧಾಳುಗಳು ಪಾಲ್ಗೊಂಡಿದ್ದ ಈ ಉತ್ಸವದಲ್ಲಿ ಪೆರಿಯ ವಿಶ್ವವಿದ್ಯಾಲಯ ಸಾಧನೆಯು ಕಾಸರಗೋಡು ಜಿಲ್ಲೆಗೇ ಹೆಮ್ಮೆಯಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯ ಶೌರ್ಯ ತಂಡದಿಂದ ಶ್ರೀ ಪಾತೇರಿ ದೇವಳ ಶ್ರಮದಾನ



ಬದಿಯಡ್ಕ: ಕಾಸರಗೋಡು ತಾಲೂಕು ಕುಂಬ್ಡಾಜೆ ಗ್ರಾಮದ ಪುರಾತನವಾದ ಪಾತೇರಿ ಶ್ರೀ ಶಂಕರನಾರಾಯಣ ಕ್ಷೇತ್ರದ ಜೀರ್ಣೋದ್ಧಾರ ಕೆಲಸ ಕಾರ್ಯಗಳು ಊರ ಪರವೂರ ಭಕ್ತಜನರ ಸಹಾಯ ಸಹಕಾರದಿಂದ ಭರದಿಂದ ಸಾಗುತ್ತಿದೆ.

ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಬೃಹತ್ ಶ್ರಮದಾನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಪತ್ತು ನಿರ್ವಹಣಾ ಘಟಕದ ಶೌರ್ಯ ಸ್ವಯಂ ಸೇವಾ ತಂಡವು ಭಾಗವಹಿಸಿತು. ಇದರ ಘಟಕ ಪ್ರಮುಖ್ ಪದ್ಮನಾಭ, ಪಂ. ಸದಸ್ಯ ಕೊರಗಪ್ಪ ಬೆಳ್ಳಿಗೆ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜನಜಾಗೃತಿ ವೇದಿಕೆ ತಾಲೂಕು ಅಧ್ಯಕ್ಷ ಅಖಿಲೇಶ್ ನಗುಮುಗಂ ನೇತೃತ್ವದಲ್ಲಿ ಊರ ಭಕ್ತರ ಜೊತೆಗೂಡಿ ಶ್ರೀ ಕ್ಷೇತ್ರ ಜೀರ್ಣೋದ್ಧಾರ ಕೆಲಸ ಕಾರ್ಯ ನಡೆಯಿತು.

ಪಾತೇರಿ ಶ್ರೀ ಶಂಕರನಾರಾಯಣ ಕ್ಷೇತ್ರದ ಮಾತೃ ಸಮಿತಿ, ಗೋಸಾಡ ಶ್ರೀ ಮಹಿಷ ಮರ್ದಿನಿ ದೇವಸ್ಥಾನದ ಮಾತೃ ಮಂಡಳಿ ವಸಂತಿ ಕೇಕೆಮೂಲೆ, ವಾಣಿಪ್ರಸಾದ್ ಅಮ್ಮಣ್ಣಾಯ ಪಾವೂರು, ಲಲಿತಾ ಸುಬ್ಬ ಪಾಟಾಳಿ ಗೋಸಾಡ ನೇತೃತ್ವದ ಹಲವಾರು ಮಹಿಳಾ ಕಾರ್ಯಕರ್ತೆಯರು ಶ್ರಮದಾನದಲ್ಲಿ ತೊಡಗಿಸಿಕೊಂಡರು.

ಆದಷ್ಟು ಬೇಗ ಬ್ರಹ್ಮಕಲಶೋತ್ಸವ ನೆರವೇರಿಸುವಂತಾಗಿ ಭಕ್ತ ಸಮೂಹದ ಅಭೀಷ್ಟೆಯನ್ನು ಈಡೇರಿಸಲು ಶ್ರೀ ದೇವರು ಎಲ್ಲರಿಗೂ ಸಂಪತ್ಸಮೃದ್ಧಿ, ಶಕ್ತಿ ನೀಡಿ ಹರಸಲಿ ಎಂದು ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಹರಿನಾರಾಯಣ ಶಿರಂತಡ್ಕ ಪ್ರೇರಣಾ ಸಂದೇಶ ನೀಡಿದರು.

ಶ್ರೀ ಧರ್ಮಶಾಸ್ತಾ ಭಜನಾ ಮಂದಿರದ ಅಧ್ಯಕ್ಷ ರಾಧಾಕೃಷ್ಣನ್ ನಾಯರ್, ಶ್ರೀ ಕ್ಷೇತ್ರದ ಆನುವಂಶಿಕ ಮೊಕ್ತೇಸರ ಶ್ರೀನಿವಾಸ ಅಮ್ಮಣ್ಣಾಯ ಪಾವೂರು, ಗಂಗಾಧರ ಮಾಸ್ಟರ್ ಮವ್ವಾರು, ಶ್ರಮದಾನದ ಸಂಯೋಜಕರಾದ ಕುಂಞಿರಾಮ ಮಣಿಯಾಣಿ ಪಾತೇರಿ, ಸುರೇಶ್ ಫಿಟ್ಟರ್ ಕುರುಮುಜ್ಜಿ ಹಿರಿಯರಾದ ಚಂದ್ರಮೋಹನ ನೀಲಂಗಳ, ನಟರಾಜ ಕುರುಮುಜ್ಜಿ ಸೂಕ್ತ ಮಾರ್ಗದರ್ಶನವಿತ್ತರು. ಹಿರಿಯ ಮಾರ್ಗದರ್ಶಿ ಶೇಖರ ಭಟ್ ಮರಿಕ್ಕಾನ ಶ್ರಮದಾನದ ಪ್ರಾರಂಭದಲ್ಲಿ ಕೆಲಸ ಕಾರ್ಯಗಳ ಯಶಸ್ವಿಗೆ, ಸ್ವಯಂಸೇವಕರ ಹಿತಕ್ಕೆ ಸಾಮೂಹಿಕ ಪ್ರಾರ್ಥನೆ ನಡೆಸಿದರು.

ಕುರುಮುಜ್ಜಿಕಟ್ಟೆಯಲ್ಲಿ ಶ್ರೀಮದ್ ಭಾಗವತ ಸಪ್ತಾಹ: ಆಮಂತ್ರಣ ಪತ್ರಿಕೆಯ ಬಿಡುಗಡೆ



ಮುಳ್ಳೇರಿಯ: ಭಜನಾ ಮಂದಿರಗಳಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಚಟುವಟಿಕೆಗಳು ನಿರಂತರ ನಡೆಯಬೇಕು. ಪ್ರತಿಯೊಬ್ಬರಲ್ಲೂ ದೇವರನ್ನು ಕಾಣುವ ಮನಸ್ಸಿರಬೇಕೆಂದು ಹಿರಿಯ ಸಹಕಾರಿ ಧುರೀಣ ಐತ್ತಪ್ಪ ಮವ್ವಾರು ಹೇಳಿದ್ದಾರೆ. ನಾರಂಪಾಡಿ ಅನ್ನಪೂರ್ಣ ಸರ್ಕಲ್ ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಏಪ್ರಿಲ್ 9ರಿಂದ 14ರ ವರೆಗೆ ನಡೆಯಲಿರುವ ಶ್ರೀಮದ್ ಭಾಗವತ ಸಪ್ತಾಹ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಶ್ರೀಮದ್ ಭಾಗವತ ಸಪ್ತಾಹ ಸಮಿತಿ ಸಂಚಾಲಕ ಹರೀಶ್ ನಾರಂಪಾಡಿ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಪ್ರಧಾನ ಕಾರ್ಯದರ್ಶಿ ಹರಿನಾರಾಯಣ ಶಿರಂತಡ್ಕ ಮಾತನಾಡಿದರು. ಭಾಗವತ ಸಪ್ತಾಹ ಸಮಿತಿ ಕೋಶಾಧಿಕಾರಿ ಕೃಷ್ಣ ಮಣಿಯಾಣಿ, ಮುದ್ರಣ ಸಮಿತಿ ಅಧ್ಯಕ್ಷ ನಾರಾಯಣ ಗೋಸಾಡ, ಗಂಗಾಧರ ರೈ ಮಠದಮೂಲೆ, ವಾಣಿ ಪ್ರಸಾದ್ ಅಮ್ಮಣ್ಣಾಯ ಪಾವೂರು, ಶ್ರೀ ಮಂದಿರ ನಾರಾಯಣ ಗುರುಸ್ವಾಮಿ, ಪವಿತ್ರನ್ ಕುರುಮುಜ್ಜಿ ಮಾಧವ ಶರ್ಮ ಮತ್ತಿತರರಿದ್ದರು.

ಭಜನಾ ಸಮಿತಿ ಅಧ್ಯಕ್ಷ ರಾಧಾಕೃಷ್ಣನ್ ನಾಯರ್ ಉಪ್ಪಂಗಳ ಸ್ವಾಗತಿಸಿ, ಶ್ರೀ ಧರ್ಮಶಾಸ್ತಾ ಸೇವಾ ಸಮಿತಿ ಕಾರ್ಯದರ್ಶಿ ನಾರಾಯಣ ಕೆ.ಎಂ. ವಂದಿಸಿದರು. ಶ್ರೀ ಮಂದಿರದ ಸೇವಾ ಸಮಿತಿ ಅಧ್ಯಕ್ಷ ರಮೇಶ್ ಶರ್ಮ ಕುರುಮುಜ್ಜಿ ನಿರೂಪಿಸಿದರು.

ಸಹಕಾರ ಅಗತ್ಯ

ಭಾಗವತ ಸಪ್ತಾಹವೆಂಬ ಕಾರ್ಯಕ್ರಮದ ಮೂಲಕ ಶ್ರವಣ ಮಾತ್ರದಲ್ಲಿ ಪುಣ್ಯ ಲಭಿಸುತ್ತದೆ. ನಾಡಿನ ಭಗವದ್ಭಕ್ತರಿಗೆ ಈ ಮಹತ್ಕಾರ್ಯದ ಆಮಂತ್ರಣ ನೀಡುವ ಕಾರ್ಯಕ್ಕೆ ಎಲ್ಲರೂ ಜೊತೆಗೂಡಬೇಕು.

● ಹರಿನಾರಾಯಣ ಶಿರಂತಡ್ಕ

ಮಂಜೇಶ್ವರ ಜೈ ಶ್ರೀರಾಮ್ ಸಮಾಜ ಸೇವಾ ಸಂಸ್ಥೆಯ ದಶಮಾನೋತ್ಸವ ಸಮಾರಂಭ



ಮಂಜೇಶ್ವರ: ಜೈ ಶ್ರೀರಾಮ್ ಸಮಾಜ ಸೇವಾ ಸಂಸ್ಥೆ ಮಂಜೇಶ್ವರ ಇದರ ಆಶ್ರಯದಲ್ಲಿ ಸಂಸ್ಥೆಯ ದಶಮಾನೋತ್ಸವ ಸಮಾರಂಭವು ಹೊಸಂಗಡಿ ಆದಿ ಕಲಾಮಂಟಪ ಆದಿ ಕ್ಷೇತ್ರ ಶ್ರೀ ರಕ್ತೇಶ್ವರಿ ದೇವಸ್ಥಾನದಲ್ಲಿ (ಶ್ರೀ ಅಯ್ಯಪ್ಪ ಕ್ಷೇತ್ರ ಸಮೀಪ) ವಿವಿಧ ಕಾರ್ಯಕ್ರಮಗಳೊಂದಿಗೆ ಭಾನುವಾರ ನಡೆಯಿತು.

ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು. ಉಳ್ಳಾಲ ಕಾಪಿಕಾಡು ಶ್ರೀ ಮಂತ್ರದೇವತಾ ಕೊರಗಜ್ಜ ಸನ್ನಿಧಿಯ ಧರ್ಮದರ್ಶಿ ಪ್ರಶಾಂತ್ ಗುರೂಜಿ ಕಾಪಿಕಾಡು ಗೌರವ ಉಪಸ್ಥಿತರಿದ್ದರು.

ಜೈ ಶ್ರೀರಾಮ್ ಸಮಾಜ ಸೇವಾ ಸಂಸ್ಥೆಯ ಗೌರವಾಧ್ಯಕ್ಷ, ವಕೀಲ ನವೀನ್‌ರಾಜ್ ಕೆ.ಜೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಿಟ್ ವಿತರಣೆ

ಆಯ್ದ 100 ಕುಟುಂಬಗಳಿಗೆ ಕಿಟ್ ವಿತರಣೆ, ಪುಸ್ತಕ ವಿತರಣೆ, ಮೂರು ಯೋಜನೆಗಳ ವಾಗ್ದಾನ ಹಸ್ತಾಂತರ ಜರಗಿತು.

ಕಾರ್ಯಕ್ರಮದಲ್ಲಿ ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಮಂಜೇಶ್ವರ ಸರಸ್ವತಿ ಟೀಚರ್ ಮೆಮೋರಿಯಲ್ ಚಾರಿಟೇಬಲ್ ಸೊಸೈಟಿ ಅಧ್ಯಕ್ಷ ಮೋಹನ್ ಶೆಟ್ಟಿ ತೂಮಿನಾಡು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜನಜಾಗೃತಿ ವೇದಿಕೆ ಮಂಜೇಶ್ವರ ತಾಲೂಕು ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ರಘು ಕಾರ್ನವರ್, ಶಿವ ಮಾನ್ಯ, ಹರೀಶ್ ಶೆಟ್ಟಿ ಮಾಡ, ಜೈ ಶ್ರೀರಾಮ್ ಸಮಾಜ ಸೇವಾ ಸಂಸ್ಥೆಯ ಅಧ್ಯಕ್ಷ ಕೃಷ್ಣ ಅಟ್ಟೆಗೋಳಿ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು. ನಂತರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಅನ್ನಸಂತರ್ಪಣೆ ನೆರವೇರಿತು.

ಬಿಜೆಪಿ ಪುತ್ತಿಗೆ ಪಂಚಾಯತ್ ಮಟ್ಟದ ಚುನಾವಣಾ ತರಬೇತಿ ಕಾರ್ಯಾಗಾರ



ಕುಂಬಳೆ: ಭಾರತೀಯ ಜನತಾ ಪಕ್ಷದ ಪುತ್ತಿಗೆ ಪಂಚಾಯತ್ ಮಟ್ಟದ ಚುನಾವಣಾ ತರಬೇತಿ ಕಾರ್ಯಾಗಾರ ಎಡನಾಡು ಕಣ್ಣೂರು ಸೇವಾ ಸಹಕಾರಿ ಬ್ಯಾಂಕ್‌ನ ಸಭಾಂಗಣದಲ್ಲಿ ನಡೆಯಿತು. ಈ ಸಂದರ್ಭ ಚುನಾವಣೆಗೆ ಸಂಬಂಧಿಸಿದ ವಿವಿಧ ಕಾರ್ಯಯೋಜನೆಗಳ ಸಿದ್ಧಪಡಿಸಲಾಯಿತು.

ಪಕ್ಷದ ರಾಜ್ಯ ವಕ್ತಾರ, ವಕೀಲ ವಿ.ಪಿ. ಪದ್ಮನಾಭನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪಂಚಾಯತ್ ಸಮಿತಿಯ ಅಧ್ಯಕ್ಷ ಪುರುಷೋತ್ತಮ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಕಲ್ಲಿಕೋಟೆ ವಲಯ ಉಪಾಧ್ಯಕ್ಷ ಹಾಗೂ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಚುನಾವಣಾ ಸಂಚಾಲಕ ಎಂ.ವಿಜಯಕುಮಾರ್ ರೈ ಅವರು ಕಾರ್ಯಕರ್ತರಿಗೆ ಮಾಹಿತಿ ನೀಡಿದರು.

ರಾಜ್ಯ ಸಮಿತಿ ಸದಸ್ಯ ಕೋಳಾರು ಸತೀಶ್ಚಂದ್ರ ಭಂಡಾರಿ, ಹಿರಿಯರಾದ ಜಯಂತ ಪಾಟಾಳಿ, ಮಹೇಶ್ ಪುಣಿಯೂರು, ಬಾಲಸುಬ್ರಹ್ಮಣ್ಯ ಭಟ್, ಹರೀಶ್ ಸಿದ್ಧಿಬೈಲ್, ಲಕ್ಷ್ಮೀ ವಿ.ಭಟ್, ಜನಾರ್ದನ ಕಣ್ಣೂರು ಮೊದಲಾದವರು ಇದ್ದರು.

ಕಾಸರಗೋಡು - ಸುಳ್ಯ ಬಸ್ ಸಂಜೆ 4.50ಕ್ಕೆ ಬದಲು 5ಗಂಟೆಗೆ ಹೊರಡಿಸಲು ಪ್ರಯಾಣಿಕರ ಒತ್ತಾಯ

ಬೇಡಿಕೆ ಪರಿಗಣಿಸುವ ಭರವಸೆ ನೀಡಿದ ಕಾಸರಗೋಡು ಕೆಎಸ್ಸಾರ್ಟಿಸಿ ಅಧಿಕಾರಿಗಳು

ಕಾಸರಗೋಡು: ಪ್ರತೀದಿನ ಸಂಜೆ ಕಾಸರಗೋಡು ಕೆಎಸ್‌ಆರ್‌ಟಿಸಿ ಡಿಪ್ಪೋದಿಂದ ಸುಳ್ಯಕ್ಕೆ ತೆರಳುವ ಬಸ್‌ನ ಸಮಯ ಬದಲಾಯಿಸಬೇಕೆಂಬ ಪ್ರಯಾಣಿಕರ ಬೇಡಿಕೆ ಬಲಗೊಳ್ಳುತ್ತಿದೆ. ಅನೇಕ ಜನರು ಈ ಬೇಡಿಕೆ ಎತ್ತಲು ಮುಂದೆ ಬಂದ ನಂತರ ಸಮಯ ಬದಲಾವಣೆ ಗಂಭೀರವಾಗಿ ಪರಿಶೀಲಿಸುವುದಾಗಿ ಕಾಸರಗೋಡು ಕೆಎಸ್ಸಾರ್ಟಿಸಿ ಜೆಟಿಒ ತಿಳಿಸಿದ್ದಾರೆ.

ನೌಕರರಿಗೆ ಸಮಸ್ಯೆಯಾಗುತ್ತಿತ್ತು

ಪ್ರಸ್ತುತ ಈ ಬಸ್ ಸಂಜೆ 4.50ಕ್ಕೆ ಡಿಪ್ಪೋದಿಂದ ಹೊರಡುತ್ತದೆ. ಆದಾಗ್ಯೂ, ಕಾಸರಗೋಡಿನ ಹೆಚ್ಚಿನ ಸರಕಾರಿ ಕಚೇರಿಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸರಿಯಾದ ಪಂಚಿಂಗ್ ವ್ಯವಸ್ಥೆ ಪರಿಚಯಿಸಲಾಗಿರುವುದರಿಂದ ನೌಕರರು ಸಂಜೆ 5 ಗಂಟೆಗೆ ಮೊದಲು ಕಚೇರಿಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಅನೇಕ ಅಧಿಕಾರಿಗಳಿಗೆ ಈ



ಬಸ್ ಲಭಿಸುತ್ತಿಲ್ಲ ಎಂಬ ವ್ಯಾಪಕ ದೂರುಗಳ ಹಿನ್ನೆಲೆಯಲ್ಲಿ ಅಧಿಕಾರಿಗಳು ಕೊನೆಗೂ ಪರಿಶೀಲನೆಗೆ ಮುಂದಾಗಿದ್ದಾರೆ.

ಸಮಯ ವಿಸ್ತರಿಸುವ ಭರವಸೆ

ಕಾಸರಗೋಡು ಡಿಪ್ಪೋ ಅಧಿಕಾರಿ ಪ್ರಿಯೇಶ್ ಅವರು ಬಸ್ ನಿರ್ಗಮನ ಸಮಯವನ್ನು ಕೇವಲ 10 ನಿಮಿಷ ಗಳಷ್ಟು, ಅಂದರೆ ಸಂಜೆ 5 ಗಂಟೆಯವರೆಗೆ ವಿಸ್ತರಿಸುವುದಾಗಿ ಭರವಸೆ ನೀಡಿದ್ದಾರೆ.

ಪ್ರಯಾಣಿಕರಿಗೆ ಸಂಕಷ್ಟ

ಸಂಜೆ 4.50ಕ್ಕೆ ಹೊರಡುವ ಈ ಸುಳ್ಯ ಬಸ್ ಹೊರಟ ನಂತರ ಆ ಮಾರ್ಗಕ್ಕೆ ಮುಂದಿನ ಕೆಎಸ್ಸಾರ್ಟಿಸಿ ಸೇವೆ ಸಂಜೆ 6 ಗಂಟೆಗೆ ಮಾತ್ರ. ಸಂಜೆ 5 ಗಂಟೆಗೆ ಕೆಲಸದಿಂದ ಮುಗಿಸಿ ತೆರಳುವ ಅಧಿಕಾರಿಗಳು ನಂತರ ಯಾವುದೇ ಆಯ್ಕೆಯಿಲ್ಲದೆ ಒಂದು ಗಂಟೆಗೂ ಹೆಚ್ಚು ಕಾಲ ಬಸ್ ನಿಲ್ದಾಣದಲ್ಲಿ ಕಾಯಬೇಕಾಗಿದೆ. ಆಯಾಸದ ಜೊತೆಗೆ ಬಸ್‌ಗಾಗಿ ಕಾಯುವುದು ಪ್ರಯಾಣಿಕರನ್ನು ಇನ್ನಷ್ಟು ಸಂಕಷ್ಟಕ್ಕೀಡು ಮಾಡುತ್ತಿದೆ.

ಸಮಸ್ಯೆಯಲ್ಲಿ

ಈ ಹಿಂದೆ ಸಂಜೆ 5.30ಕ್ಕೆ ಕಾಸರಗೋಡಿನಿಂದ ಸುಳ್ಯಕ್ಕೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ನಡೆಸುತ್ತಿತ್ತು, ಆದರೆ ಅಧಿಕಾರಿಗಳು ಯಾವುದೇ ಮುನ್ಸೂಚನೆಯನ್ನು ನೀಡದೆ ಏಕಾಏಕಿ ಬಸ್ ಸಂಚಾರ ಸ್ಥಗಿತಗೊಳಿಸಿದ್ದಾರೆ ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

ಈ ಉತ್ತಮ ಆದಾಯದ ಮಾರ್ಗದಲ್ಲಿ ಖಾಸಗಿ ಬಸ್‌ಗಳು ಸಂಚರಿಸುತ್ತಿದ್ದರೂ ಸಂಜೆ ಪ್ರಯಾಣಿಕರ ದಟ್ಟಣೆಯಿಂದ ಅನೇಕ ಮಂದಿಗೆ ಅದರಲ್ಲಿ ತೆರಳಲು ಸಾಧ್ಯವಾಗದ ಸ್ಥಿತಿಯಾಗಿದೆ. ಅಲ್ಲದೆ ಖಾಸಗಿ ಬಸ್‌ಗಳು ಕೆಲವೊಮ್ಮೆ ನಿರ್ವಹಣೆಗಾಗಿ ತಮ್ಮ ಸೇವೆಗಳ ನಿಲುಗಡೆಗೊಳಿಸುವುದು ಪ್ರಯಾಣಿಕರನ್ನು ಇನ್ನಷ್ಟು ಸಮಸ್ಯೆಗೆ ಸಿಲುಕುವಂತಾಗುತ್ತಿದೆ.

ಸಂತಸ ತಂದಿದೆ

ಕಾಸರಗೋಡು ನಗರದಲ್ಲಿ ಕೆಲಸ ಮಾಡುವ ಬೋವಿಕ್ಕಾನ, ಮುಳ್ಳೇರಿಯ, ಅಡೂರು, ಕುಂಟಾರು, ಗಾಳಿಮುಖ, ಪರಪ್ಪ, ಜಾಲ್ಸೂರು ಮುಂತಾದ ಪ್ರದೇಶಗಳಿಂದ ನೂರಾರು ಮಂದಿ ಪ್ರಯಾಣದ ತೊಂದರೆಯಿಂದ ಪ್ರತಿದಿನ ಬಳಲುತ್ತಿದ್ದಾರೆ. ಸಂಜೆ ಕೆಲಸ ಮುಗಿಸಿ ಬರುವವರಲ್ಲದೆ, ಈ ಪ್ರದೇಶಕ್ಕೆ ಸಾಕಷ್ಟು ಬಸ್ ಸೌಲಭ್ಯಗಳ ಕೊರತೆಯು ದೂರದ ರೈಲುಗಳ ಮೂಲಕ ಕಾಸರಗೋಡಿಗೆ ಬರುವ ಪ್ರಯಾಣಿಕರಿಗೆ ದೊಡ್ಡ ಸವಾಲನ್ನು ಸೃಷ್ಟಿಸುತ್ತಿದೆ. ಈ ಪರಿಸ್ಥಿತಿಯಲ್ಲಿ ಕೆಎಸ್ಸಾರ್ಟಿಸಿ ಅಧಿಕಾರಿಗಳು ಸಕಾರಾತ್ಮಕ ನಿರ್ಧಾರ ಕೈಗೊಂಡಿರುವುದರಿಂದ ಪ್ರಯಾಣಿಕರಲ್ಲಿ ಸಂತಸವನ್ನುಂಟು ಮಾಡಿದೆ.

ಸುತ್ತಮುತ್ತ

ಆರ್ಥಿಕ ಸಹಾಯಕ್ಕೆ ಅರ್ಜಿ

ಕಾಸರಗೋಡು: ಜಿಲ್ಲೆಯ ಎಂಡೋಸಲ್ಫಾನ್ ಪೀಡಿತ ಫಲಾನುಭವಿಗಳು ಮಾ.16 ರಿಂದ ಅಕ್ಷಯ ಕೇಂದ್ರಗಳ ಮೂಲಕ ಆರ್ಥಿಕ ಸಹಾಯಕ್ಕಾಗಿ ಅರ್ಜಿ ಸಲ್ಲಿಸಬಹುದು. ಅರ್ಜಿಯೊಂದಿಗೆ ಓಪಿ ಸಂಖ್ಯೆ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಪ್ರತಿ ಮತ್ತು ಪಡಿತರ ಚೀಟಿಯಂತಹ ದಾಖಲೆಗಳನ್ನು ಒದಗಿಸಬೇಕಾಗಿದೆ. ವಿವರಗಳಿಗೆ 04994 257330 ಸಂಪರ್ಕಿಸಬಹುದು.

ಕುತ್ತಿಕೋಲು ಕಳಿಯಾಟ ಮಹೋತ್ಸವ: ಪ್ರಾದೇಶಿಕ ಸಮಿತಿ ರಚನೆ

ಕಾಸರಗೋಡು: ಕುತ್ತಿಕೋಲು ಶ್ರೀ ತಂಬುರಾಟಿ ಭಗವತೀ ಕ್ಷೇತ್ರದಲ್ಲಿ ಕಳಿಯಾಟ ಮಹೋತ್ಸವದ ಅಂಗವಾಗಿ ಕುಂಡಂಗುಳಿ ಪ್ರಾದೇಶಿಕ ಸಮಿತಿ ರಚಿಸಲಾಯಿತು. ಈ ಬಗ್ಗೆ ಕುಂಡಂಗುಳಿ ಮಾರ್ಗಂ ತರವಾಡಿನಲ್ಲಿ ನಡೆದ ಸಭೆಯನ್ನು ಬೇಡಡ್ಕ ಗ್ರಾ.ಪಂ. ಸದಸ್ಯ ಬಾಲಕೃಷ್ಣನ್ ಮಾಸ್ತರ್ ಉದ್ಘಾಟಿಸಿದರು. ವಿಜಯನ್ ಪಾಣೂರು, ಆರ್.ಕುಂಞಿಕಣ್ಣನ್ ಬೇಡಡ್ಕ, ಮಾಧವನ್ ನಾಯರ್ ಪೆರ್ಲಾಂ, ಬಿ.ಸಿ. ಬಾಲಕೃಷ್ಣನ್, ಓಮನಾ ಕೃಷ್ಣನ್, ಸರೋಜಿನಿ ತಂಕೇತಡ್ಕಂ ಉಪಸ್ಥಿತರಿದ್ದರು. ಲೋಹಿತಾಕ್ಷನ್ ಕುಂಡಂಗುಳಿ ಸ್ವಾಗತಿಸಿ, ಸಿ.ಗಂಗಾಧರನ್ ಪೆರ್ಲಂ ವಂದಿಸಿದರು. ಕುಂಡಂಗುಳಿ ಪ್ರಾದೇಶಿಕ ಸಮಿತಿ ಅಧ್ಯಕ್ಷರಾಗಿ ಮಾಧವನ್ ನಾಯರ್ ಪೆರ್ಲಾಂ, ಕಾರ್ಯಾಧ್ಯಕ್ಷರಾಗಿ ಗೋಪಾಲನ್ ನಾಯರ್, ಗಂಗಾ, ಸಂಚಾಲಕರಾಗಿ ದಿನೇಶ್ ಮಾರ್ಗಂ, ಕೋಶಾಧಿಕಾರಿಯಾಗಿ ಸಿ.ಗಂಗಾಧರನ್ ಪೆರ್ಲಾಂ ಅವರನ್ನು ಆಯ್ಕೆ ಮಾಡಲಾಯಿತು.

ರಾ.ಹೆ.ಬಸ್ ತಂಗುದಾಣ ಮರು ನವೀಕರಣಕೆ ಜಿಲ್ಲಾಧಿಕಾರಿಗೆ ಮನವಿ

ಕಾಸರಗೋಡು: ತಲಪಾಡಿಯಿಂದ ಆರಂಭಗೊಂಡು ಚೆಂಗಳ ತನಕದ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಗಳಲ್ಲಿ ನಿರ್ಮಿಸಲಾಗಿರುವ ಬಸ್ ತಂಗುದಾಣಗಳನ್ನು ಮರು ನವೀಕರಣ ಗೊಳಿಸಬೇಕೆಂಬ ಬೇಡಿಕೆ ಮುಂದಿರಿಸಿ ಬಸ್ ಆಪರೇಟರ್ಸ್ ಫೆಡರೇಶನ್ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ. ಸರ್ವೀಸ್ ರಸ್ತೆಯ ನಡೆ ಹಾದಿಯಲ್ಲೇ ಹೆಚ್ಚಿನ ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಸರ್ವೀಸ್ ರಸ್ತೆಗಳು ಅತೀ ಕಿರಿದಾಗಿದ್ದು, ಇಂತಹ ರಸ್ತೆಗಳಲ್ಲಿ ರೆಡಿಮೇಟ್ ಬಸ್ ಶೆಲ್ಟರ್‌ಗಳನ್ನು ತಂದು ಅವುಗಳನ್ನು ಸರ್ವೀಸ್ ರಸ್ತೆಯ ನಡೆ ಹಾದಿಗಳಲ್ಲಿ ತಂಗುದಾಣ ರೂಪದಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಬಸ್ ವೇ ಇಲ್ಲದಿರುವುದರಿಂದ ತಂಗುದಾಣಗಳಲ್ಲಿ ಪ್ರಯಾಣಿಕರನ್ನು ಇಳಿಸಲು ಬಸ್‌ಗಳನ್ನು ರಸ್ತೆಯಲ್ಲಿಯೇ ನಿಲ್ಲಿಸಬೇಕಾಗಿ ಬರುತ್ತದೆ. ಕೇವಲ ಎರಡು ಘನ ವಾಹನಗಳಿಗೆ ಸಾಗಲು ಮಾತ್ರ ಸಾಧ್ಯವಾಗುವ ರೀತಿಯಲ್ಲಿ ಸರ್ವೀಸ್ ರಸ್ತೆ ನಿರ್ಮಿಸಲಾಗಿದೆ. ಪ್ರಯಾಣಿಕರನ್ನು ಏರಿಳಿಸಲು ಬಸ್‌ಗಳನ್ನು ರಸ್ತೆಯಲ್ಲೇ ನಿಲ್ಲಿಸಬೇಕಾಗಿ ಬರುತ್ತಿರುವುದು ಸಾರಿಗೆ ಸಮಸ್ಯೆಗೂ ದಾರಿ ಮಾಡಿಕೊಡುತ್ತಿದೆ. ಇದರಿಂದ ಇಂತಹ ಬಸ್ ತಂಗುದಾಣಗಳನ್ನು ಮರು ನವೀಕರಿಸಿ ನಿರ್ಮಿಸಬೇಕೆಂದು ಜಿಲ್ಲಾಧಿಕಾರಿಗೆ ಸಲ್ಲಿಸಿದ ಮನವಿಯಲ್ಲಿ ಫೆಡರೇಶನ್ ಒತ್ತಾಯಿಸಿದೆ.

ಬಂದಡ್ಕ ಸರಕಾರಿ ಶಾಲಾ 75ನೇ ವಾರ್ಷಿಕೋತ್ಸವ: ಲೋಗೋ ಆಹ್ವಾನ

ಕಾಸರಗೋಡು: ಬಂದಡ್ಕ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ 75ನೇ ವಾರ್ಷಿಕೋತ್ಸವನ್ನು ಒಂದು ವರ್ಷಗಳ ಕಾಲ ವಿವಿಧ ಕಾರ್ಯಕ್ರಮದೊಂದಿಗೆ ನಡೆಸಲಾಗುವುದು. ಮಾ.31ರಂದು 74ನೇ ಶಾಲಾ ವಾರ್ಷಿಕೋತ್ಸವ ಮತ್ತು 75ನೇ ವರ್ಷದ ವಾರ್ಷಿಕೋತ್ಸವದ ಉದ್ಘಾಟನೆಯನ್ನು ನಡೆಸಲಾಗುವುದು. ವಾರ್ಷಿಕೋತ್ಸವದ ಅಂಗವಾಗಿ ಬಂದಡ್ಕದ ಚರಿತ್ರೆಯನ್ನು ಒತ್ತಿ ಹೇಳುವ ಮತ್ತು ಕಲೆ, ಸಂಸ್ಕೃತಿ ಪರಿಗಣಿಸಿಕೊಂಡು ಶಾಲೆಯ ಹಿರಿಮೆ ಎತ್ತಿ ತೋರಿಸುವಂತಹ ಆಶಯಗಳನ್ನೊಳಗೊಂಡ ಲೋಗೋ (ಲಾಂಛನ) ತಯಾರಿಸಿ ಮಾ.24ರೊಳಗಾಗಿ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿದೆ. ಆಯ್ಕೆಯಾದ ಲೋಗೋಗೆ ಬಹುಮಾನ ನೀಡಲಾಗುವುದು. ಲೋಗೋ 15X15 ಸೆ.ಮೀ. ಅಳತೆಗಿಂತ ಕಡಿಮೆಯಾಗಬಾರದು. ತೀರ್ಮಾನಿಸಿದ ದಿನಾಂಕದ ನಂತರ ಬರುವ ಲೋಗೋಗಳನ್ನು ಸ್ವೀಕರಿಸಲಾಗುವುದಿಲ್ಲ. ಲೋಗೋ ಕಳುಹಿಸುವವರು ಅವರ ಹೆಸರು, ಮೊ.ನಂ. ವನ್ನು ghssbandadka75@gmail.com ಎಂಬ ಇ-ಮೇಲ್ ಐಡಿಗೆ ಕಳುಹಿಸಬೇಕು. ಅಥವಾ 8606159636, 8547334400, 9447735401ಎಂಬ ವಾಟ್ಸ್ಆ್ಯಪ್ ನಂಬ್ರಕ್ಕೆ ಕಳುಹಿಸಬೇಕಾಗಿದೆ.

ಏ.9ರಂದು ಕೇರಳದಲ್ಲಿ ವಿಧಾನಸಭಾ ಚುನಾವಣೆ

ಕಾಸರಗೋಡು: ಕೇರಳದಲ್ಲಿ ಏಪ್ರಿಲ್ 9ರಂದು ವಿಧಾನಸಭಾ ಚುನಾವಣೆ ನಡೆಯಲಿದೆ ಎಂದು ಕೇಂದ್ರ ಚುನಾವಣಾ ಆಯೋಗವು ಪ್ರಕಟಿಸಿದೆ. ಬಹು ನಿರೀಕ್ಷೆಯಲ್ಲಿರುವ ವಿವಿಧ ರಾಜಕೀಯ ಪಕ್ಷಗಳಿಗೆ ರಾಜ್ಯದಲ್ಲಿ ಚುನಾವಣಾ ಪ್ರಚಾರಕ್ಕೆ ಕೇವಲ ಮೂರು ವಾರಗಳು ಮಾತ್ರ ದೊರಕಲಿವೆ.

ಚುನಾವಣೆ ಕಳೆದ ಬಳಿಕ ದೀರ್ಘ ಸುಮಾರು ಒಂದು ತಿಂಗಳ ನಂತರ ಮೇ 4ರಂದು ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಗೊಳ್ಳಲಿದೆ. ಮಾರ್ಚ್ 23ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕವಾಗಿದೆ. ಚುನಾವಣೆಗಾಗಿ ಕೇರಳದ 14 ಜಿಲ್ಲೆಗಳಲ್ಲಿ ಒಟ್ಟು 30,471 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು. ಈ ಬಾರಿ ಚುನಾವಣೆಯಲ್ಲಿ ಮತ ಚಲಾಯಿಸಲು 100 ವರ್ಷಕ್ಕಿಂತ ಮೇಲ್ಪಟ್ಟ 1571 ಮಂದಿ ಮತದಾರರಿದ್ದಾರೆ. ಕೇರಳದ 2.70 ಕೋಟಿ ಮತದಾರರ ಪೈಕಿ 4.24 ಲಕ್ಷ ಹೊಸ ಮತದಾರರಾಗಿದ್ದಾರೆ. ಚುನಾವಣೆಯನ್ನು ನ್ಯಾಯಯುತ, ಪಾರದರ್ಶಕ ಹಾಗೂ ಶಾಂತಿಯುತವಾಗಿ ನಡೆಸುವ ನಿಟ್ಟಿನಲ್ಲಿ ಕಾಸರಗೋಡು ಜಿಲ್ಲೆಯೂ ಸೇರಿದಂತೆ ರಾಜ್ಯದ 14 ಜಿಲ್ಲೆಗಳಲ್ಲೂ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಸೋಮವಾರ 16, ಮಾರ್ಚ್ 2026

ಸುತ್ತಮುತ್ತ

ಲೋಕ ಅದಾಲತ್‌ನಲ್ಲಿ ಒಟ್ಟು 891 ಪ್ರಕರಣಗಳು ಇತ್ಯರ್ಥ

ಉಡುಪಿ: ಕುಂದಾಪುರದ ನ್ಯಾಯಾಲಯದಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ಒಟ್ಟು 891 ಪ್ರಕರಣಗಳು ಇತ್ಯರ್ಥ ಗೊಂಡಿದ್ದು, 5.39ಕೋಟಿ ರೂ. ಮೊತ್ತವನ್ನು ಪರಿಹಾರ ರೂಪದಲ್ಲಿ ಪಾವತಿಸುವಂತೆ ಆದೇಶಿಸಲಾಗಿದೆ.

17,973 ವ್ಯಾಜ್ಯ ಪೂರ್ವ ಪ್ರಕರಣವನ್ನು ಅದಾಲತ್‌ನಲ್ಲಿ ಇತ್ಯರ್ಥ ಪಡಿಸಿದ್ದು, ಆದರಲ್ಲಿ ಪರಿಹಾರ ರೂಪದಲ್ಲಿ 95.44 ಲಕ್ಷ ರೂ. ನೀಡುವಂತೆ ಸೂಚಿಸಲಾಗಿದೆ. ಇನ್ನು ಕುಂದಾಪುರದ 891 ಪ್ರಕರಣಗಳ ಪೈಕಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 17 ಪ್ರಕರಣ ಇತ್ಯರ್ಥಗೊಂಡು, 89.65ಲಕ್ಷ ರೂ. ಪರಿಹಾರ, ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ 54 ಇತ್ಯರ್ಥಗೊಂಡು, 2.56ಕೋ.ರೂ. ಪರಿಹಾರ, ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 100 ಪ್ರಕರಣಗಳು ಇತ್ಯರ್ಥಗೊಂಡು, 89.28ಲಕ್ಷ ರೂ. ಪರಿಹಾರ, ಎರಡನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 208 ಪ್ರಕರಣಗಳು ಇತ್ಯರ್ಥಗೊಂಡು, 58.86 ಲಕ್ಷ ರೂ. ಪರಿಹಾರ ಹಾಗೂ ಒಂದನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 512 ಪ್ರಕರಣಗಳು ಇತ್ಯರ್ಥಗೊಂಡಿದ್ದು, 44.73ಲಕ್ಷ ರೂ. ಪರಿಹಾರ ನೀಡುವಂತೆ ಆದೇಶಿಸಲಾಗಿದೆ.

ನಾಳೆ ಮಕ್ಕಳ ಆಟದ ಮೈದಾನ ಉದ್ಘಾಟನೆ

ಉಡುಪಿ: ಕುಕ್ಕಿಕಟ್ಟೆಯ ಶ್ರೀ ವಿ.ಕೆ.ಆರ್. ಆಚಾರ್ಯ ಸ್ಮಾರಕ ಶ್ರೀಕೃಷ್ಣ ಬಾಲನಿಕೇತನದಲ್ಲಿ (ಶ್ರೀಕೃಷ್ಣ ಸೇವಾಧಾಮ ಟ್ರಸ್ಟ್ ರಿ. ಇದರ ಘಟಕ) ನೂತನವಾಗಿ ನಿರ್ಮಿಸಲಾದ ಮಕ್ಕಳ ಆಟದ ಮೈದಾನ ಮತ್ತು ಇಂಟರ್‌-ಲಾಕ್ ಪಾತ್‌ವೇ ಇದರ ಉದ್ಘಾಟನಾ ಸಮಾರಂಭವು ಮಾ.17ರಂದು ಮಂಗಳವಾರ ನಡೆಯಲಿದೆ. ಅಂದು ಮಧ್ಯಾಹ್ನ 3:00 ಗಂಟೆಗೆ ಕುಕ್ಕಿಕಟ್ಟೆಯ ಶ್ರೀಕೃಷ್ಣ ಬಾಲನಿಕೇತನದ ಆವರಣದಲ್ಲಿ ನಡೆಯುವ ಈ ಕಾರ್ಯಕ್ರಮವನ್ನು ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಉದ್ಘಾಟಿಸಿ, ಆಶೀರ್ವಚನ ನೀಡಲಿದ್ದಾರೆ.

ಮಹಿಳಾ ದಿನಾಚರಣೆ

ಕುಂದಾಪುರ: ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರಿಗೆ ಅವಕಾಶ ದೊರೆತಾಗ ಮಾತ್ರ ಮಹಿಳಾ ದಿನಾಚರಣೆಗೆ ವಿಶೇಷ ಅರ್ಥ ಸಿಗಲು ಸಾಧ್ಯ ಮತ್ತು ಆತ್ಮಸ್ಥೈರ್ಯ ಗುಣವನ್ನು ಹೆಣ್ಣುಮಕ್ಕಳು ಜೀವನದಲ್ಲಿ ಬೆಳೆಸಿಕೊಳ್ಳಬೇಕು ಎಂದು ಬಸ್ರೂರು ಹಿಂದೂ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯಿನಿ ಇಂದಿರಾ ಆರ್. ಶೆಟ್ಟಿ ಹೇಳಿದರು. ಬಸ್ರೂರು ಶ್ರೀ ಶಾರದಾ ಕಾಲೇಜು ಮಹಿಳಾ ವೇದಿಕೆ ಆಶ್ರಯದಲ್ಲಿ ಕಾಲೇಜಿನ ವೀರ ರಾಜೇಂದ್ರ ಹೆಗ್ಡೆ ಸಭಾಂಗಣದಲ್ಲಿ ಮಂಗಳವಾರ ಜರಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಸಂಚಾಲಕಿ ಅನುಪಮ ಎಸ್. ಶೆಟ್ಟಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಕಾಲೇಜಿನ ಸಂಚಾಲಕರಾಗಿ ಆಯ್ಕೆಯಾದ ಅನುಪಮ ಎಸ್. ಶೆಟ್ಟಿ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಕಾಲೇಜಿನ ಪ್ರಾಂಶುಪಾಲೆ ಡಾ. ಚಂದ್ರಾವತಿ ಶೆಟ್ಟಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಯೋಜಕಿ ಪ್ರಮೀಳಾ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಿದ್ಯಾರ್ಥಿನಿ ಸೌಮ್ಯ ಕಾರ್ಯಕ್ರಮ ನಿರೂಪಿಸಿ, ಉಪನ್ಯಾಸಕಿ ಮಮತಾ ವಂದಿಸಿದರು.

ಪ್ರಶಸ್ತಿ ಪ್ರದಾನ


ಕುಂದಾಪುರ: ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆಯಲ್ಲಿ 2025-26ರ ಸಾಲಿನಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುಖ್ಯ ಅತಿಥಿಯಾಗಿದ್ದ ಕುಂದಾಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಶಿಕ್ಷಣ ಸಂಯೋಜಕ ರಾಜಾ ಖಾರ್ವಿ ಅವರು, ಶೇ. 80 ಮತ್ತು ಶೇ.90 ಕ್ಕಿಂತಲೂ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಫಲಕ ನೀಡಿ, ವಿದ್ಯಾರ್ಥಿಗಳ ಮುಂದಿನ ಜೀವನಕ್ಕೆ ಶುಭ ಹಾರೈಸಿದರು. ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ರೇ?ಮಾ ಡಿಸೋಜಾ, ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಪ್ರಮೀಳಾ ಡಿಸೋಜಾ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಸಂದೀಪ್ ಗಾಣಿಗ ಹಾಗೂ ಉಪ ಪ್ರಾಂಶುಪಾಲ ಸುಜಯ್ ಕೋಟೆಗಾರ್ ಉಪಸ್ಥಿತರಿದ್ದರು. ಪ್ರೌಢ ಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಕೃ?ಣ ಅಡಿಗ ಸ್ವಾಗತಿಸಿ, ಸಂಗೀತ ಶಿಕ್ಷಕಿ ರಮಣಿ ಪ್ರಾರ್ಥನೆಗೈದರು. ಸಹಶಿಕ್ಷಕಿ ಶುಭ್ರತಾ ನಿರೂಪಿಸಿದರು. ವಿದ್ಯಾರ್ಥಿನಿ ಶ್ರಾವಣಿ ಎಂ. ನಾಯಕ್ ವಂದಿಸಿದಳು.

ಉಡುಪಿ ನಗರದಲ್ಲಿ ಒಳಚರಂಡಿ ಅವ್ಯವಸ್ಥೆ, ವೈಫಲ್ಯದಿಂದಾಗಿ ಬಾವಿಗಳು ಕಲುಷಿತ: ಡಾ. ಶಾನುಭಾಗ್

ಜನರು ಮೂಲಭೂತ ಹಕ್ಕಿಗಾಗಿ ಧ್ವನಿ ಎತ್ತುವುದು ಅನಿವಾರ್ಯ

ಉಡುಪಿ: ಶುದ್ಧ ನೀರು ನಮ್ಮ ಮೂಲಭೂತ ಹಕ್ಕು. ಆದರೆ ಉಡುಪಿಯ ಭೂಗತ ಚರಂಡಿ ವ್ಯವಸ್ಥೆಯ ವೈಫಲ್ಯದಿಂದಾಗಿ ಇಂದು ನಮ್ಮ ಬಾವಿಗಳು ಕಲುಷಿತಗೊಂಡು ನರಕಸದೃಶವಾಗಿವೆ. ಇದನ್ನು ಸರಿಪಡಿಸಲು ನಾಗರಿಕರು ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತುವುದು ಅನಿವಾರ್ಯ ಎಂದು ಮಾನವ ಹಕ್ಕು ಪ್ರತಿಷ್ಠಾನದ ಅಧ್ಯಕ್ಷ ಡಾ. ರವೀಂದ್ರ ಶಾನುಭಾಗ್ ಕರೆ ನೀಡಿದರು.

ಯಕ್ಷಗಾನ ಕಲಾರಂಗ ಉಡುಪಿ ಹಾಗೂ 'ಜನಧ್ವನಿ' ಸಿಟಿಜನ್ಸ್ ವೆಲ್ಫೇರ್ ಅಸೋಸಿಯೇಶನ್ ಸಂಯೋಜನೆಯಲ್ಲಿ ಇತ್ತೀಚೆಗೆ ಐವೈಸಿ ಸಭಾಂಗಣದಲ್ಲಿ ನಡೆದ 'ಬಹುಜನ ಹಿತಾಯ - ಬಹುಜನ ಸುಖಾಯ' ಉಪನ್ಯಾಸ ಮಾಲಿಕೆಯ 4ನೇ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ಸಾಕ್ಷ್ಯಾಧಾರಗಳ ಮೂಲಕ ವಿಷಯ ಮಂಡಿಸಿದ ಅವರು, ಉಡುಪಿಯ ಇಂದಿನ ದುಸ್ಥಿತಿಯನ್ನು ಬಿಚ್ಚಿಟ್ಟರು. ಮಣಿಪಾಲದ ಮಣ್ಣಪಳ್ಳದಿಂದ ಉಗಮಿಸುವ ಇಂದ್ರಾಣಿ ನದಿ ಹಿಂದೆ 120 ಅಡಿ ಅಗಲವಿತ್ತು. ಇಂದು ಅದು ಕೇವಲ 20-30 ಅಡಿ



ಗಳಿಗೆ ಕುಸಿದು ಕೊಳಚೆ ಹರಿಯುವ ತೋಡಾಗಿದೆ. 1940ರ ದಶಕದಲ್ಲಿ ಬಟ್ಟೆ ತೊಳೆಯುವ ಸಾಬೂನಿನಿಂದ ಕೃಷಿಗೆ ತೊಂದರೆಯಾಗುತ್ತದೆ ಎಂದು ಕಾಳಜಿ ವಹಿಸುತ್ತಿದ್ದ ಕಾಲವಿತ್ತು. ಆದರೆ ಇಂದು ನಗರದ ಶೇ. 75ರಷ್ಟು ಭಾಗಕ್ಕೆ ವ್ಯವಸ್ಥಿತ ಒಳಚರಂಡಿ ಇಲ್ಲದೆ, ಜನರ ಬಾವಿಗಳೇ ಶೌಚಾಲಯದ ಗುಂಡಿಗಳಾಗಿ ಬದಲಾಗುತ್ತಿವೆ. ನಗರಸಭೆಯು ಉಡುಪಿಯನ್ನು 'ಬಯಲು ಶೌಚಾಲಯ ಮುಕ್ತ' ಎಂದು ಘೋಷಿಸಿರುವುದು ಕೇವಲ ಕಾಗದದ ಮೇಲಿನ ಸಾಧನೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಮಾಜದ ಅನೇಕ ಗಣ್ಯರು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ನಾಲ್ವರು ನಾಗರಿಕರು ತಮ್ಮ ಬದುಕಿನಲ್ಲಿ ಈ ಚರಂಡಿ ಅವ್ಯವಸ್ಥೆಯಿಂದ ಅನುಭವಿಸುತ್ತಿರುವ ನರಕಯಾತನೆಯನ್ನು ಹಂಚಿಕೊಂಡರು.

ಅಧಿಕಾರಿಗಳ ಅಸಹಕಾರ-ವೈಫಲ್ಯ

ನಮ್ಮ ಮನೆಯ ಬಾವಿಯ ನೀರಿನ ಪರೀಕ್ಷೆಯನ್ನು ನಗರಸಭೆಯವರೇ ಉಚಿತವಾಗಿ ಮಾಡಿಕೊಡಬೇಕೆಂಬ ನಿಯಮವಿದ್ದರೂ, ಅದು ಅನುಷ್ಠಾನಕ್ಕೆ ಬರುತ್ತಿಲ್ಲ. ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ 22 ಪ್ರಶ್ನೆಗಳಿಗೆ ಅಧಿಕಾರಿಗಳು ಸಬೂಬು ಹೇಳಿ ಉತ್ತರಿಸಲು ನಿರಾಕರಿಸುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲೂ ಅಧಿಕಾರಿಗಳ ಬಳಿ ಯಾವುದೇ ದತ್ತಾಂಶಗಳಿರಲಿಲ್ಲ. ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು 'ಜನಸೇವಕ'ರಾಗುವ ಬದಲು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಹೋರಾಟಕ್ಕೆ ಪ್ರೇರಣೆಯಾಗಿದೆ ಎಂದು ಡಾ. ಶಾನುಭಾಗ್ ಕಿಡಿಕಾರಿದರು. ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಳಿ ಕಡೆಕ್ಕಾರ್ ಪರಿಚಯ ಭಾಷಣ ನೆರವೇರಿಸಿದರು.

ಸೆಪ್ಟಿ ಟ್ಯಾಂಕ್ ತಂತ್ರಜ್ಞಾನ - ಒಂದು ಪರಿಹಾರ

ಒಳಚರಂಡಿ ಸಮಸ್ಯೆಗೆ ಸ್ವಯಂ ಪರಿಹಾರವಾಗಿ ಹೊಸ ತಂತ್ರಜ್ಞಾನದ ಸೆಪ್ಟಿ ಟ್ಯಾಂಕ್‌ಗಳನ್ನು ಮನೆಗಳಲ್ಲಿ ಅಳವಡಿಸಬಹುದಾಗಿದೆ ಎಂದು ಕಾರ್ಯಕ್ರಮ ಸಂಯೋಜಕ ನಟೇಶ್ ಉಡುಪಿ ಮಾಹಿತಿ ನೀಡಿದರು. ಈ ವ್ಯವಸ್ಥೆಯಲ್ಲಿ ಮಾನವ ತ್ಯಾಜ್ಯವು ಕೇವಲ 72 ಗಂಟೆಗಳಲ್ಲಿ ವಾಸನೆ ರಹಿತ ನೈಟ್ರೋಜನ್ ಗಾಳಿಯಾಮತ್ತು ಶುದ್ಧ ಜಲವಾಗಿ ಪರಿವರ್ತನೆಯಾಗುತ್ತದೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಇಂತಹ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗಿದೆ. ಕರ್ನಾಟಕದಲ್ಲೂ ಇಂತಹ ತಂತ್ರಜ್ಞಾನದ ಅಳವಡಿಕೆಯಿಂದ ಪರಿಸರ ಮಾಲಿನ್ಯವನ್ನು ಗಣನೀಯವಾಗಿ ತಡೆಗಟ್ಟಬಹುದು ಎಂದರು.

ಮರೆಯಾದ ಇಂದ್ರಾಣಿ - ಅಂದು ಮತ್ತು ಇಂದು

ಐವತ್ತು ವರ್ಗಳ ಹಿಂದೆ ಉಡುಪಿಯ ಇಂದ್ರಾಣಿ ನದಿ ಹರಿಯುವ ಪ್ರದೇಶದಲ್ಲಿ ಮೂರು ಬೆಳೆ ಬೆಳೆಯಲಾಗುತ್ತಿತ್ತು. ಕಲ್ಸಂಕದಲ್ಲಿ ಜನ ಅವಭೃತ ಸ್ನಾನ ಮಾಡುತ್ತಿದ್ದರು. ಕಲ್ಮಾಡಿಯಲ್ಲಿ ಮೀನು ಹಿಡಿಯಲಾಗುತ್ತಿತ್ತು ಮತ್ತು ಬುಡ್ನಾರಿನಲ್ಲಿ ಮನಮೋಹಕ ಜಲಪಾತವಿತ್ತು. ಆದರೆ ಇಂದು ಅದೇ ನದಿ ಕೊಳಚೆ ಹರಿಯುವ ಚರಂಡಿಯಾಗಿ ಮಾರ್ಪಟ್ಟಿದೆ. 120 ಅಡಿ ಇದ್ದ ನದಿ ಇಂದು ಕೇವಲ 20 ಅಡಿಗಳಿಗೆ ಸಂಕುಚಿತಗೊಂಡಿದೆ. ಅಂದಿನ ಜನರ ಪರಿಸರ ಕಾಳಜಿ ಇಂದು ನಶಿಸಿ ಹೋಗಿದ್ದು, ಇಡೀ ನಗರದ ಬಾವಿಗಳ ನೀರು ಕಲುಷಿತಗೊಂಡಿರುವುದು ಅಭಿವೃದ್ಧಿಯ ಹೆಸರಲ್ಲಿ ನಡೆಯುತ್ತಿರುವ ವಿನಾಶಕ್ಕೆ ಸಾಕ್ಷಿಯಾಗಿದೆ.

ಉಡುಪಿ ವಿಶ್ವಕರ್ಮ ಬ್ಯಾಂಕಿನ ಶಾಖೆಯಿಂದ 'ಸ್ವಚ್ಛತಾ ಹೀ ಸೇವಾ'



ಉಡುಪಿ: ವಿಶ್ವಕರ್ಮ ಬ್ಯಾಂಕ್ ನಿರಂತರವಾಗಿ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಸುತ್ಯಾರ್ಹ ಹಾಗೂ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ಈ ಕಾರ್ಯದಲ್ಲಿ ಕೈ ಜೋಡಿಸುವ ಮೂಲಕ ಸ್ವಚ್ಛ ಉಡುಪಿಯ ನಿರ್ಮಾಣದಲ್ಲಿ ಭಾಗಿದಾರರಾಗಬೇಕೆಂದು ಉಡುಪಿ ನಗರಸಭೆಯ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ ಹೇಳಿದರು.

ಅವರು ವಿಶ್ವಕರ್ಮ ಬ್ಯಾಂಕಿನ ಉಡುಪಿ ಶಾಖೆಯ ವತಿಯಿಂದ 'ಸ್ವಚ್ಛತಾ ಹೀ ಸೇವಾ' ಧ್ಯೇಯದೊಂದಿಗೆ ಉಡುಪಿಯಲ್ಲಿ ನಡೆದ 35ನೇ ಸ್ವಚ್ಛತಾ ಶ್ರಮದಾನವನ್ನು ಉದ್ಘಾಟಿಸಿದರು. ನಗರ ಸಭೆಯ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಮಾರ್ಷಲ್ ಫ್ರೆಂಡ್ಸ್ ಅಧ್ಯಕ ದಿನೇಶ್ ಹಾಗೂ ಅಶ್ವಥಕಟ್ಟೆ ಫ್ರೆಂಡ್ಸ್ ಗೌರವ ಸಲಹೆಗರರಾದ ಕಿಶೋರ್ ಹಸಿರು ನಿಶಾನೆಯನ್ನು ತೋರಿಸಿ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಗರದ ಕೃಷಿ ಕೇಂದ್ರ, ಬಾಳಿಗೆ ಆಸ್ಪತ್ರೆ ರಸ್ತೆ, ದೊಡ್ಡಣಗುಡ್ಡೆ ಪರಿಸರದಲ್ಲಿ ಸ್ವಚ್ಛತೆಯ ಜಾಗೃತಿಯ ನಿಟ್ಟಿನಲ್ಲಿ ಶ್ರಮದಾನ ಕಾರ್ಯಕ್ರಮವು ನಡೆಯಿತು. ವಿಶ್ವಕರ್ಮ ಬ್ಯಾಂಕ್ ಉಪಾಧ್ಯಕ್ಷ ಜಗದೀಶ್ ಆಚಾರ್ಯ ಪಡುಪಣಂಬೂರು, ನಿರ್ದೇಶಕ ಜಗದೀಶ್ ಆಚಾರ್ಯ ಕಪ್ಪೆಟ್ಟು, ಮಾರ್ಷಲ್ ಫ್ರೆಂಡ್ಸ್ ಅಧ್ಯಕ್ಷ ದಿನೇಶ್ ಹಾಗೂ ಪದಾಧಿಕಾರಿಗಳಾದ ನವೀನ್, ರಾಜೇಶ್, ಸಂತೋಷ ಆಚಾರ್ಯ, ರಾಜೇಶ್ ನಾಯಕ್, ಪ್ರವೀಣ್ ನಾಯಕ್, ಶಾಮ್ ಆಚಾರ್ಯ, ಸತೀಶ್ ಆಚಾರ್ಯ, ಅಶ್ವಥಕಟ್ಟೆ ಫ್ರೆಂಡ್ಸ್ ಅಧ್ಯಕ್ಷ ಚಂದ್ರಶೇಖರ್ ಶೆಟ್ಟಿಗಾರ್, ಗೌರವ ಸಲಹೆಗ ಕಿಶೋರ್, ನಮೋ ಫ್ರೆಂಡ್ಸ್ ಅಧ್ಯಕ್ಷ ರಾಜೇಶ್, ವಿಶ್ವಕರ್ಮ ಸಹಕಾರ ಬ್ಯಾಂಕಿನ ಉಡುಪಿ ಶಾಖೆಯ ಶಾಖಾಧಿಕಾರಿ ಸುದೇಶ್ ಹಾಗೂ ಸಿಬ್ಬಂದಿಗಳು, ಸದಸ್ಯರು, ಗ್ರಾಹಕರು, ಹಿತೈಷಿಗಳು ಹಾಗೂ ಸ್ಥಳೀಯರು ಸ್ವಯಂ ಸೇವಕರಾಗಿ ಶ್ರಮದಾನದಲ್ಲಿ ಕೈ ಜೋಡಿಸಿ ಸಹಕರಿಸಿದರು.

ಬಂಟಕಲ್ಲು ಶಾಲಾ ಶತ ಸಂಭ್ರಮ: ಕಾಂಕ್ರೀಟ್ ರಸ್ತೆಯ ಲೋಕಾರ್ಪಣೆ



ಶಿರ್ವ: ಬಂಟಕಲ್ಲು ಶ್ರೀದುರ್ಗಾ ಪರಮೇಶ್ವರೀ ಅನುದಾನಿತ ಹಿ.ಪ್ರಾ. ಶಾಲೆಯ ಶತ ಸಂಭ್ರಮದ ಶುಭಾವಸರದಲ್ಲಿ ಕಾಪು ಕ್ಷೇತ್ರದ ಶಾಸಕರ ಅನುದಾನದಿಂದ ಸುಮಾರು ಐದು ಲಕ್ಷ ರೂ. ವೆಚ್ಚದಲ್ಲಿ ಕಟಪಾಡಿ- ಶಿರ್ವ ರಾಜ್ಯ ಹೆದ್ದಾರಿಯಿಂದ ಶಾಲೆಗೆ ಸಂಪರ್ಕ ಕಲ್ಪಿಸುವ ಕಾಂಕ್ರಿಟ್ ರಸ್ತೆಯನ್ನು ಭಾನುವಾರ ಶಾಸಕ ಗುರ್ಮೆ ಸುರೇಶ ಶೆಟ್ಟಿ ಉದ್ಘಾಟಿಸಿದರು.

ಈಗ ಕನ್ನಡ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ವಿಶೇಷ ಪ್ರಯತ್ನಗಳು ನಡೆಯುತ್ತಿದ್ದು ಕ್ಷೇತ್ರದ ಕನ್ನಡ ಶಾಲೆಗಳ ಬಗ್ಗೆ ವಿಧಾನ ಸಭೆಯಲ್ಲೂ, ಶಿಕ್ಷಣ ಸಚಿವರಿಗೂ ವೈಯುಕ್ತಿಕವಾಗಿ ಗಮನಕ್ಕೆ ತರಲಾಗಿದ್ದು ಧನಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಶಾಸಕನಾಗಿ ಸದಾ ತಮ್ಮೊಂದಿಗೆ ಇರುತ್ತೇನೆ ಎಂದರು.

ಗುತ್ತಿಗೆದಾರ ಸುನಿಲ್ ಅವರನ್ನು ಸಮಿತಿ ವತಿಯಿಂದ ಶಾಸಕರು ಸನ್ಮಾನಿಸಿದರು. ಶತಮಾನೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಆರ್ .ಪಾಟ್ಕರ್ ನಿರೂಪಿಸಿದರು. ಶ್ರೀದೇವಳದ ಆಡಳಿತ ಮೊಕ್ತೇಸರ ಗಂಪದಬೈಲು ಜಯರಾಮ ಪ್ರಭು, ಅಧ್ಯಕ್ಷ ಉಮೇಶ ಪ್ರಭು ಪಾಲಮೆ, ಶಾಲಾ ಸಂಚಾಲಕ ರಾಮದಾಸ್ ಪ್ರಭು, ಶ್ರೀದೇವಳದ ಆಡಳಿತ ಮಂಡಳಿ ಸದಸ್ಯರು, ಶತಮಾನೋತ್ಸವ ಸ್ಮರಣ ಸಂಚಿಕೆ ಸಮಿತಿ ಅಧ್ಯಕ್ಷ ಬಂಟಕಲ್ಲು ರಾಮಕೃಷ್ಣ ಶರ್ಮಾ, ಮುಖ್ಯ ಶಿಕ್ಷಕಿ ಸಂಗೀತಾ ಆರ್. ಪಾಟ್ಕರ್, ಶತಮಾನೋತ್ಸವ ಸಮಿತಿ ಗೌರವ ಅಧ್ಯಕ್ಷ ದಾಮೋದರ ಆಚಾರ್ಯ ಮೊದಮಲೆ, ಉಪಾಧ್ಯಕ್ಷ ದಿನೇಶ ದೇವಾಡಿಗ,ಉಮೇಶ್ ರಾವ್, ಅನಂತರಾಮ ವಾಗ್ಲೆ, ಮಂಜುಳಾ ಆಚಾರ್ಯ, ಅರುಂದತಿ ಪ್ರಭು, ಶ್ರೀಕಾಂತ್ ಭಟ್,ರಾಘವೇಂದ್ರ ನಾಯಕ್ ಪಾಲಮೆ, ಡಾ. ವಿಟ್ಠಲ್ ನಾಯಕ್ ಇದ್ದರು.

ಶ್ರೀ ಗುರುನರಸಿಂಹ ದೇವಳ ಆಡಳಿತ ಮಂಡಳಿ ಚುನಾವಣೆ



ಕೋಟ: ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಸ್ಥಾನದ ಮುಂದಿನ 5 ವರ್ಷಗಳ ನೂತನ ಆಡಳಿತ ಮಂಡಳಿಗೆ ಚುನಾವಣೆ ಭಾನುವಾರ ದೇವಳದ ವಠಾರದಲ್ಲಿ ಬೆಳಗ್ಗೆ 8ರಿಂದ ಸಂಜೆ 4ರ ವರೆಗೆ ನಡೆಯಿತು.

ಒಟ್ಟು 9 ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿದ್ದು ಉಳಿದ 8 ಸ್ಥಾನಕ್ಕೆ 18 ಮಂದಿ ಸ್ಪರ್ಧೆಯಲ್ಲಿದ್ದು, ಹೊರರಾಜ್ಯದಿಂದ ಲಕ್ಷ್ಮೀನಾರಾಯಣ ರಾವ್ ವರ್ಕಾಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ ಒಟ್ಟು 6ಬೂತ್‌ಗಳಲ್ಲಿ 7226 ಮತದಾರರರಪೈಕಿಸಾಕಷ್ಟುಮತದಾರರು ತಮ್ಮ ಮತವನ್ನು ಶ್ರೀ ದೇಗುಲ ವಿವಿಧ ಭಾಗಗಳ ಮತಗಟ್ಟೆಯಲ್ಲಿ ಚಲಾಯಿಸಿದರು. ಪೂರ್ವಾಹ್ನದಿಂದಲೇ ದೇಗುಲದ ವಠಾರದಲ್ಲಿ ಹಬ್ಬದ ವಾತಾವರಣ ಏರ್ಪಟ್ಟಿತು. ಸಂಜೆ 4ಕ್ಕೆ ಮತದಾನ ಪೂರ್ಣಗೊಂಡಿದ್ದು ನಂತರ ಮತ ಏಣಿಕೆ ಕಾರ್ಯ ನಡೆಯಿತು. ಮುಖ್ಯ ಚುನಾವಣಾಕಾರಿಯಾಗಿ ಎ. ಅಮೃತ ಹೊಳ್ಳ ಸಹಾಯಕ ಚುನಾವಣಾಧಿಕಾರಿಯಾಗಿ ವಿಶ್ವನಾಥ ಹೊಳ್ಳ ಕರ್ತವ್ಯ ಕಾರ್ಯ ನಿರ್ವಹಿಸಿದರು.

ಮುಲ್ಕಾಡಿ ಭಜನಾ ಮಂಗಲೋತ್ಸವ



ಶಿರ್ವ: ಶ್ರೀಕ್ಷೇತ್ರ ಮುಲ್ಕಾಡಿ ಶ್ರೀದುರ್ಗಾಪರಮೇಶ್ವರೀ ದೇವಳದಲ್ಲಿ ಶ್ರೀದುಗಾಪರಮೇಶ್ವರೀ ಭಜನಾ ಮಂಡಳಿ, ಮುಲ್ಕಾಡಿ ಕೋಡು ಪಂಜಿಮಾರು, ಮಹಿಳಾ ಭಜನಾ ಮಂಡಳಿ ಮುಲ್ಕಾಡಿ, ಇದರ ನೇತೃತ್ವದಲ್ಲಿ 34ನೇ ಭಜನಾ ಮಂಗಲೋತ್ಸವ ಶನಿವಾರ ಸಂಜೆ ಸಂಪನ್ನಗೊಂಡಿತು.

ಪ್ರಧಾನ ಅರ್ಚಕ ವೇದಮೂರ್ತಿ ಲೋಹಿತ್ ಭಟ್ ನೇತೃತ್ವ ದಲ್ಲಿ ರಾತ್ರಿ ಭಜನಾ ಮಂಗಲೋತ್ಸವ-ಮಹಾಪೂಜೆ ನಡೆಯಿತು. ಕ್ಷೇತ್ರದ ಸತೀಶ್ ಭಟ್, ಸಮರ್ಥ ಭಟ್, ರಾಘವೇಂದ್ರ ಭಟ್ ಸಹಕರಿಸಿದರು. ಭಜನಾ ಮಂಗಲೋತ್ಸವದಲ್ಲಿ ಶ್ರೀದುರ್ಗಾಪರಮೇಶ್ವರೀ ಭಜನಾ ಮಂಡಳಿ ಶ್ರೀಭಕ್ತಿ ಭಜನಾ ಮಂಡಳಿ ಕೋಡು ಪಾಲಮೆ,ಶ್ರೀ ಸಿದ್ಧಿವಿನಾಯಕ ಭಜನಾ ಮಂಡಳಿ ಅಡಪಾಡಿ ಪಳ್ಳಿ, ಶ್ರೀ ವಿಷ್ಣುಮೂರ್ತಿ ಭಜನಾ ಮಂಡಳಿ ಶಿರ್ವ, ಶ್ರೀ ವಿಠೋಭ ಭಜನಾ ಮಂಡಳಿ ಗೋಳಿಕಟ್ಟೆ ಇನ್ನಂಜೆ ಮಂಡಳಿಗಳು ಭಾಗವಹಿಸಿದ್ದವು.

ಕುಂದಾಪುರ: ಕುಲಾಲ ಪ್ರೀಮಿಯರ್ ಲೀಗ್ ರಾಜ್ಯಮಟ್ಟದ ಕ್ರಿಕೆಟ್ ಉದ್ಘಾಟನೆ



ಕುಂದಾಪುರ: ಕುಲಾಲ ಯುವ ಸಂಘಟನೆ ಪ್ರಚಾರ ಬಯಸದೇ ಅನೇಕ ಸಮಾಜಮುಖಿ ಕಾರ್ಯ ಮಾಡುತ್ತಿದೆ ಎಂದು ರಾಜ್ಯ ಕುಲಾಲ- ಕುಂಬಾರರ ಯುವ ವೇದಿಕೆ ಸ್ಥಾಪಕಾಧ್ಯಕ್ಷ ಡಾ. ಅಣ್ಣಯ್ಯ ಕುಲಾಲ್ ಹೇಳಿದರು.

ಕುಂದಾಪುರದ ಗಾಂಧಿ ಮೈದಾನದಲ್ಲಿ ರಾಜ್ಯ ಕುಲಾಲ-ಕುಂಬಾರರ ಯುವ ವೇದಿಕೆ, ಮಹಿಳಾ ಸಂಘಟನೆಗಳ ಒಕ್ಕೂಟ ಮಂಗಳೂರು ಹಾಗೂ ಕುಲಾಲ ಸಮಾಜ ಸುಧಾರಕರಸಂಘ ಕುಂದಾಪುರದಸಂಯುಕ್ತ ಆಶ್ರಯದಲ್ಲಿ ನಡೆದ ರಾಜ್ಯ ಮಟ್ಟದ ಕುಲಾಲ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕುಂದಾಪುರ ಶಾಸಕ ಕಿರಣ್‌ಕುಮಾರ್ ಕೊಡ್ಗಿ ಮಾತನಾಡಿದರು. ಕುಂದಾಪುರ ಕುಲಾಲ ಸಂಘದ ಸ್ಥಾಪಕಾಧ್ಯಕ್ಷ ಡಾ. ಎಂ. ವಿ. ಕುಲಾಲ್ ಪಂದ್ಯಾಟ ಉದ್ಘಾಟಿಸಿದರು. ಕುಂದಾಪುರ ಕುಲಾಲ ಸಂಘದ ಅಧ್ಯಕ್ಷ ರಾಘವೇಂದ್ರ ಕುಲಾಲ್ ಹೆಮ್ಮಾಡಿ ಅಧ್ಯಕ್ಷತೆ ವಹಿಸಿದ್ದರು. ಐಎಂಎ ಜಿಲ್ಲಾ ಸಂಚಾಲಕ ಡಾ. ಉಮೇಶ್ ಪುತ್ರನ್, ಐಎಸೆ ರಾಜ್ಯಾಧ್ಯಕ್ಷ ಡಾ. ವೀರಭದ್ರಯ್ಯ ಟಿ., ಪತ್ರಕರ್ತ ಕೆ.ಸಿ. ರಾಜೇಶ್, ರಂಜಿತ್ ಕುಲಾಲ್ ಶಿರಿಯಾರ, ಚಕ್ರವರ್ತಿ ಕ್ರಿಕೆಟ್ ಕ್ಲಬ್‌ನ ಮನೋಜ್ ನಾಯರ್, ಕಾರ್ಕಳ ವಲಯ ಅರಣ್ಯಾಧಿಕಾರಿ ಪ್ರಭಾಕರ ಕುಲಾಲ್ ಜನ್ನಾಲೆ, ಯುವ ವೇದಿಕೆ ರಾಜ್ಯ ಪ್ರ. ಕಾರ್ಯದರ್ಶಿ ಸತೀಶ್ ಕುಲಾಲ್ ನಡೂರು, ಜಿಲ್ಲಾಧ್ಯಕ್ಷ ಮಂಜುನಾಥ ಕುಲಾಲ್ ಜನ್ನಾಲೆ, ಕುಂದಾಪುರ ಅಧ್ಯಕ್ಷ ಹರೀಶ್ ಕುಲಾಲ್ ಕಟ್ಕೆರೆ, ಬೈಂದೂರು ಅಧ್ಯಕ್ಷ ಸುರೇಶ್ ಕುಲಾಲ್ ಮೆಟ್ಟಿನಹೊಳೆ, ಮಹಿಳಾ ಘಟಕದ ಗೌರವಾಧ್ಯಕ್ಷೆ ಪ್ರತಿಮಾ ವಿನೋದ ಕುಲಾಲ್, ಪ್ರಮುಖರಾದ ಡಾ. ಜಿ.ಕೆ. ಭಟ್, ಡಾ. ಮಹೇಶ್ ತುಮಕೂರು, ಪಾರ್ವತಿ ಕುಲಾಲ್, ಅನಿತಾ ಅಶೋಕ್ ಕುಲಾಲ್ ಇದ್ದರು. ರೇಖಾ ಪ್ರಭಾಕರ್ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು.

ಪಂಚವರ್ಣದಿಂದ 294ನೇ ಭಾನುವಾರದ ಸ್ವಚ್ಛತಾ ಅಭಿಯಾನ




ಕೋಟ: ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ಕೋಟ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ಹಂದಟ್ಟು ಮಹಿಳಾ ಬಳಗ ಕೋಟ,ಮಣೂರು ಫ್ರೆಂಡ್ಸ್,ಸಮುದ್ಯತಾ ಗ್ರೂಪ್ ಕೋಟ ಇವರ ಸಹಯೋಗದೊಂದಿಗೆ ಕೋಟ ಗ್ರಾ.ಪಂ., ಎಸ್‌ಎಲ್‌ಆರ್‌ಎಂ ಘಟಕ ಕೋಟ ಇವರ ಸಂಯೋಜನೆಯೊಂದಿಗೆ 294ನೇ ಭಾನುವಾರದ ಸ್ವಚ್ಛತಾ ಕಾರ್ಯಕ್ರಮ ಮಣೂರು ಹಾಗೂ ಹರ್ತಟ್ಟು ರಾಷ್ಟ್ರೀಯ ಹೆದ್ದಾರಿಯಲ್ಲಿ ತ್ಯಾಜ್ಯ ತೆರವು ಮಾಡುವ ಮೂಲಕ ಹಮ್ಮಿಕೊಂಡಿತು.

ಅಭಿಯಾನಕ್ಕೆ ನಿವೃತ್ತ ಬಿಎಸ್‌ಎನ್‌ಎಲ್ ಅಧಿಕಾರಿ ಮಣೂರು ವಿಷ್ಣುಮೂರ್ತಿ ಮಯ್ಯ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಹೆದ್ದಾರಿ ಒಂದುವರೆ ಕಿಲೋಮೀಟರ್ ಒಂದು ಭಾಗ ಬಾರಿ ಪ್ರಮಾಣದಲ್ಲಿ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

ಇದೇ ವೇಳೆ ಮಾತನಾಡಿದ ವಿಷ್ಣುಮೂರ್ತಿ ಮಯ್ಯ ರಾಷ್ಟ್ರೀಯ ಹೆದ್ದಾರಿ ತ್ಯಾಜ್ಯ ಎಸೆಯುವವರಿಗೆ ಕಠಿಣ ಕ್ರಮವನ್ನು ಸ್ಥಳೀಯಾಡಳಿತಗಳು ಕೈಗೊಳ್ಳಬೇಕು. ಪ್ರತಿ ಬಾರಿ ಪಂಚವರ್ಣದಂತಹ ಸಂಘಟನೆಗಳು ಸ್ವಚ್ಛಗೊಳಿಸಿದರೂ ಪುನಃ ಮಲಿಗೊಳಿಸುವ ಕಾರ್ಯ ನಡೆಯುತ್ತಿದೆ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸಲಹೆ ನೀಡಿ ಸಂಬಂಧಿಸಿದ ಸ್ಥಳಗಳಲ್ಲಿ ಸಿಸಿ ಟಿವಿ ಅಳವಡಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಚಿತ್ತಾರಿ ಟ್ರಸ್ಟ್‌ನ ಗೋಪಾಲ್ ಪೈ,ಪಂಚವರ್ಣ ಯುವಕ ಮಂಡಲದ ಮಾಜಿ ಅಧ್ಯಕ್ಷ ಅಜಿತ್ ಆಚಾರ್, ಗಿರೀಶ್ ಆಚಾರ್, ಉಪಾಧ್ಯಕ್ಷ ದಿನೇಶ್ ಆಚಾರ್, ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್, ಸಂಚಾಲಕಿ ಸುಜಾತ ಬಾಯರಿ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಕೋಟ ಗ್ರಾಮಪಂಚಾಯತ್ ಎಸ್ ಎಲ್ ಆರ್ ಎಂ ಘಟಕ ಸಹಕಾರ ನೀಡಿತು.



ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಜಿ.ಎಸ್.ಬಿ. ಸಮಾಜದ ಮಹಿಳೆಯರಿಗಾಗಿ ಆರೋಗ್ಯ ಮಾಹಿತಿ ಶಿಬಿರ ಕುಂದಾಪುರದ ಶ್ರೀ ವೆಂಕಟರಮಣ ದೇವಸ್ಥಾನದ ಶ್ರೀ ಸುಕೃತೀಂದ್ರ ಸಭಾ ಭವನದಲ್ಲಿ ನಡೆಯಿತು. ರಾಧಿಕಾ ನಾಯಕ್, ಡಾ.ಪ್ರಮೀಳಾ ನಾಯಕ್, ಪ್ರೀತಮ್ ಪೈ, ಸೌರಭಿ ಪೈ ಇದ್ದರು.

ಮೆಸ್ಕಾಂ ವಿದ್ಯುತ್ ಕಂಬಗಳ ಮೇಲೆ ಕಾನೂನು ಬಾಹಿರವಾಗಿ ವಸ್ತುಗಳ ಅಳವಡಿಕೆ ವಿರುದ್ಧ ಕ್ರಮ

ಅನಧಿಕೃತ ಕೇಬಲ್ ರಾಶಿ ತೆರಗೊಳಿಸಲು ಅಂತಿಮ ನೋಟೀಸ್

ಕುಂದಾಪುರ: ತಾಲೂಕಿನಾದ್ಯಂತ ಮೆಸ್ಕಾಂ ವಿದ್ಯುತ್ ಕಂಬಗಳನ್ನು ಬಳಸಿಕೊಂಡು ಅನಧಿಕೃತವಾಗಿ ಅಳವಡಿಸಲಾಗಿರುವ ಕೇಬಲ್ ರಾಶಿ ಹಾಗೂ ಕಾನೂನು ಬಾಹಿರವಾಗಿ ಜಂಕ್ಷನ್ ಬಾಕ್ಸ್, ವೈಫೈ ಜಂಕ್ಷನ್ ಬಾಕ್ಸ್, ಆಮ್ಲಿಫೈರ್ ತೆರವುಗೊಳಿಸುವಂತೆ ಮೆಸ್ಕಾಂ ಇಲಾಖೆ ಸಂಬಂಧಪಟ್ಟ ಕೇಬಲ್ ಆಪರೇಟರ್‌ಗಳಿಗೆ ಕಟ್ಟುನಿಟ್ಟಿನ ನೋಟಿಸ್ ಜಾರಿ ಮಾಡಿದೆ.

ಕೇಬಲ್‌ಗಳನ್ನು ಕಂಬಗಳಿಗೆ ಎಲ್ಲೆಂದರಲ್ಲಿ ಸುತ್ತಿರುವುದು ಮತ್ತು ಭಾರೀ ಗಾತ್ರದ ಆಂಪ್ಲಿಫೈಯರ್ ಬಾಕ್ಸ್‌ಗಳನ್ನು ಹಾಕಿರುವುದು ಮೆಸ್ಕಾಂ ನಿಯಮಗಳ ಉಲ್ಲಂಘನೆಯಾಗಿದೆ. ವಿದ್ಯುತ್ ಕಂಬಗಳ ಮೇಲೆ ನಿಯಮಬಾಹಿರವಾಗಿ ಟಿವಿ ಕೇಬಲ್ ರಾಶಿ, ವೈಫೈ ಕೇಬಲ್ ಹಾಗೂ ಜಂಕ್ಷನ್ ಬಾಕ್ಸ್‌ಗಳನ್ನು ಅಳವಡಿಸುತ್ತಿರುವುದು ಸಾರ್ವಜನಿಕ ದೂರಿನಿಂದ ಮೆಸ್ಕಾಂ ಗಮನಕ್ಕೆ ಬಂದಿದೆ.



ಅವೈಜ್ಞಾನಿಕವಾಗಿ ಅಳವಡಿಕೆ

ನಿಯಮಾನುಸಾರ ಕೇವಲ ಕೇಬಲ್ ಮಾತ್ರ ಹಾದು ಹೋಗಲು ಅನುಮತಿ ಇರುವುದಾಗಿದೆ. ಆದರೆ ಕುಂದಾಪುರ ಬೈಂದೂರು ಭಾಗದಲ್ಲಿ ಅವೈಜ್ಞಾನಿಕವಾಗಿ ಕೇಬಲ್‌ಗಳನ್ನು ಕಂಬಗಳಿಗೆ ಸುತ್ತುವುದರಿಂದ ಮತ್ತು ದೊಡ್ಡ ಗಾತ್ರದ ಬಾಕ್ಸ್‌ಗಳನ್ನು ಅಳವಡಿಸುವುದರಿಂದ ಸಾರ್ವಜನಿಕರಿಗೆ ಅಪಾಯ ಸಾಧ್ಯತೆಯಿದೆ. ಅಲ್ಲದೆ, ತುರ್ತು ಸಂದರ್ಭಗಳಲ್ಲಿ ಮೆಸ್ಕಾಂ ಸಿಬ್ಬಂದಿ ಕಂಬ ಏರಿ ಕೆಲಸ ನಿರ್ವಹಿಸಲು ಇದು ಅಡ್ಡಿಯಾಗುತ್ತಿದೆ.

ಗಡುವು

ಈ ಹಿಂದೆ ನೀಡಿದ ಸೂಚನೆಯನ್ನು ಪಾಲಿಸದ ಹಿನ್ನೆಲೆಯಲ್ಲಿ, ಪ್ರಸ್ತುತ ಈ ನೋಟಿಸ್ ತಲುಪಿದ ಒಂದು ವಾರದ ಒಳಗಾಗಿ ಎಲ್ಲಾ ಅನಧಿಕೃತ ಕೇಬಲ್‌ಗಳನ್ನು ಆಪರೇಟರ್‌ಗಳೇ ಸ್ವತಃ ತೆರವುಗೊಳಿಸಬೇಕು. ಒಂದು ವೇಳೆ ನಿಗದಿತ ಅವಧಿಯೊಳಗೆ ಕೇಬಲ್ ತೆರವುಗೊಳಿಸದಿದ್ದರೆ, ಮೆಸ್ಕಾಂ ವತಿಯಿಂದಲೇ ಅವುಗಳನ್ನು ಕತ್ತರಿಸಿ ತೆರವುಗೊಳಿಸಲಾಗುವುದು. ಈ ಸಂದರ್ಭದಲ್ಲಿ ಆಗುವ ನಷ್ಟಕ್ಕೆ ಸಂಬಂಧಪಟ್ಟ ಸಂಸ್ಥೆ ಅಥವಾ ಆಪರೇಟರ್‌ಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಮೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಎಚ್ಚರಿಕೆ ನೀಡಿದ್ದಾರೆ. ಈ ಕ್ರಮವು ವಿದ್ಯುತ್ ಸುರಕ್ಷತೆ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಅನಿವಾರ್ಯವಾಗಿದ್ದು ಸಂಬಂಧಪಟ್ಟವರು ಕೂಡಲೇ ಸ್ಪಂದಿಸಬೇಕೆಂದು ಇಲಾಖೆ ಕೋರಿದೆ.

ನಿರ್ವಹಣೆಯಿಲ್ಲದೇ ನಿಷ್ಪ್ರಯೋಜಕವಾಗಿದ್ದ ನೀರಿನ ಮೂಲ

ಸ್ವಚ್ಛವಾಯಿತು ಸಾರ್ವಜನಿಕ ಬಾವಿ

ಕಾರ್ಕಳ: ಹಲವು ವರ್ಷಗಳಿಂದ ದಿನಬಳಕೆಯ ನೀರಿನ ಮೂಲಗಳಾದ ತೆರೆದ ಸರಕಾರಿ ಬಾವಿಗಳು ನಿರ್ವಹಣೆಯಿಲ್ಲದೇ ನಿಷ್ಪ್ರಯೋಜಕವಾಗಿದ್ದ ಕಾರ್ಕಳ ಸಾಲ್ಮರದಲ್ಲಿರುವ ಸರಕಾರಿ ತೆರೆದ ಬಾವಿ ಹಾಗೂ ಅದರ ಸುತ್ತಮುತ್ತಲ ಸ್ವಚ್ಛತೆಯನ್ನು ಸ್ವಚ್ಛ ಕಾರ್ಕಳ ಬ್ರಿಗೇಡ್ ತಂಡ ಭಾನುವಾರ ಕಾರ್ಯಪ್ರವೃತ್ತರಾಗಿ ನಡೆಸಿದರು.

ನಗರದ ಹಳೆಯ ಬಾವಿಯ ಸ್ವಚ್ಛತೆ, ಬಾವಿಯ ಸುತ್ತಮುತ್ತ ಬೆಳೆದಿರುವ ಗಿಡಗಂಟಿ ತೆರವುಗೊಳಿಸುವುದು, ಬಾವಿಯ ನೀರಲ್ಲಿ ಬಿದ್ದಿರುವ ಕಸಕಡ್ಡಿ ಸ್ವಚ್ಛಗೊಳಿಸುವುದು, ನಗರದ ಜನರು ಮತ್ತೆ ಬಾವಿ ನೀರು ಉಪಯೋಗಿಸುವಂತೆ ವ್ಯವಸ್ಥೆ ಮಾಡಬೇಕು ಎಂದು ನಿರ್ಧರಿಸಿದ ಸ್ವಚ್ಛ ಕಾರ್ಕಳ ಬ್ರಿಗೇಡ್‌ನ ಕಾರ್ಯಕರ್ತರು ಬಾವಿಗೆ ಇಳಿದು ಬಾವಿಯಲ್ಲಿ ತುಂಬಿದ್ದ ಕಸಕಡ್ಡಿಗಳನ್ನು, ಸಣ್ಣ ಪುಟ್ಟ ಗಿಡಗಂಟಿಗಳನ್ನು ಕಿತ್ತು ಹಾಗೂ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆಗೆದು ಸ್ವಚ್ಛ ಮಾಡಲಾಯಿತು.



ಬಾವಿಯ ಹೊರಗೆ ಸುತ್ತಮುತ್ತಲು ತುಂಬಿದ್ದ ಕಸಕಡ್ಡಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆಗೆದು ಸ್ವಚ್ಛ ಮಾಡಿ ಬಾವಿಯ ಗೋಡೆಗಳಿಗೆ ಹಳದಿ ಬಣ್ಣದ ಪೈಂಟ್ ಕೊಡಲಾಯಿತು. ಸುಮಾರು 25ಕ್ಕೂ ಅಧಿಕ ಮಂದಿ ಕಾರ್ಯಕರ್ತರು ಭಾಗವಹಿಸಿದ್ದರು. ಕಾರ್ಕಳದ ಅಗ್ನಿಶಾಮಕ ಠಾಣೆ ಸಿಬ್ಬಂದಿಗಳು ಸಹಕರಿಸಿದರು.